# ಕಲಾ ಶಿಕ್ಷಣ
# ART EDUCATION

## ಸಂಪನ್ಮೂಲ ಪುಸ್ತಕ
## SOURCE BOOK

**ಐದರಿಂದ ಏಳನೆ ವರೆಗೆ**

**(ಯು.ಪಿ. ವಿಭಾಗ)**

STD. 5 to 7


ಕೇರಳ ಸರಕಾರ

**ಶಿಕ್ಷಣ ಇಲಾಖೆ**

ತಯಾರಿಸಿದವರು

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ(SCERT), ಕೇರಳ

2018

# ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ!

# ಪ್ರತಿಜ್ಞೆ

ಭಾರತವು ನನ್ನ ದೇಶ, ಭಾರತೀಯರೆಲ್ಲರೂ ನನ್ನ ಸಹೋದರ ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣ ಪರಂಪರೆಗೆ ನಾನು ಹೆಮ್ಮೆ ಪಡುತ್ತೇನೆ.

ನಾನು ನನ್ನ ತಂದೆ ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ.

ನಾನು ನನ್ನ ದೇಶದ ಮತ್ತು ಜನತೆಯ ಕ್ಷೇಮ ಹಾಗೂ ಸಮೃದ್ಧಿಗಾಗಿ ಸದಾ ಪ್ರಯತ್ನಿಸುತ್ತೇನೆ.

State Council of Education Research and Training (SCERT)
Poojappura, Thiruvananthapuram 695012, Kerala.
website : www.scert.kerala.gov.in
email : scertkerala@gmail.com
phone : 0471-2341883, Fax : 0471-2341869
First Edition : 2018
Printed at : KBPS, Kakkanad, Kochi

ಸ್ನೇಹಿತರೇ,

ಶಿಕ್ಷಣ ಹಕ್ಕು ಕಾಯ್ದೆಯ ಪ್ರಕಾರ ವೃತ್ತಿ ಶಿಕ್ಷಣವು ಇತರ ವಿಷಯಗಳಷ್ಟೇ ಪ್ರಾಧಾನ್ಯದೊಂದಿಗೆ ಜ್ಯಾರಿಗೆ ಬರುತ್ತಿದೆ. ಒಂದನೇ ತರಗತಿಯಿಂದಲೇ ಕ್ರಮಬದ್ಧವಾದ ಪಠ್ಯಕ್ರಮವನ್ನು ರೂಪುಗೊಳಿಸಲಾಗಿದೆ. ಇದರ ಆಧಾರದಲ್ಲಿ ತರಗತಿಯ ಚಟುವಟಿಕೆಗಳಿಗೆ ಸಹಾಯಕವಾಗುವ ರೀತಿಯಲ್ಲಿ ಅಧ್ಯಾಪಕರಿಗಾಗಿ ಸಂಪನ್ಮೂಲ ಪುಸ್ತಕಗಳನ್ನು ಎಸ್.ಸಿ.ಇ.ಆರ್.ಟಿ ಸಿದ್ಧಗೊಳಿಸಿದೆ.

ಚಿತ್ರಕಲೆ, ಸಂಗೀತ, ನೃತ್ಯ.ಕಲೆ, ನಾಟಕ ಎಂಬೀ ನಾಲ್ಕು ವಲಯಗಳನ್ನೊಳಗೊಂಡ ಪಠ್ಯಕ್ರಮಕ್ಕೆ ರೂಪು ನೀಡಲಾಗಿದೆ. ಇವುಗಳಲ್ಲಿ ಪ್ರತಿಯೊಂದರ ಕಲಿಕಾ ಸಾಧನೆಗಳು, ಆಶಯಗಳು, ಸಾಮರ್ಥ್ಯಗಳು, ಕಲಿಕಾ ಚಟುವಟಿಕೆಗಳು ಮೌಲ್ಯಮಾಪನ ವಿಧಾನಗಳು ಇತ್ಯಾದಿಗಳನ್ನು ಇದರಲ್ಲಿ ಸಮಗ್ರವಾಗಿ ಪರಾಮರ್ಶಿಸಲಾಗಿದೆ. ಒಂದರಿಂದ ನಾಲ್ಕು, ಐದರಿಂದ ಏಳು, ಎಂಟರಿಂದ ಹತ್ತು ಎಂಬ ರೀತಿಯಲ್ಲಿ ಮೂರು ಪುಸ್ತಕಗಳಾಗಿ ಸಂಪನ್ಮೂಲ ಪುಸ್ತಕಗಳನ್ನು ತಯಾರಿಸಲಾಗಿದೆ.

ನಮ್ಮ ಸಾರ್ವಜನಿಕ ಶಿಕ್ಷಣ ಸಂಸ್ಥೆಗಳಲ್ಲಿ ವೃತ್ತಿ ಶಿಕ್ಷಣವನ್ನು ಸಮರ್ಪಕವಾಗಿ ಜಾರಿಗೊಳಿಸಲು ಇದು ತುಂಬಾ ಸಹಕಾರಿಯಾಗಬಹುದೆಂದು ಆಶಿಸುತ್ತೇನೆ.

ಪ್ರೀತಿಪೂರ್ವಕವಾಗಿ,

**ಡಾ. ಜೆ. ಪ್ರಸಾದ್**

ನಿರ್ದೇಶಕರು

ಎಸ್.ಸಿ.ಇ.ಆರ್.ಟಿ

## PARTICIPANTS IN THE WORKSHOP

Kunhiraman Puthussery Chathoth, Lecturer, DIET Ernakulam.
R.K. Ramdas, Lecturer, DIET Thiruvananthapuram.
N. Prasad, Lecturer, DIET Kollam
Dr. K.S. Vasudevan, Lecturer, DIET Kozhikode
Sunil Kumar , Lecturer, DIET Kannur
Dr. Gokuldasan Pillai, Curriculum Committee (Rtd.), SCERT, Kerala.
Dr. Venugopu, Reserach Officer (Rtd.), SCERT, Kerala.
Dr. M.S. Radhakrishnan, Senior Lecturer (Rtd.), DIET
Dr. K.G. Rajan, Senior Lecturer (Rtd.), DIET
Dr. Vineetha Nedungadi
C. Rajendran A.V., Govt. B.H.S. Thazhava
B. Karthikeyan Pilla, GVHSS Poruvazhi
P. Sunil Kumar, Pavandoor HSS Kozhikode
Madhusoodanan, GMHSS Koilandi
V. Varghees Kalathil, GVHSS Pallikunnu, Kannur
Dr. Abdul Latheef, VHSS, NGO Quarters, Kozhikode
Suvarna Chandroth, Thottat North LPS Kannur\
B. Premalatha, GVHSS Kottankulangara, Chavara
M. Jayakrishnan, GUPS Manjeri
T. Pradeepkumar, CHMKMHS, Kavananeer, Malappuram
M.P. Balakrishnan, GVHSS North Edapalli
A.G. Sethunathan Pillai, GVHSS Vadakathukavu, Adoor
C.V. Anoop, SSDHSS Lakkidi
P.D. Revamma, K.P.R.G.H.S.S. Kalliassery, Kannur
G.S. Jalakshmi, GHS Karikkulam
R. Prasannakumar, GHS Kadammanitta
A.V. Sindhu, GVHS Agali
Kalamandalam Sathyavrathan A. K.K.R. Girls HSS Chelannur
Dr. P.A. Marylitty, C.C.P.L.M.Z.I.H.S. Perumanur, Ernakulam.
C.S. Rajendran, HSA (Rtd.)
M. Shreeharshan, Nambrathkara U.P.S. Koilandi, Kozhikode
Ramesh Kavil, GLPS Azhachavattam, Kozhikode
Subash Chandrabose D.P., GHSS Konni

## ACADEMIC CO ORDINATOR

**Dr. N. Gopalakrishna Pillai,** Research officer, SCERT, Kerala

# ಅನುಕ್ರಮಣಿಕೆ


1. ಕೇರಳ ಶಾಲಾ ಪಠ್ಯಕ್ರಮ 2013 – ಸಾಮಾನ್ಯ ಸಮೀಪನ ............. 7
2. ಕಲೆಯ ಕಲಿಕೆ – ಅಗತ್ಯ ಮತ್ತು ಪ್ರಾಧಾನ್ಯ ............................... 32
3. ಕಲೆಯ ಕಲಿಕೆ – ಕಲಿಕಾ ಸಮೀಪನ ....................................... 36
4. ಕಲೆಯ ಕಲಿಕೆ – ವಿವಿಧ ವಲಯಗಳು ..................................... 40
5. ಕಲೆಯ ಕಲಿಕೆ – ಮೌಲ್ಯನಿರ್ಣಯ ........................................ 45
6. ಕಲೆಯ ಕಲಿಕೆ – ಬೆಂಬಲ ವ್ಯವಸ್ಥೆಗಳು .................................... 50
7. ಕಲೆಯ ಕಲಿಕೆ – ಅನುಕ್ರಮಣಿಕೆ ವಿಷಯದ ಮಂಡಲಗಳು ................... 51

**7.1 ಚಿತ್ರಕಲೆ ............................................................ 52**

ಐದನೇ ತರಗತಿ ............................................................ 54
ಆರನೇ ತರಗತಿ ............................................................ 61
ಏಳನೇ ತರಗತಿ ............................................................ 70

**7.2 ಸಂಗೀತ ............................................................ 85**

ಐದನೇ ತರಗತಿ ............................................................ 88
ಆರನೇ ತರಗತಿ ............................................................ 101
ಏಳನೇ ತರಗತಿ ............................................................ 119

**7.3 ನೃತ್ಯಕಲೆ ............................................................ 135**

ಐದನೇ ತರಗತಿ ............................................................ 138
ಆರನೇ ತರಗತಿ ............................................................ 146
ಏಳನೇ ತರಗತಿ ............................................................ 156

**7.4 ನಾಟಕ ............................................................ 163**

ಐದನೇ ತರಗತಿ ............................................................ 167
ಆರನೇ ತರಗತಿ ............................................................ 175
ಏಳನೇ ತರಗತಿ ............................................................ 183

**ಅನುಬಂಧ 1 – ಚಟುವಟಿಕಾ ಕ್ಯಾಲೆಂಡರ್ ................................ 189**

**ಅನುಬಂಧ 2 – ಮಾದರಿ ಪ್ರಶ್ನೆಪತ್ರಿಕೆ ........................................ 201**

# 1. ಕೇರಳ ಶಾಲಾ ಪಠ್ಯಕ್ರಮ 2013 ಸಾಮಾನ್ಯ ಸಮೀಪನಗಳು

## 1.1 ಪೀಠಿಕೆ

**ಸಾ**ಮಾಜಿಕ ಬದುಕಿನ ಗುಣಮಟ್ಟದ ಹಿನ್ನೆಲೆಯಲ್ಲಿ ಹೇಳುವುದಾದರೆ ಕೇರಳವು ದೇಶಕ್ಕೆ ಮಾದರಿಯಾಗಿದೆ. ಸಾರ್ವಜನಿಕ ಶಿಕ್ಷಣದ ವ್ಯಾಪಕತೆ, ಸಾರ್ವಜನಿಕ ಆರೋಗ್ಯದ ಗುಣಮಟ್ಟ ಎಂಬಿವುಗಳೇ ಕೇರಳದ ಈ ಸಾಧನೆಗೆ ಪ್ರಧಾನ ಕಾರಣವಾಗಿವೆ. ಸಮಾಜದ ಎಲ್ಲ ವರ್ಗಗಳ ಮಕ್ಕಳನ್ನು ಶಾಲೆಗೆ ಕಳುಹಿಸಲು ಸಾಧ್ಯವಾಗಿದ್ದರೂ, ಎಲ್ಲರಿಗೂ ಗುಣಮಟ್ಟದ ಶಿಕ್ಷಣ ಎಂಬುದು ಕೇರಳದ ಶಿಕ್ಷಣ ಕ್ಷೇತ್ರವು ಎದುರಿಸುವ ಅತಿ ದೊಡ್ಡ ಸವಾಲಾಗಿದೆ. 1986 ರ ರಾಷ್ಟ್ರೀಯ ಶಿಕ್ಷಣ ನೀತಿಯ ಅಂಗವಾಗಿ ಶೈಕ್ಷಣಿಕ ಗುಣಮಟ್ಟವನ್ನು ಕಾಪಾಡಿಕೊಳ್ಳಲು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಹಾಗೂ ಅಧ್ಯಾಪಕ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಇದರೊಂದಿಗೆ ಪಠ್ಯಕ್ರಮವನ್ನು ಶಿಶುಕೇಂದ್ರಿತ, ಚಟುವಟಿಕೆ ಆಧಾರಿತ, ಪ್ರಕ್ರಿಯಾತ್ಮಕ ಹಾಗೂ ಕಾಲೋಚಿತವಾಗಿ ಪರಿಷ್ಕರಿಸುವ ಪ್ರಯತ್ನಗಳಾಗಿವೆ. ಇದರ ಪರಿಣಾಮವಾಗಿ ತರಗತಿಗಳಲ್ಲಿ ಜ್ಞಾನ ನಿರ್ಮಾಣ ಪ್ರಕ್ರಿಯೆಗಳು ನಡೆಯಬೇಕು ಎಂಬ ತಿಳುವಳಿಕೆ ಮೂಡಿತು. ಇದರಂತೆ ಮಗುವನ್ನು ಶೈಕ್ಷಣಿಕ ಪ್ರಕ್ರಿಯೆಗಳ ಕೇಂದ್ರಸ್ಥಾನದಲ್ಲಿ ಇರಿಸುವ ಚಟುವಟಿಕೆಗಳಿಗೆ ನಾಂದಿ ಹಾಡಲು ನಮಗೆ ಸಾಧ್ಯವಾಗಿದೆ.

ಬದುಕಿನ ಎಲ್ಲಾ ಕ್ಷೇತ್ರಗಳೂ ಪ್ರತಿ ಕ್ಷಣ ಬದಲಾಗುತ್ತಿವೆ. ಅಧ್ಯಾಪನ ಶಾಸ್ತ್ರ, ಅಧ್ಯಯನ ಮನಶ್ಶಾಸ್ತ್ರ ಮೊದಲಾದ ವಿಷಯಗಳ ಹೊಸ ಸಂಶೋಧನೆಗಳು ಮತ್ತು ಪ್ರಾಯೋಗಿಕವಾದ ಅನುಭವಗಳು ಉತ್ತಮ ರೀತಿಯ ಕಲಿಕೋಪಕರಣಗಳ ನಿರ್ಮಾಣ ಹಾಗೂ ಕಲಿಕಾನುಭವಗಳ ವಿನಿಮಯ ಮತ್ತು ಮೌಲ್ಯಮಾಪನವನ್ನು ನಡೆಸಲು ನಮ್ಮನ್ನು ಪ್ರೇರೇಪಿಸಿವೆ. ಎಲ್ಲಾ ವರ್ಗದ ಮಕ್ಕಳ ಕಲಿಕೆಯ ಪ್ರಗತಿಯನ್ನು ನಾವು ಗುರಿಯಿರಿಸಿಕೊಂಡಿದ್ದೇವೆ.

“ವಿಭಿನ್ನವಾದ ಸಾಮಾಜಿಕ, ಆರ್ಥಿಕ ಹಿನ್ನೆಲೆಯುಳ್ಳ, ವಿಭಿನ್ನ ದೈಹಿಕ, ಮಾನಸಿಕ, ಬೌದ್ಧಿಕ ಸಾಮರ್ಥ್ಯಗಳಿರುವ ಎಲ್ಲ ಮಕ್ಕಳಿಗೆ ಕಲಿಯಲು ಹಾಗೂ ಶಾಲೆಗಳಲ್ಲಿ ಉತ್ತೀರ್ಣರಾಗಲು ಸಾಧ್ಯವೆಂದು ದೃಢಪಡಿಸಬೇಕು. ಲಿಂಗ, ಜಾತಿ, ಭಾಷೆ, ಸಂಸ್ಕೃತಿ, ಧರ್ಮ, ಅಂಗವೈಕಲ್ಯಗಳೇ ಮೊದಲಾದ ಕಾರಣಗಳಿಂದ ಉಂಟಾಗುವ ಸಮಸ್ಯೆಗಳನ್ನು ಮೀರಲು ಯೋಜನೆಗಳು ಮತ್ತು ಶಿಕ್ಷಣ ನೀತಿಗಳು ಮಾತ್ರ ಸಾಲದು. ಎಳೆಯ ಪ್ರಾಯದಿಂದಲೇ ಯೋಗ್ಯವಾದ ಕಲಿಕಾ ಗುರಿಗಳನ್ನೂ, ಅಧ್ಯಾಪನ ರೀತಿಗಳನ್ನೂ ಆರಿಸಿ ರೂಪಿಸಬೇಕಾಗಿದೆ. (NCF 2005, ಪು.27)

- ವಿಭಿನ್ನ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಯುಳ್ಳವರು.
- ವಿಭಿನ್ನ ದೈಹಿಕ, ಮಾನಸಿಕ ಮತ್ತು ಬೌದ್ಧಿಕ ಸಾಮರ್ಥ್ಯವುಳ್ಳವರು.

ಹೀಗೆ ಎಲ್ಲಾ ವರ್ಗಗಳಿಗೆ ಸೇರಿದವರಿಗೆ ಕಲಿಕಾ ಸಾಧನೆಯನ್ನು ಗಳಿಸಲು ಶಿಕ್ಷಣ ಪ್ರಕ್ರಿಯೆಯ ಎಲ್ಲಾ ವಲಯಗಳಲ್ಲಿ ಸೂಕ್ಷ್ಮವೂ ಶಾಸ್ತ್ರೀಯವೂ ಆಗಿರುವ ಧೋರಣೆಗಳನ್ನು ಸ್ವೀಕರಿಸಬೇಕಾದುದು ನಮ್ಮ ದೃಷ್ಟಿಕೋನವಾಗಬೇಕು ಎಂದು ಎನ್.ಸಿ.ಎಫ್. ನಿರ್ದೇಶಿಸುತ್ತದೆ. ಕಾಲೋಚಿತವಾಗಿ ಪಠ್ಯಕ್ರಮವನ್ನು ನವೀಕರಿಸುವುದು ಮತ್ತು ಈ ವ್ಯವಸ್ಥೆಯನ್ನು ಕ್ರಿಯಾತ್ಮಕವಾಗಿಸುವುದರಿಂದ ಮಾತ್ರ ಈ ಗುರಿಯನ್ನು ಸಾಧಿಸಬಹುದು. ಈ ದೃಷ್ಟಿಕೋನದ ಹಿನ್ನೆಲೆಯಲ್ಲಿ ಈಗ ಪಠ್ಯಕ್ರಮವನ್ನು ಪರಿಷ್ಕರಿಸಲಾಗುತ್ತಿದೆ. ಶೈಕ್ಷಣಿಕ ಪ್ರಕ್ರಿಯೆಗಳಲ್ಲಿ ನಿರಂತರವಾಗಿ ತೊಡಗಿಸಿಕೊಂಡಿರುವ ಎಲ್ಲರ ಅನುಭವ, ಸಂಶೋಧನೆ ಹಾಗೂ ಅಧ್ಯಯನ ಶೋಧಗಳನ್ನು ಬಳಸಿಕೊಂಡು ಇದನ್ನು ಮಾಡಲಾಗುವುದು. ಸಮರ್ಪಕತೆಯಿಂದ ಮತ್ತಷ್ಟು ಸಮರ್ಪಕತೆಗೆ ಎಂಬ ವೈಜ್ಞಾನಿಕ ಸಮೀಪನವನ್ನು ಇಲ್ಲಿ ಸ್ವೀಕರಿಸಲಾಗುವುದು.

## 1.2 ಪಠ್ಯಕ್ರಮ ಪರಿಷ್ಕರಣೆಯ ಅಗತ್ಯ

ಕಳೆದ ಐದು ವರ್ಷಗಳಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಅನೇಕ ಹೊಸ ಆಶಯಗಳು ಮೂಡಿಬಂದಿವೆ. ಭಾರತದಲ್ಲಿ 2009 ರಲ್ಲಿ ಜ್ಯಾರಿಗೆ ಬಂದ ವಿದ್ಯಾಭ್ಯಾಸ ಹಕ್ಕು ಕಾಯಿದೆಯಿಂದ ಶಿಕ್ಷಣವು ಮಕ್ಕಳ ಹಕ್ಕಾಗಿ ಬದಲಾಗಿದೆ. ಹಕ್ಕು ಆಧಾರಿತ ವಿದ್ಯಾಲಯ (Right based Educational Institution) ಎಂಬ ಗುರಿಯನ್ನು ಸಾಧಿಸಲು ನಮ್ಮ ಪಠ್ಯಕ್ರಮವನ್ನು ಅಂತಾರಾಷ್ಟ್ರೀಯ ಗುಣಮಟ್ಟಕ್ಕೆ ಏರಿಸಬೇಕಾಗಿದೆ. ಅಂತಾರಾಷ್ಟ್ರೀಯ ಗುಣಮಟ್ಟ ಎಂಬುದು ಯಾವುದೇ ಒಂದು ದೇಶದ ಗುಣಮಟ್ಟವಲ್ಲ. ಇದು ಒಂದು ಪ್ರತ್ಯೇಕ ಹಂತವನ್ನು ದಾಟುವ ಮಗು ಜಗತ್ತಿನ ಯಾವುದೇ ಪ್ರದೇಶದಲ್ಲಿದ್ದರೂ ಆರ್ಜಿಸಬೇಕಾದ ಜ್ಞಾನ ಮತ್ತು ಅನುಭವಗಳ ಒಟ್ಟು ಮೊತ್ತವಾಗಿದೆ. ಜಾಗತಿಕ ಮಟ್ಟದಲ್ಲಿ ಜ್ಯಾರಿಗೊಂಡಿರುವ ಉತ್ತಮ ಅಧ್ಯಯನ, ಅಧ್ಯಾಪನ ಮಾದರಿಗಳು ಕೇರಳದ ಮಕ್ಕಳಿಗೂ ಸಿಗಬೇಕಾದುದು ಅಗತ್ಯ ಎಂಬುದನ್ನು ಇದು ಸೂಚಿಸುತ್ತದೆ.

ಶಿಕ್ಷಣ ಹಕ್ಕು ಕಾಯ್ದೆಯಲ್ಲಿ ಪಠ್ಯಕ್ರಮ, ಮೌಲ್ಯಮಾಪನ ಎಂಬಿವುಗಳ ಸಂಬಂಧಪಟ್ಟ ಕಾನೂನುಗಳು ಪಠ್ಯಕ್ರಮ ಪರಿಷ್ಕರಣೆಯಲ್ಲಿ ಪರಿಗಣಿಸುವುದು ಅಗತ್ಯವಾಗಿದೆ.

---

### ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆ 2009
### ಸೆಕ್ಷನ್ -29 (ಅಧ್ಯಾಯ 5)
### ಪಠ್ಯಕ್ರಮ ಹಾಗೂ ಮೌಲ್ಯನಿರ್ಣಯ ಸೂಚಕಗಳು

1) ಪ್ರಾಥಮಿಕ ಶಿಕ್ಷಣದ ಪಠ್ಯಕ್ರಮ ಹಾಗೂ ಮೌಲ್ಯ ನಿರ್ಣಯ ವಿಧಾನಗಳನ್ನು ಆಯಾ ಸರಕಾರದ ಅಧಿಸೂಚನೆಯ ಮೂಲಕ ಸೂಚಿಸಲಾಗುವ ಒಂದು ಶೈಕ್ಷಣಿಕ ಅಧಿಕಾರ ಸ್ಥಾನದ ಮೂಲಕ ಪ್ರತಿಪಾದಿಸಬೇಕು.

2) ಶೈಕ್ಷಣಿಕ ಅಧಿಕಾರ ಸ್ಥಾನ 1 ನೇ ಉಪವಿಭಾಗದ ಪ್ರಕಾರ ಪಠ್ಯಕ್ರಮ ಹಾಗೂ ಮೌಲ್ಯ ನಿರ್ಣಯ ವಿಧಾನವನ್ನು ಪ್ರತಿಪಾದಿಸುವಾಗ ಕೆಳಗಿನ ಅಂಶಗಳನ್ನು ಪರಿಗಣಿಸಬೇಕಾಗಿದೆ.

*a)* *ಸಂವಿಧಾನದಲ್ಲಿ ಹೇಳಲಾದ ಮೌಲ್ಯಗಳ ಹೊಂದಿಕೆ.*

*b)* *ಮಗುವಿನ ಸರ್ವತೋಮುಖವಾದ ಬೆಳವಣಿಗೆ.*

*c)* *ಮಗುವಿನ ಜ್ಞಾನ, ಸಾಮರ್ಥ್ಯ, ಕೌಶಲ್ಯಗಳನ್ನು ಕ್ರಮೇಣ ಹೆಚ್ಚಿಸುವುದು.*

*d)* *ದೈಹಿಕ ಹಾಗೂ ಮಾನಸಿಕ ಸಾಮರ್ಥ್ಯಗಳ ಸಂಪೂರ್ಣ ಬೆಳವಣಿಗೆ.*

e) ಮಗುವಿಗೆ ಇಷ್ಟವಾದ, ಶಿಶು ಕೇಂದ್ರಿತವಾದ ಚಟುವಟಿಕೆಗಳಿರುವ ಕಲಿಕೆ.

f) ಕಲಿಕೆಯ ಮಾಧ್ಯಮವನ್ನು ಮಗುವಿನ ಮಾತೃಭಾಷೆಯಲ್ಲಿಯೇ ನೀಡುವುದನ್ನು ಆದಷ್ಟು ಪ್ರಾಯೋಗಿಕಗೊಳಿಸಬೇಕು.

g) ಭಯ, ಮಾನಸಿಕ ಒತ್ತಡ ಉಂಟಾಗುವ ಸ್ಥಿತಿ, ಆತಂಕ ಇವುಗಳಿಂದ ಮಗುವನ್ನು ಮುಕ್ತಗೊಳಿಸಿ, ಸ್ವತಂತ್ರವಾಗಿ ಅಭಿಪ್ರಾಯ ಪ್ರಕಟಿಸಲು ಮಗುವಿಗೆ ಸಹಾಯ ನೀಡುವುದು.

h) ಮಗುವಿನ ಜ್ಞಾನಗ್ರಹಣ ಮತ್ತು ಅದನ್ನು ಪ್ರಯೋಗಿಸುವ ಸಾಮರ್ಥ್ಯದ ಸಮಗ್ರ ಮತ್ತು ನಿರಂತರ ಮೌಲ್ಯಮಾಪನ.

---

ಶಿಕ್ಷಣ ಹಕ್ಕು ಕಾಯ್ದೆಯ ಹಿನ್ನೆಲೆಯಲ್ಲಿ ನಿರಂತರ ಹಾಗೂ ಸಮಗ್ರವಾದ ಮೌಲ್ಯಮಾಪನವು ಸಾಂವಿಧಾನಿಕ ಬಾಧ್ಯತೆಯಾಗಿದೆ. ಇದನ್ನು ಗಮನದಲ್ಲಿರಿಸಿಕೊಂಡು ಪಠ್ಯಕ್ರಮವನ್ನು ಪರಿಷ್ಕರಿಸಬೇಕು. ಈ ಹಿನ್ನೆಲೆಯಲ್ಲಿ ಪಾಠಪುಸ್ತಕ ಪರಿಷ್ಕರಣೆಯನ್ನು ನಾವು ಕಾಣಬೇಕು.

**ಕೇರಳ ಶಾಲಾ ಪಠ್ಯಕ್ರಮದ (2013) ವೈಶಿಷ್ಟ್ಯಗಳನ್ನು ನೋಡೋಣ.**

1) ವಿದ್ಯಾರ್ಥಿ ಕೇಂದ್ರಿತ, ಪ್ರಕ್ರಿಯಾತ್ಮಕ, ಚಟುವಟಿಕೆ ಪ್ರಧಾನ, ಮೌಲ್ಯಾಧಾರಿತ ಪಠ್ಯಕ್ರಮ.

2) ಬೌದ್ಧಿಕ ಹಂತದಲ್ಲಿ, ಪ್ರಕ್ರಿಯೆಗಳ ಹಂತದಲ್ಲಿ, ಮನೋಭಾವ ಹಂತದಲ್ಲಿ ಹಾಗೂ ಮೌಲ್ಯಗಳ ಹಂತದಲ್ಲಿ ಮಗುವಿನ ಕಲಿಕಾ ಸಾಧನೆಗಳಿಗೆ ಒತ್ತು ನೀಡಲಾಗಿದೆ.

3) ಜ್ಞಾನ ನಿರ್ಮಾಣ ಎಂಬ ತಾತ್ವಿಕ ನೆಲೆಗಟ್ಟಿನಲ್ಲಿರುವ ಪಠ್ಯಕ್ರಮ.

4) ವಿನಿಮಯ ಪ್ರಕ್ರಿಯೆಯಲ್ಲಿ ವೈವಿಧ್ಯಪೂರ್ಣವೂ ಯೋಗ್ಯವೂ ಆದ ಅಧ್ಯಾಪನ ತಂತ್ರಗಳನ್ನು ಸ್ವೀಕರಿಸಿ ಉಪಯೋಗಿಸಲು ಅಧ್ಯಾಪಕರಿಗೆ ಸ್ವಾತಂತ್ರ್ಯವಿದೆ.

5) ಕಲಿಕಾಸಾಧನೆ, ಮಕ್ಕಳ ವಿಭಿನ್ನ ಗುಣಮಟ್ಟ ಇವುಗಳನ್ನು ತಿಳಿದು ವಿವಿಧ ಕಲಿಕಾ ವಿಧಾನಗಳನ್ನು ಅನುಷ್ಠಾನಗೊಳಿಸುವುದು. ಕಂಡು ಹಿಡಿಯುವ ಕಲಿಕೆ, ಆಶಯಗ್ರಹಣ ರೀತಿ, ಹೊಸ ಚಿಂತನೆಗಳು, ಯೋಚಿಸುವ ಸಾಮರ್ಥ್ಯವನ್ನು ಬೆಳೆಸುವುದು. ಸಹಕಾರ ಕಲಿಕೆ, ಸಹವರ್ತಿ ಕಲಿಕೆ, ಚಿಂತನೆಗಳ ಪ್ರತಿಫಲನ, ವೈಯಕ್ತಿಕ ಮತ್ತು ಗುಂಪಿನ ಅವಕಾಶಗಳನ್ನು ಒದಗಿಸುವುದು ಮೊದಲಾದ ವಿಧಾನಗಳನ್ನು ಪರಿಗಣಿಸುವುದು.

6) ಉಚಿತ ಸಾರ್ವಜನಿಕ ಶಿಕ್ಷಣ ಎಂಬ ಹಾಗೆ ಎಲ್ಲ ಮಕ್ಕಳ ಕಲಿಕಾ ಸಾಧನೆಗೆ ಪ್ರಾಧಾನ್ಯ ನೀಡಬೇಕು.

7) ಪ್ರಿ–ಪ್ರೈಮರಿಯಿಂದ ಹೈಯರ್ ಸೆಕಂಡರಿ ವರೆಗೆ ಸಮಗ್ರವಾದ ಪಠ್ಯಕ್ರಮ.

8) ಪ್ರತಿಯೊಂದು ತರಗತಿಗೂ ವಿವಿಧ ವಿಷಯಗಳ ಹೂರಣವನ್ನು ರಾಷ್ಟ್ರೀಯ ಮಟ್ಟದ ವಿಷಯಗಳ ಹೂರಣದೊಂದಿಗೆ ಏಕೀಕರಿಸಿ, ಕೇರಳದ ಪಾಠಪುಸ್ತಕಗಳನ್ನು ತಯಾರಿಸಲಾಗುವುದು.

9) ರಾಷ್ಟ್ರೀಯ ಮಟ್ಟದಲ್ಲಿರುವಂತೆ ಒಂದು ಮತ್ತು ಎರಡನೇ ತರಗತಿಗಳಿಗೆ ಮಾತೃಭಾಷೆ(ಪರಿಸರ ಅಧ್ಯಯನದೊಂದಿಗೆ) ಗಣಿತ ಮತ್ತು ಇಂಗ್ಲಿಷ್ ಎಂಬ ಮೂರು ಪಾಠಪುಸ್ತಕಗಳನ್ನು ಸಿದ್ಧಪಡಿಸಲಾಗುವುದು.

10) ಒಂದರಿಂದ ನಾಲ್ಕನೇ ತರಗತಿಯವರೆಗಿನ ಇಂಗ್ಲಿಷ್ ಮಾಧ್ಯಮ ಪಾಠಪುಸ್ತಕಗಳನ್ನು ಸಿದ್ಧಪಡಿಸಲಾಗುವುದು.

11) ಶಾಸ್ತ್ರೀಯ ಭಾಷೆ ಹಾಗೂ ಮಾತೃಭಾಷೆ ಎಂಬ ನೆಲೆಯಲ್ಲಿ ಕನ್ನಡ ಭಾಷಾ ಕಲಿಕೆಗೆ ವಿಶೇಷವಾದ ಪ್ರಾಧಾನ್ಯ ನೀಡಲಾಗುವುದು.

12) ಪ್ರಿ–ಪ್ರೈಮರಿ ಶಿಕ್ಷಣಕ್ಕಾಗಿ ಏಕೀಕೃತ ಪಠ್ಯಕ್ರಮವನ್ನು ರೂಪಿಸಿ, ಔಪಚಾರಿಕ ಶಿಕ್ಷಣದ ಅಂಗವಾಗಿ ಬದಲಾಯಿಸಲು ನಿರ್ದೇಶಿಸಲಾಗುವುದು.

## ಉಚಿತ ಹಾಗೂ ಕಡ್ಡಾಯ ಶಿಕ್ಷಣಕ್ಕಿರುವ ಮಕ್ಕಳ ಹಕ್ಕು ಕೇರಳದ ಕಾನೂನುಗಳು ಹಾಗೂ ಪರಿಚ್ಛೇದಗಳು 2011

### ಶೈಕ್ಷಣಿಕ ಅಧಿಕಾರಗಳು

1. 29ನೇ ಪರಿಚ್ಛೇದದ ಪ್ರಕಾರ ರಾಜ್ಯ ಶಿಕ್ಷಣ ಸಂಶೋಧನಾ ಮತ್ತು ತರಬೇತಿ ಸಮಿತಿಗೆ (SCERT) ಶೈಕ್ಷಣಿಕ ಅಧಿಕಾರಗಳನ್ನು ನೀಡಲಾಗಿದೆ.
2. (1)ನೇ ಉಪಪರಿಚ್ಛೇದದ ಅಡಿಯಲ್ಲಿ ಪ್ರಕಟಿಸಿರುವ ಪ್ರಕಾರ ಶೈಕ್ಷಣಿಕ ಅಧಿಕಾರವನ್ನು ಹೊಂದಿರುವ ಸಂಸ್ಥೆಯು ಪಠ್ಯಕ್ರಮ, ಮೌಲ್ಯಮಾಪನ ಸೂಚಕ ತಯಾರಿಸುವಾಗ ಈ ಕಾನೂನಿನ 29ನೇ ಪರಿಚ್ಛೇದದ (2)ನೇ ಉಪಪರಿಚ್ಛೇದದ ಅಂಶ (a) ಯಿಂದ (f) ವರೆಗಿನ ನಿಬಂಧನೆಗಳಿಗೆ ಭಾದಕವಾಗದಂತೆ;
   - (a) ಸಕಾಲಿಕಲವೂ ಪ್ರಾಯಕ್ಕನುಗುಣವೂ ಆಗಿರುವ ಪಠ್ಯಕ್ರಮ ಮತ್ತು ಪಾಠಪುಸ್ತಕಗಳಿಗೆ ಮೂಲಭೂತವಾದ ಜೀವನ ನೈಪುಣ್ಯವನ್ನು ರೂಢಿಸಿಕೊಳ್ಳಲು ಅಗತ್ಯವಾದ ಕಲಿಕಾ ಸಾಮಗ್ರಿಗಳೂ ಒಳಗೊಂಡಂತೆ ಇತರ ಕಲಿಕಾ ಸಾಮಗ್ರಿಗಳಿಗೆ ರೂಪು ನೀಡುವುದು;
   - (b) ಒಂದರಿಂದ ಎಂಟರ ವರೆಗಿನ ತರಗತಿಗಳಲ್ಲಿ ಪ್ರತಿಯೊಂದು ವಿಷಯಕ್ಕೂ ಅಗತ್ಯವಾದ ಕನಿಷ್ಠ ಕಲಿಕಾ ಪರಿಣಾಮಗಳನ್ನು ನಿರ್ಣಯಿಸಬೇಕಲ್ಲದೆ ಮಕ್ಕಳಿಗಾಗಿ ಮೌಲಿಕವಾದ ಸೂಚಕಗಳನ್ನು ವಿಕಾಸಗೊಳಿಸಿ ಮಕ್ಕಳ ಕಲಿಕಾ ಪರಿಣಾಮಕ್ಕಾಗಿ ಅಧ್ಯಾಪಕರ ಜವಾಬ್ದಾರಿಯ ಮಾನದಂಡಗಳಿಗೆ ರೂಪು ನೀಡುವುದು;
   - (c) ಕಲಿಕೆ ಮತ್ತು ಬೋಧನೆಯ ಪರಿಣಾಮಗಳ ಆಧಾರದಲ್ಲಿ ಸೇವಾಕಾಲದ ಅಧ್ಯಾಪಕ ತರಬೇತಿ ಸಾಮಗ್ರಿಗಳನ್ನು ಅಭಿವೃದ್ಧಿಪಡಿಸುವುದು;
   - (d) 1995ರ ನ್ಯೂನತೆಗಳಿರುವ ವ್ಯಕ್ತಿಗಳಿಗಾಗಿರುವ (ಸಮಾನ ಹಕ್ಕುಗಳು, ಹಕ್ಕುಗಳ ಸಂರಕ್ಷಣೆ ಹಾಗೂ ಪೂರ್ಣ ಭಾಗವಹಿಸುವಿಕೆ) ನಿಯಮಗಳಿಗನುಸಾರವಾಗಿ ನ್ಯೂನತೆಗಳಿರುವ ಮಕ್ಕಳಿಗೆ ಶಿಕ್ಷಣವನ್ನು ನೀಡುವುದಕ್ಕಾಗಿ ಅಧ್ಯಾಪಕರಿಗೆ ಸೇವಾಪೂರ್ವ ಮತ್ತು ಸೇವಾಕಾಲದ ತರಬೇತಿ ಕಾರ್ಯಕ್ರಮಗಳಿಗೆ ರೂಪು ನೀಡುವುದು;
   - (e) ನಿರಂತರವೂ ಸಮಗ್ರವೂ ಆದ ಮೌಲ್ಯಮಾಪನವನ್ನು ಜಾರಿಗೆ ತರುವುದಕ್ಕಾಗಿ ಅಗತ್ಯವಾದ ಸೂಚನೆಗಳನ್ನೂ ಮಾಹಿತಿಗಳನ್ನೂ ತಯಾರಿಸುವುದು.
   - (f) ಶೈಕ್ಷಣಿಕ ಧೋರಣೆಗಳು ಹಾಗೂ ಕಾರ್ಯಕ್ರಮಗಳು, ಪಠ್ಯಕ್ರಮ, ಬೋಧನೆಯ ಮೂಲಕ ಮಕ್ಕಳ ಮೇಲಾಗುವ ಪರಿಣಾಮ ಇತ್ಯಾದಿಗಳ ಕುರಿತು ಸಂಶೋಧನೆಗಳನ್ನೂ ಅಧ್ಯಯನಗಳನ್ನೂ ಕೈಗೊಳ್ಳುವುದು ಮತ್ತು ಅದನ್ನು ಜಾರಿಗೊಳಿಸುವುದು.

13) ಮಾಹಿತಿ ತಂತ್ರಜ್ಞಾನವನ್ನು (ICT) ಒಂದು ಪಠ್ಯವಿಷಯ ಎನ್ನುವುದಕ್ಕಿಂತ ಪಠ್ಯವಿಷಯಗಳನ್ನು ಸಂವಹನಮಾಡುವ ಮಾಧ್ಯಮವಾಗಿ ಬಳಸಬೇಕು.

14) ವಿಶೇಷವಾದ ಪರಿಗಣನೆಗೆ ಅರ್ಹರಾದ ಮಕ್ಕಳಿಗೆ ವಿಭಿನ್ನ ಹಾಗೂ ನೂತನವಾದ ಕಲಿಕಾ ತಂತ್ರಗಳನ್ನು ಆವಿಷ್ಕರಿಸಿ ಅನುಷ್ಠಾನಗೊಳಿಸುವುದು ಮತ್ತು ವಿಭಿನ್ನವಾದ ಮೌಲ್ಯಮಾಪನ ಚಟುವಟಿಕೆಗಳನ್ನು ಆವಿಷ್ಕರಿಸಿ ಅನುಷ್ಠಾನಗೊಳಿಸುವುದು.

15) ಕಲಿಕಾ ಸಾಧನೆಗಳನ್ನು ಅವಲಂಬಿಸಿದ ಸಮಗ್ರ ಮತ್ತು ನಿರಂತರವಾದ ಮೌಲ್ಯ ಮಾಪನ (CCE) ನಡೆಸಬೇಕು.

16) ಆರೋಗ್ಯ ಮತ್ತು ಕ್ರೀಡಾ ಶಿಕ್ಷಣ, ಕಲೆಯ ಶಿಕ್ಷಣ, ವೃತ್ತಿ ಪರಿಚಯ ಇವುಗಳನ್ನು ಕಡ್ಡಾಯ ಪಠ್ಯವಿಷಯಗಳಾಗಿ ಪರಿಗಣಿಸಲಾಗಿದೆ.

17) ಹೈಯರ್ ಸೆಕೆಂಡರಿ ವಿಭಾಗದಲ್ಲಿ ಕಾಲೋಚಿತವಾಗಿ ಪಾಠ ಪುಸ್ತಕಗಳನ್ನು ಸಿದ್ಧಪಡಿಸಬೇಕು.

18) ರಾಷ್ಟ್ರೀಯ ಶಿಕ್ಷಣ ನಿಯಮದ ಬೆಳಕಿನಲ್ಲಿ ಹಕ್ಕು ಆಧಾರಿತ ಶಿಕ್ಷಣಕ್ಕೆ ಒತ್ತು ನೀಡಬೇಕು.

19) ಪ್ರತಿಯೊಬ್ಬ ಅಧ್ಯಾಪಕನೂ ಓರ್ವ ಸಹರಕ್ಷಕ (Mentor)ನ ಸ್ಥಾನಕ್ಕೇರಿ, ಬೇಕಾದ ಕಾಳಜಿಯನ್ನು, ರಕ್ಷಣೆಯನ್ನು ಶಾಲೆಯಲ್ಲಿ ಮತ್ತು ತರಗತಿಯಲ್ಲಿ ಮಗುವಿಗೆ ಒದಗಿಸಬೇಕು.

20) ಅಧ್ಯಾಪಕರು ಪಾಲಿಸಬೇಕಾದ ವೃತ್ತಿ ನೀತಿ ಸಂಹಿತೆಗೆ (Code of Professional Ethics for School Teacher) ಒತ್ತು ನೀಡಲಾಗುವುದು.

21) 21ನೇ ಶತಮಾನದ ಕಲಿಕಾ ನೈಪುಣ್ಯಗಳು (21st Century Learning skills) ಕಾಲೋಚಿತವಾಗಿ ಗಳಿಸಿಕೊಳ್ಳುವುದಕ್ಕೆ ಯೋಗ್ಯವಾಗಿವೆ.

22) ಮಾನವೀಯ ಮೌಲ್ಯಗಳನ್ನು ಒಳಗೊಂಡ ತಲೆಮಾರನ್ನು ಸೃಷ್ಟಿಸಲು ಸಮರ್ಥವಾಗಿದೆ.

23) ಸಮಾನ ಅವಕಾಶ ಮತ್ತು ಸಮಾನತೆ (Equity and Equality) ಲಭಿಸುವ ಶಿಕ್ಷಣ ವ್ಯವಸ್ಥೆಗೆ ಹೊಂದಿಕೊಂಡಿದೆ.

ಸಹಜವಾದ ಕಲಿಕೆ, ಕಲಿಯುವ ಮಕ್ಕಳ ಬೌದ್ಧಿಕ, ಮಾನಸಿಕ ಬೆಳವಣಿಗೆಯನ್ನು ದೃಷ್ಟಿಯಲ್ಲಿರಿಸಿಕೊಂಡು ತಲೆ, ಹೃದಯ, ಹಸ್ತ ಸಮನ್ವಯಗೊಂಡ ಪಠ್ಯಕ್ರಮ (Curriculum for the harmony of head, Heart and Hand) ಎಂಬ ಕಾಣ್ಕೆಯೊಂದಿಗೆ ಪಠ್ಯಕ್ರಮವನ್ನು ನಾವು ಮಾಡಬೇಕು.

ಹಾಗಾದರೆ ಪಠ್ಯಕ್ರಮ ಸಮೀಪನ ಹೇಗಿರಬೇಕು? ಅದರ ಸೈದ್ಧಾಂತಿಕ ಮತ್ತು ಪ್ರಾಯೋಗಿಕವಾದ ಅಡಿಪಾಯ ಹೇಗಿರಬೇಕು?

## 1.3 ಪಠ್ಯಕ್ರಮ ಸಮೀಪನ

ಪಂಚೇಂದ್ರಿಯಗಳನ್ನು ಬಳಸಿ ಸುತ್ತುಮುತ್ತಲಿನ ಪರಿಸರದಿಂದ ಕಲಿಯಲಿರುವ ಸಹಜ ಸಾಮರ್ಥ್ಯಗಳೊಂದಿಗೆ ಮಗು ಹುಟ್ಟುತ್ತದೆ. ಜಗತ್ತನ್ನು ಹೊಸ ರೀತಿಯಲ್ಲಿ ನೋಡಲು, ಅರ್ಥಮಾಡಲು, ವ್ಯವಹರಿಸಲು, ಮೌಲ್ಯಮಾಪನ ಮಾಡಲು ಶಾಲೆಯ ಶಿಕ್ಷಣದ ಮೂಲಕ ಮಗುವಿಗೆ ಸಾಧ್ಯವಾಗಬೇಕು.

ತನ್ನ ಮುಂದಿರುವ ಸಮಸ್ಯೆಗಳನ್ನು ಎದುರಿಸಿ, ಆ ಸಮಸ್ಯೆಗಳನ್ನು ಪರಿಹರಿಸಿಕೊಂಡು ಕಲಿಕೆ ನಡೆಯುತ್ತದೆ. ಪಠ್ಯಕ್ರಮ ವಿನಿಮಯ ಸಮೀಪನದ ಲಕ್ಷಣಗಳು ಯಾವುವು?

- ಚಟುವಟಿಕೆ ಆಧಾರಿತವಾದುದು.
- ಪ್ರಕ್ರಿಯೆಗಳಿಂದ ಕೂಡಿದ್ದು.
- ಕಲಿಕೆಯನ್ನು ಗಟ್ಟಿಗೊಳಿಸುವುದು.
- ಕಲಿಕಾ ಸಾಧನೆಗಳನ್ನು ಸಫಲಗೊಳಿಸಲು ಸಮರ್ಥವಾದುದು.
- ಪರಿಸರ ಆಧಾರಿತವಾದುದು.
- ವಿಕಾಸದ ವಲಯಗಳನ್ನು ಪರಿಗಣಿಸುವುದು.
- ವಿದ್ಯಾರ್ಥಿಯ ಸ್ವಭಾವಕ್ಕೆ ಅನುಗುಣವಾದುದು.
- ಕಲಿಕೆಯೊಂದಿಗೆ ಮೌಲ್ಯ ನಿರ್ಣಯವೂ ಜತೆಯಾಗಿರುವುದು.

ಜ್ಞಾನನಿರ್ಮಾಣ ಆಧಾರಿತವಾದ ಕಲಿಕಾ ರೀತಿಯು ಪಠ್ಯಕ್ರಮಕ್ಕೆ ಆಧಾರವಾಗಿದೆ. ವಿದ್ಯಾರ್ಥಿಯ ಆರ್ಜಿತ ಜ್ಞಾನ ಮತ್ತು ಆಶಯ ಪರಿಸರವನ್ನು ಪರಿಗಣಿಸಿಕೊಂಡು ಪ್ರಯೋಜನಕಾರಿಯಾದ ಕಲಿಕಾ ಚಟುವಟಿಕೆಗಳನ್ನು ಏರ್ಪಡಿಸುವುದರಿಂದ ಸಹಜ ಜ್ಞಾನವನ್ನು ರೂಪಿಸಲು ಸಾಧ್ಯ ಎಂಬುದು ಈ ದೃಷ್ಟಿಕೋನದ ವೈಶಿಷ್ಟ್ಯ.

## ಕಲಿಕಾನುಭವಗಳು

ಬದುಕಿನ ವಿಭಿನ್ನ ಹಿನ್ನೆಲೆಗಳಿಂದ ಬರುವ ವಿದ್ಯಾರ್ಥಿಗಳ ಆರ್ಜಿತ ಜ್ಞಾನ, ಸಾಮರ್ಥ್ಯ, ಆಸಕ್ತಿ ಇವುಗಳು ವಿಭಿನ್ನವಾಗಿರುವವಲ್ಲವೇ. ಈ ವೈಶಿಷ್ಟ್ಯವನ್ನು ಪರಿಗಣಿಸಿಕೊಂಡು ವ್ಯಕ್ತಿ ಭಿನ್ನತೆಯನ್ನೂ ಬಹುಮುಖವಾದ ಬುದ್ಧಿಮತ್ತೆಯನ್ನೂ ಗಮನದಲ್ಲಿರಿಸಿಕೊಂಡು ಕಲಿಕೆಯ ಅನುಭವಗಳನ್ನು ರೂಪಿಸಬೇಕಾದುದು ಮುಖ್ಯವಾಗಿದೆ.

## ಕಲಿಕಾ ಪರಿಸರ

ವಿದ್ಯಾರ್ಥಿಯ ಆಸಕ್ತಿ ಹಾಗೂ ಬೆಳವಣಿಗೆಯನ್ನು ದೃಷ್ಟಿಯಲ್ಲಿರಿಸಿಕೊಂಡು, ವೈವಿಧ್ಯಪೂರ್ಣ ಕಲಿಕಾ ಚಟುವಟಿಕೆಗಳಲ್ಲಿ ಭಾಗಿಯಾಗಲು ಅನುಕೂಲವಾಗುವಂತೆ ತರಗತಿಗಳನ್ನು ಸಿದ್ಧಪಡಿಸಬೇಕು. ವಿದ್ಯಾರ್ಥಿ ಕೇಂದ್ರಿತ ಕಲಿಕಾ ಚಟುವಟಿಕೆಗಳಿಗೆ ಸಹಾಯಕವಾಗುವಂತೆ ಚಟುವಟಿಕೆ ಆಧಾರಿತ ಕಲಿಕೆಯನ್ನು ಹೇಗೆ ಮಾಡಬೇಕೆಂದು ನಾವು ತಿಳಿದುಕೊಂಡೆವಲ್ಲವೇ?

## ಕಲಿಕಾ ಪ್ರಕ್ರಿಯೆ

- ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಅನುಭವಗಳ ಆಧಾರದಲ್ಲಿ ಜ್ಞಾನ ನಿರ್ಮಾಣ (Knowledge Construction) ಮಾಡುವನು.
- ಜ್ಞಾನ ನಿರ್ಮಾಣವನ್ನು ವೈಯುಕ್ತಿಕ ಮತ್ತು ಸಾಮಾಜಿಕ ಹಂತಗಳಲ್ಲಿ ಮಾಡಬೇಕು.
- ವಿವಿಧ ಕಲಿಕಾ ಶೈಲಿಗಳನ್ನು (Learning Style) ಪರಿಗಣಿಸಿಕೊಂಡು ವಿವಿಧ ಇಂದ್ರಿಯಾನುಭವಗಳನ್ನು (Multisensory Experiences) ನೀಡುವ ಮೂಲಕ ಕಲಿಕೆಯನ್ನು ಯಶಸ್ವಿಗೊಳಿಸಬಹುದು.

*ಮಕ್ಕಳು ತೊಡಗಿಕೊಂಡಿರುವ ಜ್ಞಾನ ನಿರ್ಮಾಣ ಪ್ರಕ್ರಿಯೆಯಲ್ಲಿ ಅಧ್ಯಾಪಕರು ಸಕ್ರಿಯವಾಗಿ ಭಾಗವಹಿಸಿದರೆ, ಅದು ಮಕ್ಕಳ ತಿಳುವಳಿಕೆಯನ್ನು ಗಟ್ಟಿಗೊಳಿಸಲು ಸಹಾಯಕವಾಗುವುದು. ಕಲಿಕೆಯಲ್ಲಿ ತೊಡಗಿಸಿಕೊಂಡಿರುವ ಮಕ್ಕಳು ತಮ್ಮ ಜ್ಞಾನವನ್ನು ತಾವೇ ನಿರ್ಮಿಸಿಕೊಳ್ಳುತ್ತಾರೆ. ತಾವು ಶಾಲೆಯಲ್ಲಿ ಕಲಿತಿರುವುದನ್ನು ಹೊರಗಿನ ವಿಷಯಗಳೊಂದಿಗೆ ಅನ್ವಯಿಸಿ ಪ್ರಶ್ನೆಗಳನ್ನು ಕೇಳುವಂತೆ ಪ್ರೋತ್ಸಾಹಿಸಬೇಕು. ಬಾಯಿಪಾಠ ಹೊಡೆದು ಒಂದೇ ಒಂದು ಸರಿಯಾದ ಉತ್ತರವನ್ನು ಕಂಡುಕೊಳ್ಳುವುದಕ್ಕಿಂತ, ತಮ್ಮದೇ ವಾಕ್ಯಗಳಲ್ಲಿ ಸ್ವತಂತ್ರವಾಗಿ ಉತ್ತರವನ್ನು ಹೇಳುವಂತೆ ಪ್ರೋತ್ಸಾಹಿಸಬೇಕು. ಇವುಗಳೆಲ್ಲಾ ತಮ್ಮ ಜ್ಞಾನವನ್ನು ವಿಸ್ತರಿಸುವ ಮಕ್ಕಳಿಗೆ ಸಹಾಯ ಮಾಡುವ ಪ್ರಧಾನ ಹೆಜ್ಜೆಗಳಾಗಿವೆ. ಬೌದ್ಧಿಕವಾದ ಊಹೆ ಅರ್ಥವತ್ತಾದ ಒಂದು ಬೋಧನ ಕ್ರಮವಾಗಿದೆ. ಇದನ್ನು ಪ್ರೋತ್ಸಾಹಿಸಬೇಕು. ಹಲವಾರು ಬಾರಿ ತಮ್ಮ ದೈನಂದಿನ ಅನುಭವಗಳಿಂದ ಅಥವಾ ಮಾಧ್ಯಮ ಸಂಪರ್ಕದಿಂದ ಮಕ್ಕಳ ಮನಸ್ಸಿನಲ್ಲಿ ಕೆಲವು ಆಶಯಗಳು ರೂಪುಗೊಂಡಿರಬಹುದು. ಆದರೆ ಅಧ್ಯಾಪಕರು ನಿರೀಕ್ಷಿಸುವ ಮಾತುಗಳಲ್ಲಿ ಅವುಗಳನ್ನು ಅವರಿಗೆ ಪ್ರಕಟಿಸಲು ಸಾಧ್ಯವಾಗದು. ತಿಳಿದಿರುವುದು ಮತ್ತು ತಿಳಿಯದಿರುವುದರ ಮಧ್ಯೆ ಹೊಸ ಜ್ಞಾನದ ಸೃಷ್ಟಿಯಾಗುತ್ತದೆ. ಶಾಲೆಯ ಹೊರಗೆ ಮನೆ ಅಥವಾ ಸಮಾಜದಲ್ಲಿ ಬೆಳೆಸುವ ಕರಕೌಶಲ್ಯದ ರೂಪದಲ್ಲಿ ಇಂತಹ ಜ್ಞಾನ ಸೃಷ್ಟಿಯಾಗುವುದು. ಇಂತಹ ಎಲ್ಲ ತಿಳುವಳಿಕೆಗಳನ್ನು ಗೌರವಿಸಬೇಕು. ತಿಳುವಳಿಕೆ ಮತ್ತು ಸಂವೇದನಶೀಲತೆಯಿರುವ ಅಧ್ಯಾಪಕರು ಈ ಕುರಿತು ಪ್ರಜ್ಞಾವಂತರಾಗಿರುತ್ತಾರೆ. ಮಕ್ಕಳ ವಿಕಾಸ ಸಾಧ್ಯತೆಯನ್ನು ಮನಗಂಡು, ಚಟುವಟಿಕೆಗಳನ್ನು ಒದಗಿಸಿ ಹಾಗೂ ಪ್ರಶ್ನೆಗಳನ್ನು ಕೇಳಿ ಅವರನ್ನು ಮುನ್ನಡೆಸಲು ಅಧ್ಯಾಪಕರಿಗೆ ಸಾಧ್ಯ.*

*ಅನ್ವೇಷಣೆ, ನಿರೀಕ್ಷಣೆ, ಪ್ರಶ್ನೆಗಳನ್ನು ಕೇಳುವುದು, ಚರ್ಚಾಕೂಟಗಳು ಇವುಗಳ ಮೂಲಕ ಸಿದ್ಧಾಂತ ರೂಪೀಕರಣ ಮತ್ತು ಆಶಯ ಸೃಷ್ಟಿಗಳಾಗುತ್ತವೆ. ಇವುಗಳು ಸಕ್ರಿಯ ಭಾಗವಹಿಸುವಿಕೆಯ ಭಾಗವಾಗಿವೆ. ಶಾಲೆಗಳು ಪ್ರಶ್ನೆಗಳನ್ನು ಕೇಳುವುದಕ್ಕೂ ಚರ್ಚಿಸುವುದಕ್ಕೂ ಶೋಧಿಸುವುದಕ್ಕೂ ವಿಶ್ಲೇಷಿಸುವುದಕ್ಕೂ ನಿಗಮನವನ್ನು ಕಂಡುಕೊಳ್ಳಲೂ ಅವಕಾಶವನ್ನು ಒದಗಿಸಬೇಕು.*

*ಎನ್.ಸಿ.ಎಫ್. 2005 ಪುಟ. 41,42*

- ಕಲಿಕಾನುಭವಗಳನ್ನು ಸಕ್ರೀಯವಾಗಿ (spiralling) ಮಂಡಿಸುವ ಮೂಲಕ ಕಲಿಕೆಯು ಸಾಕಷ್ಟು ಫಲಕಾರಿಯಾಗುತ್ತದೆ.
- ಕಲಿಕಾ ಚಟುವಟಿಕೆಗಳಿಗೆ ಯೋಗ್ಯವಾದ ನಮನೀಯತೆ (Flexibility), ಹೊಂದಾಣಿಕೆ (Adaptations), ಕಲಿಕಾ ಚಟುವಟಿಕೆಗಳ ಆಯ್ಕೆ (Selection) ಇವುಗಳನ್ನು ನಡೆಸುವ ಮೂಲಕ ವಿಭಿನ್ನ ಅಭಿರುಚಿಯ ಕಲಿಕೆಯ ಆಸಕ್ತರನ್ನು ಪರಿಗಣಿಸಬಹುದು.
- ಸಾಕಷ್ಟು ಕಲಿಕಾನುಭವಗಳು ಪ್ರತಿಯೊಬ್ಬ ವಿದ್ಯಾರ್ಥಿಗೆ ದೊರಕಿದಾಗಲೇ ಕಲಿಕಾ ಸಾಧನೆ (Learning outcome) ದೃಢವಾಗುವುದು.
- ಕಲಿಕೆ ಮತ್ತು ಮೌಲ್ಯನಿರ್ಣಯ ಪ್ರಕ್ರಿಯೆಗಳು ನಿರಂತರವಾಗಿ ನಡೆಯಬೇಕಾಗಿರುವುದು.
- ವಿಷಯಾಧಾರಿತ ವಸ್ತು, ವಿದ್ಯಾರ್ಥಿಯ ಕಲಿಕೆಯ ಅಗತ್ಯ ಇವುಗಳನ್ನು ಹೊಂದಿಕೊಂಡು ವಿವಿಧ ಕಲಿಕಾ ಬೋಧನ ತಂತ್ರಗಳನ್ನು ಬಳಸಿಕೊಂಡರೆ ಎಲ್ಲರಿಗೂ ಕಲಿಕಾ ಸಾಧನೆ (Learning Outcome) ಯನ್ನು ಗಳಿಸಿಕೊಳ್ಳಲು ಸಾಧ್ಯ.
- ಪ್ರತಿಯೊಂದು ಮಗುವಿನ ಸಮಗ್ರ ಪ್ರಗತಿಯನ್ನು (Allround development) ಉದ್ದೇಶ ವಾಗಿರಿಸಿಕೊಂಡು ಕಲಿಕಾ ಪ್ರಕ್ರಿಯೆಗಳನ್ನು ನಿರ್ಧರಿಸಬೇಕು.

## 1.4 ಕಲಿಕಾ ಸಾಧನೆಗಳು (Learning Outcomes)

ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ನೀಡಲಾಗುವ ಕಲಿಕಾ ಚಟುವಟಿಕೆಗಳ ಫಲವಾಗಿ ಜ್ಞಾನ, ಕೌಶಲ್ಯ, ಮನೋಭಾವ, ಮೌಲ್ಯಗಳು ಮಗುವಿನಲ್ಲಿ ರೂಪುಗೊಳ್ಳುತ್ತವೆ. ಇವುಗಳಲ್ಲಿ ಕೆಲವನ್ನು ಸ್ವಲ್ಪ ಕಾಲದಲ್ಲಿ ಸಂಪಾದಿಸಬಹುದು ಮತ್ತು ಕೆಲವಕ್ಕೆ ದೀರ್ಘಕಾಲ ಬೇಕಾಗುವುದು. ಹೀಗೆ ಮಗುವಿನಲ್ಲಿ ಉಂಟಾಗುವ ಬದಲಾವಣೆಗಳನ್ನು ನಮಗೆ ಮುಂಚಿತವಾಗಿ ನಿರ್ಧರಿಸಲು ಸಾಧ್ಯವಿದೆ. ಪಠ್ಯಕ್ರಮವನ್ನು ಸಿದ್ಧಪಡಿಸುವಾಗ ಶಾಲಾ ಶಿಕ್ಷಣದ ವಿವಿಧ ಹಂತಗಳಲ್ಲಿ ಮಗು ಸಾಧಿಸಬೇಕಾದ ಗುರಿಗಳನ್ನು ನಾವು ಕಲಿಕಾ ಸಾಧನೆಗಳೆಂದು ಹೇಳುತ್ತೇವೆ. ಕೆಲವು ಕಲಿಕಾ ಚಟುವಟಿಕೆಗಳ ಸರಣಿಯ ಮೂಲಕ ಪ್ರತಿಯೊಂದು ಘಟಕದಲ್ಲಿಯೂ ವಿದ್ಯಾರ್ಥಿ ಸಾಧಿಸುವ ಕಲಿಕಾ ಸಾಧನೆಗಳು ವಿಕಾಸಗೊಂಡು ತರಗತಿಯ ಕೊನೆಯಲ್ಲಿ ಗಳಿಸುವ ಕಲಿಕಾ ಸಾಧನೆಗಳಾಗುತ್ತವೆ. ಅನಂತರ ನಿಗದಿತ ಶಿಕ್ಷಣ ಕಾಲಾವಧಿಯ ಕಲಿಕಾ ಸಾಧನೆಗಳಾಗಿ ಅವು ಬೆಳೆಯುತ್ತವೆ. ಕಲಿಕಾ ಸಾಧನೆಗಳನ್ನು ನಿರೀಕ್ಷಣೆ ಮಾಡಲೂ (observable) ಅಳೆಯಲೂ (measurable) ಸಾಧ್ಯವಿರುವುದು ಅದರ ವೈಶಿಷ್ಟ್ಯವಾಗಿದೆ. ಪ್ರತಿಯೊಂದು ಘಟಕದ, ತರಗತಿಯ, ಅವಧಿಯ ಕೊನೆಯಲ್ಲಿ ಮಗು ಗಳಿಸಬೇಕಾದ ಜ್ಞಾನ ಕೌಶಲ್ಯ, ಮೌಲ್ಯ, ಮನೋಭಾವಗಳನ್ನು ಗಳಿಸಲಾಗಿದೆಯೇ ಎಂದು ಮೌಲ್ಯಮಾಪನ ಮಾಡಲು ಕಲಿಕಾಸಾಧನೆಗಳ ವಿಶ್ಲೇಷಣೆಯಿಂದ ಸಾಧ್ಯ. ಪಠ್ಯಕ್ರಮದ ಸರಿಯಾದ ವಿನಿಮಯದ ಮೂಲಕ ಎಲ್ಲ ಮಕ್ಕಳ ಕಲಿಕಾ ಸಾಧನೆಗಳನ್ನು ದೃಢಪಡಿಸಲು ನಮಗೆ ಸಾಧ್ಯವಾಗಬೇಕು.

**ಕಲಿಕಾ ಸಾಧನೆಗಳ ವೈಶಿಷ್ಟ್ಯಗಳನ್ನು ಹೀಗೆ ಸಂಗ್ರಹಿಸಬಹುದು.**

- ವಿಷಯನಿಷ್ಠವಾದ ಕಲಿಕೆಯ ಮೂಲಕ ವಿದ್ಯಾರ್ಥಿ ಗಳಿಸಿಕೊಳ್ಳಬೇಕಾದ ಜ್ಞಾನ (knowledge), ಕೌಶಲ್ಯ (skills), ಮನೋಭಾವ ಮತ್ತು ಮೌಲ್ಯ (attitude and value)ಗಳನ್ನು ಕಲಿಕಾ ಸಾಧನೆ ಒಳಗೊಂಡಿರುತ್ತದೆ.
- ಕಲಿಕಾ ಸಾಧನೆಗಳನ್ನು ನಿರೀಕ್ಷಣೆ ಮಾಡಲೂ, ಅಳೆಯಲೂ ಸಾಧ್ಯವಿದೆ.
- ಹ್ರಸ್ವ ಮತ್ತು ದೀರ್ಘಕಾಲದಲ್ಲಿ ಗಳಿಸುವ ವಿಭಿನ್ನ ಕಲಿಕಾ ಸಾಧನೆಗಳಿವೆ.

## 1.5 ಕಲಿಕಾ ಸಂಪನ್ಮೂಲಗಳು ಮತ್ತು ಕಲಿಕಾ ವ್ಯವಸ್ಥೆಗಳು

ಪಠ್ಯಕ್ರಮವನ್ನು ವಿನಿಮಯ ಮಾಡಲು ಬಳಸುವ ವಿವಿಧ ಘಟಕಗಳೇ ಕಲಿಕಾ ಸಂಪನ್ಮೂಲಗಳು. ಕಲಿಕಾ ಪ್ರಕ್ರಿಯೆಯ ಪೂರ್ಣತೆಗೆ ಕಲಿಕಾ ಸಂಪನ್ಮೂಲಗಳನ್ನು ಉಪಯೋಗಿಸಿಯೇ ತೀರಬೇಕು.

- ಗ್ರಂಥಾಲಯ
- ಪ್ರಯೋಗಾಲಯ (ಭಾಷೆ, ಗಣಿತ, ವಿಜ್ಞಾನ)
- ಕಲಿಕೋಪಕರಣಗಳು
- ಡಿಸ್‌ಪ್ಲೇ ಫಲಕಗಳು
- ಕಂಪ್ಯೂಟರ್ ಲ್ಯಾಬ್
- ಬಹುಮಾಧ್ಯಮ ಉಪಕರಣಗಳು

ಇದರ ಹೊರತಾಗಿ ಮಕ್ಕಳ ಕಲಿಕಾ ಸಾಮರ್ಥ್ಯವನ್ನು ಪ್ರಕಟಿಸುವ ಅನೇಕ ವೇದಿಕೆಗಳು ಶಾಲೆಗಳಲ್ಲಿವೆಯಲ್ಲವೇ? ಇವುಗಳನ್ನು ಕಲಿಕಾ ಸಾಧನೆಗಳನ್ನು ಗಳಿಸಿಕೊಳ್ಳಲು ಬಳಸಿಕೊಳ್ಳಬಹುದು.

- ಬಾಲಸಭೆ
- ಅಸೆಂಬ್ಲಿ
- ಕ್ಲಬ್‌ಗಳು
- ಚರ್ಚಾ ಕೂಟಗಳು
- ಶೈಕ್ಷಣಿಕ ಪ್ರವಾಸಗಳು
- ಸ್ವಯಂ ಸೇವಾ ಸಂಸ್ಥೆಗಳು (SPC, NSS, Scout, NCC)

ಮಕ್ಕಳ ಪರಿಪೂರ್ಣವಾದ ಬೆಳವಣಿಗೆಗೆ ಇಂತಹ ಘಟಕಗಳು ಅತಿ ಅಗತ್ಯವಾಗಿವೆ.

## 1.6 ಕಲೆ ಮತ್ತು ವೃತ್ತಿಪರಿಚಯ ಕಲಿಕೆ

### ಕಲೆಯ ಕಲಿಕೆ

ಸೃಜನಶೀಲತೆ, ನಿರೀಕ್ಷಣ ಸಾಮರ್ಥ್ಯ ಮತ್ತು ಬುದ್ಧಿಮತ್ತೆಯನ್ನು ಮಕ್ಕಳಲ್ಲಿ ಬೆಳೆಸಲು ಕಲೆಯ ಕಲಿಕೆ ಅತಿ ಅಗತ್ಯವಾಗಿದೆ. ಹೊಸ ಪಠ್ಯಕ್ರಮದಲ್ಲಿ ಸಾಮಾನ್ಯ ವಿಷಯಗಳೊಂದಿಗೆ ಕಲೆಯ ಕಲಿಕೆಗೂ ಮಹತ್ವವನ್ನು ನೀಡಲಾಗಿದೆ. ಶಾಲಾ ಪಠ್ಯಕ್ರಮದಲ್ಲಿ ಕಲೆಯ ಕಲಿಕೆಯ ವ್ಯಾಪ್ತಿಯಲ್ಲಿ ಸಂಗೀತ, ನೃತ್ಯ, ಚಿತ್ರರಚನೆ, ಶಿಲ್ಪರಚನೆ, ನಾಟಕ, ಸಿನಿಮಾ ಮೊದಲಾದ ಪ್ರಕಾರಗಳನ್ನು ಸೇರಿಸಿಕೊಳ್ಳಲಾಗಿದೆ. ಮಕ್ಕಳ ಪ್ರತಿಭೆಗಳನ್ನು ಗುರುತಿಸಿ, ಪ್ರೋತ್ಸಾಹವನ್ನು ನೀಡುವುದು ಅಗತ್ಯವಾಗಿದೆ.

### ಕಲೆಯ ಕಲಿಕೆಯ ಸಾಮಾನ್ಯ ಉದ್ದೇಶಗಳು

- ವಿದ್ಯಾರ್ಥಿಯ ಸಹಜವಾದ ಕಲೆಯ ಅಭಿರುಚಿಗಳನ್ನು ಪ್ರೋತ್ಸಾಹಿಸುವುದು.
- ವಿವಿಧ ಕಲೆಗಳನ್ನು ತಿಳಿದುಕೊಂಡು, ಮಕ್ಕಳ ಅಭಿರುಚಿಗೆ ಹೊಂದಿಕೊಂಡು ಕಲೆಗಳನ್ನು ಅಭ್ಯಾಸ ಮಾಡಲು ಅವಕಾಶಗಳನ್ನು ಒದಗಿಸುವುದು.
- ವಿವಿಧ ಕಲೆಗಳನ್ನು ಆಸ್ವಾದಿಸಿ, ಕಲೆಯ ಸೌಂದರ್ಯವನ್ನು ತಿಳಿದುಕೊಳ್ಳುವುದು.
- ಕಲೆಯ ಆಸ್ವಾದನೆ ಮಾಡಿ ಸಮಾಜ ಜೀವನದಲ್ಲಿ ಮಾನವೀಯ ದೃಷ್ಟಿಕೋನಗಳನ್ನು ಮೂಡಿಸುವುದು.
- ಸಾಂಸ್ಕೃತಿಕ ವೈವಿಧ್ಯವನ್ನು ಅರಿತುಕೊಂಡು ಸಂಸ್ಕೃತಿ ಪ್ರೇಮವನ್ನು ಬೆಳೆಸುವುದು.
- ಕಲೆಯ ಸತ್ವವನ್ನು ಅರಿತುಕೊಂಡು ಹೊಸ ಚಿಂತನೆಗಳನ್ನು ಮಾಡುವುದು ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸುವುದು.
- ಕಲೆಯನ್ನು ಬಳಸಿ ಇತರ ವಿಷಯಗಳ ಕಲಿಕೆಯನ್ನು ಫಲಪ್ರದಗೊಳಿಸುವುದು (Art applied learning)

- ಬಹುಮುಖವಾದ ಬೌದ್ಧಿಕ ವಿಕಾಸದ ಸಾಧ್ಯತೆಗಳನ್ನು ಉತ್ತಮ ಪಡಿಸುವುದು.
- ವಿಭಿನ್ನ ಕೌಶಲ್ಯಗಳಿರುವ ವಿದ್ಯಾರ್ಥಿಗಳನ್ನು ಕಲಿಕಾ ಚಟುವಟಿಕೆಗಳಿಗೆ ಆಕರ್ಷಿಸುವುದು.
- ಮಕ್ಕಳ ಆಸ್ವಾದನೆಯ ಮಟ್ಟವನ್ನು ಉತ್ತಮಪಡಿಸುವುದು.

### ವೃತ್ತಿ ಪರಿಚಯ

ಭಾವನಾತ್ಮಕ ಮತ್ತು ವಿಜ್ಞಾನ ಕ್ಷೇತ್ರಗಳ ಸಮನ್ವಯ ಹಾಗೂ ಪ್ರಗತಿಗಾಗಿ ವೃತ್ತಿ ಪರಿಚಯ ಶಿಕ್ಷಣ ಅನಿವಾರ್ಯವಾಗಿದೆ. ಪ್ರತಿಯೊಂದು ವೃತ್ತಿ ಪರಿಚಯ ತರಗತಿಯ ಅಡಿಪಾಯವು ಮಾನವ ಸಂಪನ್ಮೂಲದ ಪ್ರಗತಿಯಾಗಬೇಕು. ಎಲ್ಲ ಪ್ರಜೆಗಳ ಸಾಮರ್ಥ್ಯಗಳನ್ನೂ, ಕೌಶಲ್ಯಗಳನ್ನೂ ರಾಷ್ಟ್ರ ನಿರ್ಮಾಣಕ್ಕಾಗಿ ಬಳಸುವಂತೆ ಬೆಳೆಸುವುದೇ ಮಾನವ ಸಂಪನ್ಮೂಲ ಪ್ರಗತಿಯ ಉದ್ದೇಶವಾಗಿದೆ. ವೃತ್ತಿಯಲ್ಲಿ ಆಸಕ್ತಿ ಮೂಡಿಸುವುದು, ವ್ಯಕ್ತಿಗಳನ್ನು ಹೊಸ ವೃತ್ತಿ ಸಂಸ್ಕೃತಿಯ ವಕ್ತಾರರನ್ನಾಗಿ ಮಾಡುವುದು ವೃತ್ತಿ ಕಲಿಕೆಯ ಪ್ರಮುಖ ಉದ್ದೇಶಗಳಾಗಿವೆ.

- ಮಾನವ ಸಂಪನ್ಮೂಲದ ಅಭಿವೃದ್ಧಿ
- ರಾಷ್ಟ್ರೀಯ ಅಭಿವೃದ್ಧಿ
- ವೃತ್ತಿ ಸನ್ನದ್ಧತೆ
- ಉತ್ಪಾದನ ವಲಯದಲ್ಲಿ ಸ್ವಾಯತ್ತತೆ
- ಸಂತುಲಿತ ವ್ಯಕ್ತಿತ್ವ ವಿಕಾಸ
- ಮೌಲ್ಯ ಹಾಗೂ ಮನೋಭಾವಗಳ ಬೆಳವಣಿಗೆ

ಕಲೆ ಮತ್ತು ವೃತ್ತಿ ಕಲಿಕೆಗೆ ಪ್ರಾಧಾನ್ಯವನ್ನು ನೀಡಿ ಪಠ್ಯಕ್ರಮವನ್ನು ರೂಪಿಸಬೇಕು. ಇವುಗಳ ಸಾಧ್ಯತೆಗಳನ್ನು ಉಳಿಸಿಕೊಂಡು ವಿಭಿನ್ನ ವಿಷಯಗಳೊಂದಿಗೆ ವಿನಿಮಯ ಮಾಡುವುದು ಅಗತ್ಯವಾಗಿದೆ.

## 1.7 ಆರೋಗ್ಯ ಮತ್ತು ಕ್ರೀಡಾ ಶಿಕ್ಷಣ

ಪ್ರಾಥಮಿಕ ಶಾಲಾ ಹಂತವು ಮಕ್ಕಳ ದೈಹಿಕ, ಮಾನಸಿಕ ಬೆಳವಣಿಗೆಯ ಮುಖ್ಯ ಹಂತವಾಗಿದೆ. ಆದುದರಿಂದ ಈ ಹಂತದಲ್ಲಿ ಎಲ್ಲ ಮಕ್ಕಳಿಗೆ ಆರೋಗ್ಯ ಮತ್ತು ಕ್ರೀಡಾ ಶಿಕ್ಷಣದ ಅನುಭವಗಳು ಲಭಿಸುತ್ತವೆ ಎಂಬುದನ್ನು ದೃಢಗೊಳಿಸಬೇಕು. ಮಗುವಿನ ಆರೋಗ್ಯ ಮತ್ತು ಕ್ರೀಡಾ ಮನೋಭಾವವನ್ನು ಪೋಷಿಸುವುದು, ಆರೋಗ್ಯಕರ ಜೀವನ ಶೈಲಿಯನ್ನು ರೂಪಿಸುವುದು ಈ ಕಲಿಕೆಯ ಪ್ರಧಾನ ಉದ್ದೇಶವಾಗಿದೆ. ಆರೋಗ್ಯ ಮತ್ತು ಕ್ರೀಡಾ ಶಿಕ್ಷಣದ ಸಾಧ್ಯತೆಗಳನ್ನು ಉಳಿಸಿಕೊಂಡು ವಿಭಿನ್ನ ವಿಷಯಗಳನ್ನು ವಿನಿಮಯ ಮಾಡುವುದು ಅಗತ್ಯವಾಗಿದೆ.

### ಆರೋಗ್ಯ ಮತ್ತು ಕ್ರೀಡಾ ಕಲಿಕೆಯ ಪ್ರಧಾನ ಉದ್ದೇಶಗಳು

- ವಿವಿಧ ಸಂದರ್ಭಗಳಲ್ಲಿ ಯೋಗ್ಯವಾದ ರೀತಿಯಲ್ಲಿ ದೇಹವನ್ನು ಚಲಿಸುವಂತೆ ಮಾಡುವ ಕೌಶಲ್ಯವನ್ನು ಸಂಪಾದಿಸುವುದು.
- ದೇಹದ ಚಲನೆಯನ್ನು ನಿಯಂತ್ರಿಸುವ ವಿವಿಧ ಹಂತಗಳನ್ನು ತಿಳಿದುಕೊಂಡು, ಅವುಗಳನ್ನು ಸೃಜನಾತ್ಮಕ ಚಲನೆಗಳ ಮಾಧ್ಯಮವಾಗಿ ಅಭಿವೃದ್ಧಿಪಡಿಸುವುದು.
- ಸಾಮಾಜಿಕವಾದ ಜವಾಬ್ದಾರಿಗಳನ್ನು ಅರಿತುಕೊಂಡು, ಪ್ರಜಾಪ್ರಭುತ್ವ ರೀತಿಯ ಜೀವನ ಶೈಲಿಯನ್ನು ರೂಢಿಸಿಕೊಳ್ಳುವುದು ಮತ್ತು ಆಸ್ವಾದಿಸುವುದು.
- ಮಗುವಿನ ಸರ್ವತೋಮುಖ ಬೆಳವಣಿಗೆಯನ್ನು ದೃಢಪಡಿಸುವುದು.

## 1.8 ಒಳಗೊಂಡಿರುವ ಶಿಕ್ಷಣ

## (Inclusive Education)

*ಶಾಲೆಯಲ್ಲಿ ಉತ್ತಮ ಪ್ರದರ್ಶನವನ್ನು ನೀಡುವ ತಮ್ಮ ಸಹಪಾಠಿಗೆ ವಾಸಮಾಡಲು ಮನೆಯಿಲ್ಲವೆಂದೂ, ರಸ್ತೆ ಬದಿಯ ಪೈಪಿನಡಿಯಲ್ಲಿ ಕಟ್ಟಿದ ಡೇರೆಯೇ ಅವನ ಮನೆಯೆಂದೂ ತಿಳಿದಾಗ ಅದು ಚರ್ಚೆಗೆ ಗ್ರಾಸವಾಯಿತು. ಕಷ್ಟಗಳನ್ನು ಪರಸ್ಪರ ಹಂಚಿಕೊಳ್ಳುವುದರಿಂದ ಮಾತ್ರ ಪರಿಹಾರ ಉಂಟಾಗುವುದಿಲ್ಲ ಎಂದು ಅರಿತುಕೊಂಡ ವಿದ್ಯಾರ್ಥಿಗಳು ಅಧ್ಯಾಪಕರ ಸಹಾಯದೊಂದಿಗೆ ಹಣವನ್ನು ಸಂಗ್ರಹಿಸಿ ಗೆಳೆಯನಿಗೆ ಮನೆ ನಿರ್ಮಿಸಿಕೊಟ್ಟು ಮಾದರಿಯಾದರು.*

*(ಒಂದು ಶಾಲೆಯ ಅನುಭವ)*

ತರಗತಿ ಕೋಣೆಯಲ್ಲಿ ಎಲ್ಲರನ್ನೂ ಒಂದುಗೂಡಿಸುವ, ಯಾರನ್ನೂ ಹೊರ ಹಾಕದ ಕಲಿಕೆಯ ಒಂದು ವಾತಾವರಣವನ್ನು ಸೃಷ್ಟಿಸಬೇಕಾಗಿದೆ. ನಮ್ಮ ಶಾಲೆಗಳಲ್ಲಿ ಮುಖ್ಯವಾಗಿ ಎರಡು ವಿಭಾಗಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನೂ, ಸಹಾಯವನ್ನೂ ನೀಡಿ ನ್ಯಾಯಯುತವಾದ ಗುಣಮಟ್ಟದ ಶಿಕ್ಷಣವನ್ನು (Equitable Quality Education) ದೃಢಗೊಳಿಸಬೇಕಾಗಿದೆ.

### ವಿಶೇಷ ಗಮನ, ಕಲಿಕಾ ಸಹಾಯ ಮತ್ತು ರಕ್ಷಣೆ ಅಗತ್ಯವಿರುವುದು ಯಾರಿಗೆ?

(ಎ) ಸಾಮಾಜಿಕ ಮತ್ತು ಆರ್ಥಿಕ ಕಾರಣಗಳಿಗಾಗಿ ಹೊರಹಾಕಲ್ಪಟ್ಟವರ ಮಕ್ಕಳು

- ವಿಭಿನ್ನ ಮತ್ತು ವೈವಿಧ್ಯಪೂರ್ಣವಾದ ಸಾಮಾಜಿಕ, ಸಾಂಸ್ಕೃತಿಕ, ಕೌಟುಂಬಿಕ ಹಿನ್ನೆಲೆಯಲ್ಲಿ ತಾರತಮ್ಯವನ್ನು ಅನುಭವಿಸುವ ಮಕ್ಕಳು, ತೀವ್ರ ಬಡತನವನ್ನು ಎದುರಿಸುವವರು, ಬುಡಕಟ್ಟು ಆದಿವಾಸಿಗಳು, ಹೆಣ್ಮಕ್ಕಳು, ಪರಿಶಿಷ್ಟ ಜಾತಿ, ಪಂಗಡಗಳಿಗೆ ಸೇರಿದವರು, ಬೇರೆ ರಾಜ್ಯಗಳಿಂದ ವಲಸೆ ಬಂದವರು, ಖಾಯಂ ಮನೆಗಳಿಲ್ಲದವರು–ಹೀಗೆ ಅನೇಕ ಸಂಕಷ್ಟಗಳನ್ನು ಎದುರಿಸುವವರು ಈ ವಿಭಾಗದಲ್ಲಿ ಸೇರುತ್ತಾರೆ.

  ವಿಭಿನ್ನತೆಗಳನ್ನು, ಪರಿಮಿತಿಗಳನ್ನು ಅರಿತುಕೊಂಡು, ಅವರನ್ನು ಗುರುತಿಸಿ ಗೌರವಿಸಬೇಕಾದುದು ನಮ್ಮ ಸಮೀಪನವಾಗಿರಬೇಕು. ಶಾಲೆಯ ಒಗ್ಗಟ್ಟಿನ ಕಾರ್ಯ ಚಟುವಟಿಕೆಗಳ ಮೂಲಕ ಇಂಥವರ ಅನೇಕ ಸಮಸ್ಯೆಗಳನ್ನು ಪರಿಹರಿಸಬಹುದು.

(ಬಿ) ದೈಹಿಕ ಹಾಗೂ ಮಾನಸಿಕ ಸವಾಲುಗಳನ್ನು ಎದುರಿಸುವವರು

ದೈಹಿಕ ಹಾಗೂ ಮಾನಸಿಕ ಸವಾಲುಗಳನ್ನು ಎದುರಿಸುವವರಿಗೂ, ಕಲಿಕೆಯಲ್ಲಿ ಕಷ್ಟವನ್ನು ಅನುಭವಿಸುವ ಮಕ್ಕಳಿಗೂ ಪ್ರತ್ಯೇಕವಾದ ಕಲಿಕಾ ವಿಧಾನದ ಅಗತ್ಯಗಳಿವೆ (special educational needs). ಕಿವುಡುತನ, ದೃಷ್ಟಿದೋಷ, ಬೌದ್ಧಿಕ ಮತ್ತು ಚಲನೆಯ ಪರಿಮಿತಿಗಳು, ಓಟಿಸಂ, ಸೆರೆಬ್ರಲ್ ಪಾಲ್ಸಿ, ಬಹುಮುಖವಾದ ವೈಕಲ್ಯಗಳು, ಭಾವನಾತ್ಮಕವಾದ ಅಸಮತೋಲನವಿರುವ ಮಕ್ಕಳು, ಗಮನಹರಿಸುವಲ್ಲಿ ಪರಿಮಿತಿಗಳಿರುವ ಮಕ್ಕಳು ಮುಂತಾದವರು ವಿಭಾಗದಲ್ಲಿ ಸೇರುತ್ತಾರೆ.

### ಪಠ್ಯಕ್ರಮದ ವಿನಿಮಯ ಹಾದಿಯಲ್ಲಿ ನಾವು ಏನನ್ನು ಅನುಸರಿಸಬೇಕು?

- ಕಲಿಕೆಯ ಅಗತ್ಯಗಳು, ಅಭಿರುಚಿ ಇವುಗಳನ್ನು ಪರಿಗಣಿಸಿ ಕಲಿಕಾ ಚಟುವಟಿಕೆಗಳ ಯೋಜನೆಗಳು.
- ಕಲಿಕಾ ಚಟುವಟಿಕೆಗಳಲ್ಲಿ ಎಲ್ಲರ ಭಾಗವಹಿಸುವಿಕೆ ಇರುವಂತೆ ಪಾಠಯೋಜನೆಯಲ್ಲಿ ಹೊಂದಾಣಿಕೆ.
- ವಿಭಿನ್ನವಾದ ಕಲಿಕಾ ವೇಗ, ಕಲಿಕಾ ಶೈಲಿ ಇವುಗಳನ್ನು ಪರಿಗಣಿಸಿಕೊಂಡು ವಿವಿಧ ಇಂದ್ರಿಯಾಧಾರಿತ ಸಮೀಪನ (multisensory approach) ಅನುಷ್ಠಾನ.

- ಪರಿಹಾರ ಚಟುವಟಿಕೆಗಳು (Remedial Practices), ಪೋಷಕ ಚಟುವಟಿಕೆಗಳು (Enrichment Practice) ಇವುಗಳನ್ನು ಪ್ರತಿಯೊಬ್ಬ ಮಗುವಿನ ಅಗತ್ಯವನ್ನು ಅನುಸರಿಸಿ ಅನುಷ್ಠಾನಗೊಳಿಸುವುದು.
- ವಿವಿಧ ಮೌಲ್ಯಮಾಪನ ಸಾಧ್ಯತೆಗಳನ್ನು ಜಾರಿಗೊಳಿಸುವುದು.
- ಸಂಪನ್ಮೂಲ ಅಧ್ಯಾಪಕರ ಹಾಗೂ ಇತರ ತಜ್ಞರ ಸಹಾಯವನ್ನು ದೃಢಪಡಿಸುವುದು.
- ಮಗುವಿನ ಕಲಿಕೆ, ಸಂರಕ್ಷಣೆ ಮೊದಲಾದ ವಿಷಯಗಳಲ್ಲಿ ಹೆತ್ತವರ ನಿರಂತರ ಬೆಂಬಲವನ್ನು ದೃಢಪಡಿಸುವುದು.

ಈ ಎರಡು ವಿಭಾಗದ ಮಕ್ಕಳಲ್ಲದೆ, ವಿಶೇಷ ಗಮನ ಹಾಗೂ ಪರಿಗಣನೆ ನೀಡಬೇಕಾದ ಪ್ರತ್ಯೇಕ ಅಭಿರುಚಿ ಮತ್ತು ಸಾಮರ್ಥ್ಯಗಳಿರುವ ಮಕ್ಕಳೂ (Gifted Childrens) ಇದ್ದಾರೆ. ಹೀಗೆ ಎಲ್ಲ ವಿಭಾಗದ ಮಕ್ಕಳನ್ನು ಒಳಗೊಳ್ಳುವ ರೀತಿಯಲ್ಲಿ ಶಾಲೆಯ ಚಟುವಟಿಕೆಗಳನ್ನೂ ಭೌತಿಕ ಹಿನ್ನೆಲೆಗಳನ್ನೂ ಶಾಸ್ತ್ರೀಯವಾಗಿ ರೂಪಿಸಬೇಕಾಗಿದೆ.

## 1.9 ಮಾಹಿತಿ ತಂತ್ರಜ್ಞಾನ – ಸಾಧ್ಯತೆ

ಮಾಹಿತಿ ವಿನಿಮಯಕ್ಕೆ ಅನೇಕ ವ್ಯವಸ್ಥೆಗಳು ಇಂದು ಬಳಕೆಯಲ್ಲಿವೆ ಅಲ್ಲವೇ? **ICT** ಬಳಕೆಯು ಇವುಗಳಲ್ಲಿ ತುಂಬ ಪ್ರಯೋಜನಕರವಾದುದು. ಮಕ್ಕಳು ಇದರ ತಂತ್ರಜ್ಞಾನವನ್ನು ಹೆಚ್ಚು ಕಡಿಮೆ ತಿಳಿದವರೇ ಆಗಿದ್ದಾರೆ. ಈ ತಿಳುವಳಿಕೆಯನ್ನು ತರಗತಿಯ ಕಲಿಕೆಗೆ ಬಳಸಿಕೊಳ್ಳಬೇಕಾಗಿದೆ. ಕಲಿಕೆಯನ್ನು ಅನಾಯಾಸಕರ ಹಾಗೂ ಸಂತೋಷದಾಯಕವನ್ನಾಗಿಸಲು ಇದರಿಂದ ಸಾಧ್ಯ.

### ಅಗತ್ಯ

ಪಠ್ಯಕ್ರಮ ವಿನಿಮಯದ ನಿರ್ದಿಷ್ಟ ಹಂತದಲ್ಲಿ ಯೋಗ್ಯವಾದ **ICT** ಸಾಮಗ್ರಿಗಳನ್ನು ಅಗತ್ಯವಾದರೆ ಮಾತ್ರ ಬಳಸಿದರೆ ಸಾಕು. ಮುದ್ರಣ ಮಾಧ್ಯಮದಲ್ಲಿರುವ ಪಾಠಪುಸ್ತಕಗಳ ಮಿತಿಗಳಾದ ಚಲನಶೀಲತೆ, ಶಬ್ದಗಳನ್ನು ಕೇಳಿಸಲು ಆಗದಿರುವುದು ಮೊದಲಾದ ಕೊರತೆಗಳನ್ನು **ICT** ಸಾಧ್ಯತೆಗಳ ಮೂಲಕ ಪರಿಹರಿಸಬಹುದು. **ICT** ಬಳಕೆಯ ಅಗತ್ಯ ಯಾವ ಯಾವ ಸಂದರ್ಭಗಳಲ್ಲಿ ಬೇಕಾಗಿದೆ ಎಂದೂ ಅದರ ಪ್ರಯೋಜನವನ್ನು ಹೇಗೆ ಪಡೆಯಬಹುದೆಂದೂ ನಿರ್ಧರಿಸಲು ಅಧ್ಯಾಪಕರಿಗೆ ಸಾಧ್ಯವಾಗಬೇಕು.

### ಹೊಂದಾಣಿಕೆ

ಮಗುವಿನ ಬುದ್ಧಿಯನ್ನೂ ಪ್ರತಿಭೆಯನ್ನೂ ಪ್ರಚೋದಿಸುವ **ICT** ಸಾಧ್ಯತೆಗಳು ಬೇಕಾಗಿವೆ. ಜಿಜ್ಞಾಸೆ ಮತ್ತು ಆಕಾಂಕ್ಷೆಯೊಂದಿಗೆ ಪಠ್ಯ ವಿಷಯದ ಬಗ್ಗೆ ಆಸಕ್ತಿ ಮೂಡುವಂತೆ **ICT** ಯನ್ನು ಬಳಸಬೇಕು. ಇಂದ್ರಿಯ ವೈಕಲ್ಯವುಳ್ಳವರಿಗೆ ಇದರ ಪ್ರಯೋಜನ ಹೆಚ್ಚು. ಶಬ್ದ ಹಾಗೂ ದೃಶ್ಯಗಳಿಂದ ವಿಷಯಗಳನ್ನು ಅನುಭವಕ್ಕೆ ತರಲು **ICT** ಪ್ರಯೋಜನಕಾರಿಯಾಗಿದೆ. ವಿಭಿನ್ನವಾದ ಕಲಿಕೆಯ ಶೈಲಿಗಳನ್ನು ಅಳವಡಿಸಿಕೊಂಡಿರುವ ಕಲಿಕೆಯ ಅನುಭವಗಳನ್ನು ಒದಗಿಸಲು ಇದು ಸಹಾಯಕವಾಗಿದೆ.

### ವಿಶ್ವಸನೀಯತೆ

ಕಲಿಕಾ ಸಾಮಗ್ರಿಗಳ ಬಗೆಗಿನ ವಿಶ್ವಾಸಾರ್ಹತೆಯನ್ನು ದೃಢಪಡಿಸಬೇಕು. ಸರಕಾರಿ ಇಲಾಖೆಗಳ ಸೈಟುಗಳು, ಶೈಕ್ಷಣಿಕ ವೆಬ್‌ಸೈಟುಗಳು, ಪೋರ್ಟಲುಗಳು, ಬ್ಲಾಗುಗಳು, ಸಾಮಾಜಿಕ ಜಾಲ ತಾಣಗಳು ಮೊದಲಾದವುಗಳಿಂದ ಮಾಹಿತಿಗಳನ್ನು ಸಂಗ್ರಹಿಸುವಾಗ ಅದು ಅಧಿಕೃತವೇ ಎಂದು ದೃಢಪಡಿಸಬೇಕು. ತರಗತಿ ಕೋಣೆಯಲ್ಲಿ ಬಳಸುವ ಸಾಮಗ್ರಿಗಳ ಪ್ರಾಯೋಗಿಕ ನೆಲೆಯನ್ನು ದೃಢಪಡಿಸಬೇಕು. ಇಂತಹ ಸಾಮಗ್ರಿಗಳು ಕಾರ್ಯ ನಿರ್ವಹಿಸುವುದಕ್ಕೆ ಯೋಗ್ಯವಾದ ಸೋಫ್ಟ್‌ವೇರ್‌ಗಳು ಸುಲಭದಲ್ಲಿ ದೊರಕುವರಥದ್ದೂ, ಉಪಯೋಗಕ್ಕೆ ಸಿಗುವಂಥದ್ದೂ ಆಗಿರಬೇಕು. **ICT** ಸಾಧ್ಯತೆಗಳು ಮಗುವಿನ ವಯಸ್ಸು, ಮಾನಸಿಕ ಸ್ಥಿತಿ ಇವುಗಳಿಗೆ ಹೊಂದಿಕೆಯಾಗುವಂತಿರಬೇಕು.

## 1.10 ಮೌಲ್ಯಗಳು, ಮನೋಧರ್ಮಗಳು, ಕಾಳಜಿ ಇವುಗಳನ್ನು ಬೆಳೆಸುವ ವಲಯಗಳು

ವಿದ್ಯಾರ್ಥಿಯಲ್ಲಿ ಮಾನವೀಯ ಮೌಲ್ಯ ಹಾಗೂ ಸಾಂವಿಧಾನಿಕ ಮೌಲ್ಯಗಳ ಕುರಿತು ಅರಿವು ಮೂಡಿಸುವುದು, ಸಾಮಾಜಿಕ ಜೀವನವನ್ನು ಬಲಗೊಳಿಸುವ ಮನೋಧರ್ಮವನ್ನು ಮೂಡಿಸುವುದು, ಸಾಮಾಜಿಕ ಕಾಳಜಿಯನ್ನು ಬೆಳೆಸುವುದು ಮೊದಲಾದವು ಪಠ್ಯ ಕ್ರಮದ ಪ್ರಥಮ ಪರಿಗಣನೆಯ ವಿಷಯಗಳಾಗಿವೆ. ಇವುಗಳನ್ನು ಬೆಳೆಸಲು ಸೂಚಿಸಲಾದ ಆಶಯ ವಲಯಗಳನ್ನು ಕೆಳಗೆ ನೀಡಲಾಗಿದೆ.

### ಪ್ರಜಾಪ್ರಭುತ್ವ ಪ್ರಜ್ಞೆ

ವಿವಿಧ ವಿಷಯಗಳನ್ನು ಆಯ್ಕೆ ಮಾಡುವಾಗ ಪ್ರಜಾಪ್ರಭುತ್ವ ವ್ಯವಸ್ಥೆಗೆ ಸಂಬಂಧಿಸಿದ ದೃಷ್ಟಿಕೋನಗಳನ್ನು ಪರಿಗಣಿಸಬೇಕು. ಕಲಿಕಾ ಚಟುವಟಿಕೆಗಳ ಯೋಜನೆಯಲ್ಲಿಯೂ ವಿನಿಮಯ ಪ್ರಕ್ರಿಯೆಯಲ್ಲಿಯೂ ಪ್ರಜಾಪ್ರಭುತ್ವದ ಸಮೀಪನ ಇರಬೇಕಾಗಿದೆ. ಪ್ರಜಾಪ್ರಭುತ್ವ ರೀತಿಯ ತರಗತಿ, ಶಾಲಾ ಪ್ರದೇಶಗಳು (ಪ್ರಜಾಪ್ರಭುತ್ವ ರೀತಿಯ ವೇದಿಕೆಗಳು), ಪ್ರಜಾಪ್ರಭುತ್ವ ಜೀವನ ಸಮೀಪನ ಮೊದಲಾದವುಗಳಿಂದ ಈ ಪ್ರಜ್ಞೆಯನ್ನು ಬೆಳೆಸುವುದು ಪಠ್ಯಕ್ರಮದ ಉದ್ದೇಶವಾಗಿದೆ.

### ಸಾಂವಿಧಾನಿಕ ಮೌಲ್ಯಗಳು

ನಮ್ಮ ಸಂವಿಧಾನವು ಎತ್ತಿ ಹಿಡಿದಿರುವ ಮೌಲ್ಯಗಳನ್ನೂ ಗುರಿಗಳನ್ನೂ ಪಠ್ಯಕ್ರಮವು ಪ್ರತಿಫಲಿಸುವಂತಿರಬೇಕು. ಸಾಂವಿಧಾನಿಕ ಮೌಲ್ಯಗಳನ್ನು ಸಾಧಿಸುವುದಕ್ಕಾಗಿ ವಿದ್ಯಾರ್ಥಿಗಳನ್ನು ಸಮರ್ಥರನ್ನಾಗಿಸುವ ಪಾಠಗಳನ್ನೂ ವಿನಿಮಯ ಪ್ರಕ್ರಿಯೆಗಳನ್ನೂ ಆಯ್ಕೆ ಮಾಡುವತ್ತ ಗಮನಿಸಬೇಕು.

### ಜಾತ್ಯತೀತ ಮನೋಭಾವ

ಜಾತ್ಯತೀತ ಮನೋಧರ್ಮವನ್ನು ಬೆಳೆಸುವಂಥ ವಿಷಯಗಳನ್ನು ಪಾಠಪುಸ್ತಕದಲ್ಲಿ ಅಳವಡಿಸಿಕೊಂಡು, ಯೋಗ್ಯವಾದ ಕಲಿಕಾ ರೀತಿಯನ್ನು ಸ್ವೀಕರಿಸಬೇಕು.

### ಸಹಿಷ್ಣುತೆ

ಭಿನ್ನಾಭಿಪ್ರಾಯವುಳ್ಳವರನ್ನೂ ಸಹನೆಯಿಂದ ಕಾಣುವುದು ಎಂಬ ಮೂಲ ತತ್ವವನ್ನು ಪಠ್ಯಕ್ರಮವು ಗುರಿಯಾಗಿಸಬೇಕು.

### ಕ್ರಿಯಾಶೀಲ – ಸೃಜನಶೀಲ ಚಿಂತನೆ

ವಿದ್ಯಾರ್ಥಿಗಳಲ್ಲಿ ಕ್ರಿಯಾಶೀಲವೂ ಸೃಜನಶೀಲವೂ ಆಗಿರುವ ಚಿಂತನೆಗಳನ್ನೂ, ಸಂಶೋಧನ ಬುದ್ಧಿಯನ್ನೂ ಬೆಳೆಸಬೇಕಾಗಿದೆ. ಪಠ್ಯಕ್ರಮದ ಪಠ್ಯ ವಿಷಯಗಳಲ್ಲಿ ಹಾಗೂ ಕಲಿಕಾ ತಂತ್ರಗಳಲ್ಲಿ ಸೃಜನಶೀಲ ಹುಡುಕಾಟಕ್ಕೆ ಅವಕಾಶವಿರಬೇಕು. ಬಹುಮುಖ ಬೌದ್ಧಿಕತೆ (multiple intelligence) ಯ ಹಂತಗಳನ್ನು ಇದಕ್ಕಾಗಿ ಪರಿಗಣಿಸಬೇಕು.

### ಸಂಸ್ಕೃತಿ ಹಾಗೂ ಪರಂಪರೆಯನ್ನು ಗೌರವಿಸುವುದು

ನಮ್ಮ ಸಾಂಸ್ಕೃತಿಕ ಪರಂಪರೆ ಹಾಗೂ ಇತಿಹಾಸವನ್ನು ಗೌರವಿಸುವ ಮನೋಧರ್ಮದ ನಿರ್ಮಾಣ ಎಂಬುದು ಪಠ್ಯಕ್ರಮವು ಪೂರೈಸಬೇಕಾದ ಮುಖ್ಯ ಗುರಿಗಳಲ್ಲಿ ಒಂದಾಗಿದೆ.

### ಸಮತ್ವ ಎಂಬ ಆಶಯ

ಬೇರೆ ಬೇರೆ ಸಂದರ್ಭಗಳಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಸಮಾನತೆ, ಸಮತ್ವ ಮೊದಲಾದವುಗಳನ್ನು ದೃಢಪಡಿಸಬೇಕಾದುದು ಅನಿವಾರ್ಯವಾಗಿದೆ.

## ನಾಯಕತ್ವಗುಣ

ಹೊಸ ಸಹಸ್ರಮಾನದ ಸವಾಲುಗಳನ್ನು ಎದುರಿಸಲೂ, ಸಾಧ್ಯತೆಗಳನ್ನು ವಿನಿಯೋಗಿಸಲೂ ಸಮರ್ಥರಾದ ನಾಯಕರನ್ನು ಸೃಷ್ಟಿಸಲು ಯೋಗ್ಯವಾದ ಕಲಿಕಾ ತಂತ್ರಗಳನ್ನು ಅಭಿವೃದ್ಧಿ ಪಡಿಸಬೇಕಾಗಿದೆ. ತರಗತಿಯ ಚಟುವಟಿಕೆಗಳಲ್ಲಿ ಎಲ್ಲ ವಿದ್ಯಾರ್ಥಿಗಳ ಭಾಗವಹಿಸುವಿಕೆಯನ್ನು ದೃಢಗೊಳಿಸಿ, ನಾಯಕತ್ವ ಗುಣಗಳನ್ನು ಅಭಿವೃದ್ಧಿ ಪಡಿಸುವ ಪರಿಸರವನ್ನು ಸೃಷ್ಟಿಸಬೇಕಾದ ಅಗತ್ಯವಿದೆ.

## ಜೀವನ ಕೌಶಲ್ಯ ಶಿಕ್ಷಣ

ದೈನಂದಿನ ಬದುಕಿನಲ್ಲಿ ವ್ಯಕ್ತಿಗಳು ಅನುಭವಿಸುವ ಸಮಸ್ಯೆ ಹಾಗೂ ಸವಾಲುಗಳನ್ನು ಫಲಪ್ರದವಾಗಿ ಎದುರಿಸಲು ಸಹಾಯಕವಾದ ಸ್ವಭಾವಗಳನ್ನು ಗಳಿಸಿಕೊಳ್ಳುವ ಸಾಮರ್ಥ್ಯವೇ ಜೀವನ ಕೌಶಲ್ಯಗಳು. ತನ್ನನ್ನು ತಾನು ಅರಿತುಕೊಳ್ಳುವುದು, ಇತರರನ್ನು ಅರಿತುಕೊಳ್ಳುವುದು, ವಿಚಾರ ವಿನಿಮಯ ಸಾಮರ್ಥ್ಯ, ವ್ಯಕ್ತಿಗಳ ನಡುವಿನ ಸಂಬಂಧ, ಸೃಜನಶೀಲ ಚಿಂತನೆ, ವಿಮರ್ಶಾತ್ಮಕ ಚಿಂತನೆ, ತೀರ್ಮಾನಗಳನ್ನು ಕೈಗೊಳ್ಳುವ ಸಾಮರ್ಥ್ಯ, ಸಮಸ್ಯೆಗಳ ಪರಿಹಾರ, ಭಾವನಾತ್ಮಕ ಸಮತೋಲನ, ಒತ್ತಡದ ನಿಭಾಯಿಸುವಿಕೆ ಮೊದಲಾದವು ಜೀವನಕೌಶಲ್ಯಗಳಾಗಿವೆ. ಮಕ್ಕಳ ಪರಿಸರವನ್ನು ಹೊಂದಿಕೊಂಡು ಈ ವಲಯಗಳ ಘಟಕಗಳನ್ನು ಪಠ್ಯಕ್ರಮದಲ್ಲಿ ಅಳವಡಿಸಬೇಕಾಗಿದೆ. ಬದುಕಿನಲ್ಲಿ ಆತ್ಮವಿಶ್ವಾಸದೊಂದಿಗೆ ಮುಂದುವರಿಯಲು ಇಂತಹ ಕೌಶಲ್ಯಗಳು ವಿದ್ಯಾರ್ಥಿಗೆ ಸಹಾಯಕವಾಗುತ್ತವೆ.

## ಪೌರಧರ್ಮ

ರಾಷ್ಟ್ರಗಳು ಪ್ರಜೆಗಳಿಗೆ ಹೇಗೋ ಹಾಗೆಯೇ ಪ್ರಜೆಗಳು ರಾಷ್ಟ್ರಕ್ಕೆ ಸಲ್ಲಿಸಬೇಕಾದ ಕೆಲವು ಧರ್ಮಗಳೂ, ಕರ್ತವ್ಯಗಳೂ ಇವೆ. ಒಂದು ರಾಷ್ಟ್ರದ ಅಭಿವೃದ್ಧಿ ಎಂದರೆ ಮಾನವ ಸಂಪನ್ಮೂಲದ ಅಭಿವೃದ್ಧಿ ಎಂದು ತಿಳಿಯುವ ಈ ಕಾಲದಲ್ಲಿ ಪೌರಪ್ರಜ್ಞೆಯಿರುವ ಜನರನ್ನು ಸೃಷ್ಟಿಸುವುದು ಶಿಕ್ಷಣದ ಪ್ರಧಾನ ಕರ್ತವ್ಯವಾಗಿದೆ. ಸ್ವತಂತ್ರವಾದ ಸಮಾಜ ಸೃಷ್ಟಿಯೊಂದಿಗೆ ಜವಾಬ್ದಾರಿ ಮತ್ತು ಶಿಸ್ತಿನಿಂದ ಕೂಡಿದ ಪ್ರಜೆಗಳನ್ನು ಸೃಷ್ಟಿಸುವುದು ಶಿಕ್ಷಣ ವ್ಯವಸ್ಥೆಯ ಗುರಿಯಾಗಿದೆ.

## ಮಾನವ ಹಕ್ಕುಗಳು

ಮಾನವ ಎಂಬ ನೆಲೆಯಲ್ಲಿ ಈ ಭೂಮಿಯಲ್ಲಿ ಗೌರವದಿಂದ ಬದುಕುವ ವ್ಯಕ್ತಿಯ ಹಕ್ಕುಗಳೇ ಮಾನವ ಹಕ್ಕುಗಳು. ಸಂಯುಕ್ತರಾಷ್ಟ್ರ ಸಂಘದ ಮಾನವ ಹಕ್ಕುಗಳ ಘೋಷಣೆಯಲ್ಲಿ ಸಾರ್ವತ್ರಿಕವಾಗಿ ಅಂಗೀಕಾರ ಲಭಿಸಿದ ಮಾನವ ಹಕ್ಕು ಗಳಿಗೆ ಪಠ್ಯಕ್ರಮದಲ್ಲಿಯೂ ಪಾಠವಿನಿಮಯ ಪ್ರಕ್ರಿಯೆಯಲ್ಲಿಯೂ ಸೂಕ್ತ ಪ್ರಾಧಾನ್ಯವನ್ನು ನೀಡಬೇಕಾಗಿದೆ.

## ಮಕ್ಕಳ ಹಕ್ಕುಗಳು

ಮಕ್ಕಳ ಎಲ್ಲ ರೀತಿಯ ಹಕ್ಕುಗಳನ್ನು ಸಂರಕ್ಷಿಸಬೇಕಾದ ಜವಾಬ್ದಾರಿ ನಮ್ಮ ಕರ್ತವ್ಯವಾಗಿದೆ.

## ಪ್ರಕೃತಿ – ಪ್ರಕೃತಿ ಸಂಪನ್ಮೂಲ ಸಂರಕ್ಷಣೆ, ಪರಿಸರ ಶುಚಿತ್ವ

ಪ್ರಕೃತಿ ಸಂಪನ್ಮೂಲಗಳ ಸಂರಕ್ಷಣೆ, ಪರಿಸರ ಶುಚಿತ್ವ, ಪ್ರಕೃತಿ ಮತ್ತು ಪ್ರಾಕೃತಿಕ ಸಂಪನ್ಮೂಲಗಳ ಕುರಿತು ಪ್ರಾಥಮಿಕ ದೃಷ್ಟಿಕೋನಗಳನ್ನು ಪ್ರಾಥಮಿಕ ತರಗತಿಗಳಿಂದಲೇ ಅಳವಡಿಸಿಕೊಳ್ಳಬೇಕು. ವ್ಯಕ್ತಿ ಶುಚಿತ್ವದಂತೆಯೇ ಪರಿಸರ ಶುಚಿತ್ವವೂ ಅಗತ್ಯ ಎಂಬ ಶುಚಿತ್ವದ ಪ್ರಜ್ಞೆಯನ್ನು ವಿದ್ಯಾರ್ಥಿಗಳಲ್ಲಿ ಮೂಡಿಸಬೇಕಾಗಿದೆ. ಪ್ರಕೃತಿ ಮತ್ತು ಪ್ರಾಕೃತಿಕ ಸಂಪನ್ಮೂಲಗಳು ಕೇವಲ ಮಾನವನಿಗೆ ಮಾತ್ರ ಸೇರಿದ್ದಲ್ಲ ಮತ್ತು ಪ್ರಕೃತಿಯ ಸಮತೋಲನವನ್ನು ಕಾಪಾಡದಿದ್ದರೆ ವ್ಯಾಪಕವಾದ ದುರಂತಗಳಿಗೆ ಕಾರಣವಾಗುವುದು ಎಂಬ ಮನೋಭಾವವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಬೇಕು. ಪ್ರಾಕೃತಿಕ ಸಂಪನ್ಮೂಲ ಸಂರಕ್ಷಣೆ ಹಾಗೂ ಪರಿಸರ ಶುಚಿತ್ವವನ್ನು ಒಂದು ಜೀವನ ಮೌಲ್ಯವಾಗಿ ಮತ್ತು ಮನೋಧರ್ಮವಾಗಿ ಬದಲಾಯಿಸುವ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಬೇಕು.

## ಶಾಂತಿಯ ಶಿಕ್ಷಣ

ವೈಯುಕ್ತಿಕವಾಗಿಯೂ ಸಾಮಾಜಿಕವಾಗಿಯೂ ಶಾಂತಿ ಮತ್ತು ಸಮಾಧಾನವನ್ನು ಕಾಪಾಡುವ ಸಾಮರ್ಥ್ಯ ಮತ್ತು ಮನೋಭಾವಗಳನ್ನು ಬೆಳೆಸುವುದು ಶಾಂತಿ ಶಿಕ್ಷಣದ ಮುಖ್ಯ ಗುರಿ. ಸಂಘರ್ಷಗಳು ಹಾಗೂ ಅವುಗಳಿಗೆ ಕಾರಣವಾಗುವ ಹಿನ್ನೆಲೆಗಳನ್ನು ಬಿಟ್ಟು ಶಾಂತಿ, ಸೌಹಾರ್ದ ಹಾಗೂ ಸಮಾಧಾನದ ಸಾಧ್ಯತೆಗಳನ್ನು ಪಠ್ಯಕ್ರಮದ ವಿವಿಧ ವಿಷಯಗಳಲ್ಲಿ ಅಳವಡಿಸಬೇಕಾದುದು ಈ ಶಿಕ್ಷಣ ನೀತಿಯ ಅಗತ್ಯವಾಗಿದೆ.

## ಕಾನೂನು ಸಾಕ್ಷರತೆ

ಕಾನೂನು ಸಂಬಂಧವಾದ ತಿಳುವಳಿಕೆಯು ಪ್ರಜಾಪ್ರಭುತ್ವ ದೇಶದ ಪ್ರಜೆಗಳಿಗೆ ಅತಿ ಅಗತ್ಯವಾಗಿದೆ. ಕಾನೂನು ಸಾಕ್ಷರತೆಯನ್ನು ದೃಢಪಡಿಸುವ ಪಾಠಭಾಗಗಳನ್ನು ವಿಷಯಕ್ಕೆ ಹೊಂದಿಕೊಂಡು ಅಳವಡಿಸಬೇಕಾದುದು ಕಾಲದ ಅಗತ್ಯವಾಗಿದೆ. ಕಾನೂನು ಸಹಾಯ ವೇದಿಕೆ, ಕಾನೂನು ಕ್ಲಬ್‌ಗಳು, ಕಾನೂನು ಕ್ಲಿನಿಕ್‌ಗಳು, ಕಾನೂನು ತಿಳುವಳಿಕಾ ಶಿಬಿರಗಳು ಮೊದಲಾದ ವಿಭಿನ್ನ ಚಟುವಟಿಕೆಗಳನ್ನು ಆಯೋಜಿಸಬಹುದು.

## ಸೈಬರ್ ಅಪರಾಧಗಳ ಕುರಿತಾಗಿರುವ ತಿಳುವಳಿಕೆ

ಮಾಹಿತಿ ತಂತ್ರಜ್ಞಾನದ ಬಳಕೆಯಿರುವ ಸಮಕಾಲೀನ ಜಗತ್ತಿನಲ್ಲಿ ಪ್ರತಿದಿನವೆಂಬಂತೆ ಸೈಬರ್ ದುರುಪಯೋಗ ಮತ್ತು ಅಪರಾಧ ಚಟುವಟಿಕೆಗಳು ಹೆಚ್ಚುತ್ತಿವೆ. ಮಕ್ಕಳನ್ನು ಇಂತಹ ಚಟುವಟಿಕೆಗಳಿಂದ ದೂರವಿರಿಸುವ ತಿಳುವಳಿಕೆಯನ್ನು ಪಠ್ಯಕ್ರಮದಲ್ಲಿ ಅಳವಡಿಸಬೇಕು. ಇ–ಮೈಲ್, ಇಂಟರ್‌ನೆಟ್, ಸಾಮಾಜಿಕ ಜಾಲತಾಣಗಳು ಮೊದಲಾದವುಗಳ ಉಪಯೋಗವನ್ನು ಕುರಿತು ಸ್ಪಷ್ಟವಾದ ತಿಳುವಳಿಕೆಯನ್ನೂ ಅವುಗಳ ಬಳಕೆಯ ಗುಣ ದೋಷಗಳನ್ನೂ ಮಕ್ಕಳಿಗೆ ಒದಗಿಸಬೇಕು. ಸೈಬರ್ ಅಪರಾಧಗಳಿಗಿರುವ ಶಿಕ್ಷೆ ಹಾಗೂ ಇಂಟರ್‌ನೆಟ್ ಬಳಕೆಯ ನೈತಿಕತೆಯನ್ನು ಪಠ್ಯಕ್ರಮದ ಮೂಲಕ ತಿಳಿಸಬೇಕು.

## ಮಾಧ್ಯಮ ತಿಳುವಳಿಕೆ

ಪತ್ರಿಕೆ ಹಾಗೂ ದೃಶ್ಯಮಾಧ್ಯಮಗಳಿಗೆ ನಮ್ಮ ಸಮಾಜದಲ್ಲಿ ಬಹಳ ಪ್ರಾಧಾನ್ಯವಿದೆ. ದೃಶ್ಯಮಾಧ್ಯಮಗಳು ಮಕ್ಕಳ ಮೇಲೆ ಬೀರುವ ಪರಿಣಾಮ ಅಪಾರ. ಹೀಗೆ ಮಾಧ್ಯಮ ಸಂಬಂಧಿ ಮಾಹಿತಿಗಳನ್ನು ನೀಡುವ ಘಟಕಗಳನ್ನು ಪಠ್ಯಕ್ರಮದಲ್ಲಿ ಸೇರ್ಪಡೆಗೊಳಿಸುವುದು ಅಗತ್ಯವಾಗಿದೆ.

## ಶಾಶ್ವತ ಅಭಿವೃದ್ಧಿ ದೃಷ್ಟಿಕೋನ

ಈ ಭೂಮಿಯು ಮಾನವನಿಗೆ ಮಾತ್ರ ಸೇರಿದ್ದಲ್ಲ ಎಂಬ ಪರಿಸರ ಪ್ರಜ್ಞೆಯನ್ನು ಪಠ್ಯಕ್ರಮವು ಒದಗಿಸಬೇಕಾಗಿದೆ. ಪರಿಸರ ಸಂಬಂಧವಾದ ಸವಾಲುಗಳು, ಪರಿಸರ ನಾಶಕ್ಕೆ ಕಾರಣವಾಗುವ ಮಾನವನ ಕೈವಾಡಗಳು ಹಾಗೂ ಪರಿಸರವನ್ನು ದುರಂತಗಳಿಂದ ಪಾರುಮಾಡುವ ದಾರಿಗಳ ಕುರಿತು ಪ್ರಜ್ಞೆಯನ್ನು ಮೂಡಿಸಬೇಕಾದುದು ಇಂದಿನ ಅಗತ್ಯವಾಗಿದೆ. ಪರಿಸರ ಮತ್ತು ಅಭಿವೃದ್ಧಿಯನ್ನು ಸಂಯೋಜಿಸುವುದು ಹೇಗೆ ಎಂಬುದನ್ನೂ ಶಾಶ್ವತವಾದ ಅಭಿವೃದ್ಧಿಯ ದೃಷ್ಟಿಕೋನಗಳನ್ನೂ ಸಂಶೋಧನೆಗಳನ್ನೂ ಪಠ್ಯಕ್ರಮದಲ್ಲಿ ಅಳವಡಿಸಬೇಕು. ಸಮಗ್ರವಾದ ಪರಿಸರ ಪ್ರಜ್ಞೆಯನ್ನು ಹುಟ್ಟಿಸುವುದು ಪಠ್ಯಕ್ರಮದ ಮುಖ್ಯ ಉದ್ದೇಶಗಳಲ್ಲಿ ಒಂದು.

## ಬಾಲ್ಯ ಶಿಕ್ಷಣ

ಮಕ್ಕಳ ಮನಶಾಸ್ತ್ರಜ್ಞರು, ಆರೋಗ್ಯ ಕಾರ್ಯಕರ್ತರು, ವೈದ್ಯರು ಹಾಗೂ ಅಧ್ಯಾಪಕರ ಸಂಯುಕ್ತ ಪರಿಶ್ರಮಗಳ ಮೂಲಕ ಬಾಲ್ಯ ಶಿಕ್ಷಣಕ್ಕೆ ಯೋಗ್ಯವಾದ ಘಟಕಗಳನ್ನು ಪಠ್ಯಕ್ರಮದಲ್ಲಿ ಅಳವಡಿಸಲು ಪರಿಗಣಿಸಬೇಕು. ವಿದ್ಯಾರ್ಥಿಗಳ ಆರೋಗ್ಯ, ಶುಚಿತ್ವ ಇವುಗಳಿಗೆ ಸಂಬಂಧಿಸಿದ ಸಂಶಯಗಳನ್ನು ಪರಿಹರಿಸಲು ವೈಜ್ಞಾನಿಕವಾದ ಮಾಹಿತಿಗಳನ್ನು ಪರಿಗಣಿಸುವುದು ಅಗತ್ಯವಾಗಿದೆ.

## ಉಪಭೋಗ ಸಂಸ್ಕೃತಿ–ದುಷ್ಪರಿಣಾಮಗಳು

ಉಪಭೋಗ ಸಂಸ್ಕೃತಿಯ ದುಷ್ಪರಿಣಾಮಗಳ ಕುರಿತಾದ ಸತ್ಯಾಂಶಗಳನ್ನು ಪ್ರಾಥಮಿಕ ಶಾಲಾ ಮಟ್ಟದಿಂದಲೇ ಪಠ್ಯಕ್ರಮದಲ್ಲಿ ಅಳವಡಿಸಬೇಕು. ಬಳಕೆದಾರ ಎಂಬ ನೆಲೆಯಲ್ಲಿ ನಮ್ಮ ಹಕ್ಕುಗಳನ್ನೂ, ಬಳಕೆದಾರರಿಗೆ ನೆರವಾಗುವ ಕಾನೂನುಗಳನ್ನೂ ಮಕ್ಕಳಿಗೆ ತಿಳಿಸಿಕೊಡಬೇಕು.

## ಮಾದಕ ದ್ರವ್ಯ ವಿರೋಧಿ ನಿಲುವು

ಮದ್ಯ, ಮಾದಕ ವಸ್ತುಗಳು, ಹೊಗೆ ಸೊಪ್ಪು ಹಾಗೂ ಇತರ ಮಾದಕ ದ್ರವ್ಯಗಳ ಬಳಕೆಯು ಹೊಸ ತಲೆಮಾರಿನ ಆರೋಗ್ಯವನ್ನು ಕೆಡಿಸುತ್ತದೆ ಎಂಬ ಅರಿವು ನಮ್ಮದಾಗಬೇಕು. ಮುಂದಿನ ತಲೆಮಾರನ್ನು ಇವುಗಳಿಂದ ಮುಕ್ತಗೊಳಿಸಿ ರಕ್ಷಿಸಬೇಕು. ಅದಕ್ಕಾಗಿ ಮಾದಕದ್ರವ್ಯಗಳ ಉಪಯೋಗದಿಂದ ಉಂಟಾಗುವ ದೈಹಿಕ ಮಾನಸಿಕ ತೊಂದರೆಗಳನ್ನು ತಿಳಿಸುವ ಚಿತ್ರಗಳು, ಲಘು ಬರಹಗಳು, ದೃಶ್ಯಗಳನ್ನು ಪಠ್ಯಕ್ರಮದ ವಿಷಯಗಳಲ್ಲಿ ಅಳವಡಿಸಬೇಕು. ಮಾದಕ ದ್ರವ್ಯ ವಿರೋಧಿ ನಿಲುವನ್ನು ಸೃಷ್ಟಿಸುವುದು ಇವುಗಳ ಮುಖ್ಯ ಗುರಿಯಾಗಿರಬೇಕು.

## ಲಿಂಗ ಸಮಾನತೆ

ಪಠ್ಯಕ್ರಮವು ಲಿಂಗ ಸಮಾನತೆಯನ್ನು ದೃಢಪಡಿಸುವಂತಿರಬೇಕು. ಗಂಡು – ಹೆಣ್ಣು ಎಂಬ ಭೇದಭಾವಗಳು ಪಠ್ಯಕ್ರಮದಲ್ಲಿ ನುಸುಳಬಾರದು. ಪಾಠಪುಸ್ತಕಗಳ ಚಿತ್ರಗಳಲ್ಲಿ ಕೂಡಾ ಲಿಂಗ ಸಮಾನತೆಯ ದೃಷ್ಟಿಕೋನವಿರಬೇಕು. ಕಲಿಕಾ ಚಟುವಟಿಕೆಗಳ ಸಂದರ್ಭಗಳಲ್ಲಿಯೂ ಈ ಲಿಂಗ ಸಮಾನತೆಯನ್ನು ದೃಢಪಡಿಸಬೇಕಾದುದು ಅಧ್ಯಾಪಕರ ಕರ್ತವ್ಯವಾಗಿದೆ.

## ಮಿತವ್ಯಯ ಗುಣ

ಪ್ರಾಥಮಿಕ ಶಾಲಾ ಹಂತದಲ್ಲಿಯೇ ಮಿತವ್ಯಯ ಗುಣವನ್ನು ಮಕ್ಕಳಿಗೆ ಕಲಿಸಬೇಕು. ಮಿತವ್ಯಯ ಗುಣದ ಅಗತ್ಯ ಮತ್ತು ಮಹತ್ವವನ್ನು ತಿಳಿಸಿಕೊಡಬೇಕು. ಮಿತವ್ಯಯವನ್ನು ಪ್ರಾಯೋಗಿಕ ಚಟುವಟಿಕೆಗಳ ಮೂಲಕ ತಿಳಿಸಿಕೊಡಬೇಕು.

## ರಸ್ತೆ ಸುರಕ್ಷೆ

ರಸ್ತೆಯಲ್ಲಿ ಪಾಲಿಸಬೇಕಾದ ನಿಮಯಗಳು, ರಸ್ತೆ ಅಪಘಾತಗಳನ್ನು ತಪ್ಪಿಸಲು ಇರುವ ಪ್ರಾಯೋಗಿಕ ಸೂಚನೆಗಳು, ಚಟುವಟಿಕೆಗಳು ಮೊದಲಾದವು ರಸ್ತೆ ಸುರಕ್ಷೆಯ ಘಟಕಗಳಾಗಿವೆ. ರಸ್ತೆಯು ಸಾರ್ವಜನಿಕ ಸ್ಥಳವೆಂದೂ, ನಮ್ಮ ಹಾಗೆ ಇತರರಿಗೂ ರಸ್ತೆಯನ್ನು ಬಳಸುವ ಸ್ವಾತಂತ್ರ್ಯವಿದೆ ಎಂದೂ ಪೌರಪ್ರಜ್ಞೆಯನ್ನು ಹುಟ್ಟಿಸಬೇಕು. ರಸ್ತೆ ಸುರಕ್ಷತೆಯ ಸಂಬಂಧವಾಗಿ ಚಟುವಟಿಕೆಗಳಿಗೆ ಪ್ರಾಧಾನ್ಯ ನೀಡಬೇಕು.

ಪಠ್ಯಕ್ರಮದ ಸ್ವಾಭಾವಿಕವಾದ ವಿನಿಮಯದಲ್ಲಿ ಈ ಘಟಕಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ಕಲಿಕಾ ಸಾಧನೆಗಳನ್ನು ದೃಢಪಡಿಸಬೇಕು. ವಿವಿಧ ವಿಷಯಗಳ ಒಳ ಹೂರಣದ ಆಶಯಗಳ ಆಯ್ಕೆಯಲ್ಲಿಯೂ ಕಲಿಕಾ ಚಟುವಟಿಕೆಗಳನ್ನು ಕ್ರಮೀಕರಿಸುವಾಗಲೂ ಸಾಕಷ್ಟು ಪರಿಗಣನೆಯನ್ನು ನೀಡಬೇಕಾಗಿದೆ. ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಗಳಲ್ಲಿ ಸಾಗುವಾಗ ಇಂತಹ ಆಶಯಗಳಿಗೆ ಸಂಬಂಧಿಸಿದ ತಿಳುವಳಿಕೆ, ಕೌಶಲ್ಯ, ಮನೋಭಾವ ಇವುಗಳಿಗೆ ಒತ್ತು ನೀಡಬೇಕು. ನಿರಂತರ ಮೌಲ್ಯಮಾಪನ ಪ್ರಕ್ರಿಯೆಗಳ ಮೂಲಕ ಈ ಗುರಿಗಳನ್ನು ಈಡೇರಿಸಲು ಸಾಧ್ಯವಾಗಿದೆಯೇ ಎಂದು ಪರಿಶೋಧಿಸಲು ಸಾಧ್ಯವಾಗಬೇಕು. ವಿವಿಧ ಕ್ಲಬ್‌ಗಳ ಚಟುವಟಿಕೆಗಳು, SPC, NCC, Scouts & Guides, JRC, ವಿದ್ಯಾರಂಗ ಕಲಾ ಸಾಹಿತ್ಯವೇದಿಕೆ, ಗಾಂಧೀದರ್ಶನ ಮೊದಲಾದ ವ್ಯವಸ್ಥೆಗಳು ಮೌಲ್ಯಗಳನ್ನೂ ಮನೋಧರ್ಮಗಳನ್ನೂ ಕಾಳಜಿಯನ್ನೂ ಬೆಳೆಸುವ ವೇದಿಕೆಗಳಾಗಬೇಕು.

## 1.11 ಹಕ್ಕು ಆಧಾರಿತ ಶಿಕ್ಷಣ

## (Right based Education)

ಮಕ್ಕಳ ಹಕ್ಕುಗಳನ್ನು ನಿರ್ಣಯಿಸಿ ಜಗತ್ತಿನಾದ್ಯಂತ ಅನುಷ್ಠಾನಗೊಳಿಸಲು ಯುನೆಸ್ಕೋ ನೇತೃತ್ವ ವಹಿಸಿದೆ. ಈ ಹಿನ್ನೆಲೆಯಲ್ಲಿ ವಿವಿಧ ದೇಶಗಳಲ್ಲಿ ಮಕ್ಕಳ ಹಕ್ಕುಗಳ ಸಂರಕ್ಷಣೆಗಾಗಿ ಅನೇಕ ಕಾನೂನುಗಳನ್ನು ರಚಿಸಲಾಗಿದೆ. ಭಾರತದಲ್ಲಿ ರಾಷ್ಟ್ರೀಯ ಶಿಕ್ಷಣ ಹಕ್ಕು ನಿಯಮ– 2009 ಕಾರ್ಯಗತವಾಗಿರುವುದು ಈ ನಿಟ್ಟಿನಲ್ಲಿ ಒಂದು ಮೈಲಿಗಲ್ಲು. ಮಕ್ಕಳ ಎಲ್ಲ ರೀತಿಯ ಹಕ್ಕುಗಳನ್ನು ಸಂರಕ್ಷಿಸುವ ಜವಾಬ್ದಾರಿಯು ಹಿರಿಯರಾದ ನಮ್ಮ ಕರ್ತವ್ಯವಾಗಿದೆ. ಶಿಕ್ಷಣ ಹಕ್ಕುಗಳ ಕುರಿತು ಹೇಳುವಾಗ ಅವುಗಳನ್ನು ಮೂರು ಮುಖ್ಯ ಘಟಕಗಳಾಗಿ ವಿಂಗಡಿಸಬಹುದು.

- ಭಾಗವಹಿಸುವಿಕೆ (Participation)
- ಲಭ್ಯತೆ (Provision)
- ಸಂರಕ್ಷಣೆ (Protection)

ತನಗೆ ಲಭ್ಯವಾದ ಹಕ್ಕುಗಳ ಕುರಿತು ಕೂಡಾ ಆಲೋಚಿಸುವುದು ಹೇಗಿರಬಹುದು?

### ಭಾಗವಹಿಸುವಿಕೆ (Participation)

- ಮಕ್ಕಳಿಗೆ ಸಂಬಂಧಿಸಿದ ಎಲ್ಲ ತೀರ್ಮಾನಗಳಲ್ಲಿ ನನ್ನ ಅಭಿಪ್ರಾಯವನ್ನು ಕೇಳುತ್ತಾರೆ.
- ತೀರ್ಮಾನಗಳಲ್ಲಿ ನನ್ನ ಅಭಿಪ್ರಾಯಕ್ಕೆ ಮುಖ್ಯ ಪರಿಗಣನೆ ಇದೆ.
- ನನ್ನ ಸಾಮರ್ಥ್ಯ ಹಾಗೂ ಮಿತಿಗಳಿಗೆ ಹೊಂದಿಕೊಂಡು ನೀಡಲಾಗುವ ಚಟುವಟಿಕೆಗಳಲ್ಲಿ ಭಾಗವಹಿಸಲು ನನಗೆ ಅವಕಾಶ ಲಭಿಸುತ್ತದೆ.
- ನನ್ನ ಸಾಮರ್ಥ್ಯಗಳನ್ನು ಪೋಷಿಸಲೂ ಮಿತಿಗಳನ್ನು ದಾಟಲೂ ಯೋಗ್ಯವಾದ ಕಲಿಕಾ ಪ್ರಕ್ರಿಯೆಗಳ ಮೂಲಕ ಸಾಗಲು ಸಾಧ್ಯವಾಗುತ್ತದೆ.
- ತರಗತಿಯಲ್ಲಿ ನಡೆಯುವ ಚಟುವಟಿಕೆಗಳಲ್ಲಿ ನನಗೂ ಸಹಪಾಠಿಗಳಿಗೂ ಕ್ರಿಯಾಶೀಲವಾದ ಭಾಗವಹಿಸುವಿಕೆ ಲಭಿಸುತ್ತಿದೆ.
- ನನ್ನ ಸಾಮರ್ಥ್ಯಗಳನ್ನು ಪ್ರದರ್ಶಿಸಲು ನನಗೆ ಅವಕಾಶ ಸಿಗುತ್ತದೆ.

### ಲಭ್ಯತೆ (Provision)

- ಸರಿಯಾದ ಶೈಕ್ಷಣಿಕ ಯೋಗ್ಯತೆಯಿರುವ, ಜ್ಞಾನವನ್ನು ಕಾಲಕ್ಕನುಸರಿಸಿ ನವೀಕರಿಸುವ ಅಧ್ಯಾಪಕರ ಸೇವೆ ನನಗೆ ಲಭಿಸುತ್ತಿದೆ.
- ನಿರ್ದಿಷ್ಟ ಸಮಯದಲ್ಲಿ ಕಲಿಕಾನುಭವಗಳು ಸರಿಯಾದ ಕಾಲಕ್ಕೆ ಸಿಗುತ್ತಿವೆ.
- ದೈಹಿಕ, ಮಾನಸಿಕ ಬೆಳವಣಿಗೆಗೆ ಪೂರಕವಾಗಿರುವ ತರಗತಿ ಪರಿಸರ ನನಗೆ ಲಭಿಸುತ್ತಿದೆ.
- ಕಲಿಕಾ ಚಟುವಟಿಕೆಗಳಿಗೆ ಅಗತ್ಯವಾದ ಕಲಿಕೋಪಕರಣಗಳನ್ನು ಯಥಾಕಾಲಕ್ಕೆ ಒದಗಿಸಿಕೊಡಲು ನನ್ನ ಅಧ್ಯಾಪಕರಿಗೆ ಸಾಧ್ಯವಾಗುತ್ತದೆ.
- ಕಲೆ ಮತ್ತು ಕ್ರೀಡೆಯ ಬೆಳವಣಿಗೆಗೆ ಅಗತ್ಯವಾದ ಉಪಕರಣಗಳೂ ಅವಕಾಶಗಳೂ ನನಗೆ ಸಿಗುತ್ತಿವೆ.

**RTE 2009 ಹೀಗೆ ಹೇಳುತ್ತದೆ**

- 1 ರಿಂದ 5 ರ ವರೆಗಿನ ತರಗತಿಗಳಲ್ಲಿ ಕಲಿಯುವ ಮಕ್ಕಳಿಗೆ 200 ಕಲಿಕೆಯ ದಿವಸಗಳೂ 800 ಗಂಟೆಗಳ ಬೋಧನ ಸಮಯವೂ ಲಭಿಸಬೇಕು.
- 6 ರಿಂದ 8 ರ ವರೆಗಿನ ತರಗತಿಗಳಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ 220 ಕಲಿಕೆಯ ದಿವಸಗಳೂ 1000 ಗಂಟೆಗಳ ಬೋಧನ ಸಮಯವೂ ಲಭಿಸಬೇಕು.

**ಸಂರಕ್ಷಣೆ (Protection)**

- ಶಾಲೆಯಲ್ಲಿ ಹಾಗೂ ಹೊರಗೆ ಯಾವುದೇ ಭೇದಭಾವವನ್ನು ನಾನು ಅನುಭವಿಸುವುದಿಲ್ಲ.
- ನನ್ನನ್ನು ಯಾರೂ ಕೂಡಾ ಯಾವುದೇ ರೀತಿಯಲ್ಲಿ ಕಡೆಗಣಿಸುವುದಿಲ್ಲ.
- ಯಾರೂ ಕೂಡಾ ದೈಹಿಕ ಅಥವಾ ಮಾನಸಿಕ ದೌರ್ಜನ್ಯವೆಸಗುವುದಿಲ್ಲ.
- ಅಧ್ಯಾಪಕರಲ್ಲಿ ನಿರ್ಭೀತಿಯಿಂದ ವ್ಯವಹರಿಸಲು ನನಗೆ ಸಾಧ್ಯವಾಗುತ್ತದೆ.
- ಮಗುವಾದರೂ ನನಗೆ ಖಾಸಗಿತನವಿದೆ. ನನ್ನನ್ನು ಎಲ್ಲರೂ ಅಂಗೀಕರಿಸುತ್ತಾರೆ.
- ಶಾಲೆಯಲ್ಲಿಯೂ ಮನೆಯಲ್ಲಿಯೂ ನಾನು ಸುರಕ್ಷಿತನಾಗಿದ್ದೇನೆ ಎಂಬ ಭರವಸೆ ನನಗಿದೆ.

**ಕೇರಳ ರಾಜ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

2002 ಮೇ ತಿಂಗಳಲ್ಲಿ ಸೇರಿದ ಸಂಯುಕ್ತ ರಾಷ್ಟ್ರ ಸಭೆಯ ಮಕ್ಕಳಿಗಾಗಿರುವ ವಿಶೇಷ ಸಮ್ಮೇಳನವು 'ಮಕ್ಕಳಿಗೆ ಯೋಗ್ಯವಾದ ಒಂದು ಜಗತ್ತು' ಎಂಬ ಶೀರ್ಷಿಕೆಯಲ್ಲಿ ನಿರ್ಣಯವೊಂದನ್ನು ಅಂಗೀಕರಿಸಿತು. ಇದರ ಆಧಾರದಲ್ಲಿ ಕೇಂದ್ರ ಸರಕಾರವು ನಿರ್ಮಿಸಿದ 2005ರ ಬಾಲಕರ ಹಕ್ಕು ಸಂರಕ್ಷಣ ಆಯೋಗ ಕಾಯಿದೆಯ ಹಾಗೂ 2012ರ ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ನಿಯಮಗಳ ಆಧಾರದಲ್ಲಿ 'ಕೇರಳ ರಾಜ್ಯ ಮಕ್ಕಳ ಹಕ್ಕುಗಳ ಆಯೋಗ' ಕಾರ್ಯಾಚರಿಸುತ್ತಿದೆ. ನಮ್ಮ ಸಂವಿಧಾನವು ಹೇಳುವ ಮೂಲಭೂತ ಹಕ್ಕುಗಳನ್ನು ಹಾಗೂ ಮಕ್ಕಳ ಹಕ್ಕುಗಳನ್ನು ಸಂರಕ್ಷಿಸುವುದು ಆಯೋಗದ ಕೆಲಸವಾಗಿದೆ.

ಈ ಮಕ್ಕಳ ಹಕ್ಕುಗಳನ್ನು ದೃಢಪಡಿಸಲು ತಾನು ಏನು ಮಾಡಿದೆನೆಂದೂ ಇನ್ನು ಏನು ಮಾಡಬಹುದೆಂದೂ ಪ್ರತಿಯೊಬ್ಬ ಅಧ್ಯಾಪಕನೂ ಯೋಚಿಸಬೇಕಾಗಿದೆ.

## 1.12 ಮೆಂಟರಿಂಗ್

ರಾಷ್ಟ್ರೀಯ ಶಿಕ್ಷಣ ಹಕ್ಕು ಕಾಯ್ದೆಯು ಅಧ್ಯಾಪಕ/ಅಧ್ಯಾಪಿಕೆಯನ್ನು ಮೆಂಟರ್ (mentor) ಎಂಬುದಾಗಿ ಪರಿಗಣಿಸುತ್ತದೆ. ಸಮಗ್ರ ಶಾಲಾ ಅಭಿವೃದ್ಧಿ ವಲಯದಲ್ಲಿ ಮೆಂಟರಿಂಗ್‌ಗೆ ಬಹಳಷ್ಟು ಪ್ರಾಧಾನ್ಯವಿದೆ. ಕಲಿಕೆಯ ಸಾಧನೆಗಳನ್ನು ರುಜುವಾತುಪಡಿಸಲು ಸಮಗ್ರವಾದ ಮಾರ್ಗಸೂಚಿಗಳು ಅತಿ ಅವಶ್ಯಕ.

ಶಿಕ್ಷಣ ಪ್ರಕ್ರಿಯೆಯ ಮುಖ್ಯ ಘಟಕವಾದ ಅಧ್ಯಾಪಕ – ವಿದ್ಯಾರ್ಥಿ ಸಂಬಂಧದಲ್ಲಿ ಇಂದು ಬಹಳಷ್ಟು ವ್ಯತ್ಯಾಸಗಳಾಗಿವೆ. ವಿದ್ಯಾರ್ಥಿಗೆ ಜ್ಞಾನವನ್ನು ಹಸ್ತಾಂತರಿಸುವ ವ್ಯಕ್ತಿ ಮಾತ್ರವಲ್ಲದೆ ವಿದ್ಯಾರ್ಥಿಗಳಿಗೆ ಜ್ಞಾನವನ್ನು ಗಳಿಸಲಿರುವ ವೈವಿಧ್ಯಪೂರ್ಣ ಅವಕಾಶಗಳನ್ನು ಒದಗಿಸಿಕೊಡುವ ವ್ಯಕ್ತಿಯಾಗಿಯೂ ಅಧ್ಯಾಪಕ/ಅಧ್ಯಾಪಿಕೆ ಕಾರ್ಯನಿರ್ವಹಿಸಬೇಕಾಗಿದೆ.

ಮನೆಯನ್ನು ಹೊರತುಪಡಿಸಿದರೆ ವಿದ್ಯಾರ್ಥಿಗೆ ಶಾಲೆ ಎಂಬುದು ಮತ್ತೊಂದು ಮನೆಯಿದ್ದಂತೆ. ಶಾಲೆ ಮನೆಯೇ ಆದಾಗ ವಿದ್ಯಾರ್ಥಿಗೆ ಅಧ್ಯಾಪಕ ವೃಂದವು ಮನೆಯ ಸದಸ್ಯರೇ ಆಗುತ್ತಾರೆ. ವಿದ್ಯಾರ್ಥಿಗೆ ಮನೆಯಿಂದ ಲಭಿಸುವ ಪ್ರೀತಿ, ಕಾಳಜಿ, ರಕ್ಷಣೆ, ಅಂಗೀಕಾರ ಮುಂತಾದವುಗಳು ಗರಿಷ್ಠ ಅಥವಾ ಕನಿಷ್ಠ ಮಟ್ಟದಲ್ಲಿ ಲಭಿಸುತ್ತಿವೆ ಎಂಬುದನ್ನು ಪ್ರತಿಯೊಬ್ಬ ಅಧ್ಯಾಪಕ ಅಥವಾ ಅಧ್ಯಾಪಿಕೆ ಮನದಟ್ಟು ಮಾಡಿಕೊಳ್ಳಬೇಕು. ಇದನ್ನು ತಿಳಿದಾದ ಬಳಿಕ ಪ್ರತಿಯೊಂದು ಮಗುವಿಗೂ ಅವಶ್ಯಕವಾದ ರೀತಿಯಲ್ಲಿ ಇವುಗಳನ್ನು ನೀಡುವ ಹೊಣೆಗಾರಿಕೆ ಅಧ್ಯಾಪಕರಿಗಿದೆ. ಹೀಗಾದಾಗ ಮಾತ್ರ ಶಾಲೆಯೂ ಮನೆಯೆನಿಸಿಕೊಳ್ಳುವುದು.

ಪ್ರತಿಯೊಂದು ಮಗುವಿನ ವ್ಯಕ್ತಿಗತವಾದ ಮತ್ತು ಕೌಟುಂಬಿಕವಾದ ಹಿನ್ನೆಲೆಗಳನ್ನು ಅರ್ಥಮಾಡಿಕೊಳ್ಳಲು ಅಧ್ಯಾಪಕರು ಈ ಕೆಳಗಿನ ವಿಷಯಗಳನ್ನು ಗಮನಿಸಬೇಕಾಗುತ್ತದೆ.

- ಗೃಹ ಸಂದರ್ಶನ
- ಹೆತ್ತವರೊಂದಿಗಿನ ಆಶಯ ವಿನಿಮಯ
- ಮಗುವಿನ ನಿರಂತರ ನಿರೀಕ್ಷಣೆ
- 

ಹೀಗೆ ಮಗುವಿಗೆ ಪ್ರೀತಿ, ಅಂಗೀಕಾರ ಮತ್ತು ಸಂರಕ್ಷಣೆ ಇತ್ಯಾದಿಗಳನ್ನು ನೀಡಿ, ನಾವು ಅಧ್ಯಾಪಕರು ಮಗುವಿನ ಸಹರಕ್ಷಕರಾಗಿ ಜವಾಬ್ದಾರಿ ವಹಿಸಿಕೊಂಡಾಗ ಮಾತ್ರ ಹೊಸ ಕಾಲಮಾನದ ಅಧ್ಯಾಪಕ/ಅಧ್ಯಾಪಿಕೆಯಾಗಿ ನಾವು ಗುರುತಿಸಿಕೊಳ್ಳಬಹುದು.

ಮೆಂಟರಿಂಗ್ ಮೂಲಕ ಮಾರ್ಗದರ್ಶನ, ಸಲಹೆ, ಬೆಂಬಲ, ಜ್ಞಾನವನ್ನು ಉತ್ತಮಪಡಿಸಲು ಬೇಕಾದ ಅವಕಾಶ ಮುಂತಾದುವುಗಳನ್ನು ಅಧ್ಯಾಪಕರು ಮಗುವಿಗೆ ಒದಗಿಸಿಕೊಡುತ್ತಾರೆ. ಅನುಭವಿಯಾದ ನೇತಾರ ಎಂಬ ನೆಲೆಯಲ್ಲಿಯೂ ಅನುಕರಣೀಯ ಆದರ್ಶ ವ್ಯಕ್ತಿ ಎಂಬ ನೆಲೆಯಲ್ಲಿಯೂ ಮೆಂಟರಿಂಗ್‌ನ ಕಾರ್ಯಚಟುವಟಿಕೆಗಳು ಮುಂದುವರಿಯಬೇಕು. ಬೋಧನೆಗೆ ಬೇಕಾದ ಸೂಚನೆಗಳು, ಕೌನ್ಸಿಲಿಂಗ್ ಇತ್ಯಾದಿಗಳೆಲ್ಲ ಇದರ ಭಾಗಗಳಾಗಿವೆ. ವಿದ್ಯಾರ್ಥಿಯ ಒಳಗೆ ಸುಪ್ತವಾಗಿರುವ ಪ್ರತಿಭೆಯನ್ನು ಹೊರಗೆ ತರಲು ಸಮರ್ಥ ಮೆಂಟರ್‌ನಿಂದ ಮಾತ್ರ ಸಾಧ್ಯ.

.

## ಮೆಂಟರಿಂಗ್ ಮೂಲಕ

- ಅಧ್ಯಾಪಕ ಹಾಗೂ ವಿದ್ಯಾರ್ಥಿಗೆ ಉತ್ತಮ ಶಿಕ್ಷಣ ಅನುಭವಗಳು ಲಭಿಸುತ್ತವೆ.
- ಅಧ್ಯಾಪಕ ಹಾಗೂ ವಿದ್ಯಾರ್ಥಿಯ ಜ್ಞಾನ ವಲಯ ವಿಸ್ತಾರಗೊಳ್ಳುತ್ತದೆ.
- ವಿದ್ಯಾರ್ಥಿ ಮತ್ತು ಶಾಲೆಯ ಪರಸ್ಪರ ಸಂಬಂಧ ಗಟ್ಟಿಗೊಳ್ಳುತ್ತದೆ.
- ವಿದ್ಯಾರ್ಥಿಯ ಕಲಿಕೆಯಲ್ಲಿ ಪ್ರಗತಿ ಹಾಗೂ ವ್ಯಕ್ತಿತ್ವ ವಿಕಾಸ ಉಂಟಾಗುತ್ತದೆ.
- ಚಟುವಟಿಕೆಗಳ ಮೂಲಕ ಸಾಮಾಜಿಕ ಪ್ರಜ್ಞೆ ಬೆಳೆಸಲು ಮತ್ತು ತೀರ್ಮಾನಗಳನ್ನು ಕೈಗೊಳ್ಳಲು ಸಾಧ್ಯವಾಗುವುದು.
- ಹೆತ್ತವರು ಹಾಗೂ ಶಾಲೆಯ ಪರಸ್ಪರ ಸಂಬಂಧ ಗಟ್ಟಿಗೊಳ್ಳುವುದಲ್ಲದೆ ವಿದ್ಯಾರ್ಥಿಯ ಕಲಿಕೆಯ ಗುಣಮಟ್ಟದ ಕುರಿತು ತಿಳಿಯಲು ಸಾಧ್ಯವಾಗುತ್ತದೆ.

- ಕಲೆ, ಕ್ರೀಡೆ, ಆರೋಗ್ಯ, ವೃತ್ತಿ ಪರಿಚಯ ಮೊದಲಾದ ಕಲಿಕಾ ವಲಯಗಳಲ್ಲಿ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆ ಮತ್ತು ಮೌಲ್ಯಮಾಪನವನ್ನು ಗಟ್ಟಿಗೊಳಿಸುತ್ತದೆ.

ಮೆಂಟರಿಂಗ್‌ಗೆ ಸಾಧ್ಯವಿರುವ ರೀತಿಯಲ್ಲಿ ನಕಾಶೆಗಳನ್ನು ರೂಪಿಸಿ, ಇದೊಂದು ಪರಿಹಾರ ಬೋಧನೆ ಪ್ರಕ್ರಿಯೆಯಾಗಿಯೂ ನಿರಂತರ ಮೌಲ್ಯನಿರ್ಣಯ ಮತ್ತು ವಿದ್ಯಾರ್ಥಿಯ ವ್ಯಕ್ತಿತ್ವ ವಿಕಾಸಕ್ಕೆ ಸಹಾಯಕವಾಗುವ ಪ್ರಕ್ರಿಯೆಯನ್ನಾಗಿಯೂ ರೂಪುಗೊಳಿಸಬೇಕಾಗಿದೆ.

ಶಾಲೆಯ ಎಲ್ಲಾ ಅಧ್ಯಾಪಕರನ್ನು 'ಮೆಂಟರ್ಸ್' ಎಂಬುದಾಗಿಯೂ ವಿದ್ಯಾರ್ಥಿಗಳನ್ನು 'ಮೆಂಟಿ' ಗಳನ್ನಾಗಿಯೂ ಪರಿಗಣಿಸುವ ಮೂಲಕ ಮೆಂಟರಿಂಗ್ ರೂಪುಗೊಳ್ಳಬೇಕು. ತರಗತಿಯ ಎಲ್ಲಾ ವಿದ್ಯಾರ್ಥಿಗಳನ್ನು ಸಣ್ಣ ಸಣ್ಣ ಗುಂಪುಗಳೆಂದು ಭಾವಿಸಿಕೊಂಡು, ಪ್ರತಿಯೊಂದು ಗುಂಪಿನ ಪ್ರಗತಿಯನ್ನು ಸಮರ್ಪಕ ರೀತಿಯಲ್ಲಿ ತಿಳಿಯಲು ಆಯಾ ತರಗತಿಯಲ್ಲಿ ಕಲಿಸುವ ಅಧ್ಯಾಪಕರಿಗೆ ಗುಂಪಿನ ಜವಾಬ್ದಾರಿಯನ್ನು ನೀಡಬಹುದು.

## 1.13 ಅಧ್ಯಾಪಕರು ಪಾಲಿಸಬೇಕಾದ ಪ್ರಮುಖ ವೃತ್ತಿಪರ ನೀತಿಸಂಹಿತೆ (Code of Professional Ethics for School Teachers)

### 1. ವಿದ್ಯಾರ್ಥಿಗಳೊಂದಿಗಿರುವ ಜವಾಬ್ದಾರಿಗಳು

*1.1* ಎಲ್ಲ ವಿದ್ಯಾರ್ಥಿಗಳೊಂದಿಗೆ ಪ್ರೀತಿ, ವಾತ್ಸಲ್ಯದಿಂದ ವರ್ತಿಸುವುದು.

- ಎಲ್ಲ ವಿದ್ಯಾರ್ಥಿಗಳೊಂದಿಗೆ ಸಮಾನ ರೀತಿಯಿಂದ ವರ್ತಿಸುವುದು.
- ಕಲಿಕೆಯಲ್ಲಿ ಹಿಂದಿರುವ ವಿದ್ಯಾರ್ಥಿಗಳಿಗೆ ವಿಶೇಷ ಪರಿಗಣನೆ ನೀಡುವುದು.
- ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ, ಆಸಕ್ತಿ ಮುಂತಾದುವುಗಳನ್ನು ಮೂಡಿಸುವ ರೀತಿಯಲ್ಲಿ ವ್ಯವಹರಿಸುವುದು.

*1.2* *ಜಾತಿ, ಮತ, ವರ್ಗ, ವರ್ಣ, ಆರ್ಥಿಕ ಸ್ಥಿತಿಗತಿ, ಭಾಷೆ, ಲಿಂಗ, ಜನ್ಮಸ್ಥಳ ಎಂಬೀ ವಿಷಯಗಳಲ್ಲಿ ಭೇದಭಾವವಿಲ್ಲದೆ, ನಿಷ್ಪಕ್ಷಪಾತ ಹಾಗೂ ನ್ಯಾಯಯುತವಾದ ಮೌಲ್ಯಗಳನ್ನು ಗೌರವಿಸುವುದು.*

- ಪ್ರಜಾಪ್ರಭುತ್ವ ತತ್ವಸಿದ್ಧಾಂತಗಳಲ್ಲಿ, ಸಹಿಷ್ಣುತೆಯ ವಿಷಯಗಳಲ್ಲಿ, ಸಾಮಾಜಿಕ ವಿಚಾರಗಳಲ್ಲಿ ಅಧ್ಯಾಪಕರಿಗಿರುವ ನಂಬಿಕೆ ಮತ್ತು ವಿಶ್ವಾಸವನ್ನು ವಿದ್ಯಾರ್ಥಿಗಳಲ್ಲಿಯೂ ಮೂಡಿಸುವುದು.
- ಅಧ್ಯಾಪಕರ ವ್ಯಕ್ತಿಗತವಾದ ನಂಬಿಕೆಗಳು ಸಂವಿಧಾನದ ತತ್ವಗಳಿಗೆ ವಿರುದ್ಧವಾದರೆ ಅದು ಶಾಲೆಯ ಒಟ್ಟು ವ್ಯವಸ್ಥೆಯ ಮೇಲೆ ಗಂಭೀರ ಪರಿಣಾಮ ಬೀರಬಹುದು.

*1.3* *ವಿದ್ಯಾರ್ಥಿಯ ದೈಹಿಕ, ಬೌದ್ಧಿಕ, ಭಾವನಾತ್ಮಕ, ಸಾಮಾಜಿಕ ಮತ್ತು ಸದಾಚಾರಗಳ ಬೆಳವಣಿಗೆಗಳಿಗೆ ಸೂಕ್ತ ವಾತಾವರಣದ ಸೃಷ್ಟಿ.*

- ಶಾಲಾ ಶಿಕ್ಷಣವು ವಿದ್ಯಾರ್ಥಿಯ ಶಾರೀರಿಕ ಮತ್ತು ಬೌದ್ಧಿಕವಾದ ಕೌಶಲ್ಯಗಳನ್ನು ಪರಿಪೂರ್ಣತೆಯತ್ತ ಕೊಂಡೊಯ್ಯುವ ಕಾಲಘಟ್ಟವಾಗಿದೆ.
- ಶಿಕ್ಷಣವು ವಿದ್ಯಾರ್ಥಿಯ ಬೌದ್ಧಿಕ ಬೆಳವಣಿಗೆಗೆ ಮಾತ್ರ ಸೀಮಿತವಾಗಿರಬಾರದು.
- ವಿದ್ಯಾರ್ಥಿಯ ಸರ್ವಾಂಗೀಣ ಅಭಿವೃದ್ಧಿಯು ಶಿಕ್ಷಣದ ಮುಖ್ಯ ಲಕ್ಷ್ಯವಾಗಿರಬೇಕು.

*1.4* *ಶಾಲಾ ಶಿಕ್ಷಣದ ಎಲ್ಲಾ ಘಟ್ಟಗಳಲ್ಲಿಯೂ ವಿದ್ಯಾರ್ಥಿಯ ವ್ಯಕ್ತಿತ್ವವು ಗೌರವಿಸಲ್ಪಡಬೇಕು.*

- ವ್ಯಕ್ತಿ ಎಂಬ ನೆಲೆಯಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗಿರುವ ಪ್ರಜಾಪ್ರಭುತ್ವ ಪರವಾದ ಹಕ್ಕುಗಳು ಹಾಗೂ ಸ್ಥಾನಮಾನಗಳನ್ನು ಗಮನಿಸಬೇಕು.
- ಅಧ್ಯಾಪಿಕೆಯ ಭಾಗದಿಂದ ಬರಬಹುದಾದ ಯಾವುದೇ ಪ್ರತಿಕೂಲ ಅಭಿಪ್ರಾಯಗಳು ವಿದ್ಯಾರ್ಥಿಯ ಸ್ವಾಭಿಮಾನವನ್ನು ಘಾಸಿಗೊಳಿಸುವುದಲ್ಲದೆ ಅವು ಆತನ ಕಲಿಕೆಯ ಮೇಲೆ ದುಷ್ಪರಿಣಾಮವನ್ನುಂಟು ಮಾಡಬಹುದು.

- ಶಾಲೆಯ ಎಲ್ಲಾ ಕಾರ್ಯಚಟುಟಿಕೆಗಳಲ್ಲಿಯೂ ಎಲ್ಲ ವಿದ್ಯಾರ್ಥಿಗಳ ಸಕ್ರಿಯವಾದ ಪಾಲ್ಗೊಳ್ಳುವಿಕೆಗೆ ಪ್ರೋತ್ಸಾಹ ನೀಡಬೇಕು.
- ಸಂಯುಕ್ತ ರಾಷ್ಟ್ರ ಸಂಘ ಅಂಗೀಕರಿಸಿದ ಹಾಗೂ ಭಾರತವು ಒಪ್ಪಿರುವ ಮತ್ತು ಪಾಲಿಸಿಕೊಂಡು ಬಂದಿರುವ ಮಕ್ಕಳ ಹಕ್ಕು ಕಾಯ್ದೆಗಳನ್ನು ಹಾಗೂ ಮಕ್ಕಳ ಹಕ್ಕು ಸಂರಕ್ಷಣಾ ಸಮಿತಿಯ ವರದಿಗಳನ್ನು ಅಧ್ಯಾಪಕರು ಗಮನದಲ್ಲಿಟ್ಟು ವ್ಯವಹರಿಸಬೇಕಾಗಿದೆ.
- ಶಾಲೆಯ ಶಿಸ್ತುಕ್ರಮ ಪಾಲನೆಗಾಗಿ ರೂಪಿಸುವ ನಿಯಮಾವಳಿಗಳು ವಿದ್ಯಾರ್ಥಿಯ ಮಾನವೀಯ ಹಕ್ಕುಗಳಿಗೆ ಧಕ್ಕೆಯನ್ನುಂಟುಮಾಡಬಾರದು.

*1.5 ವಿದ್ಯಾರ್ಥಿಯಲ್ಲಿ ಸುಪ್ತವಾಗಿರುವ ಕೌಶಲ್ಯ ಮತ್ತು ಪ್ರತಿಭೆಯು ಪ್ರಕಟಗೊಳ್ಳಲು ಸೂಕ್ತವಾದ ಹಾಗೂ ಅಚ್ಚುಕಟ್ಟಾದ ಯೋಜನೆಗಳನ್ನು ರೂಪಿಸಬೇಕು.*

- ಶೈಕ್ಷಣಿಕ ಸಾಧನೆ ಮಾತ್ರವಲ್ಲದೆ ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿರುವ ವಿಶೇಷ ಕೌಶಲ್ಯ ಮತ್ತು ಪ್ರತಿಭೆಯನ್ನು ಗುರುತಿಸುವುದು ಅಧ್ಯಾಪಿಕೆಯ ಬಹುಮುಖ್ಯ ಕರ್ತವ್ಯವಾಗಿದೆ.
- ವಿದ್ಯಾರ್ಥಿಯ ಎಲ್ಲಾ ವಿಧದ ಕೌಶಲ್ಯಗಳನ್ನು ಬೆಳೆಸುವ ಚಟುವಟಿಕೆಗಳು ಇರಬೇಕು.

*1.6 ಪಠ್ಯಕ್ರಮವು ಸಂವಿಧಾನವು ತಿಳಿಸುವ ಮೌಲ್ಯಗಳು ಮತ್ತು ವಿಚಾರಧಾರೆಗಳನ್ನು ಒಳಗೊಂಡಿರಬೇಕು.*

- ಪ್ರಜಾಪ್ರಭುತ್ವ, ಜಾತ್ಯತೀತತೆ, ಸಮತ್ವ, ನೈತಿಕತೆ, ಸ್ವಾತಂತ್ರ್ಯ ಮುಂತಾದ ಸಂವಿಧಾನದ ಮೌಲ್ಯಗಳು ಪಠ್ಯಕ್ರಮ ಯೋಜನೆಯ ಪ್ರಧಾನ ಅಂಶಗಳಾಗಿರಬೇಕು.
- ಪೌರರ ಕರ್ತವ್ಯಗಳ ಕುರಿತು ಹೇಳಿರುವ ಸಂವಿಧಾನದ ಪರಿಚ್ಛೇದ (ಆರ್ಟಿಕಲ್) 51 ಎ ಯನ್ನು ಅರ್ಥಮಾಡಿಕೊಂಡು, ಅದರಲ್ಲಿನ 'ಎ' ಯಿಂದ 'ಕೆ' ವರೆಗಿನ ಆಶಯಗಳನ್ನು ಗಮನದಲ್ಲಿಟ್ಟುಕೊಂಡು ವ್ಯವಹರಿಸಬೇಕು.

*1.7 ವಿದ್ಯಾರ್ಥಿಗಳ ಅಗತ್ಯಗಳಿಗನುಸಾರ ಅಧ್ಯಾಪಿಕೆಯ/ಅಧ್ಯಾಪಕನ ಬೋಧನ ರೀತಿಯನ್ನು ಪರಿಷ್ಕರಿಸಬೇಕು.*

- ನಿರಂತರ ಮೌಲ್ಯನಿರ್ಣಯದ ಆಧಾರದಲ್ಲಿ ವಿದ್ಯಾರ್ಥಿಯ ಸ್ವಭಾವ, ಗಳಿಸಿದ ಜ್ಞಾನ, ಅಭಿರುಚಿ, ಕಲಿಕೆಯ ರೀತಿ ಮುಂತಾದುವುಗಳನ್ನು ಪರಿಗಣಿಸಿ, ಬೋಧನೆಯ ವಿಧಾನಗಳಲ್ಲಿ ಅಗತ್ಯವಾದ ಪರಿಷ್ಕಾರವನ್ನು ನಿರಂತರ ನಡೆಸುತ್ತಿರಬೇಕು.

*1.8 ವಿದ್ಯಾರ್ಥಿಗಳು ನೀಡುವ ಅವರ ವ್ಯಕ್ತಿಗತವಾದ ವಿಚಾರಗಳ ಗೌಪ್ಯತೆಯನ್ನು ಕಾಪಾಡುವುದು ಮತ್ತು ಇಂತಹ ವಿಷಯಗಳನ್ನು ಕಾನೂನುಬದ್ಧವಾಗಿ ಯಾರಿಗೆ ತಿಳಿಸಬಹುದೋ ಅವರಿಗೆ ಮಾತ್ರ ತಿಳಿಸುವುದು.*

- ಕೌನ್ಸಿಲರ್ ಕೂಡಾ ಆಗಿರುವ ಅಧ್ಯಾಪಿಕೆಗೆ ವಿದ್ಯಾರ್ಥಿಯ ವ್ಯಕ್ತಿಗತವಾದ ವಿಷಯಗಳನ್ನು ತಿಳಿಯಲು ಸಾಧ್ಯ.
- ಈ ವಿವರಗಳನ್ನು ವಿದ್ಯಾರ್ಥಿಯ ಒಳಿತಿಗಾಗಿ ವಿವೇಕದಿಂದ ಉಪಯೋಗಿಸತಕ್ಕದ್ದು.

*1.9 ವಿದ್ಯಾರ್ಥಿಗಳನ್ನು ಗದರಿಸುವುದು, ಆತಂಕಕ್ಕೀಡುಮಾಡುವುದು, ಶಾರೀರಿಕವಾಗಿ, ಮಾನಸಿಕವಾಗಿ, ಭಾವನಾತ್ಮಕವಾಗಿ ದೌರ್ಜನ್ಯವೆಸಗುವುದು ಮುಂತಾದುವುಗಳನ್ನು ಮಾಡಬಾರದು.*

- ಲೈಂಗಿಕ ದೌರ್ಜನ್ಯದಿಂದ, ಕಡೆಗಣಿಸುವಿಕೆಯಿಂದ, ಶೋಷಣೆಯಿಂದ ವಿದ್ಯಾರ್ಥಿಯನ್ನು ಸಂರಕ್ಷಿಸುವ ಜವಾಬ್ದಾರಿ ಅಧ್ಯಾಪಕರಿಗಿದೆ.
- ಉತ್ತಮ ಕಲಿಯುವಿಕೆಗೆ ಶಿಕ್ಷೆ ಸಹಕಾರಿ ಎಂಬ ತಪ್ಪು ಕಲ್ಪನೆ ದೂರವಾಗಬೇಕು.
- ಇಂತಹ ಸನ್ನಿವೇಶಗಳಲ್ಲಿ ವಿದ್ಯಾರ್ಥಿಗೆ ಲಭಿಸುವ ಕಾನೂನು ರಕ್ಷಣೆಗಳ ಕುರಿತು ಅಧ್ಯಾಪಕರು ತಿಳಿದಿರಬೇಕು.

*1.10 ಯಾವುದೇ ರೀತಿಯ ಲೈಂಗಿಕ ಶೋಷಣೆಯಿಂದ ವಿದ್ಯಾರ್ಥಿಯನ್ನು ಸಂರಕ್ಷಿಸುವುದು.*

- ಯಾವುದೇ ರೀತಿಯ ಲೈಂಗಿಕ ಶೋಷಣೆ, ದೈಹಿಕ ಗಾಯಗಳು ಮಾತ್ರವಲ್ಲದೆ, ದೀರ್ಘಕಾಲ ಉಳಿದುಕೊಳ್ಳುವ ಮಾನಸಿಕ ಆಘಾತವೂ ವಿದ್ಯಾರ್ಥಿಯನ್ನು ಅಧೀರನನ್ನಾಗಿಸುತ್ತದೆ.

ಉದ್ಯೋಗ ಸ್ಥಳಗಳಲ್ಲೂ, ಶಾಲೆಗಳಲ್ಲೂ ನಡೆಯುವ ಲೈಂಗಿಕ ಶೋಷಣೆಯ ವಿರುದ್ಧ ಭಾರತದ ಗೌರವಾನ್ವಿತ ಸುಪ್ರೀಂ ಕೋರ್ಟು ಮತ್ತು ಎನ್.ಸಿ.ಪಿ. ನೀಡಿದ ಮಾರ್ಗಸೂಚಿಗಳನ್ನು ಅಧ್ಯಾಪಕರು ಪಾಲಿಸಬೇಕಾಗಿದೆ.

## 2. ರಕ್ಷಕರು ಮತ್ತು ಸಮಾಜದೊಂದಿಗೆ ಇರಬೇಕಾದ ಜವಾಬ್ದಾರಿಗಳು

*22.1 ತಂದೆ–ತಾಯಿಯರೊಂದಿಗೆ ಮತ್ತು ರಕ್ಷಕರೊಂದಿಗೆ ವಿನಯಪೂರ್ವಕವಾದ ವರ್ತನೆ ಇರಬೇಕು.*

- ವಿದ್ಯಾರ್ಥಿಗಳ ಕುರಿತು ಹೆಚ್ಚು ತಿಳಿಯುವುದಕ್ಕಾಗಿ ಅವರ ಹೆತ್ತವರೊಂದಿಗೂ ಗೆಳೆಯರೊಂದಿಗೂ ಉತ್ತಮ ಸಂಪರ್ಕ ಇಟ್ಟುಕೊಳ್ಳುವುದು ಅಗತ್ಯ.
- ಅಧ್ಯಾಪಿಕೆ ಮತ್ತು ಹೆತ್ತವರ ಬಾಂಧವ್ಯವು ವಿದ್ಯಾರ್ಥಿ ಮತ್ತು ಅಧ್ಯಾಪಿಕೆಯ ಸಂಬಂಧವನ್ನು ಹೆಚ್ಚು ನಿಕಟಗೊಳಿಸುತ್ತದೆ.
- ತಮ್ಮ ಮಕ್ಕಳ ಶಾಲೆಯೊಳಗಿನ ಮತ್ತು ಹೊರಗಿನ ಚಟುವಟಿಕೆಗಳ ಕುರಿತು ಅಧ್ಯಾಪಕರಿಂದ ತಿಳಿಯಲು ಹೆಚ್ಚಿನ ಹೆತ್ತವರು ಬಯಸುತ್ತಾರೆ.
- ಬೆಳವಣಿಗೆಯ ಸಂದರ್ಭದಲ್ಲಿ ವಿದ್ಯಾರ್ಥಿಗೆ ಉಂಟಾಗುವ ಪ್ರಮಾದಗಳನ್ನು ಹೆತ್ತವರೊಂದಿಗೆ ಚರ್ಚಿಸುವುದರಿಂದ ಮುಂದೆ ಸಂಭವಿಸಬಹುದಾದ ಹೊಸ ದುರಂತಗಳನ್ನು ತಪ್ಪಿಸಲು ಸಾಧ್ಯವಾಗಬಹುದು.

*2.2 ವಿದ್ಯಾರ್ಥಿಯ ಸ್ವಾಭಿಮಾನಕ್ಕೆ ಧಕ್ಕೆ ತರುವ ಚಟುವಟಿಕೆಗಳಿಂದ ದೂರವಿರುವುದು.*

- ಇತರ ವಿದ್ಯಾರ್ಥಿಗಳ ಮುಂದೆ ವಿದ್ಯಾರ್ಥಿಯ ಸ್ವಾಭಿಮಾನಕ್ಕೆ ಧಕ್ಕೆ ಉಂಟಾಗುವ ರೀತಿಯಲ್ಲಿ ಮಾತನಾಡುವುದನ್ನು ಬಿಟ್ಟುಬಿಡಬೇಕು.
- ಅದೇ ರೀತಿಯಲ್ಲಿ ಹೆತ್ತವರ ಸ್ವಾಭಿಮಾನವನ್ನು ಪ್ರಶ್ನಿಸಬಾರದು.
- ಯಾವುದಾದರೂ ಒಂದು ವಿಭಾಗದ ವಿದ್ಯಾರ್ಥಿಗಳನ್ನು ಮಾತ್ರ ಹಿನ್ನೆಲೆಯಾಗಿರಿಸಿ (ಜಾತಿ, ಮತ, ಆರ್ಥಿಕ ಸ್ಥಿತಿ, ...) ಹೊಗಳುವುದರಿಂದ ಉಳಿದ ವಿದ್ಯಾರ್ಥಿಗಳಲ್ಲಿ ದ್ವೇಷ ಮನೋಭಾವ ಉಂಟಾಗುವುದು.

*2.3 ಭಾರತದ ಸಾಂಸ್ಕೃತಿಕ ಪರಂಪರೆಯ ಕುರಿತು ವಿದ್ಯಾರ್ಥಿಗಳಿಗೆ ಆದರ ಹಾಗೂ ಗೌರವ ಉಂಟಾಗುವಂತೆ ಮಾಡುವುದು.*

- ಭಾರತವು ವಿವಿಧ ಸಂಸ್ಕೃತಿ, ಭಾಷೆ, ಮತ, ನಂಬಿಕೆಗಳ ದೇಶ. ಈ ವೈವಿಧ್ಯವನ್ನು ಪ್ರತಿಯೊಂದು ತರಗತಿಗಳಲ್ಲೂ ಕಾಣಬಹುದು.
- ಭಾರತದಲ್ಲಿ ವಿವಿಧತೆಯಲ್ಲಿ ಏಕತೆಯಿದೆ.
- ಪ್ರತಿಯೊಬ್ಬನಲ್ಲೂ ಪರಸ್ಪರ ಸಹಿಷ್ಣುತೆ ಮತ್ತು ಎಲ್ಲಾ ಸಂಸ್ಕೃತಿಗಳನ್ನು ಗೌರವಿಸುವ ಮನೋಭಾವ ಇರಬೇಕು.
- ಈ ಮನೋಭಾವ ಅಥವಾ ತತ್ವಗಳನ್ನು ಪಠ್ಯಕ್ರಮದ ಮೂಲಕ ಬೆಳೆಸುವ ಪ್ರಜ್ಞಾಪೂರ್ವಕ ಪ್ರಯತ್ನ ಅಗತ್ಯವಾಗಿದೆ.

*2.4 ವಿವಿಧ ಜನಸಮುದಾಯಗಳೊಳಗೆ ಪರಸ್ಪರ ದ್ವೇಷ, ಹಗೆತನವನ್ನು ಬೆಳೆಸುವ ರೀತಿಯ ಕಾರ್ಯಚಟುವಟಿಕೆಗಳಿಗೆ ಕಡಿವಾಣ ಹಾಕಬೇಕು.*

- ಎಲ್ಲ ಮತ, ನಂಬಿಕೆ ಮತ್ತು ಭಾಷೆಗಳಲ್ಲಿ ಸಮಾನ ಗೌರವವನ್ನು ಉಂಟುಮಾಡುವ ರೀತಿಯ ಚಟುವಟಕೆಗಳು ತರಗತಿಯಲ್ಲಿ ನಡೆಯಬೇಕು.

- ರಾಷ್ಟ್ರೀಯ ಭಾವೈಕ್ಯದ ದೃಷ್ಟಿಯಿಂದ ಪ್ರತಿಯೊಬ್ಬನೂ ಮೊದಲಿಗೆ ಭಾರತೀಯ. ಬಳಿಕ ಮಾತ್ರವೇ ಒಂದು ಸಮುದಾಯದ ಸದಸ್ಯ ಎಂಬುದು ಮುಖ್ಯ ವಿಷಯವಾಗಬೇಕು.
- ಯಾವುದಾದರೂ ಒಂದು ನಿರ್ದಿಷ್ಟ ಗುಂಪಿನ ಪ್ರಚಾರಕ್ಕಾಗಿ ಶಾಲೆ/ತರಗತಿಯನ್ನು ಬಳಸಬಾರದು.
- ಸಮಕಾಲೀನ ಸಾಮಾಜಿಕ, ರಾಜಕೀಯ ಬೆಳವಣಿಗೆಗಳನ್ನು ಚರ್ಚೆ ಮಾಡುವಾಗ ಅಧ್ಯಾಪಕ/ ಅಧ್ಯಾಪಿಕೆ ಯಾವುದಾದರೂ ಒಂದು ಪಕ್ಷದ ಪರವಾಗಿ ಮಾತನಾಡಬಾರದು.

## 3. ಅಧ್ಯಾಪನ ವೃತ್ತಿಯಲ್ಲಿ ಹಾಗೂ ಸಹೋದ್ಯೋಗಿಗಳೊಡನೆ ಇರಬೇಕಾದ ಜವಾಬ್ದಾರಿಗಳು

*3.1 ವೃತ್ತಿ ಪರಿಣತಿಯನ್ನು ಬೆಳೆಸಲು ನಿರಂತರ ಪ್ರಯತ್ನಿಸುವುದು.*

- ಒಬ್ಬ ವಿದ್ಯಾರ್ಥಿಯನ್ನು ನಿರಂತರ ಕಲಿಕೆಯವನನ್ನಾಗಿ ಮಾಡುವುದರೊಂದಿಗೆ ಅಧ್ಯಾಪಕನು ತಾನೂ ಕಲಿಯುತ್ತಿರಬೇಕು.
- ನಿರಂತರವಾಗಿ ಬೆಳೆಯುತ್ತಿರುವ  ಜ್ಞಾನ ವಲಯಗಳ ಕುರಿತು, ಅಧ್ಯಾಪನ ರೀತಿಯ ಕುರಿತು ಜ್ಞಾನವನ್ನು ಸಂಪಾದಿಸಲೂ ಅದನ್ನು ಕಾರ್ಯರೂಪಕ್ಕೆ ತರಲೂ ಸಾಧ್ಯವಾಗಬೇಕು.
- ಯಾವ ಯಾವ ಮೂಲಗಳಿಂದ ತನಗೆ ಹೊಸ ಅರಿವು ಲಭಿಸಬಹುದೆಂಬ ಹುಡುಕಾಟ ಅಧ್ಯಾಪಕನ ಕರ್ತವ್ಯವಾಗಿರಬೇಕು.

*3.2 ಸಹೋದ್ಯೋಗಿಗಳೊಂದಿಗೆ ಹಾಗೂ ಇತರರೊಂದಿಗೆ ಪರಸ್ಪರ ಆಶಯ ವಿನಿಮಯ ಮಾಡುವುದರಿಂದ ಹೊಸತಾದ ಜ್ಞಾನ ವಲಯ ಸೃಷ್ಟಿಯಾಗುವುದು.*

- ಶಾಲೆಯಲ್ಲಿ ಶೈಕ್ಷಣಿಕ ಜಾಗೃತಿಯನ್ನು ಮೂಡಿಸುವುದು ಮತ್ತು ಎಲ್ಲ ಅಧ್ಯಾಪಕರಿಗೆ ತಮ್ಮದೇ ಆದ ಕೊಡುಗೆ ನೀಡುವ ಅವಕಾಶವನ್ನು ಕಲ್ಪಿಸಿ ಉತ್ತಮ ವಾತಾವರಣವನ್ನು ಉಂಟುಮಾಡುವುದು.
- ಇಂತಹ ಸನ್ನಿವೇಶವುಂಟಾಗಲು ಪೂರ್ವಯೋಜನೆ ಮತ್ತು ಫಲಪ್ರದವಾದ ಸಹಕಾರ ಮನೋಭಾವ ಎಲ್ಲ ಅಧ್ಯಾಪಕರಲ್ಲೂ ನಿರ್ಮಾಣವಾಗಬೇಕು.
- ಶಾಲೆಯ ಯಾವುದೇ ರೀತಿಯ ಸಮಸ್ಯೆಗಳನ್ನು ಪರಿಹಾರ ಮಾಡುವಲ್ಲಿ ಎಲ್ಲ ಅಧ್ಯಾಪಕರ ಒಗ್ಗಟ್ಟು, ಚರ್ಚೆ, ಕ್ರಿಯಾತ್ಮಕ ಮಾರ್ಗದರ್ಶನ ಹಾಗೂ ಫಲಪ್ರದ ಕಾರ್ಯಚಟುವಟಿಕೆ ಇರಬೇಕು.
- ಅಧ್ಯಾಪಕರನ್ನು ಮಾತ್ರವಲ್ಲದೆ ಶಾಲೆಯ ವಿಷಯಗಳಲ್ಲಿ ಮುತುವರ್ಜಿಯಿರುವ ಎಲ್ಲರನ್ನು ಇಂತಹ ಕ್ರಿಯಾಚಟುವಟಿಕಗಳಲ್ಲಿ ಪಾಲ್ಗೊಳ್ಳುವಂತೆ ಮಾಡಲು ಅಧ್ಯಾಪಕನಿಗೆ ಸಾಧ್ಯವಾಗಬೇಕು.

*3.3 ಸಹೋದ್ಯೋಗಿಗಳೊಡನೆ ಗೌರವಾದರಗಳೊಂದಿಗೆ ವ್ಯವಹರಿಸಬೇಕು.*

- ಶಾಲೆಯ ಎಲ್ಲ ಅಧ್ಯಾಪಕರೊಡನೆ ಅವರ ವಿದ್ಯಾಭ್ಯಾಸ ಯೋಗ್ಯತೆ, ಅವರು ಯಾವ ವಿದ್ಯಾರ್ಥಿಗಳಿಗೆ ಕಲಿಸುತ್ತಿದ್ದಾರೆ ಎಂಬುದನ್ನು ನೋಡದೆ ಅವರೊಂದಿಗೆ ಗೌರವಾದರಗಳಿಂದ ವ್ಯವಹರಿಸಬೇಕು.

*3.4 ಅಧ್ಯಾಪಕರು ಖಾಸಗಿಯಾಗಿ ಟ್ಯೂಶನ್ ತರಗತಿಗಳನ್ನು ನಡೆಸುವುದು ಅಥವಾ ಇತರ ಖಾಸಗಿ ಶಿಕ್ಷಣ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಸಮರ್ಪಕವಲ್ಲ.*

- ಅಧ್ಯಾಪಕರು ಖಾಸಗಿಯಾಗಿ ಟ್ಯೂಶನ್ ನಡೆಸುವುದರಿಂದ ಅಧ್ಯಾಪಕನ ಶಾಲಾ ಚಟುವಟಿಕೆಗಳ ಮೇಲೆ ಕೆಟ್ಟ ಪರಿಣಾಮ ಉಂಟಾಗಬಹುದು.
- ಖಾಸಗಿ ಟ್ಯೂಶನ್ ನಡೆಸುವುದರಿಂದ ಶಾಲೆಯ ನೈತಿಕ ತತ್ವ ಸಿದ್ಧಾಂತಗಳಿಗೆ ಧಕ್ಕೆಯುಂಟಾಗುವಂಥ ವ್ಯವಹಾರಗಳಿಗೆ ಕಾರಣವಾಗುವುದು.

*3.5 ತನ್ನ ಚಟುವಟಿಕೆಗಳು ಮತ್ತು ತೀರ್ಮಾನಗಳು ಪರರ ಪ್ರಭಾವಕ್ಕೊಳಗಾಗದಂತೆ ನೋಡಿಕೊಳ್ಳಲು ಯಾವುದೇ ವಿಧವಾದ ಉಡುಗೊರೆ ಅಥವಾ ಇತರ ಸಹಾಯಗಳನ್ನು ಸ್ವೀಕರಿಸುವುದಿಲ್ಲ.*

- ಯಾವುದೇ ರೀತಿಯ ಸೌಲಭ್ಯಗಳನ್ನು ನಿರೀಕ್ಷಿಸಿಕೊಂಡು ಕೊಡಮಾಡುವ ಬೆಲೆಬಾಳುವ ಉಡುಗೊರೆಗಳನ್ನು ಅಧ್ಯಾಪಕರು ವಿದ್ಯಾರ್ಥಿಯಿಂದ ಅಥವಾ ಹೆತ್ತವರಿಂದ ಸ್ವೀಕರಿಸಬಾರದು.

*3.6 ಸಹೋದ್ಯೋಗಿಗಳಿಗೆದುರಾಗಿ ಮತ್ತು ಮೇಲಿನ ಅಧಿಕಾರಿಗಳಿಗೆದುರಾಗಿ ಅನಗತ್ಯವಾದ ಆರೋಪಗಳನ್ನು ಮಾಡುವುದಿಲ್ಲ.*

- ಪರಸ್ಪರ ತಪ್ಪು ಹೊರಿಸುವ ಗುಂಪುಗಾರಿಕೆ ಅಧ್ಯಾಪಕರಲ್ಲಿ ಇರಬಾರದು.
- ಸಾಕ್ಷ್ಯಗಳಿಲ್ಲದೆ ಸಹೋದ್ಯೋಗಿಗಳ ಮೇಲೆ ಆರೋಪ ಮಾಡಬಾರದು.
- ಯಾವುದಾದರೂ ಸಹೋದ್ಯೋಗಿ/ಸಹೋದ್ಯೋಗಿಗಳಲ್ಲಿ ಗಂಭೀರವಾದ ಅಪರಾಧ ಕಂಡುಬಂದರೆ ಅದನ್ನು ಹಿರಿಯ ಅಧ್ಯಾಪಕರ ಗಮನಕ್ಕೆ ತರಬೇಕು.

*3.7 ಸಹೋದ್ಯೋಗಿಗಳ, ವಿದ್ಯಾರ್ಥಿಗಳ ಅಥವಾ ಹೆತ್ತವರ ಎದುರಲ್ಲಿ ಸಹೋದ್ಯೋಗಿಯೊಬ್ಬನ ಮೇಲೆ ದೋಷಾರೋಪಣೆ ಮಾಡಬಾರದು.*

- ಅಧ್ಯಾಪಕರ ಬಗ್ಗೆ ವಿಭಿನ್ನ ರೀತಿಯ ಅಭಿಪ್ರಾಯಗಳಿರಬಹುದು. ಅವುಗಳನ್ನು ಯೋಗ್ಯ ರೀತಿಯಲ್ಲಿ ವ್ಯಕ್ತಪಡಿಸಬೇಕು.
- ಸಹೋದ್ಯೋಗಿಯ ಅಧ್ಯಾಪನ ರೀತಿಯನ್ನು ಅಪಹಾಸ್ಯ ಮಾಡುವ ರೀತಿಯಲ್ಲಿ ಮಾತನಾಡಬಾರದು.

*3.8 ಸಹೋದ್ಯೋಗಿಗಳ ಬೋಧನ ಗುಣಮಟ್ಟವನ್ನು ಗೌರವಿಸುವುದು.*

- ಅಧ್ಯಾಪನದಲ್ಲಿ ಉತ್ತಮ ಸಾಧನೆ ಮಾಡಿದವರ ಚಟುವಟಿಕೆಗಳನ್ನು ಶ್ಲಾಘಿಸಬೇಕು. ಮಾತ್ರವಲ್ಲದೆ ಅಂತಹ ಸಾಧನೆಯನ್ನು ಮಾಡಲು ಪ್ರಯತ್ನಿಸಬೇಕು. ಆದರೆ ಅದು ಅಂಧಾನುಕರಣೆಯಾಗಲೇಬಾರದು.

*3.9 ಸಹೋದ್ಯೋಗಿಗಳ ಕುರಿತು ತಿಳಿದಿರುವ ವೈಯಕ್ತಿಕ ವಿವರಗಳನ್ನು ಗೌಪ್ಯವಾಗಿಡಬೇಕು. ಅಗತ್ಯವಾದಾಗ ಮಾತ್ರ ಕಾನೂನು ಪ್ರಕಾರ ತಿಳಿಯಪಡಿಸುವುದು.*

- ಯಾವುದಾದರೂ ಅಗತ್ಯಕ್ಕಾಗಿ ಸಂಗ್ರಹಿಸಲ್ಪಟ್ಟ ಸಹೋದ್ಯೋಗಿಗಳ ವೈಯಕ್ತಿಕ ವಿವರಗಳು ಗೌಪ್ಯವಾಗಿಡುವಂಥವುಗಳಾಗಿದ್ದಲ್ಲಿ ಅವುಗಳನ್ನು ಕಾನೂನುಬದ್ಧವಾದ ಕಾರ್ಯಗಳಿಗೆ ಮಾತ್ರ ತಿಳಿಯಪಡಿಸತಕ್ಕದ್ದು.

## 1.14 ಟೀಚಿಂಗ್ ಮ್ಯಾನುವೆಲ್ (ಪಾಠಯೋಜನೆ)

ಕಲಿಕಾ ಸಾಧನೆಗಳನ್ನು ಉದ್ದೇಶವಾಗಿಟ್ಟು ತಮ್ಮ ಕಾರ್ಯಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಪ್ರತಿಯೋರ್ವ ಅಧ್ಯಾಪಕನಿಗೂ ಸಾಧ್ಯವಾಗಬೇಕು. ಪಠ್ಯಪುಸ್ತಕದಲ್ಲಿ ಮತ್ತು ಅಧ್ಯಾಪಕರ ಪಠ್ಯದಲ್ಲಿ ನೀಡಿರುವ ಚಟುವಟಿಕೆಗಳನ್ನು ತರಗತಿಯ ಮಕ್ಕಳಿಗೆ ಅನುಕೂಲವಾದ ರೀತಿಯಲ್ಲಿ ತಿದ್ದಿಕೊಳ್ಳುವ ಅಥವಾ ಸೇರಿಸಿಕೊಳ್ಳುವ ಯೋಜನೆಯಿರಬೇಕು. ಪ್ರತಿಯೊಂದು ಕಲಿಕಾಸಾಧನೆ ಈಡೇರಲು ಬೇಕಾಗುವಷ್ಟು ಕಾರ್ಯಚಟುವಟಿಕೆಗಳು ಯೋಜನೆಯಲ್ಲಿರಬೇಕು.

ಕಲಿಕಾ ಚಟುವಟಿಕೆಗಳ ಜೊತೆಗೆ ಮೌಲ್ಯನಿರ್ಣಯವನ್ನೂ ಒಳಗೊಂಡಿರುವ ಯೋಜನೆಗಳು ಪಾಠಪ್ರಕ್ರಿಯೆಯ ಪುಟದಲ್ಲಿರಬೇಕು. ನಿರಂತರ ಮೌಲ್ಯಮಾಪನದಲ್ಲಿ ಲಭಿಸುವ ವಿವರಗಳ ದಾಖಲಾತಿಯು ಮೌಲ್ಯನಿರ್ಣಯ ಪುಟದಲ್ಲಿರಬೇಕು.

ಮುಂದಿನ ಒಂದು ವಾರಕ್ಕೆ ಬೇಕಾಗಿ ತಯಾರಿಸುವ ಟೀಚಿಂಗ್ ಮ್ಯಾನುವೆಲ್, ಸ್ಕೂಲ್ ರಿಸೋರ್ಸ್ ಗ್ರೂಪ್ (SRG) ನಲ್ಲಿ / ವಿಷಯ ಸಮಿತಿಗಳಲ್ಲಿ (Subject Councils) ಮಂಡಿಸುವುದು ಉತ್ತಮ. ಒಂದು ವಾರದ ಮೌಲ್ಯಮಾಪನ ಪುಟದ ವಿವರಗಳನ್ನು ಆಧಾರವಾಗಿಟ್ಟುಕೊಂಡು ಅಧ್ಯಾಪಕನು ಸರಳವಾದ ಅವಲೋಕನ ಟಿಪ್ಪಣಿ (Reflection Note) ತಯಾರಿಸಿ, **SRG/SC** ಯಲ್ಲಿ ಚರ್ಚೆ ಮಾಡಬಹುದು. ಈ ಟಿಪ್ಪಣಿಯ ಆಧಾರದಲ್ಲಿ ಅಧ್ಯಾಪಕನ ಮುಂದಿನ ಯೋಜನಾ ಟಿಪ್ಪಣಿಗಳು ತಯಾರಾಗಬೇಕು.

ಟೀಚಿಂಗ್ ಮ್ಯಾನುವೆಲ್‌ನ ನಮೂನೆಯನ್ನು ಕೊಡಲಾಗಿದೆ.

## ಟೀಚಿಂಗ್ ಮ್ಯಾನುವೆಲ್

ಪಾಠದ ಹೆಸರು :
ದಿನಾಂಕ :
ಸಮಯ :
ವಿಷಯ (Theme) :
ಕಲಿಕಾ ಸಾಧನೆಗಳು :
ಆಶಯಗಳು :
ಕೌಶಲ್ಯಗಳು :
ಭಾಷಾ ಸತ್ಯಾಂಶಗಳು (ಭಾಷೆಗೆ ಮಾತ್ರ) :
ವ್ಯವಹಾರ ರೂಪಗಳು (ಭಾಷಾ ವಿಷಯಕ್ಕೆ ಮಾತ್ರ) :
ಮೌಲ್ಯಗಳು – ಮನೋಭಾವಗಳು :
ಕಲಿಕೋಪಕರಣಗಳು :
ಉತ್ಪನ್ನಗಳು :

| ಪ್ರಕ್ರಿಯೆ | ಮೌಲ್ಯನಿರ್ಣಯ |
|---|---|
| ಚಟುವಟಿಕೆ ಮತ್ತು ಮೌಲ್ಯಮಾಪನಗಳನ್ನೊಳಗೊಂಡ ಪ್ರಕ್ರಿಯೆ | (ಮೌಲ್ಯನಿರ್ಣಯದ ವಿವರಗಳನ್ನು ಇಲ್ಲಿ ದಾಖಲಿಸಬೇಕು) |

ಮುಖ್ಯೋಪಾಧ್ಯಾಯನಿ/ಮುಖ್ಯೋಪಾಧ್ಯಾಯರ ಸಹಿ ಅಧ್ಯಾಪಕ/ಅಧ್ಯಾಪಿಕೆಯ ಸಹಿ

## ಅವಲೋಕನ ಟಿಪ್ಪಣಿ (Reflections)

**ನನ್ನ ನಿಗಮನಗಳು ಮತ್ತು ಹೊಸ ಅರಿವುಗಳು**

(ಕಲಿಕಾ ಚಟುವಟಿಕೆಗಳು ಮತ್ತು ಮೌಲ್ಯನಿರ್ಣಯ ಪ್ರಕ್ರಿಯೆಗಳಿಂದ ಲಭಿಸಿದ ಮಾಹಿತಿಗಳ ಆಧಾರದಲ್ಲಿ)

-
-
-
-

ಮುಂದುವರಿದ ಚಟುವಟಿಕೆಗಳು ಮತ್ತು ಪರಿಹಾರ ಚಟುವಟಿಕೆಗಳು

-
-
-
-

## ಅವಲೋಕನ ಟಿಪ್ಪಣಿ (Reflection note) ಯಾಕೆ?

ನಿರ್ದಿಷ್ಟ ಕಲಿಕಾ ಸಾಧನೆಗಳಿಗನುಸಾರವಾಗಿ ನಡೆಸಲಾದ ಕಲಿಕಾ ಚಟುವಟಿಕೆಗಳು ಪೂರ್ತಿಯಾದ ಬಳಿಕ ಅವಲೋಕನ ಟಿಪ್ಪಣಿ ತಯಾರಿಸಬೇಕು.

- ಈ ಟಿಪ್ಪಣಿಗಳನ್ನು ಪ್ರತಿವಾರದ SRG ಸಭೆಯಲ್ಲಿ ಮಂಡಿಸಬೇಕು.
- ಮುಂದಿನ ಯೋಜನೆಗಳಿಗೆ ಸೂಕ್ತ ಮಾರ್ಗದರ್ಶನ ನೀಡಲು.
- ಒಂದು ಅವಧಿಯ C.E. ಕ್ರೋಡೀಕರಿಸುವುದಕ್ಕಾಗಿ.

# 2. ಕಲೆಯ ಕಲಿಕೆ – ಅಗತ್ಯ ಮತ್ತು ಪ್ರಾಧಾನ್ಯ

**ಪ್ರ**ಪಂಚದ ಯಾವುದೇ ಭಾಗದಲ್ಲಿರುವವರಿಗೆ ಆಶಯ ವಿನಿಮಯ ನಡೆಸಲು ಸಾಧ್ಯವಾಗುವ ಭಾಷೆಯೇ ಕಲೆ. ಕಲೆಯ ಮೂಲಕ ವ್ಯಕ್ತಿಯು ತನ್ನನ್ನು ತಾನು ತಿಳಿದುಕೊಂಡು ಪ್ರಪಂಚದಲ್ಲಿ ತನಗಿರುವ ಸ್ಥಾನವನ್ನು ಅರ್ಥಮಾಡಿಕೊಂಡು ಜೀವನದ ಅರ್ಥವನ್ನು ಕಂಡುಹಿಡಿಯುವನು. ಆದ್ದರಿಂದ ಕಲೆಯ ಕಲಿಕೆ ಎನ್ನುವುದು ಆತ್ಮ ಸಾಕ್ಷಾತ್ಕಾರಕ್ಕಿರುವ ಒಂದು ದಾರಿಯೆಂದು ತಿಳಿಯಬಹುದು.

ಕೇವಲ ಸುಖಲೋಲುಪ ಬದುಕಿನ ಹೊರತಾಗಿ ತನ್ನ ಸುತ್ತಮುತ್ತಲಿರುವ ಸೌಂದರ್ಯ ಪ್ರಪಂಚಕ್ಕೆ ಮಗುವನ್ನು ಕೊಂಡೊಯ್ಯಲು ಕಲಾಕಲಿಕೆಯು ಅತಿ ಪ್ರಧಾನವಾದ ಜವಾಬ್ದಾರಿಯನ್ನು ನಿರ್ವಹಿಸಬೇಕಾಗಿದೆ. ವೈಯಕ್ತಿಕ ಮತ್ತು ಗುಂಪು ಚಟುವಟಿಕೆಗಳ ಮೂಲಕ ವಿವಿಧ ಸಾಮಾಜಿಕ ಜೀವನ ನೈಪುಣ್ಯಗಳಿಗೆ ಮಗುವನ್ನು ಕೈಹಿಡಿದು ಮುನ್ನಡೆಸಲು ಕಲೆಯಕಲಿಕೆ ಸಹಾಯಕವಾಗಿದೆ. ಸಾಂಸ್ಕೃತಿಕ ಪ್ರಜ್ಞೆ, ಮೌಲ್ಯಗಳ ಅರಿವು, ಆತ್ಮವಿಶ್ವಾಸ ಎಂಬಿವುಗಳನ್ನು ನೀಡಲು ಕಲೆಯ ಕಲಿಕೆ ಪ್ರಯೋಜನಕಾರಿಯಾಗಿದೆ.

ವ್ಯಕ್ತಿಯ ಸಮಗ್ರ ವಿಕಾಸವು ಶಿಕ್ಷಣದ ಮುಖ್ಯ ಗುರಿಯಾಗಿದೆ. ಶಾಸ್ತ್ರೀಯ ಮತ್ತು ಮಾನಸಿಕ ವಲಯದಂತೆ ಮಗುವಿನ ಭಾವನಾತ್ಮಕ ವಲಯವೂ, ವಿಕಾಸ ಹೊಂದಬೇಕೆಂದು ಮನಃಶಾಸ್ತ್ರದ ಸಿದ್ಧಾಂತಗಳು ಜಗತ್ತಿಗೆ ಸಾರಿವೆ. ಆ ಮೂಲಕ ಕಲೆಯ ಕಲಿಕೆಯ ಮಹತ್ವವನ್ನು ತಿಳಿದು ವಿವಿಧ ರಾಷ್ಟ್ರಗಳ ಪಠ್ಯಕ್ರಮಗಳಲ್ಲಿ ಅದು ನಿರ್ಣಾಯಕವಾದ ಸ್ಥಾನವನ್ನು ಗಳಿಸಿತು. ಬಹುಮುಖಬುದ್ಧಿ ಸಿದ್ಧಾಂತ ಪ್ರತಿಪಾದಿಸುವಂತೆ, ಬುದ್ಧಿಯ ಭಿನ್ನಸ್ತರಗಳನ್ನು ಬೆಳೆಸಲು ಯೋಗ್ಯವಾದ ಮಾಧ್ಯಮವೇ ಕಲೆ. ಸಂಗೀತ, ಪ್ರಕೃತಿಪರ, ದೃಶ್ಯಸ್ಥಳಪರ, ಶಾರೀರಿಕ ಚಲನಾಪರ, ವ್ಯಕ್ತ್ಯಾಂತರ, ಆಂತರಿಕ, ವೈಯಕ್ತಿಕ ಎಂಬೀ ಬೌದ್ಧಿಕ ಘಟಕಗಳಿಗೆ ಗಣ್ಯವಾದ ವಿಕಾಸ ಸಾಧ್ಯತೆಗಳನ್ನು ಕಲೆಯ ಕಲಿಕೆಯು ನೀಡುವುದು. ಇದರೊಂದಿಗೆ ಭಾಷಿಕ ಮತ್ತು ಗಣಿತ ಸಂಬಂಧವಾದ ಬೌದ್ಧಿಕ ವಿಕಾಸಕ್ಕೆ ಅನುವಂಶಿಕವಾದ ಅವಕಾಶಗಳನ್ನು ಇದು ಒದಗಿಸುವುದು.

ಮನುಷ್ಯ ಮನಸ್ಸನ್ನು ನಿರ್ಮಲಗೊಳಿಸಿ ಜೀವನದಲ್ಲಿ ಹೊಸ ಉತ್ತೇಜನವನ್ನು ನೀಡುವುದಕ್ಕೆ ಕಲೆಗಳಿಗೆ ಸಾಮರ್ಥ್ಯವಿದೆ. ಶಾಲೆಯಿಂದ ಕಲೆಯನ್ನು ಬೇರ್ಪಡಿಸಿದರೆ ನಾವು ಸೃಷ್ಟಿಸುವುದು ರಾಮರಾಜ್ಯಕ್ಕೆ ಬದಲಾಗಿ ರಾವಣರಾಜ್ಯವಾಗಿರಬಹುದು ಎಂದು ಹೇಳಿದ ಶ್ರೇಷ್ಠ ಅಧ್ಯಾಪಕ ಚಿಂತಕ ಡಾ. ಎಸ್. ರಾಧಾಕೃಷ್ಣ ಅವರ ಅಭಿಪ್ರಾಯವು ಹೆಚ್ಚು ಪ್ರಸಕ್ತವಾಗಿದೆ. ಮಕ್ಕಳನ್ನು ಕ್ರಿಯಾಶೀಲರಾಗಿಯೂ, ಉತ್ಸಾಹಶೀಲರಾಗಿಯೂ ಮಾಡುವ ಅಧಿಕ ಚೈತನ್ಯವನ್ನು ಸರಿಯಾದ ದಿಕ್ಕಿಗೆ ಬಿಡದಿದ್ದಲ್ಲಿ ಅದು ವಿನಾಶಕಾರಿಯಾಗಿ ಪರಿಣಮಿಸಬಹುದು. ಮಕ್ಕಳ ಈ ರೀತಿಯ ಅಧಿಕ ಚೈತನ್ಯವನ್ನು ಕಲೆಯ

ಆಸ್ವಾದನೆ ಹಾಗೂ ಕಲೆಯ ಪ್ರಯೋಗದ ಕಡೆಗೆ ಕೊಂಡೊಯ್ಯಬೇಕು. ಅದು ಅವರಿಗೆ ಸಮಾಜದಲ್ಲಿ ಸಂಪನ್ಮೂಲವಾಗಿ ಪರಿಣಮಿಸುವುದು.

ಅತ್ಯಂತ ಸಂಪನ್ನವೂ, ವಿಶಾಲವೂ, ವೈವಿಧ್ಯಪೂರ್ಣವೂ ಆದ ಕಲಾಸಾಂಸ್ಕೃತಿಕ ಹಿನ್ನೆಲೆಯು ಭಾರತಕ್ಕಿದೆ. ಸಂಗೀತ, ನೃತ್ಯ, ಶಿಲ್ಪ, ನಾಟಕ ಮೊದಲಾದ ಕಲೆಗಳು ಭಾರತೀಯ ಜೀವನದಲ್ಲಿ ಹಾಸುಹೊಕ್ಕಾಗಿದೆ. "ನಾಟ್ಯ ಶಾಸ್ತ್ರ" ದಂತಹ ಶ್ರೇಷ್ಠ ಕೃತಿಗಳು ಭಾರತದಲ್ಲಿ ಸೃಷ್ಟಿಯಾಗಿರುವುದು ಇಲ್ಲಿನ ಕಲೆಯ ಕಲಿಕೆ ಹಾಗೂ ಚಿಂತನೆಗಳಿಗೆ ಪ್ರಮಾಣ ಭೂತವಾಗಿವೆ. ಗುರು ಕುಲ ಶಿಕ್ಷಣ ಪದ್ಧತಿಯಲ್ಲಿ ಹಾಗೂ ಬೌದ್ಧ ಧರ್ಮ ಕಾಲಘಟ್ಟದ ವಿಶ್ವವಿದ್ಯಾಲಯಗಳ ಪಠ್ಯಕ್ರಮಗಳಲ್ಲಿ ಅಗತ್ಯ ಅಂಶಗಳಾಗಿ ಕಲೆಯ ಕಲಿಕೆಯೂ ಸೇರಿತ್ತು. ಭಾರತದಲ್ಲಿ ಆಧುನಿಕ ಶಿಕ್ಷಣವು ಪ್ರಚಾರ ಪಡೆದಾಗ ಪಠ್ಯಕ್ರಮದಲ್ಲಿ ಕಲೆಗಳಿಗೆ ಸ್ಥಾನ ಲಭಿಸಿತ್ತು. ಗಾಂಧೀಜಿಯವರು ಅನುಷ್ಠಾನಕ್ಕೆ ತಂದ ಮೂಲವಿದ್ಯಾಭ್ಯಾಸದಲ್ಲಿಯೂ ಕರಕೌಶಲ್ಯಕ್ಕೆ ಹೊರತಾಗಿ ಲಲಿತಕಲೆಗಳಿಗೂ ಅವಕಾಶವಿತ್ತು. ಸ್ವಾತಂತ್ರ್ಯಾ ನಂತರದ ಭಾರತದಲ್ಲಿ ವಿವಿಧ ಪಠ್ಯಕ್ರಮ ಪರಿಷ್ಕರಣೆಯ ಹಂತಗಳಲ್ಲಿ ಕಲೆಯ ಕಲಿಕೆಯು ಸೇರಿಕೊಂಡಿದ್ದರೂ, ವಿನಿಮಯ ಹಂತದಲ್ಲಿ ಕಡೆಗಣಿಸಲ್ಪಟ್ಟಿತ್ತು. ಕೇರಳದ ಸಾಮಾಜಿಕ ಜೀವನದಲ್ಲಿಯೂ  ಕಲೆಯೊಂದಿಗಿರುವ ಜೈವಿಕ ಸಂಬಂಧವನ್ನು ಕಾಣಬಹುದು. ಕೃಷಿ ಹಾಗೂ ಇತರ ಉದ್ಯೋಗ ವಲಯಗಳ  ವಿಧಿಯಾಚರಣೆಗಳಿಗೆ ಸಂಬಂಧಿಸಿದ ಕಲೆಗಳು ಗುರುಕುಲ ಸಂಪ್ರದಾಯದ ಕಲೆಯ ಅಭ್ಯಾಸದ ರೀತಿಯಲ್ಲಿ ತಲೆಮಾರಿನಿಂದ ತಲೆಮಾರಿಗೆ ದಾಟಿ ಬಂದಿರುವುದು ಇತಿಹಾಸ.

ಆಧುನಿಕ ಶಿಕ್ಷಣವು ವ್ಯಾಪಿಸುವ ವರೆಗೆ ಗುರುಕುಲ ಕಲೆಯ ಕಲಿಕೆಯಲ್ಲಿ ಜ್ಯಾರಿಯಲ್ಲಿತ್ತು. ಅರುವತ್ತರ ದಶಕದಲ್ಲಿ ಅನುಷ್ಠಾನಗೊಂಡ ಪಠ್ಯಕ್ರಮದಲ್ಲಿ 1 ರಿಂದ 8 ರ ವರೆಗಿನ ತರಗತಿಗಳ ವಿದ್ಯಾರ್ಥಿಗಳಿಗೆ ವರ್ಣ ಚರಿತ್ರೆ, ಮಾಡೆಲಿಂಗ್, ಸಂಗೀತ ಮೊದಲಾದ ವಲಯಗಳಲ್ಲಿ ಕಲಿಕಾನುಭವಗಳನ್ನು ನೀಡಲು ನಿರ್ದೇಶಿಸಲಾಗಿತ್ತು. ರಾಷ್ಟ್ರೀಯ ಶಿಕ್ಷಣ ನೀತಿಯ ಭಾಗವಾಗಿ ರೂಪಿಸಿದ ಪಠ್ಯ ಕ್ರಮದಲ್ಲಿ ವಿವಿಧ ತರಗತಿಗಳಿರುವ ವಿಸ್ತೃತವಾದ ಪಾಠಭಾಗಗಳನ್ನು ಅಳವಡಿಸಲಾಗಿತ್ತು. ಆದರೆ ಬೇಕಾದಷ್ಟು ಅಧ್ಯಾಪಕರಿಲ್ಲದಿರುವುದು, ಇರುವವರಿಗೆ ಪಠ್ಯಕ್ರಮ ವಿನಿಮಯಕ್ಕೆ ಅಗತ್ಯವಾದ ತರಬೇತಿ ಲಭಿಸದಿರುವುದು, ಈ ವಲಯದ ಅವಗಣನೆಗೆ ಕಾರಣವಾಯಿತು. ಕಲಾ ಕಲಿಕೆಯನ್ನು ಸರಿಯಾಗಿ ಮೌಲ್ಯನಿರ್ಣಯ ಮಾಡುವುದೋ, ಕಲಿಕಾಸಾಧನೆಗಳನ್ನು ಹೆತ್ತವರೊಂದಿಗೆ ಹಂಚಿಕೊಳ್ಳುವುದೋ,ಸರಿಯಾಗಿ ನಡೆಯಲ್ಲಿಲ್ಲ. ಇದರಿಂದಾಗಿ ಸಮಾಜವೂ ಈ  ವಲಯವನ್ನು ಕಲಿಕೆಯ ಭಾಗ ಎಂದು ಪರಿಗಣಿಸದ ಸ್ಥಿತಿಯುಂಟಾಯಿತು. ಜಾಗತಿಕವಾಗಿ ಕಲೆಯ ಕಲಿಕೆಗೆ ನೀಡಬೇಕಾದ ಮಹತ್ವವನ್ನು ಯುನೆಸ್ಕೋ ಮೊದಲಾದ ಸಂಸ್ಥೆಗಳು ಒತ್ತಿ ಹೇಳಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬೇಕಾಗಿದೆ. ಭಾರತದ ವಿವಿಧ ಶಿಕ್ಷಣ ಆಯೋಗಗಳು ಶೈಕ್ಷಣಿಕ ನೀತಿನಿಯಮಗಳು ಕಲೆಯ ಕಲಿಕೆಯ ಪ್ರಧಾನ್ಯವನ್ನು ಎತ್ತಿ ಹೇಳಿವೆ. ಈ ಹಿನ್ನಲೆಯಲ್ಲಿ ಕೇರಳದ ಕಲಾಶಿಕ್ಷಣ ಪಠ್ಯಕ್ರಮವನ್ನು ಕಾಲೋಚಿತವಾದ ಪರಿಷ್ಕರಣೆಗೆ ಒಳಪಡಿಸಲಾಗುತ್ತಿದೆ.

## ಕಲಾಶಿಕ್ಷಣ–ವಿವಿಧ ನಿರೀಕ್ಷಣೆಗಳು

ಕಲಾಶಿಕ್ಷಣದ ಮಹತ್ವದ ಕುರಿತು ಅಂತಾರಾಷ್ಟ್ರೀಯ ಮಟ್ಟದಲ್ಲೂ ರಾಷ್ಟ್ರ ಮಟ್ಟದಲ್ಲೂ ವಿವಿಧ ಸಂಸ್ಥೆಗಳು, ಆಯೋಗಗಳು ಉಚಿತವಾದ ಅನೇಕ ನಿರೀಕ್ಷಣೆಗಳನ್ನು ನಡೆಸಿವೆ. ಮಕ್ಕಳಲ್ಲಿ ಆತ್ಮವಿಶ್ವಾಸ, ಆತ್ಮಸಂಬಂಧ, ಇತರರನ್ನು ಅಂಗೀಕರಿಸುವುದು ಎಂಬ ಗುಣಗಳನ್ನು ಬೆಳೆಸಲು ಕಲೆಗಿರುವ ಸಾಧ್ಯತೆಯನ್ನು ಯುನೆಸ್ಕೊ ಎತ್ತಿ ಹೇಳುತ್ತದೆ. ಕಲಾ ಕಲಿಕೆಯೊಂದಿಗೆ ಮಕ್ಕಳಲ್ಲಿ ಭಾವನಾತ್ಮಕವೂ ಸಾಮಾಜಿಕವೂ ಆದ

ಬೆಳವಣಿಗೆ ಸಾಧ್ಯವಾಗುವದೆಂದು ಯುನೆಸ್ಕೊ ಬಯಸುತ್ತದೆ.

ಮಕ್ಕಳ ಸರ್ವತೋಮುಖವಾದ ಅಭಿವೃದ್ಧಿಯಲ್ಲಿ ಕಲಾಶಿಕ್ಷಣಕ್ಕೆ ಪ್ರಧಾನವಾದ ಸ್ಥಾನವಿದೆಯೆಂದು ಭಾರತದ ವಿವಿಧ ಶಿಕ್ಷಣ ಆಯೋಗಗಳು ವ್ಯಕ್ತಪಡಿಸಿವೆ.

**ಮೊದಲಿಯಾರ್ ಕಮಿಷನ್ ರಿಪೋರ್ಟ್ (1952–53) ಹೀಗೆ ಹೇಳುತ್ತದೆ –**

ಚಿತ್ರರಚನೆ, ಕರಕೌಶಲ, ಸಂಗೀತ, ನೃತ್ಯ, ನಾಟಕ ಮೊದಲಾದವುಗಳಿಗೆ ಶಾಲಾ ಪಠ್ಯಕ್ರಮದಲ್ಲಿ ಪ್ರಧಾನವಾದ ಸ್ಥಾನವನ್ನು ನೀಡಬೇಕೆಂದು ಆಯೋಗವು ಸೂಚಿಸುತ್ತದೆ.

**ಕೊಠಾರಿ ಕಮಿಷನ್ ರಿಪೋರ್ಟಿನಲ್ಲಿ (1962–64) ಹೀಗೆ ಹೇಳುತ್ತದೆ –**

ಕೊಠಾರಿ ಕಮಿಷನ್ ಸೂಚನೆಗಳ ಆಧಾರದಲ್ಲಿ ಕಲಾಕಲಿಕೆಯ ಸ್ಥಿತಿಗತಿಗಳನ್ನು ಅಧ್ಯಯನ ಮಾಡುವುದಕ್ಕಾಗಿ ಪ್ರತ್ಯೇಕ ತಜ್ಞರ ಸಮಿತಿಯನ್ನು ನಂತರ ರಚಿಸಲಾಯಿತು.

1986 ರ ರಾಷ್ಟ್ರೀಯ ಶಿಕ್ಷಣ ನೀತಿಯ ಭಾಗವಾಗಿ 1992 ರಲ್ಲಿ ರೂಪೀಕರಿಸಿದ ಚಟುವಟಿಕಾ ಕಾರ್ಯಕ್ರಮ (POA) ಕಲಾಶಿಕ್ಷಣವನ್ನು ಹೀಗೆ ಗ್ರಹಿಸಿದೆ.

An illustrated view on the cultural perspective inter linking education and culture in order to promote the process of child personality development particularly in terms of discovering the inherent potentialities of the child.

ಈ ರೀತಿಯಲ್ಲಿ ಪ್ರಿ–ಪ್ರೈಮರಿಯಿಂದ ಉನ್ನತ ಶಿಕ್ಷಣದ ಹಂತದವರೆಗೆ ಪಠ್ಯಕ್ರಮ ಪರಿಷ್ಕರಣೆ ಮಾಡಲು ನಿರ್ದೇಶಿಸಲಾಗಿತ್ತು.

ಎನ್.ಸಿ.ಇ.ಆರ್.ಟಿ ತಯಾರಿಸಿದ ಪಠ್ಯಕ್ರಮ ಚೌಕಟ್ಟುಗಳಲ್ಲಿ ಕಲಾಕಲಿಕೆಯ ಪ್ರಧಾನ್ಯತೆಯ ಕುರಿತು ವಿವರಿಸಲಾಗಿದೆ. 2005 ರ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಕಲಾ ಕಲಿಕೆಗೆ ಸಂಬಂಧಿಸಿ ತಿಳುವಳಿಕೆಯನ್ನು ಪುನಃ ನಿರ್ವಚಿಸಿ ಅದರ ಸಾಧ್ಯತೆಗಳನ್ನು ವಿವಿಧ ರೀತಿಯಲ್ಲಿ ಮಂಡಿಸಿದೆ.

- ಕಲಾ ಶಿಕ್ಷಣವನ್ನು ಗಣಿತ, ವಿಜ್ಞಾನ ಎಂಬಿವುಗಳೊಡನೆ ಮೂಲ ಪಠ್ಯ ವಿಷಯವಾಗಿ ಅಂಗೀಕರಿಸಲಾಗಿದೆ.
- ಕಲೆಗಳು ಶೈಕ್ಷಣಿಕ ವಿಷಯಗಳೊಂದಿಗೆ ಸೇರಿ ಜ್ಞಾನ ಸಂಪಾದನೆಯ ಪ್ರಕ್ರಿಯೆಗಳನ್ನು ತ್ವರಿತಗೊಳಿಸಲು ಸಹಾಯ ಮಾಡುವುದು ಎಂಬ ಸಾಂಪ್ರದಾಯಿಕದ ತಿಳುವಳಿಕೆಯನ್ನು ತಿದ್ದಿ ಸರಿಪಡಿಸಲಾಗಿದೆ.
- ಕಲೆ ಎಂಬುವುದು ಜ್ಞಾನದಸ್ತರ, ಭಾವನಾಸ್ತರ, ಆಸ್ವಾದನಾಸ್ತರ ಎಂಬಿವುಗಳ ಮೂಲಕ ಮಕ್ಕಳಲ್ಲಿ ಉಂಟಾಗುವ ಪ್ರಕ್ರಿಯೆಯಾಗಿ ಬದಲಾಗಿದೆ.
- ಹೊಸ ಕಲಿಕಾ ಪ್ರಕ್ರಿಯೆಗಳನ್ನು ಅಭಿವೃದ್ಧಿಗೊಳಿಸುವ ಒಂದು ವಲಯವೇ ಕಲೆಯ ಕಲಿಕೆ ಎಂಬ ದೃಷ್ಟಿಕೋನಕ್ಕೆ ಒತ್ತು ನೀಡಲಾಗಿದೆ.
- ಮಕ್ಕಳ ಕಲಾಸಂಬಂಧವಾದ ಬೆಳವಣಿಗೆಯೂ ವಿಕಾಸವೂ ಚೆನ್ನಾಗಿ ಪ್ರತಿಫಲಿಸಲು ಸಹಾಯಕವಾದ ಮೌಲ್ಯನಿರ್ಣಯ ತಂತ್ರಗಳನ್ನು ಅವಿಷ್ಕರಿಸಲಾಗಿದೆ.

ಇದರೊಂದಿಗೆ ಕಲಾ ಕಲಿಕೆ ಪ್ರೈಮರಿ ಮತ್ತು ಸೆಕೆಂಡರಿ ಹಂತಗಳಲ್ಲೂ ಕಡ್ಡಾಯಗೊಳಿಸಬೇಕೆಂದು ಶಿಫಾರಸು ಮಾಡಲಾಗಿದೆ.

ಜ್ಞಾನ ನಿರ್ಮಾಣ ಪ್ರಕ್ರಿಯೆಯಲ್ಲಿ ಸ್ವಂತ ಸಾಮರ್ಥ್ಯಗಳು ಹಾಗೂ ಅಭಿರುಚಿಗಳನ್ನು ಪ್ರಕಟಪಡಿಸಲು ವಿದ್ಯಾರ್ಥಿಯನ್ನು ಸಮರ್ಥವಾಗಿಸಲು ಕಲಾಶಿಕ್ಷಣಕ್ಕಿರುವ ಮಹತ್ವದ ಬಗ್ಗೆ 2007–ರ ಕೇರಳ ಪಠ್ಯಕ್ರಮ ಚೌಕಟ್ಟು ಎತ್ತಿ ಹೇಳುತ್ತದೆ.

ಈ ಸೂಚನೆಗಳ ಆಧಾರದಲ್ಲಿ ನಡೆದ ಪ್ರತಿಯೊಂದು ಪಠ್ಯಕ್ರಮ ಪರಿಷ್ಕರಣೆಯಲ್ಲೂ, ಹೆಚ್ಚಿನ ವಿದ್ಯಾಭ್ಯಾಸ ವಿನಿಮಯ ಪ್ರಕ್ರಿಯೆಗಳಲ್ಲೂ ಕಲಾಶಿಕ್ಷಣಕ್ಕೆ ನಿರೀಕ್ಷಿಸಿದ ಪ್ರಗತಿ ಗಳಿಸಲು ಸಾಧ್ಯವಾಗಲಿಲ್ಲ, ಕೇವಲ ಉದ್ಯೋಗ ಸಂಪಾದನೆಯ ಸಾಧ್ಯತೆಗಳನ್ನು ಮಾತ್ರ ಮುಂದಿರಿಸಿಕೊಂಡು, ಶಾಲಾ ಶಿಕ್ಷಣವು ಸಾಗುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ ಮಕ್ಕಳು ಸಾಮಾಜಿಕ ಪಿಡುಗುಗಳಿಗೆ ಬಲಿಯಾಗಿ, ಸಾಮಾಜಿಕ ಮೌಲ್ಯದ ಕುಸಿತದ ಕಡೆಗೆ ಸಾಗುತ್ತಿರುವುದನ್ನು ಕಾಣಬಹುದು.

ಕಲೆಯ ಮೂಲಕ ಮಕ್ಕಳು ಗಳಿಸಬೇಕಾದ ಸಾಮಾಜಿಕ ಜೀವನದ ಪ್ರಧಾನ ಅಂಶಗಳಾದ ಸಾಂಸ್ಕೃತಿಕ ತಿಳುವಳಿಕೆ ಹಾಗೂ ಸೃಜನಾತ್ಮಕತೆಯ ವಿಕಾಸವನ್ನೂ ಪರಿಗಣಿಸದಿರುವುದು, ಈ ಮೌಲ್ಯಗಳ ಕುಸಿತಕ್ಕೆ ಕಾರಣವಾಗಬಹುದು. ಈ ಸಂದರ್ಭದಲ್ಲಿ ಇತರ ವಿಷಯಗಳಂತೆ ಕಲಾಕಲಿಕೆಯನ್ನು ವೈಜ್ಞಾನಿಕ ವಲಯಗಳ ಒಂದು ವಿಷಯವಾಗಿ ಪರಿಗಣಿಸಿಕೊಂಡು ಸಮತೋಲನ ಶಿಕ್ಷಣ ರೀತಿಯನ್ನು ಕಾರ್ಯರೂಪಕ್ಕೆ ತರಬೇಕಾಗಿದೆ.

2009 ರ ಶಿಕ್ಷಣ ಹಕ್ಕು ನಿಯಮವು ಭಾರತೀಯ ಶಿಕ್ಷಣ ಚರಿತ್ರೆಯ ಇನ್ನೊಂದು ಮೈಲಿಗಲ್ಲಾಗಿ ಪರಿಗಣಿತವಾಗಿದೆ. ಮಕ್ಕಳ ಸಮಗ್ರವಾದ ಅಭಿವೃದ್ಧಿಯು ಅವನ ಮೌಲಿಕ ಹಕ್ಕುಗಳಾಗಿ ಬದಲಾಯಿತು ಎಂಬುದು ಎತ್ತಿ ಹೇಳಬೇಕಾದ ವಿಷಯ. ಈ ವಿಶೇಷವಾದ ಹಿನ್ನೆಲೆಯಲ್ಲಿ ಕಲಾಕಲಿಕೆಯನ್ನೊಳಗೊಂಡ ವಿಷಯಗಳನ್ನು ಧೃಡಪಡಿಸಲು ಅಗತ್ಯವಾದ ಕ್ರಮಗಳನ್ನು ದೃಢಪಡಿಸಬೇಕಾದುದು ಈ ಕಾಲಘಟ್ಟದ ಅಗತ್ಯವಾಗಿದೆ.

# 3. ಕಲಾಕಲಿಕೆ – ಕಲಿಕಾ ಸಮೀಪನ

ಕಲಾಕಲಿಕೆಯು ಪಠ್ಯಕ್ರಮದ ಅಗತ್ಯವಾದ ಭಾಗವಾಗಿ ಅಂಗೀಕೃತವಾದ ಹಿನ್ನೆಲೆಯಲ್ಲಿ ಕಲಿಕಾಸಮೀಪನಗಳು ಯಾವುದಾಗಿರಬೇಕು ಎಂಬ ಸ್ಪಷ್ಟವಾದ ತಿಳುವಳಿಕೆ ಇರಬೇಕಾಗಿದೆ. ಹಿಂದೆ ವಿಜ್ಞಾನಕ್ಕೆ ಹೊರತಾದ ವಲಯ ಎಂಬ ನಿಟ್ಟಿನಲ್ಲಿ ಕಲೆಯ ಕಲಿಕೆಯನ್ನು ಕಾಣಲಾಗಿತ್ತು. ಆಧುನಿಕ ಮನಃ ಶಾಸ್ತ್ರದಂತೆ ವ್ಯಕ್ತಿಯ ಸಮಗ್ರ ವಿಕಾಸವೆನ್ನುವುದು ಬುದ್ಧಿಯ ವಿಭಿನ್ನ ಮಟ್ಟಗಳ ವಿಕಾಸವೇ ಆಗಿದೆ ಎಂದು ತಿಳಿದು ಬಂದಿದೆ. ವೈಜ್ಞಾನಿಕ ವಿಕಾಸದ ವಿವಿಧ ಹಂತಗಳನ್ನು ಗಾಢವಾಗಿ ಪ್ರಭಾವಿಸುವ ಪಾರಂಪರಿಕ ಹಿನ್ನೆಲೆಯುಳ್ಳ ಕಲೆಗಳು ವ್ಯಕ್ತಿತ್ವ ರೂಪೀಕರಣದಲ್ಲಿ ನಿರ್ಣಾಯಕವಾದ ಪಾತ್ರವನ್ನು ವಹಿಸುತ್ತದೆ. ಪ್ರಿ–ಪ್ರೈಮರಿಯಿಂದ ಹೈಯರ್ ಸೆಕೆಂಡರಿ ವರೆಗಿರುವ ಶಾಲಾ ಶಿಕ್ಷಣ ಹಂತಗಳಲ್ಲಿ ಒಂದು ಪ್ರಮುಖ ಪಠ್ಯವಿಷಯವೆಂಬ ನಿಟ್ಟಿನಲ್ಲಿ ಕಲಾಕಲಿಕೆಯನ್ನು ಸಮೀಪಿಸಬೇಕಾಗಿದೆ.

ನಮ್ಮ ಶಿಕ್ಷಣದಲ್ಲಿ ಕಲೆಗಳ ಕಲಿಕೆಯನ್ನು ಪ್ರೋತ್ಸಾಹಿಸುವುದಿಲ್ಲ ಮಾತ್ರವಲ್ಲ ಮಕ್ಕಳನ್ನು ಕಲೆಯಕಲಿಕೆಯಿಂದ ನಿರುತ್ಸಾಹಗೊಳಿಸುತ್ತಾರೆ ಎಂಬ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ (2005) ನಿರೀಕ್ಷಣೆಯು ಹೆಚ್ಚು ಪ್ರಸಕ್ತವಾಗಿದೆ. ಕಲೋತ್ಸವ ಸ್ಪರ್ಧೆಗಳ ಸಿದ್ಧತೆ ಹಾಗೂ ಆ ಮೂಲಕ ಶಾಲೆಗಳಿಗೆ ಲಭಿಸುವ ಬಹುಮಾನಗಳು ಎಂಬ ಗುರಿಗೆ ಕಲೆಯ ಕಲಿಕೆ ಸೀಮಿತವಾಗಿದೆ. ಶಾಲೆಗೆ ಪ್ರವೇಶ ಪಡೆಯುವ ಎಲ್ಲಾ ಮಕ್ಕಳನ್ನು ದೃಷ್ಟಿಯಲ್ಲಿರಿಸಿಕೊಂಡು ಇರುವ ಕಲಿಕಾ ಸಮೀಪನವನ್ನು ಸ್ವೀಕರಿಸಬೇಕಾಗಿದೆ. ಅದೇ ಸಂದರ್ಭದಲ್ಲಿ ಪ್ರತಿಯೊಬ್ಬ ಮಗುವಿನಲ್ಲಿರುವ ವಿಶೇಷವಾದ ಕಲಾಭಿರುಚಿಗಳನ್ನು ಪರಿಗಣಿಸಬೇಕಾಗಿದೆ.

ಶಿಶುಕೇಂದ್ರಿತ ಪಠ್ಯಕ್ರಮವು ಸಾಮಾನ್ಯವಾಗಿ ಅಂಗೀಕೃತವಾಗಿದ್ದರೂ ಕಲಾಕಲಿಕೆಯ ವಿಷಯದಲ್ಲಿ ಅದೇ ಪ್ರಮಾಣದಲ್ಲಿ ಸ್ವೀಕೃತವಾಗಿಲ್ಲ. ಪ್ರತಿಯೊಬ್ಬ ಮಗುವಿನ ಸಾಮರ್ಥ್ಯಗಳನ್ನು ಸಾಧ್ಯತೆಗಳನ್ನು ಗುರುತಿಸಿಕೊಂಡು ಸೃಜನಶೀಲ ವಿಕಾಸಕ್ಕೆ ಅಗತ್ಯವಾದ ರೀತಿಯಲ್ಲಿ ಕಲಿಕಾಪ್ರಕ್ರಿಯೆ ರೂಪುಗೊಳ್ಳುವಾಗ ಮಾತ್ರ ಶಿಶುಕೇಂದ್ರಿತ ಸಮಿಪನವು ಯಶಸ್ವಿಯಾಗುವುದು. ಶಿಶುಕಲೆ ಎನ್ನುವುದು ಹಲವಾರು ವೈಶಿಷ್ಟ್ಯಗಳಿಂದ ಕೂಡಿದ್ದಾಗಿದ್ದು, ಮಗುವಿನ ಭಾವನೆಯಲ್ಲಿ ವಸ್ತುಗಳ ನಿಜವಾದ ಚಿತ್ರಗಳೋ, ಭಾವನೆಗಳೋ, ರೂಪಗಳೋ ಅಥವಾ ಶಬ್ಧಗಳೋ ಅದೇ ರೀತಿಯಲ್ಲಿ ಮೂಡಿಬರಬೇಕೆಂದಿಲ್ಲ ಪ್ರತಿಯೊಂದು ವಿಷಯವನ್ನು ಮಗುವಿನ ದೃಷ್ಟಿಯಿಂದ ನೋಡಲು ಅಧ್ಯಾಪಿಕೆಗೆ ಸಾಧ್ಯವಾಗಬೇಕು. ಬಾಲಭಾವನೆಗಳನ್ನು ಅರ್ಥಮಾಡಿಕೊಳ್ಳುವುದೇ ಶಿಶುಕೇಂದ್ರಿತ ಕಲಾಕಲಿಕೆಯ ತಿರುಳು. ಯಾವಾಗಲೂ ಕಲಾಕಲಿಕೆ ಮಗುವಿನ ಅನುಭವ ಪರಿಸರದಿಂದ ಆರಂಭವಾಗುವುದು. ಪರಿಚಿತವಾದ ಜಾನಪದ ಗೀತೆಗಳೋ ಸಿನೆಮಾಹಾಡುಗಳೋ ಆಚರಣಾತ್ಮಕ ಹಾಡುಗಳೆಲ್ಲಾ ವಿದ್ಯಾರ್ಥಿಯ ಸಂಗೀತ

ಸಂಬಂಧವಾದ ಅನುಭವ ಪರಿಸರವಾಗಿದೆ. ಈ ರೀತಿಯ ಹಾಡು ಹಾಗೂ ಬಾಯಿತಾಳಗಳಿಗೆ ಹೊಂದಿಕೊಂಡಿರುವ ತಾಳಬದ್ಧ ಚಲನೆಗಳೇ ಮಗುವಿನ ನೃತ್ಯಜ್ಞಾನದ ಅಡಿಪಾಯವಾಗಿರಬಹುದು. ಇತರರ ಪ್ರೇರಣೆ ಇಲ್ಲದ ಮಗು ಸ್ವಯಂ ಸುರಿದುಕೊಳ್ಳುವ, ಪ್ರತ್ಯಕ್ಷವಾಗಿ ಅಪೂರ್ಣವೂ, ಅಸಮತೋಲನವೂ ಆಗಿದೆ ಎಂದು ಹಿರಿಯರು ಭಾವಿಸುವ ಚಿತ್ರಗಳೇ ಚಿತ್ರಕಲೆಯಲ್ಲಿ ಅವರ ಅಡಿಪಾಯವಾಗಿದೆ.

ಹೀಗೆ ಸಹಜವಾಗಿ ಬಂದಿರುವ ಕಲಾ ಪ್ರಜ್ಞೆಯನ್ನು ಅಧ್ಯಾಪಕರು ಪ್ರೋತ್ಸಾಹಿಸಿ, ಬೆಳೆಸಿ ಉತ್ತಮ ಪ್ರದರ್ಶನದ ಕಡೆಗೆ ಕೊಂಡೊಯ್ಯಬೇಕು. ಇದರೊದಿಗೆ ಆಯಾ ಪ್ರದೇಶದ ಸಾಂಸ್ಕೃತಿಕ ಇತಿಹಾಸವೆಂಬ ನಿಟ್ಟಿನಲ್ಲಿ ಅಭಿವೃದ್ಧಿ ಪಡಿಸಿದ ಸಂಗೀತ ನೃತ್ಯ ನಾಟಕವೇ ಮೊದಲಾದ ಕಲೆಗಳು, ಕಲೆಯ ಅಂಶವನ್ನು ಅಳವಡಿಸಿಕೊಂಡಿರುವ ಕೈಕೆಲಸಗಳು ಮಗುವಿನ ಅನುಭವ ಪರಿಸರವಾಗಿ ಅಧ್ಯಾಪಕರು ಅರ್ಥಮಾಡಿಕೊಳ್ಳಬೇಕಾಗಿದೆ. ಮಗುವು ಪ್ರಪಂಚವನ್ನು ತನ್ನ ಜ್ಞಾನೇಂದ್ರಿಯಗಳ ಮೂಲಕ ತಿಳಿಯುವುದು. ದರ್ಶನ, ಸ್ಪರ್ಶ, ಶ್ರವಣಗಳ ಮೂಲಕ ಪ್ರಕೃತಿಯ ಸಮಗ್ರತೆಯನ್ನು ಸ್ವಾಂಶೀಕರಿಸುವಾಗ ಕಲಿಕೆಗೆ ಕಲಾಪ್ರದರ್ಶನಗಳಲ್ಲಿ ಹಿರಿಮೆಯುಂಟಾಗುವುದು. ಇಂತಹ ವಿಷಯಗಳು ದೈನಂದಿನ ಜೀವನ ದಲ್ಲಿ ಕಲೆಯ ಕಲಿಕೆಯ ಮೂಲಕ ಗಳಿಸುವ ನಿರೀಕ್ಷಣಾ ಸಾಮರ್ಥ್ಯವು ಹೆಚ್ಚಿಸಲು ಪ್ರಯೋಜನ ಕಾರಿಯಾಗಿದೆ.

ಶಾಲೆಗಳಲ್ಲಿ ಕಲಾಸಂಬಂಧವಾದ ಪ್ರದರ್ಶನಕ್ಕೆ ಹೆಚ್ಚು ಮಹತ್ವ ಲಭಿಸುವುದು. ವಾಸ್ತವವಾಗಿ ದೃಶ್ಯ ಶ್ರಾವ್ಯ ಸೌಂದರ್ಯಗಳನ್ನು ಗುರುತಿಸಿಕೊಂಡು ಆಸ್ವಾದಿಸುವುದೆಂಬುದು ಕಲೆಯ ಕಲಿಕೆಯಲ್ಲಿ ಸ್ವೀಕರಿಸಬೇಕಾದ ಸಮೀಪನವಾಗಿದೆ. ಪ್ರತಿಯೊಬ್ಬ ವ್ಯಕ್ತಿಯು ವ್ಯತ್ಯಸ್ತ ಸಾಮರ್ಥ್ಯವಿರುವವರಾದುದರಿಂದ ಆಸ್ವಾದನೆಯಲ್ಲೂ, ಪ್ರದರ್ಶನದಲ್ಲೂ ಅಂತರವಿರುವುದು ಸಹಜವಾಗಿರುವುದು. ಪ್ರತಿಯೊಬ್ಬ ಮಗುವಿಗೂ ಗರಿಷ್ಟವಾದ ಮಟ್ಟಕ್ಕೆ ವೈಯುಕ್ತಿಕವಾಗಿ ತಲುಪಲು ಅವಕಾಶ ನೀಡಬೇಕು. ನೈಸರ್ಗಿಕವಾದ ಬೆಳವಣಿಗೆಯೆಂಬ ಆಧುನಿಕ ಕಲ್ಪನೆಯೂ ಪುನರಾವರ್ತನ ಕಲಿಕೆಯೂ ತಮ್ಮೊಳಗೆ ಹೊಂದಿಕೊಳ್ಳುವುದಿಲ್ಲ. ಕಲೆಯ ಕಲಿಕೆಯನ್ನು ಸ್ವೀಕರಿಸುವಾಗ ಮಕ್ಕಳ ಸೃಜನಾತ್ಮಕತೆಯನ್ನು ಗರಿಷ್ಟವಾಗಿ ಪರಿಗಣಿಸಿಕೊಂಡು ಸಹಜವಾದ ಬೆಳವಣಿಗೆಯತ್ತ ಕೊಂಡೊಯ್ಯಬೇಕು. ಇದಕ್ಕಾಗಿ ಸಂಯೋಜಿತ ಕಲಿಕಾ ರೀತಿಯನ್ನು ಮೊದಲ ಹಂತದಲ್ಲಿ ಸ್ವೀಕರಿಸಬೇಕು. ಆದರೆ ಆರಂಭದಿಂದಲೇ ಕಲೆಯಕಲಿಕೆಗೆ ನವೀನವಾದ ಅಸ್ಥಿತ್ವವಿದೆ. ವಿಷಯ ಬಂಧಿತವಾದ ಸಂಯೋಜಿತ ಸಾಧ್ಯತೆಗಳನ್ನು ಉಪಯೋಗಪಡಿಸುವುದರೊಂದಿಗೆ ಕಲೆಯ ವಿವಿಧ ಹಂತಗಳನ್ನು ತಮ್ಮೊಳಗೆ ಅಳವಡಿಸಿಕೊಂಡಿರ ಬೇಕಾದ ಅಗತ್ಯವಿದೆ.

ಕಲೆಯ ಕಲಿಕೆಯಲ್ಲಿ ಸಂಗೀತ, ನೃತ್ಯ, ಚಿತ್ರರಚನೆ, ನಾಟಕ ಎಂಬೀ ವಿಭಾಗಗಳನ್ನು ಅಳವಡಿ ಸಲಾಗಿದೆ.

ಪ್ರಿ–ಪ್ರೈಮರಿ ಮಕ್ಕಳು (3–5 ವರ್ಷ) ಅತೀವ ಜಿಜ್ಞಾಸೆಯುಳ್ಳವರು, ಅತ್ಯಧಿಕ ಚೈತನ್ಯ ಇರುವವರು ಆಗಿದ್ದಾರೆ. ಮಕ್ಕಳ ಈ ಸ್ವಭಾವವನ್ನು ವಿವಿಧ ಸೃಜನಾತ್ಮಕ ಚಟುವಟಿಕೆಗಳ ಮೂಲಕ ಕಲಿಕೆಗೆ ಪ್ರಯೋಜನ ಪಡಿಸಬೇಕು. ಒಂದು ಮತ್ತು ಎರಡನೇ ತರಗತಿಗಳಲ್ಲಿ ಪೂರ್ಣವಾಗಿ ಸಂಯೋಜಿತ ಸಮೀಪನವನ್ನು ಸ್ವೀಕರಿಸಬೇಕಾಗಿದೆ. ಮುಂದಿನ ಹಂತಗಳಲ್ಲೂ ವಿವಿಧ ರೂಪಗಳ ಮೂಲಕ ಮಗುವಿನ ಆಂತರಿಕ ಪ್ರತಿಭೆಗಳನ್ನು ಪ್ರದರ್ಶಿಸಲು ಅವಕಾಶ ನೀಡಬೇಕು. ವಿವಿಧ ಕಲಾವಲಯಗಳಲ್ಲಿ ಪ್ರಾವೀಣ್ಯವನ್ನು, ಅಧ್ಯಾಪಕ ತರಬೇತಿ ಪಡೆದಿರುವ ಜನರ ಸೇವೆಯನ್ನು ಎಲ್ಲಾ ಹಂತಗಳಲ್ಲೂ ದೃಡಪಡಿಸಬೇಕು.

ಹೈಯರ್ ಸೆಕೆಂಡರಿ ಹಂತದವರೆಗೆ ಪ್ರದರ್ಶನಾತ್ಮಕ ಕಲೆಗಳು ಹಾಗೂ ದೃಶ್ಯಕಲೆಗಳನ್ನು ಕಲಿಕಾ ಮಾಧ್ಯಮವೆಂಬ ನಿಟ್ಟಿನಲ್ಲಿ ಉಪಯೋಗಪಡಿಸಬೇಕು. ಆದರೆ ಇದನ್ನು ಅಸಹಜ ರೀತಿಯಲ್ಲಿ ಆಗದಂತೆ ನೋಡಿಕೊಳ್ಳಬೇಕು. ದೇಶಿಯ ಪಠ್ಯಕ್ರಮ ಚೌಕಟ್ಟು–2005 ಕಲೆಯ ಕಲಿಕೆ ಪೊಸಿಷನ್ ಪೇಪರ್ ನೀಡುವ ಸೂಚನೆ ಇಲ್ಲಿ ಪ್ರಸಕ್ತವಾಗಿದೆ.

ವಿವಿಧ ಸ್ಥಳಗಳ ತರಗತಿಗಳಲ್ಲಿ ನಡೆಸಿರುವ ಕಲಿಕೆಗಳು ಸೂಚಿಸುವುದೇನೆಂದರೆ , ಕಲಿಕಾರ್ಥಿಗಳಿಗೆ ಸ್ವತಂತ್ರ ಅವಕಾಶಗಳನ್ನು ನೀಡುವಾಗ ಕಲಾ ಸಂಬಂಧವಾದ ಹೆಚ್ಚು ಉತ್ತಮಪಡಿಸಿದ ಪ್ರದರ್ಶನಗಳು ಹೊರಹೊಮ್ಮಬಹುದು. ಮಗುವಿನ ಮನೋಧರ್ಮದ ಪ್ರದರ್ಶನಕ್ಕೆ ತಟಸ್ಥ ವಾಗದಂತೆ, ಸೃಜನಾತ್ಮಕವಾಗಿ ಪ್ರೋತ್ಸಾಹಿಸುವ ಸಮೀಪನವನ್ನು ಆರಂಭದಿಂದಲೇ ಸ್ವೀಕರಿಸುವುದು ಪ್ರಧಾನವಾಗಿದೆ ಎಂದು ಇದು ಮಂಡಿಸಿದೆ.

ಕಲಿಕೆಯಲ್ಲಿ ಅಧ್ಯಾಪಕನೊಂದಿಗೆ ರಕ್ಷಕರ ಪಾತ್ರವು ಅಂಗೀಕರಿಸಲ್ಪಡುತ್ತಿದೆಯಲ್ಲವೇ? ಕಲೆಯಕಲಿಕೆಯ ಮಹತ್ವವನ್ನು ಸಮಾಜವು ಇನ್ನೂ ಗುರುತಿಸಿಕೊಂಡಿಲ್ಲ. ಆದ್ದರಿಂದ ರಕ್ಷಕರ ಸಾನಿಧ್ಯ ಸಹಕಾರವು, ಭಾಗವಹಿಸುವಿಕೆಯು ದೃಢಪಡಿಸಲಿರುವ ಮಾರ್ಗೋಪಾಯಗಳನ್ನು ತಿಳಿಯಬೇಕಾಗಿದೆ. ಪ್ರಾದೇಶಿಕ ತಜ್ಞರನ್ನು (Local Resources) ಕಂಡುಹಿಡಿದು ಅವರ ಸಹಕಾರದಿಂದ ಕಲೆಯಕಲಿಕೆಯನ್ನು ಹೆಚ್ಚು ಕಾರ್ಯಕ್ಷಮಗೊಳಿಸಲಿರುವ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಬೇಕು.

## ಕಲಾಶಿಕ್ಷಣ–ವಿವಿಧ ನಿರೀಕ್ಷಣೆಗಳು

ವೈಯುಕ್ತಿಕವಾದ ಅನುಭವವೇ ಕಲೆ. ಕಲಿಕಾರ್ಥಿಗೆ ಕಲಾಸಂಬಂಧವಾದ ವ್ಯಕ್ತಿತ್ವ ವಿಕಾಸಕ್ಕೆ ಅಗತ್ಯವಾದ ಪ್ರಚೋದನೆ, ಚಟುವಟಿಕೆಗಳು, ಮಾರ್ಗನಿರ್ದೇಶನಗಳು, ಸಹಾಯವೂ ಕಲೆಯಕಲಿಕಾ ತರಗತಿಗಳಿಂದ ದೊರಕಬೇಕು. ಅದಕ್ಕಾಗಿ ಬಣ್ಣ, ಆಕೃತಿ, ರೂಪ, ಚಲನೆ, ತಾಳ, ಶಬ್ದ ಎಂಬಿವುಗಳ ಮೂಲಕ ಸೌಂದರ್ಯವನ್ನು ಕಂಡುಕೊಂಡು ಅವುಗಳೊಂದಿಗೆ ಪ್ರತಿಕ್ರಿಯಿಸುವ ಆಸ್ವಾದನಾ ಸಾಮರ್ಥವನ್ನು ಸೃಷ್ಟಿಸಿ ಬೆಳೆಸುವ, ವೈವಿಧ್ಯವಾದ ಕಲಿಕಾನುಭವಗಳನ್ನು ಕಲಾಕಲಿಕೆ ತರಗತಿಗಳಲ್ಲಿ ಅಳವಡಿಸಬೇಕಾಗಿದೆ. ಸಂಗೀತ, ನೃತ್ಯ, ಚಿತ್ರರಚನೆ,ಶಿಲ್ಪಕಲೆ, ನಾಟಕ ಸಿನೆಮಾ ಮೊದಲಾದ ವಿವಿಧ ವಲಯಗಳಲ್ಲಾಗಿ ಅವಕಾಶವನ್ನು ನೀಡಬೇಕು.

ಒಂದು ಪಠ್ಯವಿಷಯವೆಂಬ ನಿಟ್ಟಿನಲ್ಲಿ ಕಲೆಯ ಕಲಿಕೆಯ ಗುರಿಗಳು ಹಾಗೂ ಉದ್ದೇಶಗಳನ್ನು ನಾವು ಈ ಕೆಳಗಿನ ರೀತಿಯಲ್ಲಿ ನಿರ್ಣಯಿಸಬಹುದು.

- ಕಲಿಕಾರ್ಥಿಯ ನೈಸರ್ಗಿಕವಾದ ಕಲಾಭಿರುಚಿಗಳನ್ನು ಗುರುತಿಸಿಕೊಂಡು ಬೆಳೆಸಬೇಕು.
- ವಿವಿಧ ಕಲೆಗಳನ್ನು ಆಸ್ವಾದಿಸಲು ಕಲೆಯ ಸೌಂದರ್ಯವನ್ನು ಅಳವಡಿಸಿಕೊಳ್ಳಲು.
- ಕಲೆಗಳ ಆಸ್ವಾದನೆಯ ಮಾಡುತ್ತಾ ಸಾಮಾಜಿಕ ಜೀವನದಲ್ಲಿ ಮಾನವೀಯ ದೃಷ್ಟಿಕೋನವನ್ನು ರೂಪೀಕರಿಸಲು.
- ಸಾಂಸ್ಕೃತಿಕ ವೈವಿಧ್ಯತೆಯನ್ನು ಗುರುತಿಸಿಕೊಂಡು ಸಾಂಸ್ಕೃತಿಕ ತಿಳುವಳಿಕೆಯನ್ನು ಬೆಳೆಸಲು.
- ಕಲೆಯ ಚೈತನ್ಯವನ್ನೊಳಗೊಂಡು ನವೀನವಾದ ಚಿಂತನೆಗಳಲ್ಲಿ ತೊಡಗಿಸಿಕೊಂಡು ಸಮತೋಲನವಾದ ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸಲು.

- ಕಲೆಯನ್ನು ಉಪಯೋಗಿಸಿಕೊಂಡು ಇತರ ವಿಷಯಗಳ ಕಲಿಕೆಯನ್ನು ಫಲಪ್ರದಗೊಳಿಸಲು (Art applied learning).
- ಬಹುಮುಖ ಪ್ರತಿಭೆಗಳ ವಿಕಾಸದ ಸಾಧ್ಯತೆಗಳನ್ನು ಪ್ರಯೋಜನಪಡಿಸಲು.
- ವಿಭಿನ್ನ ಮಟ್ಟದ ವಿದ್ಯಾರ್ಥಿಗಳು ಏಕರೀತಿಯಲ್ಲಿ ಕಲಿಕಾ ಚಟುವಟಿಕೆಗಳಲ್ಲಿ ಆಸಕ್ತಿ ಮೂಡಿಸುವಂತೆ ಮಾಡಲು
- ಅಮೂರ್ತವಾದ ಅನುಭವಗಳನ್ನು ಮೂರ್ತವಾದ ಪ್ರತಿಬಿಂಬಗಳಾಗಿ ಪರಿವರ್ತಿಸುವುದರ ಮೂಲಕ ಮಾನಸಿಕ ಉಲ್ಲಾಸ ಪಡೆಯಲು.
- ವಿವಿಧ ಕಲಿಕಾ ಚಟುವಟಿಕೆಗಳಲ್ಲಿ ಸಮಾನತೆಯ ಸಾಧ್ಯತೆಗಳನ್ನು ಕಂಡುಹಿಡಿದು ಸದುಪಯೋಗಪಡಿಸಿಕೊಳ್ಳಲು.
- ಮಕ್ಕಳ ಆಸ್ವಾದನಾ ಮಟ್ಟವನ್ನು ಹೆಚ್ಚಿಸಲು.
- ವಿವಿಧ ಕಲೆಗಳಲ್ಲಿ ಪ್ರತ್ಯೇಕ ಅಭಿರುಚಿಯಿರುವ ಮಕ್ಕಳ ಸೃಜನಾತ್ಮಕತೆಯನ್ನು ಬೆಳೆಸಲು.
- ವಿವಿಧ ಕಲೆಗಳಲ್ಲಿ ಆಸಕ್ತಿ ಮೂಡಿಸಲು.
- ಕಲಾಗಾರರನ್ನು ತಿಳಿಯಲು ಮತ್ತು ಅವರ ಕೊಡುಗೆಗಳನ್ನು ಗುರುತಿಸಿ ಗೌರವಿಸಲು.
- ತಾನು ಗಳಿಸಿದ ಕಲೆಗಳ ಬಗ್ಗೆ ಇರುವ ಜ್ಞಾನವನ್ನು ಹೊಸ ಸಂದರ್ಭದಲ್ಲಿ ಪ್ರಯೋಗಿಸಲು.
- ಸಾಮಾಜಿಕ ಪರಿಷ್ಕರಣೆಯನ್ನು ಗುರಿಯಾಗಿಸಿಕೊಂಡು ವಿವಿಧ ಕಲೆಗಳನ್ನು ಸದುಪಯೋಗ ಪಡಿಸಲು
- ವಿವಿಧ ಕಲೆಗಳ ಸಾಂಕೇತಿಕ ಅಂಶಗಳನ್ನು ಗುರುತಿಸಲು ಮತ್ತು ಉಪಯೋಗಪಡಿಸಲು.

# 4. ಕಲೆಯ ಕಲಿಕೆ – ವಿವಿಧ ವಲಯಗಳು

**ಕ**ಲೆಗಳು ಮಾನವನ ಬೆಳವಣಿಗೆಯ ಜೊತೆಗೆ ಅಭಿವೃದ್ಧಿ ಹೊಂದಿದವುಗಳಾಗಿವೆ. ಸುತ್ತಮುತ್ತಲಿರುವ ಪ್ರಕೃತಿಯಿಂದ ಸಿಗುವ ಇಂದ್ರಿಯಾನುಭವಗಳು, ಮನಸ್ಸಿನಲ್ಲಿ ಉಂಟುಮಾಡಿದ ಅನುಕರಣೆಗಳು ಕಲೆಗಳಾಗಿ ಆವಿಷ್ಕರಿಸಲ್ಪಡುತ್ತದೆ. ಆದ್ದರಿಂದ ಕಲೆಯು ಜೀವನದ ಒಂದು ಅವಿಭಾಜ್ಯ ಅಂಗವಾಗಿದೆ. ಪ್ರಕೃತಿಯ ಸಹಜ ಸ್ಥಿತಿಗಳು ,ವ್ಯತ್ಯಸ್ತ ಭಾವನೆಗಳು, ಮನುಷ್ಯನಲ್ಲಿ ಉಂಟುಮಾಡಿದ ಭಾವನಾತ್ಮಕವಾದ ಸಂಬಂಧಗಳು ಕಲೆಗಳಲ್ಲೂ ಪ್ರತಿಫಲಿಸುವುದನ್ನು ಕಾಣಬಹುದು. ಇಂದ್ರಿಯಾನುಭವಗಳೊಂದಿಗೆ, ದೃಶ್ಯಗಳೊಂದಿಗೆ, ಶಬ್ಧಗಳೊಂದಿಗೆ, ಚಲನೆಯೊಂದಿಗೆ, ಹಾಗೂ ವರ್ತನೆಯೊಂದಿಗೆ ಇರುವ ಉದಾತ್ತೀಕರಣದ ಪ್ರತೀಕಗಳಾಗಿರುವುದೇ ಯಥಾಕ್ರಮದಲ್ಲಿರುವ ಚಿತ್ರಕಲೆಯಾಗಿಯೂ, ಸಂಗೀತವಾಗಿಯೂ, ನೃತ್ಯವಾಗಿಯೂ, ನಾಟಕಮಾಗಿಯೂ ಪರಿಣಮಿಸಿದೆ. ಆದ್ದರಿಂದ ಈ ಕಲೆಗಳಲ್ಲಿ ತೊಡಗಿಸಿಕೊಳ್ಳಲು ಆಸ್ವಾದಿಸಲಿರುವ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಬೇಕಾದುದು ಜೀವನದ ವಿಜಯಕ್ಕೆ ಅನಿವಾರ್ಯವಾಗಿದೆ.

ಈ ನಾಲ್ಕು ವಲಯಗಳಲ್ಲಾಗಿ ಕಲಾಶಿಕ್ಷಣವು ಪರಿವರ್ತಿಸುವುದು. ಇವುಗಳ ಕಲಿಕೆಯೊಂದಿಗೆ ನಿರ್ಧಿಷ್ಟವಾದ ಪ್ರತಿಭೆ ಹಾಗೂ ಸಾಮರ್ಥ್ಯಗಳ ವಿಕಾಸವನ್ನು ಗುರಿಯಾಗಿರಿಸಿಕೊಳ್ಳುವುದು. ವಿವಿಧ ತರಗತಿಗಳಲ್ಲಿ ಪ್ರತಿಯೊಂದು ವಲಯಗಳ ವ್ಯತ್ಯಸ್ತ ಮಟ್ಟದಲ್ಲಿರುವ ಕಲಿಕಾಚಟುವಟಿಕೆಗಳು ನಡೆಯುವ ರೀತಿಯಲ್ಲಿ ಆಯಾವಲಯಗಳ ಕಲಿಕಾ ಸಾಧನೆಗಳು ನಿಶ್ಚಯಿಸಲ್ಪಟ್ಟಿದೆ. ವಲಯಗಳ ಸ್ವಭಾವಕ್ಕೂ ಮಕ್ಕಳ ಮಟ್ಟಕ್ಕನುಸರಿಸಿ ಪ್ರತಿಯೊಂದು ತರಗತಿಗೂ ಪ್ರತ್ಯೇಕವಾಗಿ ತಯಾರಿಸಲಾಗಿದೆ. ಪ್ರತಿವಲಯಕ್ಕೂ ಸಂಬಂಧಿಸಿದ ಕೆಲವು ವಿವರಗಳನ್ನು ಇಲ್ಲಿ ಸೇರಿಸಲಾಗಿದೆ.

## 4.1 ಚಿತ್ರಕಲೆ

ಚಿತ್ರಕಲೆಯಲ್ಲಿ ಗೆರೆಗಳ ಹಾಗೂ ಬಣ್ಣಗಳ ಸಮರ್ಪಕವಾದ ಕೂಡುವಿಕೆಯು ಪ್ರತಿಬಿಂಬಿಸುವುದು. ದ್ವಿಮಾನ ಮೇಲ್ಮೈಯಲ್ಲಿ ಬೆಳಕನ್ನೂ ನೆರಳನ್ನು ಯೋಗ್ಯವಾಗಿ ಸಮ್ಮಿಳಿಸಿ ಸೃಷ್ಟಿಸಲ್ಪಡುವ ರೂಪಗಳು ಸೃಷ್ಟಿಸುವ ಭಾವನೆಗಳನ್ನು ಆಸ್ವಾದಕನಿಗೆ ತಲುಪಿಸುವುದಾಗಿದೆ. ರೇಖೆಗಳು ಹಾಗೂ ಬಣ್ಣಗಳು ಚಿತ್ರಗಾರನ ಸಂಪತ್ತುಗಳಾಗಿವೆ. ಸುತ್ತಮುತ್ತಲಿನ ನಿರೀಕ್ಷಣೆಯ ಮೂಲಕ ಮನಸ್ಸಿನಲ್ಲಿ ಅಚ್ಚೊತ್ತುವ ದೃಶ್ಯಗಳನ್ನು ತನ್ನದೇ ಆದ ದೃಷ್ಟಿಕೋನದಲ್ಲಿ ರಚಿಸುತ್ತಾರೆ. ಅದಕ್ಕಾಗಿ ಯೋಗ್ಯವೆಂದು ತೋರುವ ಮಾಧ್ಯಮಗಳನ್ನು ಚಿತ್ರಗಾರನು ಸ್ವೀಕರಿಸುತ್ತಾನೆ.

ಚಿತ್ರರಚನೆಯ ವ್ಯತ್ಯಸ್ತ ಮಟ್ಟಗಳನ್ನು ಪ್ರತಿಯೊಂದು ಹಂತಗಳಾಗಿ ಪರಿಚಯಿಸಿಕೊಂಡು , ತರಬೇತಿ ನೀಡುವುದು ಚಿತ್ರಕಲೆಕಲಿಕೆಯ ಪ್ರಧಾನ ಉದ್ದೇಶವಾಗಿದೆ. ಮನುಷ್ಯನು ಗುಹೆಗಳಲ್ಲಿ ಕಳೆದಿದ್ದಂತಹ

ಕಾಲದಿಂದಲೇ ಬೆಳೆದು ಅಭಿವೃದ್ಧಿ ಹೊಂದಿದ ಚರಿತ್ರೆ ಚಿತ್ರಕಲೆಗಿದೆ. ಚರಿತ್ರೆ ಹಾಗೂ ಜೀವನ ಸಂಸ್ಕೃತಿಯ ಅಭೇದ್ಯವಾದ ಸಂಬಂಧವನ್ನು ಒಳಗೊಡಿರುವುದು ಚಿತ್ರಕಲಾ ಕಲಿಕೆಯ ಭಾಗವಾಗಿದೆ.

**ಕಲಿಕೆಯ ಉದ್ದೇಶಗಳು**

- ಚಿತ್ರರಚನೆಯ ವಿವಿಧ ಹಂತಗಳನ್ನು ಅರ್ಥಮಾಡಿಕೊಳ್ಳಲು, ಚಿತ್ರ ರಚನೆಯಲ್ಲಿ ತೊಡಗಿಸಿಕೊಳ್ಳಲೂ
- ವಿವಿಧ ರೀತಿಯ ಚಿತ್ರರಚನಾ ರೀತಿಗಳನ್ನು ತಿಳಿದುಕೊಳ್ಳಲು, ತಿಳುವಳಿಕೆಗಳನ್ನು ಗಳಿಸುವುದು.
- ಚಿತ್ರರಚನೆಯ ಮೂಲಕ ವೈಜ್ಞಾನಿಕ ನವೋಲ್ಲಾಸ ಪಡೆಯುವುದು (Infotainment) ಚಿತ್ರರಚನೆಯ ಸಾಧ್ಯತೆಗಳನ್ನು ಪ್ರಯೋಜನಪಡಿಸಿ ಜ್ಞಾನದ ಗಳಿಕೆ (Edutainment) ಯ ಮೂಲಕ ಸಂತೋಷವಾಗಿರುವುದು.
- ಚಿತ್ರಕಾರರನ್ನು ತಿಳಿಯಲು, ಚಾರಿತ್ರಿಕವಾದ ಅಂಶಗಳನ್ನು, ತಿಳುವಳಿಕೆಗಳನ್ನು ರೂಪೀಕರಿಸುವುದು.
- ಇತರ ವಿಷಯಗಳ ಕಲಿಕೆಯಲ್ಲಿ ಚಿತ್ರರಚನೆಯ ಸಾಧ್ಯತೆಗಳನ್ನು ಪ್ರಯೋಗಿಸುವ ತಿಳುವಳಿಕೆಯನ್ನು ಗಳಿಸುವುದು.
- ಚಿತ್ರಗಳನ್ನು ನಿರೀಕ್ಷಣೆ ಮಾಡಲು ಮತ್ತು ಆಸ್ವಾದನಾ ಮನೋಭಾವ ಬೆಳೆಸುವುದು.
- ವಿವಿಧ ಶಿಲ್ಪಗಳನ್ನು ನಿರೀಕ್ಷಿಸಲು ನಿರ್ಮಾಣದಲ್ಲಿ ತೊಡಗಿಸಿಕೊಳ್ಳುವುದು.
- ಶಿಲ್ಪಕಲಾಕೇಂದ್ರಗಳನ್ನು ಸಂದರ್ಶಿಸಲು ಅವುಗಳ ಸಾಂಸ್ಕೃತಿಕ ಪ್ರಧಾನ್ಯವನ್ನು ಅಳವಡಿಸಿ ಕೊಳ್ಳುವುದು.
- ಶಿಲ್ಪಕಲೆಗಳ ಚರಿತ್ರೆಗೆ ಸಂಬಂಧಿಸಿದ ಮಾಹಿತಿಗಳನ್ನು ಸಂಗ್ರಹಿಸಲು, ಹೊಸ ಸಂಶೋಧನೆಗಳೆಡೆಗೆ ಕೊಂಡೊಯ್ಯುವುದು.

**ವಿವಿಧ ವಿಭಾಗಗಳು**

- ಪೆನ್ಸಿಲ್, ಕ್ರಯೋನ್, ಬಣ್ಣದ ಪೆನ್ಸಿಲುಗಳು, ಆಕ್ರಿಲಿಕ್ ಎಂಬಿವುಗಳನ್ನು ಉಪಯೋಗಿಸಿ ರಚಿಸುವ ಚಿತ್ರಗಳು, ಜಲವರ್ಣಚಿತ್ರಗಳು, ತೈಲವರ್ಣ ಚಿತ್ರಗಳು ಎಂಬಿವುಗಳ ಮೂಲಕ ರಚಿಸುವ ಪೈಟಿಂಗ್‌ಗಳು ಹೀಗೆ ಹಲವು ರೀತಿಯಲ್ಲಿ ರಚನೆಗಳನ್ನು ನಿರ್ವಹಿಸಲಾಗುತ್ತದೆ.
- ರೇಖಾಚಿತ್ರಗಳು, ಪೈಟಿಂಗ್‌ಗಳು, ಭಿತ್ತಿಚಿತ್ರಗಳು, ಅಲಂಕಾರಿಕ ಚಿತ್ರಗಳು, ಕಾರ್ಟೂನ್‌ಗಳು, ಕ್ಯಾರಿಕೇಚರ್‌ಗಳು ಹಾಗೆ ಹಲವು ವಿಭಾಗದಲ್ಲಿರುವ ಚಿತ್ರಗಳಿವೆ.
- ವಿವಿಧ ಮೇಲ್ಮೈಗಳಲ್ಲಿ ವಿವಿದ ಉಪಕರಣಗಳನ್ನು ಉಪಯೋಗಿಸಿ ಚಿತ್ರಗಳನ್ನು ರಚಿಸಲಾಗುತ್ತದೆ.

## 4.2 ಸಂಗೀತ

ಪ್ರಕೃತಿಯ ಇಂಪಾದ ಶಬ್ಧಗಳೇ ನಾದಗಳು. ನಾದಗಳು ಕ್ರಮಗತವಾಗಿ ಸೇರಿಸಿದರೆ ಸಂಗೀತವಾಗುವುದು. ಆದಿಕಾಲದಿಂದಲೇ ಸಂಗೀತವಿದೆ. ಮನುಷ್ಯನು ಪರಿಷ್ಕರಣೆ ಹೊಂದುವುದಕ್ಕೆ ಅನುಸರಿಸಿ ಸಂಗೀತವು ಪರಿಷ್ಕರಣೆಗೊಳ್ಳತೊಡಗಿತು. ಶಬ್ದ, ಮಾತು,ಚಲನೆ ಎಂಬಿವುಗಳ ಒಂದುಗೂಡುವಿಕೆಯೇ ಸಂಗೀತ. ಅದು ಒಂದೇ ಸಮಯದಲ್ಲಿ ಕಲೆಯೂ ಶಾಸ್ತ್ರವೂ ಆಗಿದೆ. ಮಾನವೀಯ ಭಾವನೆಗಳನ್ನು ಭಾಷಾತೀತವಾಗಿ ಪ್ರಕಟಿಸಲು ಸಾಧ್ಯವಾಗುವುದೇ ಸಂಗೀತದ ವಿಶೇಷತೆಯಾಗಿದೆ.

ಮಕ್ಕಳ ಮನಸ್ಸನ್ನು ಸಂಸ್ಕರಿಸಿ ಸತ್ ಸ್ವಭಾವವನ್ನು ದೃಡಗೊಳಿಸುವುದರಲ್ಲಿ ಸಂಗೀತಕ್ಕೆ ಹೆಚ್ಚಿನ ಪ್ರಾಧಾನ್ಯವಿದೆ. ಸಂಗೀತದ ಕಲೆಯಿಂದ ಮನಸ್ಸನ್ನು ಶುದ್ಧೀಕರಿಸಿ, ಬುದ್ಧಿಯನ್ನು ಉದ್ದೀಪನಗೊಳಿಸುವುದರ

ಮೂಲಕ ಭಾವನೆಯನ್ನು ಉತ್ತೇಜಿಸಲು ಸೃಜನಾತ್ಮಕತೆಯನ್ನು ಗಳಿಸಲು ಸಾಧ್ಯವಾಗುವುದು. ಸಂಗೀತದ ಕಲಿಕೆಯಿಂದ ಬೌದ್ಧಿಕ ವಿಕಾಸವೂ ಮಾನಸಿಕ ಉಲ್ಲಾಸವೂ ಲಭಿಸಬಹುದು. ವಿವಿಧ ಹಂತಗಳ ಮೂಲಕ ಮಗುವಿನಲ್ಲಿ ಸಂಗೀತಾಭ್ಯಾಸದ ಪ್ರಗತಿಯು ಸಾಧ್ಯವಾಗುವುದು.

ನಿಖರತೆ ಹಾಗೂ ಸೂಕ್ಷ್ಮತೆಯಿಂದ ಕೂಡಿದ ನಿರೀಕ್ಷಣೆ, ಆಶಯ ವಿನಿಮಯ ಸಂಶೋಧನೆ, ಆಸ್ವಾದನೆ, ಪ್ರದರ್ಶನ ಎಂಬಿವುಗಳು ಆ ಹಂತಗಳಾಗಿವೆ. ತಾಳದ ಜ್ಞಾನ, ಶಬ್ದಸ್ವಾಧೀನವೂ ಕ್ರಮೀಕರಣವು ಸಂಗೀತಕಲಿಕೆಗೆ ಅಗತ್ಯವಾಗಿದೆ. ಸಂಗೀತದ ಕಲಿಕಾ ಪ್ರಕ್ರಿಯೆಯಲ್ಲಿ ಮಗುವಿನ ವಿಷಯಾಸಕ್ತಿಯನ್ನು ಉತ್ತೇಜಿಸಿ ಜ್ಞಾನವು ಲಭಿಸುವಂತೆ ಮಾಡಬೇಕು. ಮಕ್ಕಳ ಪ್ರತಿಭೆಗಳನ್ನು ಗುರುತಿಸಲು, ಸ್ವೀಕರಿಸಲು, ಆಸ್ವಾದಿಸಲು, ಪ್ರೋತ್ಸಾಹಿಸಲು ಹಿರಿಯರು ತಯಾರಾಗುವಾಗಲೇ ಅದು ಪೂರ್ಣವಾಗಿ ಅಭಿವೃದ್ಧಿಹೊಂದುವುದು. ಇನ್ನಿತರ ವಿಷಯಗಳಂತೆ ಸಂಗೀತವನ್ನು ತಿಳಿಯಲು ಅನುಭವಿಸಲು ಪ್ರಕಟಿಸಲು ಅವಕಾಶವನ್ನು ನೀಡಬೇಕು.

ಇತರ ವಿಷಯಗಳ ಕಲಿಕಾಚಟುವಟಿಕೆಗಳೊಂದಿಗೆ ಸಂಗೀತದ ಕಲಿಕಾ ಸಾಧ್ಯತೆಗಳನ್ನು ಉಪಯೋಗಪಡಿಸಲು ಶ್ರದ್ಧೆವಹಿಸಬೇಕು. ಮಕ್ಕಳ ಸಂಗೀತಪರವಾದ ಸಾಮರ್ಥ್ಯಗಳನ್ನು ಸಾಧನೆಗಳನ್ನು ಸಮಾಜಕ್ಕೆ ತಿಳಿಯಪಡಿಸಲು ಪ್ರಯೋಜನಪಡಿಸಲು ಸಾಧ್ಯವಾಗಬೇಕು.

## 4.3 ನೃತ್ಯ ಕಲೆ

ಶರೀರವು ನೃತ್ಯದ ಮಾಧ್ಯಮವಾಗಿದೆ. ಅಂಗ, ಪ್ರತ್ಯಂಗ, ಉಪಾಂಗ ಎಂಬ ಎಲ್ಲಾ ಅವಯವಗಳು ಶರೀರ ಚಲನೆಯಲ್ಲಿ ಒಳಗೊಂಡಿರುತ್ತದೆ. ಇವುಗಳೆಲ್ಲಾ ಸೇರಿದ ಭಾವಪೂರ್ಣ ಅಭಿನಯವು ನೃತ್ಯವಾಗಿದೆ.

ನೃತ್ಯದ ಮೂಲಕ ಭಾವನಾತ್ಮಕವಾದ ಅನುಭೂತಿಯು ಉಂಟಾಗುತ್ತದೆ. ನೃತ್ಯವು ಆತ್ಮದ ಭಾವಪೂರ್ಣ ಅಭಿನಯವಾದುದರಿಂದ ನರ್ತಕರೂ ಅದನ್ನು ನೋಡುವವರೂ ಒಂದೇ ರೀತಿಯ ಆನಂದವನ್ನು ಅನುಭವಿಸುತ್ತಾರೆ.

ಸೌಂದರ್ಯದ ಆರಾಧನೆಯನ್ನು ಬೆಳೆಸಲು, ವ್ಯಕ್ತಿಜೀವನ ಮತ್ತು ಸಾಮಾಜಿಕ ಜೀವನದಲ್ಲೂ ಶಿಸ್ತನ್ನು ಬೆಳೆಸಲು, ಶಾಸ್ತ್ರೀಯವಾದ ತಾಳ ನೈಪುಣ್ಯತೆ ಉಂಟಾಗಲೂ ನೃತ್ಯ ಕಲಿಕೆ ಸಹಾಯ ಮಾಡುತ್ತದೆ. ಅನುರೂಪೀಕರಣ ಸಾಧ್ಯತೆಯನ್ನು ಕಂಡುಹಿಡಿಯಲು ಮಾನಸಿಕ ಉಲ್ಲಾಸವು ಸಾಮಾಜಿಕ ಹೊಂದಾಣಿಕೆಗೂ ನೃತ್ಯಕಲಿಕೆಯು ಸಹಕರಿಸುತ್ತದೆ.

ಎಲ್ಲಾ ಮಕ್ಕಳಲ್ಲೂ ನೃತ್ಯದ ಆಸ್ವಾದನೆಯನ್ನು ಹೆಚ್ಚಿಸುವುದು ಶಾಲೆಗಳಲ್ಲಿ ನೃತ್ಯ ಕಲಿಕೆಯ ಉದ್ದೇಶವಾಗಿದೆ. ಪ್ರತಿಭಾವಂತ ಮಕ್ಕಳಿಗೆ ಪ್ರತಿಭೆಯನ್ನು ಪ್ರದರ್ಶಿಸಲು ಮತ್ತು ಬೆಳೆಸಲು ನೃತ್ಯ ಕಲೆಯ ತರಬೇತಿ ಅನಿವಾರ್ಯವಾಗಿದೆ. ವಿವಿಧ ರೀತಿಯ ನೃತ್ಯಶೈಲಿಗಳು ಮುದ್ರೆ(ಸಂಕೇತ)ಗಳನ್ನು ಪರಿಚಯಿಸಿಕೊಳ್ಳುವುದು, ಭಾರತೀಯವೂ ಮತ್ತು ಕೇರಳೀಯವೂ ಆದ ನೃತ್ಯರೂಪಗಳ ಮಹತ್ವವನ್ನು ತಿಳಿಯುವುದು ಈ ಕಲಿಕೆಯ ಉದ್ದೇಶವಾಗಿದೆ.

**ಕಲಿಕೋದ್ದೇಶಗಳು**

- ಚತುರ್ವಿದಾಭಿನಯಗಳ ಕುರಿತು ತಿಳುವಳಿಕೆಯನ್ನು ರೂಪೀಕರಿಸುವುದು.

- ವಿವಿಧ ರೀತಿಯ ನೃತ್ಯರೂಪಗಳನ್ನು ಪರಿಚಯಿಸುವುದು.
- ನೃತ್ಯವನ್ನು ನೋಡಿ ಆನಂದಿಸುವುದು, ನೃತ್ಯ ಪ್ರದರ್ಶನಗಳಲ್ಲಿ ಪಾಲ್ಗೊಳ್ಳುವುದು.
- ವಿವಿಧ ರೀತಿಯ ನೃತ್ಯ ರೂಪಗಳ ಸಾಂಸ್ಕೃತಿಕ ಪ್ರಾಮುಖ್ಯತೆಯನ್ನು ತಿಳಿಯುವುದು.
- ನೃತ್ಯದ ಚರಿತ್ರೆ ಸಂಬಂಧವಾದ ತಿಳುವಳಿಕೆಗಳನ್ನು ರೂಪೀಕರಿಸುವುದು.
- ಕಲಾರೂಪಗಳ ಬಗ್ಗೆ ಇನ್ನೂ ಅಧಿಕ ಸಂಶೋಧನೆಗಳನ್ನು ನಡೆಸುವುದು.
- ದೃಶ್ಯಾವಿಷ್ಕಾರಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಕಲಿಕೆಯನ್ನು ಆಸ್ವಾದಿಸುವುದು.

**ವಿವಿಧ ವಿಭಾಗಗಳು**

- ಜಾನಪದ ನೃತ್ಯಗಳು
- ಶಾಸ್ತ್ರೀಯ ನೃತ್ಯಗಳು
- ಪ್ರಾದೇಶಿಕ ನೃತ್ಯಗಳು

## 4.4 ನಾಟಕ

ನಾಟಕವು ಒಂದು ಕ್ರಿಯಾಪ್ರಧಾನವಾದ ಕಲೆಯಾಗಿದೆ. ಕ್ರಮಬದ್ಧವಾದ ರೀತಿಯಲ್ಲಿ ಒಂದುಗೂಡಿದ ಆಂತರಿಕ ಭಾವ ವಿಕಸನದ ಬಾಹ್ಯ ಪ್ರದರ್ಶನದ ಆವಿಷ್ಕಾರವು ನಾಟಕವಾಗಿದೆ. ಅಭಿನಯವೂ, ಭಾವನೆಯ ಪ್ರಕಟನೆಯು ಪೂರ್ಣವೂ ಶಕ್ತವೂ ಆದ ಕ್ರಿಯೆಯಾಗಿದೆ. ಬಾಹ್ಯವಾಗಿ ಕಾಣುವುದೆಲ್ಲವೂ ಆಂತರಿಕ ಕ್ರಿಯೆಯ ಬೆಳವಣಿಗೆಗೆ ಅನುಗುಣವಾಗಿರುತ್ತದೆ. ಪ್ರತಿಯೊಂದು ನಾಟಕಕ್ಕೂ ಅದರದ್ದೇ ಆದ ಒಳಾರ್ಥಗಳು ಇರುವುದು. ಅದನ್ನು ನಾಟಕ ವೀಕ್ಷಕರಲ್ಲಿಗೆ ತಲುಪಿಸಲು ನಾಟಕ ಕರ್ತೃ, ನಾಟಕ ನಿರ್ದೇಶಕ, ನಾಟಕ ನಟರು ಎಲ್ಲರೂ ಸೇರಿ ಒಟ್ಟಿಗೆ ಪ್ರಯತ್ನಿಸುತ್ತಾರೆ.

ನಾಟಕದ ಕಥೆಗೆ ಪೂರಕವಾಗಿ ಹೊರಗಿನಿಂದ ಕೆಲವು ಪ್ರತ್ಯೇಕ ರಂಗಸಜ್ಜಿಕೆಗಳನ್ನು ಸೇರಿಸಿ ನಾಟಕಾವಿಷ್ಕಾರ ಮಾಡುತ್ತಾರೆ. ಕಥೆಯ ಗುರಿ (premise) ಕಥಾ ಪಾತ್ರ(character) ಸಂಘರ್ಷ (conflict) ಸಂಭಾಷಣೆ (dialogue) ಈ ನಾಲ್ಕು ಭದ್ರ ತಳಹದಿಯ ಪರಸ್ಪರ ಸಂಯೋಜನೆಯಿಂದ ನಾಟಕ ಉಂಟಾಗುತ್ತದೆ. ಚಿತ್ರ, ಶಿಲ್ಪಕಲೆ, ಸಂಗೀತ, ಅಭಿನಯ, ನೃತ್ಯ ಎಂಬಿತ್ಯಾದಿ ಕಲೆಗಳು ನಾಟಕದಲ್ಲಿ ಒಳಗೊಂಡಿರುತ್ತದೆ.

**ಕಲಿಕೆಯ ಉದ್ದೇಶಗಳು**

- ವಿವಿಧ ನಾಟಕಗಳನ್ನು ನೋಡುವುದು ಮತ್ತು ಸಾಮಾಜಿಕ ಪ್ರಾಧಾನ್ಯತೆಯನ್ನು ತಿಳಿಯುವುದು.
- ಸರಳ ನಾಟಕಗಳಲ್ಲಿ ತೊಡಗಿಸಿಕೊಂಡು ಅಭಿನಯ ಕಲೆಯ ಸಿದ್ಧಿಯನ್ನು ಬೆಳೆಸುವುದು.
- ನಾಟಕಗಳನ್ನು ರಚಿಸಲು ಮತ್ತು ನಿರ್ದೇಶನದಲ್ಲಿ ತೊಡಗಿಸಿಕೊಳ್ಳುವ ಆಸಕ್ತಿಯನ್ನು ಬೆಳೆಸುವುದು.
- ನಾಟಕದ ತಂತ್ರಜ್ಞಾನವನ್ನು ತಿಳಿಯುವುದು, ನಾಟಕವನ್ನು ಪ್ರದರ್ಶಿಸುವುದು.
- ನಾಟಕಕ್ಕೆ ಸಂಬಂಧಿಸಿದ ವಿವಿಧ ಹಂತಗಳನ್ನು (ರಂಗಸಜ್ಜಿಕೆ, ಸಂಭಾಷಣೆ, ಅಭಿನಯ, ಸಂಗೀತ, ವಸ್ತ್ರಾಲಂಕಾರ, ವರ್ಣಾಲಂಕಾರ,ಧ್ವನಿ, ಬೆಳಕು, ನಿರ್ವಹಣೆ) ತಿಳಿಯುವುದು ಮತ್ತ ನಾಟಕ

ಪ್ರದರ್ಶನದ ಮೂಲಕ ಆಸ್ವಾದನೆ, ಕಲಾರೂಪಗಳ ಬಗ್ಗೆ ಹೆಚ್ಚಿನ ಸಂಶೋಧನೆಯತ್ತ ಕೊಂಡೊಯ್ಯುವುದು.

- ವಿವಿಧ ನಾಟಕ ರೂಪಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ಅದರಲ್ಲಿ ಭಾಗಿಯಾಗುವುದು.
- ನಾಟಕದ ಸಾಂಸ್ಕೃತಿಕ ಹಿನ್ನೆಲೆಯನ್ನು ತಿಳಿಯುವುದು.
- ವಿವಿಧ ವಿಷಯಗಳ ಕಲಿಕೆಗೆ ನಾಟಕದ ಸಾಧ್ಯತೆಗಳನ್ನು ತಿಳಿಯುವುದು ಮತ್ತು ಪ್ರಯೋಗಿಸುವುದು. ಕಲಿಕೆಯನ್ನು ಸಂತೋಷಕರವಾಗಿಸುವುದು
- ಸಾಮಾಜಿಕ ಬೆಳವಣಿಗೆಯಲ್ಲಿ ನಾಟಕಗಳು ವಹಿಸಿದ ಪಾತ್ರವನ್ನು ತಿಳಿಯುವುದು.

**ವಿವಿಧ ವಿಭಾಗಗಳು**

- ಏಕಾಂಕ ನಾಟಕಗಳು
- ಏಕಪಾತ್ರಾಭಿನಯ ನಾಟಕಗಳು
- ಬೀದಿ ನಾಟಕಗಳು
- ಪೂರ್ಣಕಾಲಿಕ ನಾಟಕಗಳು (Full lengthed plays)

# 5. ಕಲೆಯ ಕಲಿಕೆ – ಮೌಲ್ಯನಿರ್ಣಯ

**ಕ**ಲೆಯು ವಿದ್ಯಾರ್ಥಿಯ ಆಸ್ವಾದನಾ ಸಾಮರ್ಥ್ಯವನ್ನು ಸದಾ ಅಭಿವೃದ್ಧಿಪಡಿಸುತ್ತಿರುವುದು ಪ್ರಧಾನ ಘಟಕವಾಗಿದೆ. ಪ್ರದರ್ಶನಕ್ಕೆ (Performence) ಹೆಚ್ಚಿನ ಪ್ರಧಾನ್ಯತೆಯುಳ್ಳ ವಿಷಯವು ಕಲೆಯಾಗಿದೆ. ಬೆಳೆದು ಬರುತ್ತಿರುವ ಹೊಸ ತಲೆಮಾರಿನ ಮಕ್ಕಳ ಮಾನಸಿಕ ಸಂಕಷ್ಟಗಳು ಮತ್ತು ಉದ್ವಿಗ್ನತೆಗಳನ್ನು ಕಡಿಮೆಗೊಳಿಸಲು ಕಲಾಶಿಕ್ಷಣದ ಸಾಧ್ಯತೆಗಳನ್ನು ತಿಳಿಯಬೇಕಾಗಿದೆ. ಶಾಲಾ ಮಟ್ಟದಲ್ಲಿ ಕಲಾಶಿಕ್ಷಣದ ವಿಭಾಗದಲ್ಲಿ ಚಿತ್ರಕಲೆ (drawing) ಸಂಗೀತ (music) ನೃತ್ಯ (dance) ನಾಟಕ (drama) ಎಂಬೀ ನಾಲ್ಕು ಶಾಖೆಗಳು ಒಳಗೊಂಡಿರುತ್ತವೆ. ಈ ನಾಲ್ಕು ಶಾಖೆಗಳಲ್ಲಿರುವ ಸಾಮಾನ್ಯಜ್ಞಾನ ಪಾಠ್ಯಪದ್ಧತಿಯಲ್ಲಿ ಒಳಗೊಂಡಿರುತ್ತದೆ. ಕಲಾಶಿಕ್ಷಣಕ್ಕೆ ಸಂಬಂಧಿಸಿದ ವಿವಿಧ ತರಗತಿಗಳಲ್ಲಿ ವಿದ್ಯಾರ್ಥಿ ಪಡೆಯಬೇಕಾದ ಕಲಿಕಾ ಸಾಧನೆಗಳನ್ನು (Learning outcomes) ಮೊದಲೇ ತಯಾರಿಸಲಾಗಿದೆ. ಶಾಲಾ ಪಠ್ಯಪದ್ಧತಿಯಲ್ಲಿನ ಸಾಮಾನ್ಯ ವಿಷಯಗಳಾದ ಭಾಷೆ, ಗಣಿತ, ವಿಜ್ಞಾನ, ಪರಿಸರ ವಿಜ್ಞಾನ ಮೊದಲಾದ ವಿಷಯಗಳನ್ನು ಕಲಿಯುವ ರೀತಿಯಲ್ಲಿಯೇ ಕಲಾಶಿಕ್ಷಣವನ್ನು ಕಲಿಯಲು ವಿದ್ಯಾರ್ಥಿಗೆ ಅವಕಾಶವನ್ನು ಒದಗಿಸಬೇಕು. ಕಲಾಶಿಕ್ಷಣದ ಎಲ್ಲಾ ವಲಯಗಳಲ್ಲೂ ಲಭಿಸುವ ಜ್ಞಾನವನ್ನು ಹೆಚ್ಚಿಸಲು ಮಕ್ಕಳ ಅಭಿರುಚಿಯನ್ನು ಕಂಡುಹಿಡಿಯಲು, ಹಿರಿಮೆಯನ್ನು ಪ್ರದರ್ಶಿಸುವ ವಿಭಾಗದಲ್ಲಿ ಮಕ್ಕಳನ್ನು ಮುಂದುವರಿಯುವಂತೆ ಪ್ರೋತ್ಸಾಹಿಸಲು ಇದರಿಂದ ಸಾಧ್ಯ.

ಕಲಿಕೆ ಮತ್ತು ಭೋದನಾ ಪ್ರಕ್ರಿಯೆಗಳ ಅವಿಭಾಜ್ಯ ಘಟಕವು ಮೌಲ್ಯನಿರ್ಣಯವಾಗಿದೆ. ಕಲೆಗೆ ಸಂಬಂಧಿಸಿ ರೂಪಕಲ್ಪನೆ ಮಾಡಿದ ಕಲಿಕಾ ಸಾಧನೆಗಳು ಎಷ್ಟು ಮಾತ್ರ ತೃಪ್ತಿಕರವಾಗಿ ನಿರ್ವಹಿಸಲ್ಪಟ್ಟಿವೆ, ಮಕ್ಕಳ ಅಭಿರುಚಿಯನ್ನು ಕಂಡುಹಿಡಿಯಲು, ಕಲಿಕೆಯನ್ನು ಆಹ್ಲಾದಕರವಾಗಿಸಲು ಸಾಧ್ಯವಾಗಿದೆಯೋ? ಮುಂತಾದವುಗಳನ್ನು ಮೌಲ್ಯನಿರ್ಣಯಗಳ ಮೂಲಕ ತಿಳಿಯಬೇಕು. ಕಲಾಶಿಕ್ಷಣದ ಮೌಲ್ಯನಿರ್ಣಯಕ್ಕೆ ಸಂಬಂಧಿಸಿದ ವಿಷಯಗಳನ್ನು ಇಲ್ಲಿ ಚರ್ಚಿಸಲಾಗಿದೆ.

**ಮೌಲ್ಯನಿರ್ಣಯ ಎಂದರೇನು?**

ಕಲೆಗೆ ಸಂಬಂಧಿಸಿ ಶಾಲೆಯ ಒಳಗಿನಿಂದ ಮತ್ತು ಹೊರಗಿನಿಂದ ವಿದ್ಯಾರ್ಥಿ ಗಳಿಸಿದ ವಿವಿಧ ಸಾಮರ್ಥ್ಯಗಳು, ನೈಪುಣ್ಯತೆಗಳು ಮತ್ತು ಇವುಗಳನ್ನು ಎಷ್ಟರ ಮಟ್ಟಿಗೆ ತನ್ನದಾಗಿಸಲು ಸಾಧ್ಯವಾಗಿದೆ ಎಂಬ ಸಂಶೋಧನೆಯೇ ಮೌಲ್ಯಮಾಪನ. ಕಲಿಕಾಸಾಧನೆಗಳಿಗೆ ಪ್ರಾಧಾನ್ಯತೆಯನ್ನು ನೀಡುವ ರೀತಿಯಲ್ಲಿರುವ ಮೌಲ್ಯಮಾಪನ ಇಲ್ಲಿ ಅತ್ಯಗತ್ಯ. ಮೌಲ್ಯಮಾಪನವು ಕಲಾಶಿಕ್ಷಣದ ಪುರೋಗತಿಯ ಮೌಲ್ಯನಿರ್ಣಯ ಆಗಿರಬೇಕು. ಸ್ವತಃ ತಿದ್ದಿಕೊಂಡು ವಿದ್ಯಾರ್ಥಿಗೆ ಎಷ್ಟರ ಮಟ್ಟಿಗೆ ಮುಂದುವರಿಯಲು ಸಾಧ್ಯವಾಗಿದೆ ಎಂಬುವುದರ ಮೌಲ್ಯನಿರ್ಣಯವಾಗಿರಬೇಕು.

**ಮೌಲ್ಯನಿರ್ಣಯ ಹೇಗೆ?**

ಕಲಿಕಾಸಾಧನೆಗಳಿಗೆ ಪ್ರಾಧಾನ್ಯತೆಯನ್ನು ಕೊಡುವ ಪಾಠ್ಯಪದ್ಧತಿಯನ್ನು 2013 ರಲ್ಲಿ ಆವಿಷ್ಕರಿಸಿ ಜ್ಯಾರಿಗೆ ತರಲಾಯಿತು. ಆದುದರಿಂದ ಮೌಲ್ಯನಿರ್ಣಯ ನಡೆಸುವಾಗ ಕಲಿಕಾಸಾಧನೆಗಳಿಗೆ ಒತ್ತು ನೀಡಬೇಕಾಗಿದೆ. ಕಲಾಶಿಕ್ಷಣಕ್ಕೆ ಸಂಬಂಧಿಸಿದ ಕಲಿಕಾಸಾಧನೆಗಳು ಎಷ್ಟರ ಮಟ್ಟಿಗೆ ತೃಪ್ತಿಕರವಾಗಿ ಗಳಿಸಲು ಸಾಧ್ಯವಾಯಿತು ಎಂಬುವುದರ ಮೌಲ್ಯನಿರ್ಣಯವನ್ನು ಅಧ್ಯಾಪಕರು ನಡೆಸಬೇಕಾಗಿದೆ.

ಅದಕ್ಕಾಗಿ ನಿರಂತರವೂ ಸಂಪೂರ್ಣವೂ ಆದ ಮೌಲ್ಯನಿರ್ಣಯ ರೀತಿಯನ್ನು ಕಾರ್ಯರೂಪಕ್ಕೆ ತರಬೇಕು. ಈ ರೀತಿಯ ಮೌಲ್ಯನಿರ್ಣಯ ರೀತಿಯನ್ನು ಕಾರ್ಯರೂಪಕ್ಕೆ ತರುವಾಗ ಕಲಾಶಿಕ್ಷಣದ

ಪ್ರತಿಯೊಂದು ವಿಭಾಗಗಳನ್ನೂ ಒಂದುಗೂಡಿಸಿ ಎರಡು ರೀತಿಯ ಮೌಲ್ಯನಿರ್ಣಯಕ್ಕೆ ಅವಕಾಶವನ್ನು ನೀಡಬೇಕು.

- ತರಗತಿಯೊಳಗಿನ ಕಲಿಕಾಪ್ರಕ್ರಿಯೆಯೊಂದಿಗೆ ಮೌಲ್ಯನಿರ್ಣಯ.
- ಪ್ರದರ್ಶನ (Performance)ಗಳ ಮೌಲ್ಯನಿರ್ಣಯ ಮತ್ತು ವೈಜ್ಞಾನಿಕ ಮೌಲ್ಯನಿರ್ಣಯ.

ಈ ಪ್ರತಿಯೊಂದು ವಿಷಯಕ್ಕೆ ಸಂಬಂಧಿಸಿ ಪ್ರತ್ಯೇಕವಾಗಿ ಪರಿಶೋಧಿಸುವುದು.

## 1. ತರಗತಿಯೊಳಗಿನ ಕಲಿಕಾಪ್ರಕ್ರಿಯೆಯೊಂದಿಗಿನ ಮೌಲ್ಯನಿರ್ಣಯ

(ನಿರಂತರ ಮೌಲ್ಯನಿರ್ಣಯ)

**ಪ್ರಕ್ರಿಯಾ ಮೌಲ್ಯನಿರ್ಣಯ**

ಕಲಿಕಾ ಪ್ರಕ್ರಿಯೆ ನಿರ್ವಹಿಸುವಾಗ ಅಧ್ಯಾಪಕನ ನಿರೀಕ್ಷಣೆ– ತರಗತಿ ಕೋಣೆಯೊಳಗಿನ ವಿದ್ಯಾರ್ಥಿಯ ಪ್ರದರ್ಶನ, ಕಲಾಶಿಕ್ಷಣಕ್ಕೆ ಸಂಬಂಧಿಸಿದ ಮಾಹಿತಿ ಸಂಗ್ರಹ, ಕಲಾಶಿಕ್ಷಣ–ಡೈರಿ–ಪೋರ್ಟ್‌ಪೋಲಿಯೋ, ಯುನಿಟ್ ಮೌಲ್ಯನಿರ್ಣಯ ಮೊದಲಾದವುಗಳನ್ನು ಅಸ್ಪದವಾಗಿರಿಸಿ ಕಲಿಕಾ ಪ್ರಕ್ರಿಯೆಯೊಂದಿಗಿನ ಮೌಲ್ಯನಿರ್ಣಯವನ್ನು ನಡೆಸಬಹುದಾಗಿದೆ. ಪ್ರಕ್ರಿಯೆಯ ಮೌಲ್ಯನಿರ್ಣಯ ಮಾಡಲು ಕೆಳಗೆ ಕೊಟ್ಟಿರುವ ಸೂಚನೆಗಳನ್ನು ಉಪಯೋಗಿಸಬಹುದಾಗಿದೆ.

- ಚಟುವಟಿಕೆಗಳಲ್ಲಿ ಭಾಗವಹಿಸುವಿಕೆ
- ತಿಳುವಳಿಕೆ
- ಸಾಮರ್ಥ್ಯಗಳನ್ನು ಗಳಿಸುವಿಕೆ
- ಪ್ರದರ್ಶನ/ನಿರೂಪಣೆ
- ದಾಖಲಾತಿ ತಯಾರಿ.

ಸಾಮಾಜಿಕ, ಭಾವನಾತ್ಮಕ ವಲಯಗಳ ನೈಪುಣ್ಯತೆಗಳನ್ನು ಪ್ರಕ್ರಿಯಾ ಮೌಲ್ಯನಿರ್ಣಯದ ಭಾಗವಾಗಿ ಮೌಲ್ಯನಿರ್ಣಯ ನಡೆಸಬೇಕು.

ಕೆಳಗೆ ನೀಡಿರುವ ನೈಪುಣ್ಯತೆಗಳನ್ನು ಆಯಾ ಸೂಚಕಗಳನ್ನು ಪರಿಗಣಿಸುವ ಸಮಯದಲ್ಲಿ ಮೌಲ್ಯನಿರ್ಣಯ ನಡೆಸಿ ಟೀಚಿಂಗ್ ಮಾನ್ವಲಿನಲ್ಲಿ ದಾಖಲಿಸಬೇಕು.

| ಸೂಚನೆಗಳು | ನೈಪುಣ್ಯತೆಗಳು |
|---|---|
| ಚಟುವಟಿಕೆಗಳಲ್ಲಿ ಭಾಗವಹಿಸುವಿಕೆ | ಸ್ವಯಂತಿಳುವಳಿಕೆ, ನಾಯಕತ್ವ, ವ್ಯತ್ಯಸ್ತ ಕೌಶಲ್ಯ, ಜವಾಬ್ದಾರಿಯುತ ನೇತೃತ್ವ. |
| ಆಶಯ ತಿಳುವಳಿಕೆ. | ಕಲಿಕಾ ನೈಪುಣ್ಯತೆಗಳು. |
| ಸಾಮರ್ಥ್ಯಗಳ ಗಳಿಸುವಿಕೆ. | ತೀರ್ಮಾನಿಸುವುದು, ಪ್ರಶ್ನೆ ಪರಿಹಾರ ಸಾಮರ್ಥ್ಯ, ಸೃಜನಾತ್ಮಕ ಸಾಮರ್ಥ್ಯ. |
| ಪ್ರದರ್ಶನ/ ಮಂಡನೆ. | ಆಶಯ ವಿನಿಮಯ ಸಾಮರ್ಥ್ಯ. |
| ದಾಖಲಾತಿ/ತಯಾರಿ. | ವಿಮರ್ಶನಾತ್ಮಕ ಚಿಂತನೆ. |

- **ಮಕ್ಕಳ ಕಲಾಶಿಕ್ಷಣದ ದಿನಚರಿ (Diary)** : ಮಕ್ಕಳ ಕಲಾಶಿಕ್ಷಣ ದಿನಚರಿ/ನೋಟ್‌ಬುಕ್‌ಗಳು ಪ್ರಕ್ರಿಯೆಗಳ ಮೌಲ್ಯನಿರ್ಣಯಕ್ಕಿರುವ ಪುರಾವೆಯಾಗಿ ಉಪಯೋಗಿಸಬಹುದು. ಇದನ್ನು ಸಮಯ ಬಂಧಿತವಾಗಿ ಪರಿಶೋಧಿಸಿ ಸೂಚನೆಗಳನ್ನು ನೀಡಬೇಕು. ಇದಕ್ಕೆ ಸಂಬಂಧಿಸಿದ ಸೂಚನೆಗಳನ್ನು ಟೀಚಿಂಗ್ ಮಾನ್ವಲಿನಲ್ಲಿ ದಾಖಲಿಸಬೇಕು.

- **ಪೋರ್ಟ್ ಪೋಲಿಯೋ ಮೌಲ್ಯನಿರ್ಣಯ :** ಪೋರ್ಟ್‌ಪೋಲಿಯೋವು ಸಂಬಂಧಿಸಿ ಮಗುವಿಗೆ, ರಕ್ಷಕರಿಗೆ, ಅಧ್ಯಾಪಿಕೆಗೆ ಫೀಡ್‌ಬ್ಯಾಕ್ ನೀಡುವ ಕೆಲಸವನ್ನು ಮಾಡುತ್ತದೆ. ಇದು ಕಲಿಕೆಯನ್ನು ಪ್ರೋತ್ಸಾಹಿಸುತ್ತದೆ. ಕಲಿಕಾ ಚಟುವಟಿಕೆಗಳ ಮೂಲಕ ಮುಂದುವರಿಯುವಾಗ ಉಂಟಾಗುವ ಉತ್ಪನ್ನಗಳನ್ನು ಪೋರ್ಟ್‌ಪೋಲಿಯೋದಲ್ಲಿ ಸೇರಿಸಿ ಮೌಲ್ಯನಿರ್ಣಯ ಮಾಡಬೇಕು. ವಿಷಯ ಬಂಧಿತವಾದ ಕಲಿಕಾ ಪುರಾವೆಗಳು ಇದರಲ್ಲಿ ಒಳಗೊಂಡಿರುತ್ತದೆ.

ಪೋರ್ಟ್‌ಪೋಲಿಯೋದಲ್ಲಿ ಒಳಗೊಂಡಿರುವವುಗಳು

- ಕಲೆಯ ಕಲಿಕೆಯು ಡೈರಿ/ ನೋಟ್‌ಬುಕ್
- ಇತರ ರಚನೆಗಳು
- ಚಿತ್ರಗಳು/ಸಂಗ್ರಹಗಳು
- ವರ್ಕ್‌ಶೀಟ್‌ಗಳು.

ಈ ರೀತಿಯ ಮೌಲ್ಯನಿರ್ಣಯದಲ್ಲಿ ಅತ್ಯುತ್ತಮ / ಉತ್ತಮ /ಸರಾಸರಿ/ ಇನ್ನೂ ಉತ್ತಮಪಡಿಸಬೇಕು ಎಂಬ ರೀತಿಯಲ್ಲಿ ವಿಂಗಡಿಸಿ ಕ್ರಮವಾಗಿ 4/3/2/1 ಅಂಕಗಳನ್ನು ನೀಡಬೇಕು.

ಟೀಚಿಂಗ್ ಮ್ಯಾನ್ವಲ್ (TM) : ಪ್ರಕ್ರಿಯೆಗಳ ಮೌಲ್ಯನಿರ್ಣಯಕ್ಕೆ ಟೀಚಿಂಗ್ ಮ್ಯಾನ್ವಲ್ (TM) ಉಪಯೋಗಿಸಬಹುದು. ಟೀಚಿಂಗ್ ಮ್ಯಾನ್ವಲ್‌ನ ಮೌಲ್ಯನಿರ್ಣಯ ಪುಟದಲ್ಲಿ ದಾಖಲಿಸಿದ ಪ್ರತಿಫಲನ ಟಿಪ್ಪಣಿಗಳನ್ನು ಇದಕ್ಕೆ ಉಪಯೋಗಿಸಬಹುದು.

- **ಘಟಕ ಮಟ್ಟದ ಮೌಲ್ಯನಿರ್ಣಯ :** ಘಟಕಕ್ಕೆ ಸಂಬಂಧಿಸಿದ ವಾಚಿಕ ಮೌಲ್ಯನಿರ್ಣಯ, ಪ್ರದರ್ಶನ ಮೌಲ್ಯನಿರ್ಣಯ, ಘಟಕದ ತಿಳುವಳಿಕೆಯ ಮೌಲ್ಯನಿರ್ಣಯ ಮಾಡಬಹದಾದ ರಸಪ್ರಶ್ನೆಸ್ಪರ್ಧೆಗಳ ಮೌಲ್ಯನಿರ್ಣಯಗಳಿಂದ ಘಟಕದ ಮೌಲ್ಯನಿರ್ಣಯ ನಡೆಸಬಹುದು.

## ನಿರಂತರ ಮೌಲ್ಯನಿರ್ಣಯ (CE) ಗ್ರೇಡಿಂಗ್

ಕಲೆಯಲ್ಲಿ ಮಗುವಿನ ಪ್ರದರ್ಶನ ಮೌಲ್ಯನಿರ್ಣಯ (ಕಲೆಯ ಕಲಿಕಾಡೈರಿ, ಟೀಚಿಂಗ್ ಮ್ಯಾನ್ವಲ್ ಅಧ್ಯಾಪಕನ ನಿರೀಕ್ಷಣೆ ಎಂಬಿತ್ಯಾದಿಗಳ ಆಧಾರದಲ್ಲಿ) ಪೋರ್ಟ್ ಪೋಲಿಯೋದ ಮೌಲ್ಯನಿರ್ಣಯ, ಯೂನಿಟ್ ಮೌಲ್ಯನಿರ್ಣಯಗಳಲ್ಲಿ ಪ್ರತಿಯೊಂದರ ಅಂಕವನ್ನು 10 ರಲ್ಲಿ ಕಂಡುಹಿಡಿದು ಅವುಗಳ ಮೊತ್ತವನ್ನು ಕಂಡುಹಿಡಿಯಿರಿ. ಈ ಮೊತ್ತಕ್ಕೆ ಸರಿಯಾದ ಗ್ರೇಡ್ ನೀಡಿರಿ ಇದಕ್ಕಾಗಿ ಕೆಳಗೆ ನೀಡಿರುವ ಪಟ್ಟಿಯನ್ನು ಉಪಯೋಗಿಸಬಹುದು.

| ಅಂಕ (30 ರಲ್ಲಿ) | ಶೇಕಡಾಮಾನ | ಗ್ರೇಡ್ |
|---|---|---|
| 23 - 30 | 75 - 100 | A |
| 18 - 22 | 60 - 74 | B |
| 14 - 17 | 45 - 59 | C |
| 10 - 13 | 33 -44 | D |
| 10 ಕ್ಕಿಂತ ಕಡಿಮೆ | 33 ಕ್ಕಿಂತ ಕಡಿಮೆ | E |

ಉದಾಹರಣೆಗಾಗಿ ಒಂದು ಮಗುವಿಗೆ ಕಲೆಯ ಕಲಿಕಾಪ್ರಕ್ರಿಯೆ, ಪೋರ್ಟ್‌ಪೋಲಿಯೋ ಘಟಕ ಮೌಲ್ಯನಿರ್ಣಯ ಎಂಬಿವುಗಳ ಅಂಕಗಳು 10 ರಲ್ಲಿ ಕ್ರಮವಾಗಿ 8,7,7 ಎಂದಾಗಿರಲಿ. ಹಾಗಾದರೆ ಒಂದು ಅಂಕ 8+7+7=22 ಆಯಿತು. ಪಟ್ಟಿಯನ್ನು ಆಧಾರವಾಗಿರಿಸಿಕೊಂಡು ಮಗುವಿನ CE ಗ್ರೇಡ್ B ಆಗಿರುವುದು.

- **ಪ್ರದರ್ಶನ ಮೌಲ್ಯನಿರ್ಣಯ ಹಾಗೂ ಶಾಸ್ತ್ರೀಯ ಮೌಲ್ಯನಿರ್ಣಯ (ಟರ್ಮ್ ಮೌಲ್ಯನಿರ್ಣಯ)**
  ಕಲೆಯ ಕಲಿಕೆಯಲ್ಲಿ ಪ್ರದರ್ಶನ ಮೌಲ್ಯನಿರ್ಣಯಕ್ಕೆ ಹೆಚ್ಚಿನ ಮಹತ್ವವಿದೆ.

ಪ್ರತಿಯೊಂದು ವಲಯಗಳನ್ನು ಸೇರಿಸಿಕೊಂಡು ತರಗತಿಗೆ ಸಂಬಂಧಿಸಿದ ಪ್ರದರ್ಶನದ ಸಾಧ್ಯತೆಗಳನ್ನು ಕಲಿಕಾಸಾಧನೆಗಳಿಗೆ ಒತ್ತು ನೀಡಿ ಕಂಡುಹಿಡಿಯಬೇಕು. ವಿಷಯಗಳಿಗೆ ಸಂಬಂಧಿಸಿ ಅಗತ್ಯವಾಗಿ ತಿಳಿದಿರಬೇಕಾದ ಮೂಲಭೂತ ಶಾಸ್ತ್ರೀಯ ತಿಳುವಳಿಕೆಗಳನ್ನು ಕೂಡಾ ಇದರ ಜೊತೆಗೆ ಪರೀಕ್ಷಿಸಬೇಕಾಗಿದೆ.

ಈ ರೀತಿಯ ಪ್ರದರ್ಶನದ ಶಾಸ್ತ್ರೀಯ ಮೌಲ್ಯನಿರ್ಣಯದ ಮಾದರಿಗಳನ್ನು SCERT ಯು ಅಭಿವೃದ್ಧಿ ಪಡಿಸಿ ನೀಡುವುದು.

**ಮೌಲ್ಯನಿರ್ಣಯದ ಫೋರ್ಮೇಟ್**

ನಿರಂತರ ಮೌಲ್ಯನಿರ್ಣಯ (C E) ಹಾಗೂ ಟರ್ಮ್ ಮೌಲ್ಯನಿರ್ಣಯ (T E) ಗಳನ್ನು ಪ್ರತಿ ಟರ್ಮ್‌ನಲ್ಲೂ ದಾಖಲಿಸಲು ಇರುವ ಫೋರ್ಮೇಟ್.

ಟರ್ಮ್ : 1/2/3

ವಿಷಯ : ತರಗತಿ: ಡಿವಿಷನ್ :

| ಕ್ರಮ ಸಂಖ್ಯೆ | ವಿದ್ಯಾರ್ಥಿಯ ಹೆಸರು | CE ವಿಭಾಗ | | | CE ಗ್ರೇಡ್ | TE ಗ್ರೇಡ್ | ಷರಾ |
|---|---|---|---|---|---|---|---|
| | | ಪ್ರಕ್ರಿಯೆ | ಪೋರ್ಟ್ ಪೋಲಿಯೋ | ಘಟಕ ಮೌಲ್ಯನಿರ್ಣಯ | | | |
| | | | | | | | |

## ಗ್ರೇಡಿಂಗ್ ರೀತಿ

ಪ್ರಾಥಮಿಕ ಹಂತದಲ್ಲಿ ನಿರಂತರ ಮೌಲ್ಯನಿರ್ಣಯಕ್ಕೆ ಹಾಗೂ ಟರ್ಮ್ ಮೌಲ್ಯನಿರ್ಣಯಕ್ಕೆ ಪ್ರತ್ಯೇಕ ಗ್ರೇಡ್ ನೀಡುವ ರೀತಿಯನ್ನು ಬಳಸಬೇಕು. ಅದಕ್ಕಾಗಿ ಕೆಳಗೆ ನೀಡಿರುವ ಪಟ್ಟಿಯನ್ನು ಉಪಯೋಗಿಸಬೇಕು.

| ಅಂಕಗಳ ಶೇಕಡಾಮಾನ | ಗ್ರೇಡ್ |
|---|---|
| 75 - 100 | A |
| 60 - 74 | B |
| 45 - 59 | C |
| 33 -44 | D |
| 33 ರಿಂದ ಕಡಿಮೆ | E |

**ಮೌಲ್ಯನಿರ್ಣಯದ ವಾರ್ಷಿಕ ಕ್ರೋಡೀಕರಣ**

ಟರ್ಮ್‌ಗಳ CE ಅಂಕಗಳು /ಗ್ರೇಡುಗಳನ್ನು ಪರಿಗಣಿಸುವಾಗ ಮೂರು ಟರ್ಮ್‌ಗಳಲ್ಲಿ ಮಗುವಿಗೆ ಲಭಿಸಿದ ಅತ್ಯಧಿಕ ಅಂಕ/ಗ್ರೇಡ್‌ನ್ನು CE ಯ ವಾರ್ಷಿಕ ಓವರೋಲ್ ಗ್ರೇಡ್ ಆಗಿದೆ.

**TE ಗ್ರೇಡ್**

T E ಗ್ರೇಡ್, ಮೂರನೇ ಟರ್ಮ್‌ನಲ್ಲಿ ವಿದ್ಯಾರ್ಥಿಯು ಗಳಿಸಿದ ಗ್ರೇಡ್ ಆಗಿದೆ.

CE ಗ್ರೇಡ್, TE ಗ್ರೇಡ್‌ಗಳನ್ನು ಮೇಲಿನ ರೀತಿಯಲ್ಲಿ ದಾಖಲಿಸುವುದರೊಂದಿಗೆ ಸಾಮಾಜಿಕ ಭಾವನಾತ್ಮಕ ವಲಯಗಳಲ್ಲಿ ಗುಣಾತ್ಮಕವಾದ ದಾಖಲಿಸುವಿಕೆಗಳನ್ನು ಕೂಡಾ ವಾರ್ಷಿಕ ಫೋರ್ಮೇಟಿನಲ್ಲಿ ದಾಖಲಿಸಬೇಕು.

ಸಾಮಾಜಿಕ ಭಾವನಾತ್ಮಕ ವಲಯಗಳಲ್ಲಿ ವಿದ್ಯಾರ್ಥಿಯ ಹಿರಿಮೆಗೆ ಸಂಬಂಧಿಸಿದ ಧನಾತ್ಮಕವಾದ ಅಂಶಗಳನ್ನು ಕಂಡುಹಿಡಿದು ದಾಖಲಿಸಿದರೆ ಸಾಕು. ಋಣಾತ್ಮಕ ಅಂಶಗಳನ್ನು ದಾಖಲಿಸುವ ಅಗತ್ಯವಿಲ್ಲ.

| ಕ್ರಮ ಸಂಖ್ಯೆ | ವಿದ್ಯಾರ್ಥಿಯ ಹೆಸರು | *CE* ವಿಭಾಗ | | | | *CE* ಗ್ರೇಡ್ | *TE* | | ಷರಾ |
|---|---|---|---|---|---|---|---|---|---|
| | | ಪ್ರಕ್ರಿಯೆ (20) | ಪ್ರಾಜೆಕ್ಟ್ ಪೋರ್ಟ್‌ಫೋಲಿಯೋ (20) | ಘಟಕ ಮೌಲ್ಯನಿರ್ಣಯ (20) | ಒಟ್ಟು (60) | | ಸ್ಕೋರ್ (100) | ಗ್ರೇಡ್ | |
| | | | | | | | | | |

# 6. ಕಲೆಯ ಕಲಿಕೆ – ಬೆಂಬಲ ವ್ಯವಸ್ಥೆ

ಉತ್ತಮವಾದ ಪ್ರೋತ್ಸಾಹ, ಸಹಕಾರ, ಸಹಾಯದಿಂದ ಮಾತ್ರವೇ ಕಲೆಯ ಕಲಿಕೆಯು ಫಲಪ್ರದವಾಗುವುದು.

## ವಿವಿಧ ವಿಭಾಗಗಳು

### 1. ಶಾಲಾ ಮಟ್ಟ/ ತರಗತಿ ಮಟ್ಟ

ಶಾಲಾ ಮಟ್ಟದಲ್ಲಿ ಎಸ್.ಎಂ.ಸಿ ಹಾಗೂ ಪಿ.ಟಿ.ಎ ಗಳು ಇಂದು ಉತ್ತಮ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತವೆ. ತರಗತಿ ಮಟ್ಟದಲ್ಲಿ ಎಂ.ಪಿ.ಟಿ.ಎ ಕಾರ್ಯಾಚರಿಸುತ್ತಿದೆ. ಈ ಸಮಿತಿಗಳಿಗೆ ಕಲಾಶಿಕ್ಷಣದ ಮಹತ್ವವನ್ನು ಮನವರಿಕೆ ಮಾಡಿಕೊಡಬೇಕು. ಮಗುವಿನ ಕಲಿಕಾಸಾಧನೆಗಳನ್ನು ಚರ್ಚಿಸಬೇಕು. ಕಲಾಶಿಕ್ಷಣಕ್ಕೆ ಅಗತ್ಯವಾದ ತರಗತಿ ಕೋಣೆಗಳ ಸೌಕರ್ಯಗಳು, ಉಪಕರಣಗಳು,ಪ್ರದರ್ಶನ ಹಾಗೂ ಪ್ರಚಾರಕ್ಕೆ ಅಗತ್ಯವಾದ ಮೂಲಭೂತ ಭೌತಿಕ ಸೌಕರ್ಯಗಳನ್ನು ಒದಗಿಸಲು ಈ ರೀತಿಯ ಅನುಕೂಲತೆಗಳನ್ನು ಅತ್ಯಧಿಕವಾಗಿ ಉಪಯೋಗಿಸಿಕೊಳ್ಳಬೇಕು. ಪ್ರಾದೇಶಿಕ ಕಲಾವಿದರೊಂದಿಗೆ ಬೆರೆಯಲು, ಕಲಾಸೃಷ್ಟಿಗಳ ಆಸ್ವಾದನೆಗೆ ಶಾಲಾ ಮಟ್ಟದಲ್ಲಿ ಸಾಧ್ಯವಾಗಬೇಕು.

### 2. ಪಂಚಾಯತ್/ಸಿ.ಆರ್.ಸಿ ಮಟ್ಟ

ಈಗ ಜ್ಯಾರಿಯಲ್ಲಿರುವ ಕ್ಲಸ್ಟರ್ ಕೇಂದ್ರಗಳನ್ನು ಕೇಂದ್ರೀಕರಿಸಿಕೊಂಡು ಸಂಪನ್ಮೂಲಗಳ ಸಂಗ್ರಹ ಮತ್ತು ವಿನಿಮಯ ಸಾಧ್ಯವಾಗಬೇಕು. ಸಿ.ಆರ್.ಸಿಗಳ ಹಾಗೂ ಪಂಚಾಯತುಗಳ ಸಹಾಯದಿಂದ ಕಲಾಶಿಕ್ಷಣವನ್ನು ಇನ್ನೂ ಹೆಚ್ಚಿನ ದಕ್ಷತೆಯಿಂದ ಕಾರ್ಯಗತಗೊಳಿಸಬೇಕು. ಅದಕ್ಕಾಗಿ ಬೇಕಾದ ಮೂಲಭೂತ ಸೌಕರ್ಯಗಳನ್ನು ಹೆಚ್ಚಿಸಲು ಮತ್ತು ಸಂಪನ್ಮೂಲ ವ್ಯಕ್ತಿಗಳ ಸೇವೆಯನ್ನು ಕ್ರಮೀಕರಿಸಲು ಸಾಧ್ಯವಾಗಬೇಕು.

### 3. ಉಪಜಿಲ್ಲೆ /ಬಿ.ಆರ್.ಸಿ ವಿಭಾಗ

ಬಿ. ಆರ್. ಸಿ ಗಳಲ್ಲಿ ಇತರ ವಿಷಯಗಳಿಗೆ ನೀಡುವಂತೆ ಕಲಾಶಿಕ್ಷಣಕ್ಕೂ ಸಹಾಯಕವಾದ ಸೌಕರ್ಯಗಳು ಮತ್ತು ಸಂಪನ್ಮೂಲ ಸಂಗ್ರಹಕ್ಕೆ ಅಗತ್ಯವಾದ ಸಾಮಗ್ರಿಗಳು ಅಗತ್ಯವಾಗಿದೆ. ಬಿ. ಆರ್. ಸಿ ಮಟ್ಟದಲ್ಲಿ ಕಲಾಶಿಕ್ಷಕರಿಗೆ ಅಗತ್ಯವಾದ ತರಬೇತಿಗಳನ್ನು ನಿಶ್ಚಿತ ಸಮಯಗಳಲ್ಲಿ ನೀಡಬೇಕಾಗಿದೆ.

### 4. ಜಿಲ್ಲಾ ಮಟ್ಟ

ಜಿಲ್ಲಾ ಮಟ್ಟದಲ್ಲಿ ಕಲಾಶಿಕ್ಷಕರ ಒಂದು ರಿಸೋರ್ಸ್‌ಪೂಲ(ಒಂದು ಡಿ.ಆರ್.ಜಿ)ನ್ನು ರೂಪೀಕರಿಸುವುದು ಅತ್ಯಗತ್ಯವಾಗಿದೆ.

# 7. ಕಲಾಶಿಕ್ಷಣ – ಸಾರಾಂಶ

## 7.1



# ಚಿತ್ರಕಲೆ



# ಚಿತ್ರಕಲೆ

## ಮುನ್ನುಡಿ

**ಚಿ**ತ್ರರಚನೆಯ ಮೂಲಕ ಒಂದು ಮೇಲ್ಮೈಯನ್ನು (Space) ಪ್ರತ್ಯೇಕವಾಗಿ ಗುರುತಿಸಲಾಗುವುದು ಚಿತ್ರವನ್ನು ನೋಡುವಾಗ ನಮ್ಮ ದೃಷ್ಟಿಯನ್ನು ವಿಶಿಷ್ಟವಾದ ಒಂದು ಸನ್ನಿವೇಶಕ್ಕೆ ಕೊಂಡೊಯ್ಯುವ ಮೂಲಕ ಮನಸ್ಸಿನಲ್ಲಿ ವಿಭಿನ್ನವಾದ ದೃಶ್ಯಾನುಭವಗಳು ರೂಪೀಕರಿಸಲ್ಪಡುತ್ತವೆ. ಬೆಳಕಿನ ಕ್ರಮೀಕರಣವೇ ಚಿತ್ರರಚನೆಯ ತಳಹದಿ ಅದು ಪ್ರೇಕ್ಷಕನೊಂದಿಗೆ ನೇರವಾಗಿ ಸಂವಹನ ನಡೆಸುತ್ತದೆ. ಚಿತ್ರರಚನೆ ಮತ್ತು ಚಿತ್ರದ ನೋಟ ಮನಸ್ಸನ್ನು ಮುದಗೊಳಿಸುವುದಲ್ಲದೆ ಹುರುಪನ್ನೂ ನೀಡುತ್ತದೆ. ಆದುದರಿಂದಲೇ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸಕ್ಕೆ ಚಿತ್ರಕಲೆಯ ಕಲಿಕೆಯು ಹೆಚ್ಚು ಸಹಾಯಕರವಾಗುವುದು.

ಮಕ್ಕಳು ಗೆರೆಗಳು ಮತ್ತು ಬಣ್ಣಗಳ ವಿಸ್ಮಯವನ್ನು ಅತಿಯಾದ ಕುತೂಹಲದಿಂದ ನೋಡಿ ಆಸ್ವಾದಿಸುವರು. ಬೆರಳುಗಳನ್ನು ಜೋಡಿಸಿ ಉಪಯೋಗಿಸುವುದಕ್ಕಿಂತ ಮೊದಲೇ ಅವರು ಚಿತ್ರ ರಚಿಸಲು ಆರಂಭಿಸುವರು. ಬಣ್ಣ ಉಂಟುಮಾಡುವ ಯಾವುದೇ ವಸ್ತುವನ್ನು ಉಪಯೋಗಿಸಿ ಅವರು ನೆಲದಲ್ಲಿಯೂ ಗೋಡೆಯಲ್ಲಿಯೂ ಚಿತ್ರ ಬಿಡಿಸುವರು. ಬುದ್ಧಿಶಕ್ತಿಯ ಬೆಳವಣಿಗೆಯ ಮೊದಲ ಹಂತದಲ್ಲಿ ಮನಸ್ಸಿನಲ್ಲಿ ಮೂಡಿ ಬರುವ ವಿಚಾರಗಳನ್ನು ರಚಿಸಿಯೂ ಅಭಿನಯಿಸಿಯೂ, ಹಾಡಿಯೂ ಪ್ರತಿಬಿಂಬಿಸುವುದರ ಭಾಗವಾಗಿ ಮಕ್ಕಳು ಈ ರೀತಿಯ ಕಾರ್ಯಗಳಲ್ಲಿ ನಿರತರಾಗುವುದು. ಅದನ್ನು ಮುಂದುವರಿಸುವ ಹಾಗೂ ವ್ಯಕ್ತಿತ್ವ ವಿಕಾಸದ ಭಾಗವಾಗಿ ಕ್ರಮೀಕರಿಸುವ ಕಾರ್ಯ ಶಿಕ್ಷಣಕ್ಕಿದೆ.

ಗೆರೆಗಳು ಮತ್ತು ಬಣ್ಣಗಳು ಚಿತ್ರಕಲೆಯ ಮೂಲ ಘಟಕಗಳು. ಬಣ್ಣಗಳು ಪ್ರಕೃತಿಯಲ್ಲಿರುವುದಾದರೆ ಗೆರೆಗಳು ಚಿತ್ರಕಲಾವಿದನಿಂದ ಸೃಷ್ಟಿಸಲ್ಪಡುತ್ತವೆ. ಎಳೆಯ ಪ್ರಾಯದ ಮಕ್ಕಳು ಸಹಜವಾಗಿಯೇ ರೇಖೆಗಳನ್ನು ರಚಿಸುವಾಗ ಬಾಹ್ಯಹಸ್ತಕ್ಷೇಪದಿಂದ ಅದಕ್ಕೆ ಅಡ್ಡಿಯಾಗದಂತೆ ಚಿತ್ರಕಲಾ ಶಿಕ್ಷಣದ ಮೊದಲ ಹಂತದಲ್ಲಿ ನೋಡಿಕೊಳ್ಳಬೇಕು. ಆದರೆ ಬಣ್ಣಗಳ ವಿನ್ಯಾಸದ ಕುರಿತಾದ ತಿಳುವಳಿಕೆಯನ್ನು ನೀಡುವುದರೊಂದಿಗೆ ಅವುಗಳ ಸಂಯೋಜನೆಯಿಂದಿರುವ ಸೌಂದರ್ಯ ಸಾಕ್ಷಾತ್ಕಾರಕ್ಕೂ ಅವಕಾಶ ಒದಗಿಸಬೇಕು. ಬಣ್ಣಗಳನ್ನು ಇಚ್ಛಾನುಸಾರವಾಗಿ ಸ್ವತಃ ಉಪಯೋಗಿಸಲು ಮತ್ತು ಬಿಂಬ ಕಲ್ಪನೆ ಮಾಡಲು ಅವಕಾಶ ನೀಡಬೇಕು.

ಬಿಂಬಗಳ ಕುರಿತು ಮಕ್ಕಳು ಕಲ್ಪನೆಯು ಹಿರಿಯರಿಗಿಂತ ಭಿನ್ನವಾಗಿರುವುದು. ರೂಪದ ಆಳತೆಗಳಲ್ಲಿ ಅವರು ಹಿರಿಯರಿಗಿಂತ ಭಿನ್ನವಾಗಿ ಕಾಣುವ ನಿಷ್ಪತ್ತಿಯು ಅವರು ರಚಿಸುವ ಗೆರೆಗಳಲ್ಲಿ ಪ್ರಕಟವಾಗುವುದು. ಮಕ್ಕಳಿಗೆ ಗೆರೆಗಳ ಕುರಿತು ಕಲಿಸುವಾಗ ಅದನ್ನು ಮೊದಲು ತಿಳಿದುಕೊಳ್ಳಬೇಕು. ಹೀಗೆ ಅವರು ಸ್ವತಃ ಕಂಡುಕೊಂಡ ಬಿಂಬದ ರಚನೆಯ ಸಹಜತೆ ನಷ್ಟವಾಗದಂತೆ ಅದನ್ನು ಉತ್ತಮಗೊಳಿಸುವ ರೀತಿಯಲ್ಲಿ. ಚಿತ್ರಕಲಾ ಶಿಕ್ಷಣವು ವಿಕಾಸಗೊಳ್ಳಬೇಕು. ಎಲ್.ಪಿ ಮಟ್ಟದ ಚಿತ್ರಕಲಾ ಶಿಕ್ಷಣದಲ್ಲಿ ತಂತ್ರಜ್ಞಾನವನ್ನು ಸಾಧ್ಯವಾದಷ್ಟು ದೂರವಿರಿಸಲು ಗಮನಿಸಬೇಕು. ಸುತ್ತಮುತ್ತಲೂ ಇರುವವುಗಳನ್ನು ಚೆನ್ನಾಗಿ ನಿರೀಕ್ಷಣೆ ಮಾಡಲು, ಇಷ್ಟಾನುಸಾರವಾಗಿ ರಚಿಸಲು, ಚಿತ್ರಗಳನ್ನು ನೋಡಿ ಆಸ್ವಾದಿಸಲು ಅವಕಾಶಗಳನ್ನು ಧಾರಾಳವಾಗಿ ಒದಗಿಸುವ ಅಗತ್ಯವಿದೆ.

## ಕಲಿಕಾ ಸಾಧನೆಗಳು

**ಐದನೇ ತರಗತಿ**

- ಪ್ರಕೃತಿಯನ್ನು ನಿರೀಕ್ಷಣೆ ಮಾಡಿ ಗೆರೆಗಳು ಮತ್ತು ಬಣ್ಣಗಳನ್ನು ಉಪಯೋಗಿಸಿ ಚಿತ್ರರಚನೆ ಮಾಡುವುದು.
- ಚಿತ್ರಗಳು, ಶಿಲ್ಪಗಳನ್ನು ಸಂಗ್ರಹಿಸುವುದು.
- ಮೂಲ ರೂಪಗಳನ್ನು (shapes) ಉಪಯೋಗಿಸಿ ಪರಿಚಿತ ರೂಪಗಳನ್ನು ರಚಿಸುವುದು.
- ವಿವಿಧ ಮಾಧ್ಯಮಗಳನ್ನು ಚಿತ್ರ ರಚನೆಗಾಗಿ ಉಪಯೋಗಿಸುವುದು.
- ಕೊಲಾಷ್ ತಯಾರಿಸಲು ವಿವಿಧ ವಸ್ತುಗಳನ್ನು ಉಪಯೋಗಿಸುವುದು.
- ತ್ರಿಮಾನ ರೂಪದ ವಸ್ತುಗಳನ್ನು ತಯಾರಿಸುವುದು.
- ಆಶಯ ಪ್ರಕಟನೆಗೆ ಚಿತ್ರವನ್ನು ಉಪಯೋಗಿಸಲು ಸಾಧ್ಯವಾಗಿಸುವುದು.
- ತರಕಾರಿಗಳು ಮತ್ತು ಎಲೆಗಳನ್ನು ಉಪಯೋಗಿಸಿ ಹಲವು ಬಣ್ಣಗಳಿರುವ ಮಾದರಿಗಳನ್ನು (ಪೇಟರ್ನ್) ತಯಾರಿಸುವುದು.

**ಆರನೇ ತರಗತಿ**

- ಪ್ರಕೃತಿಯ ದೃಶ್ಯಗಳನ್ನು ನಿರೀಕ್ಷಣೆ ಮಾಡಿ ಚಿತ್ರ ರಚಿಸಿ ಬಣ್ಣ ಕೊಡುವುದು.
- ತ್ರಿಮಾನ ರೂಪದ ವಸ್ತುಗಳನ್ನು (ಶಿಲ್ಪಗಳನ್ನು ) ತಯಾರಿಸುವುದು.
- ನೆರಳು ಚಿತ್ರಗಳನ್ನು ತಯಾರಿಸುವುದು. ಸಾರ್ವಜನಿಕ ಸಮಸ್ಯೆಗಳು, ಪ್ರಸ್ತುತ ಘಟನೆಗಳು, ಆಶಯ ವಲಯಗಳು ಎಂಬಿವುಗಳನ್ನು ಕೇಂದ್ರೀಕರಿಸಿ ಪೋಸ್ಟರ್ ತಯಾರಿಸುವುದು.
- ಎಲೆಗಳನ್ನು ಅಂಟಿಸಿ ಮೃಗ ಪಕ್ಷಿಗಳ ರೂಪಗಳನ್ನು ನಿರ್ಮಿಸುವುದು.
- ಕತೆ, ಕವಿತೆ ಎಂಬಿವುಗಳನ್ನು ಓದಿ ಆಶಯ ಸಂದರ್ಭ ಚಿತ್ರೀಕರಣವನ್ನು ನಡೆಸುವುದು.
- ತರಕಾರಿಗಳು, ಎಲೆಗಳು, ಗಡ್ಡೆ ಗೆಣಸುಗಳು ಎಂಬಿವುಗಳನ್ನು ಉಪಯೋಗಿಸಿ ವಿನ್ಯಾಸಗಳನ್ನು ರಚಿಸುವುದು.

**ಏಳನೇ ತರಗತಿ**

- ಪ್ರಕೃತಿಯ ದೃಶ್ಯಗಳನ್ನು ರಚಿಸಿ ಬಣ್ಣ ಕೊಡುವುದು.
- ಚಿತ್ರ, ಶಿಲ್ಪ ಎಂಬಿವುಗಳನ್ನು ಸಂಗ್ರಹಿಸುವುದು.
- ಕಥೆ, ಕವಿತೆಗಳಲ್ಲಿರುವ ಕಥಾಪಾತ್ರಗಳ ಸ್ವಭಾವ ಚಿತ್ರಣ ಮತ್ತು ಆಶಯಾಧಾರಿತ ಚಿತ್ರಣ ನಡೆಸುವುದು.
- ಕೊಲಾಷ್ ತಯಾರಿಸುವುದು.
- ಆಶಯಾಧಾರಿತ ಪೋಸ್ಟರ್ ತಯಾರಿಸುವುದು (ಪ್ರಸ್ತುತ ಘಟನೆಗಳು–ಸಾರ್ವಜನಿಕ ಸಮಸ್ಯೆಗಳು)
- ಶುಭಾಶಯ ಪತ್ರಗಳನ್ನು ತಯಾರಿಸುವುದು
- ಆವೆ ಮಣ್ಣು ಉಪಯೋಗಿಸಿ ತ್ರಿಮಾನ ರೂಪಗಳನ್ನು ತಯಾರಿಸುವುದು.
- ಕಾರ್ಟೂನುಗಳನ್ನು ರಚಿಸುವುದು.

# ಐದನೇ ತರಗತಿ

## ಯೂನಿಟ್ 1 : ರೂಪ, ಬಣ್ಣಗಳ ವ್ಯತ್ಯಾಸ

ಪ್ರತಿಯೊಂದು ಜೀವಿಯ ಹಾಗೂ ವಸ್ತುಗಳಿಗೆ ಮೊದಲು ಅವುಗಳ ರೂಪದೊಂದಿಗಿನ ತಿಳುವಳಿಕೆ ಮಕ್ಕಳಿಗೆ ಉಂಟಾಗಬೇಕಾಗಿದೆ. ಎರಡೋ ಅಥವಾ ಅದಕ್ಕಿಂತ ಹೆಚ್ಚು ವಸ್ತುಗಳ ಚಿತ್ರಗಳನ್ನು ಬಿಡಿಸುವಾಗಲೋ, ಒಂದು ಹಣ್ಣು ಕೀಳುವಾಗಲೋ ಅದರ ಪ್ರತಿಯೊಂದು ಭಾಗವೂ ತಮ್ಮಲ್ಲಿರುವ ದೊಡ್ಡತನದ ಅನುಮತಿಯನ್ನು ಗಮನಿಸಬೇಕಾದುದು ವಸ್ತುವಿನ ಯಥಾತಥಾ ಚಿತ್ರೀಕರಣಕ್ಕೆ ಅಗತ್ಯವಾಗಿದೆ.

### ಕಲಿಕಾ ಸಾಧನೆ

ವಸ್ತುಗಳ ರೂಪಗಳ ತಿಳುವಳಿಕೆ, ಅನುಪಾತ, ವರ್ಣವಿನ್ಯಾಸ ಎಂಬಿವುಗಳ ಕುರಿತು ಜ್ಞಾನವನ್ನು ಗಳಿಸುವುದು.

### ಆಶಯ ಗ್ರಹಣ

- ಚಿತ್ರೀಕರಣಕ್ಕೆ ಮೊದಲು ವಸ್ತುಗಳೋ ಜೀವಿಗಳೋ ಅವುಗಳ ರೂಪಗಳ ಕುರಿತಾಗಿ, ಇನ್ನಿತರ ಘಟಕಗಳ ಕುರಿತು ವ್ಯಕ್ತವಾದ ತಿಳುವಳಿಕೆ ಉಂಟಾಗಬೇಕಾಗಿದೆ.
- ಈ ರೀತಿಯ ತಿಳುವಳಿಕೆಯಿಂದ ಪ್ರತಿಯೊಂದರ ರೂಪಘಟಕಗಳ ರೇಖೆಗಳನ್ನು ಉಪಯೋಗಿಸಿ ಬಿಡಿಸುವುದಾಗಿದೆ ಚಿತ್ರ ರಚನೆ.
- ಒಂದು ವಸ್ತುವಿನ ಹಲವು ಭಾಗಗಳು ತಮ್ಮಲ್ಲಿ ಎರಡೋ ಎರಡಕ್ಕಿಂತ ಹೆಚ್ಚೋ ವಸ್ತುಗಳ ನಡುವೆ ಇರುವ ಗಾತ್ರದಲ್ಲಿರುವ ಅನುಪಾತ ಯಥಾತಥಾ ಚಿತ್ರಗಳಲ್ಲಿ ಅನಿವಾರ್ಯವಾಗಿದೆ.

### ನೈಪುಣ್ಯಗಳು

- ವಸ್ತುಗಳನ್ನೂ ಜೀವಿಗಳನ್ನೂ ಚಿತ್ರೀಕರಿಸುವುದಕ್ಕಾಗಿ ಅವುಗಳ ರೂಪಗಳ ಬಗ್ಗೆ ಇರುವ ತಿಳುವಳಿಕೆಗಳನ್ನು ಹೊಂದುವುದು.
- ಗಾತ್ರಕ್ಕೆ ಅನುಪಾತವಾಗಿ ಚಿತ್ರೀಕರಿಸಲು ಸಾಧ್ಯವಾಗುತ್ತದೆ.

### ಕಲಿಕಾ ಚಟುವಟಿಕೆಗಳು

- ಕೆಲವು ವಸ್ತುಗಳನ್ನು ಪ್ರದರ್ಶಿಸುವುದು.
- ಒಂದು ವಸ್ತುವಿನ ಚಿತ್ರೀಕರಣವನ್ನು ನಡೆಸುವಾಗ ಎಲ್ಲೆಲ್ಲಿ ರೇಖೆಗಳನ್ನು ಹಾಕುವುದು?
- ವಸ್ತುವಿನ ತುದಿಗಳು, ವಸ್ತುವಿನ ಹಲವು ಘಟಕಗಳ ಅಗ್ರಭಾಗಗಳು
- ಒಂದು ವಸ್ತುವಿನ ಪ್ರತಿಯೊಂದು ಭಾಗವು ಪರಸ್ಪರ ಮೌಲ್ಯಮಾಪನದಲ್ಲಿ ಯಾವ ಅನುಪಾತದಲ್ಲಿರುತ್ತದೆ.

- ಅನುಪಾತವನ್ನು ತಿಳಿಯುವುದು.
- ಈ ತಿಳುವಳಿಕೆಯನ್ನಿಟ್ಟುಕೊಂಡು ಮೇಜಿನ ಮೇಲೆ ಚಿತ್ರಗಳನ್ನು ಬಿಡಿಸುವುದು. ಹೊಸದನ್ನು ಸೇರಿಸುವುದು.

### ಮೌಲ್ಯಮಾಪನ

- ರೂಪದ ತಿಳುವಳಿಕೆ ಉಂಟಾಗಿದೆ.
- ವಸ್ತುವಿನಲ್ಲಿರುವ ಘಟಕಗಳನ್ನು ಬಿಡಿಸಿ ಸೇರಿಸಲಾಗಿದೆ.
- ಆನುಪಾತಿಕವಾಗಿ ಬಿಡಿಸಲಾಗಿದೆ.

### ಗಳಿಸಬಹುದಾದ ಕಲಿಕಾ ಹಿರಿಮೆಗಳು

*ಕೆಳಗೆ ಕೊಟ್ಟಿರುವ ಕಲಿಕಾ ಹಿರಿಮೆಗಳನ್ನು ಗಳಿಸಲು ಎಷ್ಟರ ಮಟ್ಟಿಗೆ ಸಾಧ್ಯವಾಯಿತು?*

- ಕ್ರಮಬದ್ಧವಾದ ಕ್ರಮೀಕರಣಗಳಿಂದ ಸಹಜವಾದ ಚಿತ್ರೀಕರಣ ಸಾಧ್ಯವಾಗುತ್ತದೆ.

## ಯೂನಿಟ್ – 2 : ಬಣ್ಣಗಳು

ಬಣ್ಣಗಳ ಕುರಿತು ಇರುವ ತಿಳುವಳಿಕೆಗಳನ್ನು ಮಗು ಪಡೆಯುತ್ತದೆ. ಪ್ರಾಥಮಿಕ ಬಣ್ಣಗಳಾದ ಕೆಂಪು, ನೀಲಿ, ಹಳದಿ ಎಂಬಿವುಗಳು ಹಲವು ಅನುಪಾತದಲ್ಲಿಯೂ ಒಟ್ಟಾಗಿ ಸೇರಿಸಿದರೆ ಯಾವ ಬಣ್ಣಗಳು ಬೇಕಾದರೂ ಲಭಿಸಬಹುದೆಂಬ ತಿಳುವಳಿಕೆ ಮಕ್ಕಳಲ್ಲಿ ಉಂಟಾಗಬೇಕಾಗಿದೆ. ಈ ವಿಷಯದಲ್ಲಿ ಪ್ರಾಯೋಗಿಕ ಅನುಭವಗಳು ಮಕ್ಕಳಿಗೆ ಅಗತ್ಯವಾಗಿ ಉಂಟಾಗಬೇಕಾಗಿದೆ.

### ಕಲಿಕಾ ಸಾಧನೆಗಳು


ಪ್ರಾಥಮಿಕ ಬಣ್ಣಗಳನ್ನು ಉಪಯೋಗಿಸಿ ಪಡೆಯುವುದು.

### ಆಶಯಗಳು

- ಕೆಂಪು, ಹಳದಿ, ನೀಲಿ ಎಂಬಿವುಗಳಾಗಿವೆ ಪ್ರಾಥಮಿಕ ಬಣ್ಣಗಳು.
- ಪ್ರಾಥಮಿಕ ಬಣ್ಣಗಳು ಹಲವು ಅನುಪಾತದಲ್ಲಿಯೂ ಅಥವಾ ಸ್ವಲ್ಪವಾಗಿ ಸೇರಿಸುವುದರಿಂದಲೂ ಯಾವ ಬಣ್ಣ ಬೇಕಾದರೂ ಸಿಗಬಹುದು.
- ಪ್ರಾಥಮಿಕ ಬಣ್ಣಗಳಂತೆ ದ್ವಿತೀಯ ಬಣ್ಣಗಳೂ ತೃತೀಯ ಬಣ್ಣಗಳೂ ಚತುಷ್ಕ ಬಣ್ಣಗಳೂ ಇವೆ.

### ನೈಪುಣ್ಯಗಳು

- ಪ್ರಾಥಮಿಕ ಬಣ್ಣಗಳಿಂದ ದ್ವಿತೀಯ ಬಣ್ಣಗಳನ್ನೂ ತೃತೀಯ ಬಣ್ಣಗಳನ್ನೂ ನಿರ್ಮಿಸು ವುದಕ್ಕಿರುವ ನೈಪುಣ್ಯಗಳು.
- ಬಣ್ಣಗಳನ್ನು ಸರಿಯಾದ ಪ್ರಮಾಣದಲ್ಲಿ ಉಪಯೋಗಿಸಲಿರುವ ಸಾಮರ್ಥ್ಯ
- ಅಗತ್ಯವಿರುವ ಬಣ್ಣಗಳನ್ನು ನಿರ್ಮಿಸುವುದಕ್ಕಿರುವ ಸಾಮರ್ಥ್ಯ




## ಕಲಿಕಾ ಚಟುವಟಿಕೆಗಳು

***ಆರಂಭದ ಚಟುವಟಿಕೆ***

- ಒಂದು ಬಿಳಿ ಕಾಗದದಲ್ಲಿ ಕೆಂಪು, ಹಳದಿ, ನೀಲಿ ಎಂಬೀ ಬಣ್ಣಗಳನ್ನು ತೆಗೆದು ಇಡುವುದು.
- ಅಧ್ಯಾಪಕರು ಮಕ್ಕಳನ್ನು ಕೇಳುತ್ತಾರೆ. ನನಗೆ ಕೇಸರಿ ಬಣ್ಣವಿರುವ ಹಣ್ಣುಗಳನ್ನು ಬಿಡಿಸಬೇಕು. ಇದರಲ್ಲಿ ಆ ಬಣ್ಣಗಳಿಲ್ಲ .... ಏನು ಮಾಡುವುದು..... ಯಾವುದೆಲ್ಲಾ ಬಣ್ಣಗಳನ್ನು ಸೇರಿಸಿದರೆ ಸಿಗುವುದು?
- ಮಕ್ಕಳು ಹೇಳಿದ ಹಾಗೆಲ್ಲಾ ಮಾಡಿ ನೋಡಿದರೂ ಅಂತಿಮವಾಗಿ ಸರಿಯಾಗುತ್ತದೆ.
- ಮಕ್ಕಳು ಪ್ರತಿಯೊಂದು ಬಣ್ಣಗಳನ್ನು ಪರಸ್ಪರ ಸೇರಿಸಿ ತಿಳಿದುಕೊಳ್ಳುವುದು.
- ಒಟ್ಟಾರೆ ಅಧ್ಯಾಪಕರು ಆ ಮೂರು ಬಣ್ಣಗಳಿಂದ ಒಂದು ಪ್ರಕೃತಿದೃಶ್ಯವನ್ನು ಬಿಡಿಸಿ ತೋರಿಸಿದರೆ ಆ ಮೂರು ಬಣ್ಣಗಳಿಂದ ಏನೂ ಸಾಧ್ಯವಾಗಬಹುದು ಎಂದು ಮಕ್ಕಳಿಗೆ ತಿಳಿಸಿದರು.
- ಇದೇ ಪ್ರಾಥಮಿಕ ಬಣ್ಣಗಳಾಗಿವೆ.

## ಮೌಲ್ಯಮಾಪನ

- ಅಗತ್ಯವಾದ ಬಣ್ಣಗಳು ಲಭಿಸಿದವೋ?
- ಇವುಗಳಿಂದ ಹೇಗೆಲ್ಲಾ ಬಿಡಿಸಬಹುದು?

## ಗಳಿಸಬಹುದಾದ ಕಲಿಕಾ ಹಿರಿಮೆಗಳು

*ಕೆಳಗೆ ಕೊಟ್ಟಿರುವ ಕಲಿಕಾ ಹಿರಿಮೆಗಳನ್ನು ಗಳಿಸಲು ಎಷ್ಟರ ಮಟ್ಟಿಗೆ ಸಾಧ್ಯವಾಯಿತು?*

- ಪ್ರಾಥಮಿಕ ಬಣ್ಣಗಳನ್ನು ಉಪಯೋಗಿಸಿ ರಚನೆ ನಡೆಸುವುದು.

# ಯೂನಿಟ್ – 3 : ಆಶಯ ಆಧಾರಿತ ಚಿತ್ರೀಕರಣ

ಸ್ವತಂತ್ರ ರಚನೆಯನ್ನೂ ಸೃಜನಾತ್ಮಕ ರಚನೆಯಾಗಿ ಪರಿಗಣಿಸುವುದು. ಇದು ಆಶಯಗಳ ವಿನಿಮಯಕ್ಕೆ ಸ್ವಂತವಾದ ಆವಿಷ್ಕಾರ ರೀತಿಯಾಗಿದೆ. ಕಲಾಗಾರರಿಗೆ ಹೆಚ್ಚಿನ ಸ್ವಾತಂತ್ರ್ಯವು ಈ ವಲಯದಲ್ಲಿದೆ. ಮಾಧ್ಯಮವನ್ನು ಆಯ್ಕೆ ಮಾಡುವುದು, ಆವಿಷ್ಕಾರ ರೀತಿ, ರೂಪಗಳ ರಚನೆ, ವ್ಯತ್ಯಾಸ ಮುಂತಾದವುಗಳನ್ನು ತೀರ್ಮಾನಿಸುವುದು ಚಿತ್ರಕಾರನ ಅವಕಾಶವಾಗಿದೆ.

## ಕಲಿಕಾ ಸಾಧನೆ

ಸ್ವತಂತ್ರವೂ ನಿರ್ದೇಶಾನುಸಾರವಾಗಿರುವ ಆಶಯ ಆಧಾರಿತ ಚಿತ್ರೀಕರಣವನ್ನು ನಡೆಸುವುದು.

## ಆಶಯ, ತಿಳುವಳಿಕೆ

- ಸಾಮಾಜಿಕ ಸಮಸ್ಯೆಗಳಿಗೆದುರಾಗಿ ಪ್ರತಿಕ್ರಿಯಿಸಲು ಚಿತ್ರಕಲಾ ಮಾಧ್ಯಮವನ್ನು ಉಪಯೋಗಿಸಬಹುದು.
- ಸ್ವತಂತ್ರ ರಚನೆಗೆ ಬೇಕಾದ ಜ್ಞಾನವನ್ನು ಪಡೆಯುವುದು

## ನೈಪುಣ್ಯಗಳು

- ಸ್ವತಂತ್ರವಾದ ಚಿತ್ರರಚನೆ ನಡೆಸಬೇಕಾದ ನೈಪುಣ್ಯಗಳು

## ಕಲಿಕಾ ಚಟುವಟಿಕೆಗಳು

- ಸಾಮಾಜಿಕ ವಿಷಯಗಳಿಗೆ ಸಂಬಂಧಿಸಿದ ಚಟುವಟಿಕೆಗಳು, ಚಿತ್ರ ಸಂಗ್ರಹಣೆಗಳು, ಫೋಟೋ ಎಂಬಿವುಗಳನ್ನು ನೋಡುವುದು.
- ಸಾಮಾಜಿಕ ವಿಷಯಗಳೊಂದಿಗೆ ಮೊದಲೇ ಕಂಡ ವಿಷಯಗಳ ಕುರಿತು ಚರ್ಚೆ.
- ಸಾಮಾಜಿಕ ಅನಾಚಾರಗಳಿಗೆದುರಾಗಿರುವ ಚಿತ್ರ ರಚನೆ
- ಸ್ವತಂತ್ರವಾದ ಚಿತ್ರರಚನೆ.

## ಮೌಲ್ಯಮಾಪನ

- ಚಿತ್ರದ ಆಶಯ ವಿನಿಮಯ ಗುಣಮಟ್ಟ
- ರಚನಾ ಸಾಮರ್ಥ್ಯ
- ಆಕರ್ಷಣೀಯತೆ

### ಗಳಿಸಬಹುದಾದ ಕಲಿಕಾ ಹಿರಿಮೆಗಳು

*ಕೆಳಗೆ ಕೊಟ್ಟಿರುವ ಕಲಿಕಾ ಹಿರಿಮೆಗಳನ್ನು ಗಳಿಸಲು ಎಷ್ಟರ ಮಟ್ಟಿಗೆ ಸಾಧ್ಯವಾಯಿತು?*

- ವೈಯಕ್ತಿಕವಾಗಿ ಆವಿಷ್ಕಾರ ಪ್ರಕಟನೆಗೆ ಮಕ್ಕಳಿಗೆ ಸಾಧ್ಯವಾಗುವುದು.

# ಯೂನಿಟ್ – 4 : ಜ್ಯಾಮಿತಿಯ ರೂಪಗಳು

ವಸ್ತುಗಳ ಹಾಗೂ ಜೀವಿಗಳ ಚಿತ್ರಕ್ಕೆ ಸಾಮಾನ್ಯವಾಗಿ ಉಪಯೋಗಿಸುವುದಾಗಿದೆ ಜ್ಯಾಮಿತಿಗಳು. ವಸ್ತುಗಳನ್ನು ಸಮಗ್ರತೆಯೊಂದಿಗೆ ವೀಕ್ಷಿಸುವುದೂ ಅವುಗಳಲ್ಲಿ ವಿವಿಧ ಜ್ಯಾಮಿತಿಯ ರೂಪಗಳನ್ನು ಕಂಡುಹಿಡಿದು ಅವುಗಳ ಸಹಾಯದೊಂದಿಗೆ ಚಿತ್ರಗಳನ್ನು ಬಿಡಿಸುವ ರೀತಿಗಳಾಗಿವೆ. ಯಾವುದೇ ವಸ್ತುವನ್ನೂ ಜ್ಯಾಮಿತಿಯ ರೂಪಗಳಿಗೆ ತರುವುದಕ್ಕೆ ಸಾಧ್ಯವಾಗುವುದು. ಪ್ರಕೃತಿಯನ್ನು ರೂಪಿಸಿದ ಜ್ಯಾಮಿತೀಯತೆಗೆ ಒಳಗೊಳ್ಳಿಸುವುದಾಗಿದೆ ಈ ರೀತಿಯಲ್ಲಿ ಮಾಡುವುದು.

## ಕಲಿಕಾ ಸಾಧನೆ

ಜ್ಯಾಮಿತಿಯ ರೂಪಗಳಿಂದ ರೂಪಗಳನ್ನುಂಟು ಮಾಡುವುದು.

## ಆಶಯ, ತಿಳುವಳಿಕೆ

- ಜ್ಯಾಮಿತಿ ರೂಪಗಳನ್ನು ಉಪಯೋಗಿಸಿ ಚಿತ್ರೀಕರಣವನ್ನು ಸುಲಭ ಮಾಡಲು ಸಾಧ್ಯವಾಗುತ್ತದೆ.
- ಎಲ್ಲಾ ವಸ್ತುಗಳಲ್ಲಿ ಜ್ಯಾಮಿತಿಯ ರೂಪಗಳು ನೋಡುವುದಕ್ಕೆ ಸಾಧ್ಯವಾಗುತ್ತದೆ.
- ಕೆಲವು ಬಾರಿ ಒಂದೋ ಅದಕ್ಕಿಂತ ಹೆಚ್ಚೋ ಜ್ಯಾಮಿತಿಯ ರೂಪಗಳು ಸೇರಿರುವುದನ್ನು ಈಗಲು ಕಾಣಬಹುದು.

## ಕಲಿಕಾ ಚಟುವಟಿಕೆಗಳು

- ಪ್ರಕೃತಿಯ ವಸ್ತುಗಳಲ್ಲಿ ಜ್ಯಾಮಿತಿಯ ರೂಪಗಳು ದಾಖಲಿಸಿದ ಚಿತ್ರಗಳ ಪ್ರದರ್ಶನ.
- ಯಾವುದೆಲ್ಲಾ ಜ್ಯಾಮಿತಿಯ ರೂಪಗಳು?
- ಪ್ರತಿಯೊಂದು ವಸ್ತುವಿನಲ್ಲೂ ಜ್ಯಾಮಿತಿಯ ರೂಪಗಳು ಅಡಗಿವೆ ಎಂಬ ಆಶಯಕ್ಕೆ ಚರ್ಚೆ. ಸೋದಾಹರಣೆ
- ಮೇಜಿನ ಮೇಲೆ ಇಟ್ಟ ವಸ್ತುಗಳಲ್ಲಿ ಯಾವುದೆಲ್ಲಾ ಜ್ಯಾಮಿತಿಯ ರೂಪಗಳು ಅಡಗಿರುತ್ತವೆ – ನಿರೀಕ್ಷಣೆ, ಕಂಡುಹಿಡಿಯುವುದು
- ಕಂಡುಹಿಡಿದ ಜ್ಯಾಮಿತಿಯ ರೂಪಗಳನ್ನು ಉಪಯೋಗಿಸಿ ವಸ್ತುಗಳನ್ನು ಬಿಡಿಸುವುದು

## ಮೌಲ್ಯಮಾಪನ

- ಜ್ಯಾಮಿತಿಯ ರೂಪಗಳನ್ನು ಕಂಡುಹಿಡಿಯುವುದು
- ಆಕೃತಿಗಳ ಕುರಿತಾದ ತಿಳುವಳಿಕೆ
- ನಿಖರತೆ

### ಗಳಿಸಬಹುದಾದ ಕಲಿಕಾ ಹಿರಿಮೆಗಳು

*ಕೆಳಗೆ ಕೊಟ್ಟಿರುವ ಕಲಿಕಾ ಹಿರಿಮೆಗಳನ್ನು ಗಳಿಸಲು ಎಷ್ಟರ ಮಟ್ಟಿಗೆ ಸಾಧ್ಯವಾಯಿತು?*

- ಪ್ರಕೃತಿಯ ವಸ್ತುಗಳಲ್ಲಿರುವ ಜ್ಯಾಮಿತಿಯ ರೂಪಗಳನ್ನು ತಿಳಿದುಕೊಳ್ಳುವುದು ಮತ್ತು ಅವುಗಳನ್ನು ಚಿತ್ರ ಬಿಡಿಸುವುದಕ್ಕಾಗಿ ಜ್ಯಾಮಿತಿಯ ರೂಪಗಳನ್ನು ಉಪಯೋಗಿಸಲು ಸಾಧ್ಯವಾಗುತ್ತದೆ.

# ಯೂನಿಟ್ – 5 : ಕಂಪ್ಯೂಟರ್ ಗ್ರಾಫಿಕ್ಸ್

ಆಧುನಿಕ ತಾಂತ್ರಿಕ ವಿದ್ಯೆಗಳ ಉಪಯೋಗದಿಂದ ಯಾವುದೇ ವಲಯದಲ್ಲೂ ಹೆಚ್ಚಾಗಿ ಸೂಕ್ಷ್ಮತೆಯಿಂದಲೂ ನಿಖರತೆಯಿಂದಲೂ ಕಾರ್ಯಕ್ಷಮತೆಯಿಂದಲೂ ಮಾಡಲು ಸಾಧ್ಯವಾಗುತ್ತದೆ. ಚಿತ್ರ ಕಲಾರಂಗದಲ್ಲಿ ಕಂಪ್ಯೂಟರನ್ನು ವಿವಿಧ ಸೋಫ್ಟ್‌ವೇರ್‌ಗಳ ಮೂಲಕ ಉಪಯೋಗಗಳವರೆಗೆ ಸ್ವೀಕರಿಸಲ್ಪಟ್ಟಿದೆ. ನಿಖರತೆಯೂ ಸುಲಭವೂ ಆಕರ್ಷಣೀಯತೆಯೂ ಸ್ಪಷ್ಟತೆಯೂ ಇದಕ್ಕೆ ಪ್ರೇರಣೆಯನ್ನು ನೀಡುವುದು ಪ್ರಧಾನ ಘಟಕಗಳಾಗಿವೆ. ಐದನೇ ತರಗತಿಯಲ್ಲಿ ಕಂಪ್ಯೂಟರ್‌ಗಳನ್ನು ಉಪಯೋಗಿಸಿ ಕಲಿಯುವುದಕ್ಕೂ ಅದರಲ್ಲಿ ಚಿತ್ರ ರಚನೆಯನ್ನು ನಡೆಸುವುದಕ್ಕೂ ಮಕ್ಕಳಿಗೆ ಸಾಧ್ಯವಾಗಬೇಕು. ಕೆಲವು ವಿಷಯಗಳಲ್ಲಿ ಕಂಪ್ಯೂಟರ್ ಕೈಗಳಿಗಿಂತ ಉತ್ತಮವಾಗಿದೆ.

## ಕಲಿಕಾ ಸಾಧನೆ

ಕಂಪ್ಯೂಟರ್ ಗ್ರಾಫಿಕ್ಸಿನ ಸಾಧ್ಯತೆಗಳನ್ನು ಪರಿಚಯ ಮಾಡುವುದು.

## ಆಶಯ, ತಿಳುವಳಿಕೆ

- ಚಿತ್ರವನ್ನು ಬಿಡಿಸುವುದಕ್ಕೆ ಆಧುನಿಕ, ತಾಂತ್ರಿಕ ವಿದ್ಯೆಗಳಾದ ಕಂಪ್ಯೂಟರ್‌ಗಳು ಮತ್ತು ವಿವಿಧ ಸೋಫ್ಟ್‌ವೇರ್‌ಗಳಿವೆ.

- ಹೆಚ್ಚಾಗಿ ನಿಖರತೆಯಿಂದಲೂ ಆಕರ್ಷಣೀಯತೆಯಿಂದಲೂ ಸುಲಭವಾಗಿಯೂ ಚಿತ್ರ ರಚನೆಯನ್ನು ನಡೆಸಲೂ ಬಿಡಿಸಿದ ಚಿತ್ರಗಳ ಪ್ರತಿಗಳನ್ನು ತೆಗೆಯುವುದಕ್ಕೂ ಇದರಿಂದ ಸಾಧ್ಯವಾಗುತ್ತದೆ.

## ನೈಪುಣ್ಯಗಳು

- ಕಂಪ್ಯೂಟರ್ ಉಪಯೋಗಿಸುವುದಕ್ಕೂ ವಿವಿಧ ಸೋಫ್ಟ್‌ವೇರ್‌ಗಳನ್ನು ಉಪಯೋಗಿಸುವುದಕ್ಕಿರುವ ನೈಪುಣ್ಯಗಳು
- ಅಗತ್ಯಗಳಿಗನುಸರಿಸಿ ವಿವಿಧ ಸೋಫ್ಟ್‌ವೇರ್‌ಗಳನ್ನು ಆಯ್ಕೆ ಮಾಡುವುದಕ್ಕಿರುವ ನೈಪುಣ್ಯಗಳು.

## ಮೌಲ್ಯನಿರ್ಣಯ

- ಕಂಪ್ಯೂಟರ್ ಲ್ಯಾಬಿನಲ್ಲಿ ಚಿತ್ರ ರಚನೆಗಾಗಿ ಉಪಯೋಗಿಸುವ ಸೋಫ್ಟ್‌ವೇರುಗಳನ್ನು ಪರಿಚಯ ಮಾಡಿಕೊಳ್ಳುವುದು. (ಲಭ್ಯತೆಗನುಸರಿಸಿ)
- ಪರಿಚಿತವಾದ ಸೋಫ್ಟ್‌ವೇರಿನಲ್ಲಿ ಚಿತ್ರ ಬಿಡಿಸುವುದು. ಬಣ್ಣವನ್ನು ಕೊಡುವುದು.

## ಮೌಲ್ಯನಿರ್ಣಯ

- ಚಿತ್ರದ ಆಕರ್ಷಣೆ
- ರೀತಿ, ಬ್ರಶ್‌ಗಳು, ಲಯನ ಫಿಲ್ಟರುಗಳು, ಟೋನ್
- ತಾಂತ್ರಿಕ ಜ್ಞಾನ
- ಮನೋಧರ್ಮ

### ಗಳಿಸಬಹುದಾದ ಕಲಿಕಾ ಹಿರಿಮೆಗಳು

*ಕೆಳಗೆ ಕೊಟ್ಟಿರುವ ಕಲಿಕಾ ಹಿರಿಮೆಗಳನ್ನು ಗಳಿಸಲು ಎಷ್ಟರ ಮಟ್ಟಿಗೆ ಸಾಧ್ಯವಾಯಿತು?*

- ಕಂಪ್ಯೂಟರ್ ಗ್ರಾಫಿಕ್ಸ್ ಉಪಯೋಗಿಸಿ ಚಿತ್ರ ರಚನೆಯಲ್ಲಿ ತೊಡಗಿಸಿಕೊಳ್ಳುವುದಕ್ಕೆ ಮಕ್ಕಳಿಗೆ ಸಾಧ್ಯವಾಗುತ್ತದೆ.

# ಯೂನಿಟ್ – 6 : ತ್ರಿಮಾನ ವಸ್ತುಗಳು

ಪ್ರಕೃತಿಯಲ್ಲಿ ಪ್ರಕೃತಿ ನಿರ್ಮಿತವೂ, ಮನುಷ್ಯ ನಿರ್ಮಿತವೂ ಆದ ಹಲವು ವಸ್ತುಗಳು ಇವೆ. ಇವುಗಳಲ್ಲಿ ಮನುಷ್ಯ ನಿರ್ಮಾಣ ವಸ್ತುಗಳಿಗೆ ಹೆಚ್ಚಾಗಿ ತ್ರಿಮಾನ ಸ್ವಭಾವವಿದೆ. ವಿವಿಧ ಮಾಧ್ಯಮಗಳನ್ನು ಉಪಯೋಗಿಸಿ ಇಂತಹ ಮನುಷ್ಯ ನಿರ್ಮಾಣ ವಸ್ತುಗಳನ್ನು ಕ್ಲಾಸ್ ರೂಮಿನಲ್ಲಿ ಪುನರ್ ನಿರ್ಮಿಸಲು ಸಾಧ್ಯವಾಗುತ್ತದೆ.

## ಕಲಿಕಾ ಸಾಧನೆಗಳು

ತ್ರಿಮಾನ ಸ್ವಭಾವದಲ್ಲಿರುವ ವಸ್ತುಗಳ ನಿರ್ಮಾಣದಲ್ಲಿ ಏರ್ಪಡುವುದು.

## ಆಶಯ, ತಿಳುವಳಿಕೆ

- ಪ್ರಕೃತಿಯಲ್ಲಿ ಮಾನವ ನಿರ್ಮಿತ ವಸ್ತುಗಳು ಹೆಚ್ಚಾಗಿ ನೇರವಾಗಿಯೂ ಅಡ್ಡವಾಗಿಯೂ ನಿರ್ಮಿಸಲ್ಪಟ್ಟಿವೆ

- ಇವುಗಳನ್ನು ನಿರ್ಮಿಸುವುದಕ್ಕಾಗಿ ವಸ್ತುವಿನ ಎಲ್ಲಾ ಭಾಗಗಳಿಂದಲೂ ಇರುವ ದೃಷ್ಟಿಕೋನ/ ನಿರೀಕ್ಷಣೆ ಅಗತ್ಯವಾಗಿದೆ.
- ಪ್ರಕೃತಿಯಲ್ಲಿ ಮನುಷ್ಯ ನಿರ್ಮಿಸಿದ ಮನೆ, ಫ್ಲ್ಯಾಟ್‌ನಂತಹ ನಿರ್ಮಾಣಗಳನ್ನು, ಕಾರ್ಡ್ ಪೇಪರ್, ಬೆಂಕಿಪೆಟ್ಟಿಗೆಯಂತಹ ವಸ್ತುಗಳನ್ನು ಉಪಯೋಗಿಸಿ ಸುಲಭವಾಗಿ ನಿರ್ಮಿಸಬಹುದಾಗಿದೆ. ಇವುಗಳನ್ನು ಅಂಟಿಸಿ ಸೇರಿಸುವುದಕ್ಕಾಗಿ ಅಂಟು, ಸೂಜಿ, ನೂಲು ಎಂಬೀ ವಸ್ತುಗಳನ್ನು ಉಪಯೋಗಿಸಬಹುದಾಗಿದೆ.
- ಇದಕ್ಕೆ ಬಣ್ಣವನ್ನು ನೀಡುವುದಕ್ಕಾಗಿ ಕ್ರಯೋನ್ಸ್, ಸ್ಕೆಚ್‌ಪೆನ್, ಕಲರ್ ಪೆನ್ಸಿಲ್ ಎಂಬಿವುಗಳನ್ನು ಉಪಯೋಗಿಸಬಹುದಾಗಿದೆ.

## ಕಲಿಕಾ ಪ್ರಕ್ರಿಯೆ

***ಹಂತ – 1***

- ಪ್ರಕೃತಿಯಲ್ಲಿ ಮಾನವ ನಿರ್ಮಿತ ವಸ್ತುಗಳು ಯಾವುದೆಲ್ಲಾ ಎಂದು ಚರ್ಚೆ ಮಾಡುವುದು. ಪಟ್ಟಿ ತಯಾರಿಸುವುದು.

***ಹಂತ – 2***

- ಕಂಡುಹಿಡಿದ ವಸ್ತುಗಳಲ್ಲಿ ಕ್ಲಾಸ್ ರೂಮಿನಲ್ಲಿ ನಿರ್ಮಿಸಬಹುದಾದ ವಸ್ತುಗಳು ಯಾವುದೆಲ್ಲಾ? ಯಾವ ಮಾಧ್ಯಮವನ್ನು ಉಪಯೋಗಿಸಿ ಇವುಗಳನ್ನು ನಿರ್ಮಿಸಬಹುದೆಂದು ಚರ್ಚೆ ಮಾಡುವುದು.
- ಉದಾ – ಒಂದು ಮನೆಯನ್ನು ನಿರ್ಮಿಸುವುದಕ್ಕಾಗಿ ಚಿಕ್ಕ ಆಯತಾಕಾರ (ಚೋಕ್ ಪೆಟ್ಟಿಗೆ, ಔಷಧಪೆಟ್ಟಿಗೆ) ವಾದ ಪೆಟ್ಟಿಗೆಯ ಮೇಲಿನ ಭಾಗಕ್ಕೆ ಛಾವಣಿಗಾಗಿ ಕಾರ್ಡ್‌ಪೇಪರನ್ನು ಅಂಟಿಸಿ ನಿರ್ಮಿಸಬಹುದು. ಇದೇ ರೀತಿ ಉದ್ದವಿರುವ ಪೆಟ್ಟಿಗೆಯನ್ನು ಉಪಯೋಗಿಸಿದರೆ ಒಂದು ಫ್ಲಾಟ್ ನಿರ್ಮಿಸಬಹುದು.
- ಕಂಡುಹಿಡಿದ ವಸ್ತುವಿನ ರೂಪುರೇಷೆಯನ್ನು ನಿರ್ಮಿಸುವುದು.
- ಕಾರ್ಡ್‌ಬೋರ್ಡ್, ಪೇಪರ್ ಇವುಗಳನ್ನು ಫೆವಿಕೋಲ್‌ನಿಂದ ಅಂಟಿಸಿ ರೂಪಗಳನ್ನು ನಿರ್ಮಿಸುವುದು.
- ನಿರ್ಮಿಸಿದ ರೂಪಗಳಲ್ಲಿ ಸ್ಕೆಚ್‌ಪೆನ್, ಕ್ರಯೋನ್ಸ್, ಕಲರ್‌ಪೆನ್ಸಿಲ್ ಎಂಬಿವುಗಳನ್ನು ಉಪಯೋಗಿಸಿ ಬಣ್ಣವನ್ನು ನೀಡಿ ಸುಂದರಗೊಳಿಸುವುದು.
- ಪ್ರದರ್ಶನ, ಸ್ವಯಂ – ಪರಸ್ಪರ ಮೌಲ್ಯಮಾಪನ
- ಮೌಲ್ಯಮಾಪನದ ನಂತರ ಉತ್ಪನ್ನ

ಪರಿಹರಿಸಿ ಸರಿಪಡಿಸುವುದೂ ಹೊಸ ಉತ್ಪನ್ನವನ್ನು ನಿರ್ಮಿಸಿ ಅವುಗಳನ್ನು ಸರಿಪಡಿಸುವುದಕ್ಕಾಗಿ ಅವಕಾಶವನ್ನು ಉಂಟು ಮಾಡಬೇಕು.

## ಮೌಲ್ಯನಿರ್ಣಯ

- ಶಿಲ್ಪ ನಿರ್ಮಾಣಕ್ಕಾಗಿರುವ ವಸ್ತು/ಆಶಯ ಕಂಡುಹಿಡಿಯುವುದು.
- ವಸ್ತುವಿನ ಆಕಾರವನ್ನು ಅನುಸರಿಸಿ ಮಾಧ್ಯಮವನ್ನು ಕಂಡುಹಿಡಿಯುವುದು.
- ಮಾಧ್ಯಮದ ಆಯ್ಕೆ
- ನಿಖರತೆ
- ಬಣ್ಣಗಳ ಸೌಂದರ್ಯ
- ಇವುಗಳೊಂದಿಗಿರುವ ಗುಣಾತ್ಮಕ ಮೌಲ್ಯಮಾಪನ

# ಆರನೇ ತರಗತಿ

## ಯೂನಿಟ್ – 1 : ಪ್ರಕೃತಿ ಚಿತ್ರಗಳು

ಚಿತ್ರ ರಚನೆಗಾಗಿ ಆಯ್ಕೆ ಮಾಡುವ ಪ್ರಕೃತಿ ಘಟಕಗಳು ಅವುಗಳ ಪ್ರತ್ಯೇಕತೆಗಳನ್ನು ತಿಳಿದು ಚಿತ್ರೀಕರಿಸಲು ಆ ಘಟಕಗಳನ್ನು ಸೂಕ್ಷ್ಮವಾಗಿ ನಿರೀಕ್ಷಿಸಬೇಕಾಗಿದೆ. ಅದಕ್ಕೆ ಪ್ರಕೃತಿಯನ್ನು ನಿರೀಕ್ಷಿಸಬೇಕಾಗಿದೆ. ಪ್ರಕೃತಿಯನ್ನು ನಿರೀಕ್ಷಿಸುವುದರೊಂದಿಗೆ ಪ್ರಕೃತಿಯಲ್ಲಿರುವ ವಸ್ತುಗಳ ಬಣ್ಣಗಳನ್ನು ಹೆಚ್ಚು ಸೂಕ್ಷ್ಮವಾಗಿ ನಿರೀಕ್ಷಿಸಲು ಮಕ್ಕಳಿಗೆ ಸಾಧ್ಯವಾಗಬೇಕು. ಅದರ ಸಹಜತೆ ನಷ್ಟವಾಗದಂತೆ ಯಥಾರ್ಥ ವಸ್ತುಗಳನ್ನು ಚಿತ್ರೀಕರಿಸುವುದಕ್ಕಿರುವ ಅವಕಾಶ ಲಭಿಸುವುದರೊಂದಿಗೆ ಪ್ರಕೃತಿಯನ್ನು ಸೂಕ್ಷ್ಮವಾಗಿ ತಿಳಿಯುವುದಕ್ಕೆ ಮತ್ತು ಪ್ರಕೃತಿಯ ಸ್ನೇಹವನ್ನು ಬೆಳೆಸುವುದಕ್ಕಿರುವ ಚಟುವಟಿಕೆಯಾಗಿದೆ.

### ಕಲಿಕಾ ಸಾಧನೆ

ಪ್ರಕೃತಿಯನ್ನು ವೀಕ್ಷಿಸಿ ಗೆರೆಗಳೂ ಬಣ್ಣಗಳನ್ನೂ ಉಪಯೋಗಿಸಿ ಚಿತ್ರರಚನೆಯನ್ನು ನಡೆಸಲು ಸಾಧ್ಯವಾಗುತ್ತದೆ.

### ಆಶಯ, ತಿಳುವಳಿಕೆ

- ವಸ್ತುಗಳ ನಿಜವಾದ ಚಿತ್ರೀಕರಣಕ್ಕೆ ಸೂಕ್ಷ್ಮ ನಿರೀಕ್ಷಣೆ ಅಗತ್ಯವಾಗಿದೆ.
- ಪ್ರತಿಯೊಂದು ವಸ್ತುಗಳಿಗೆ ಅದರದ್ದೇ ಆದ ಪ್ರತ್ಯೇಕತೆಗಳು ಇವೆ.
- ಚಿತ್ರೀಕರಣದ ನೈಜತೆಗೆ ಯಥಾರ್ಥ ವಸ್ತುಗಳು ಮಾದರಿಯಾಗಬೇಕಾಗಿದೆ.

### ಕಲಿಕಾ ಚಟುವಟಿಕೆಗಳು

*ಹಂತ – 1*

- ಒಂದು ಮರದ ಚಿತ್ರವನ್ನು ಪ್ರದರ್ಶಿಸುವುದು.
- ಇದು ಯಾವ ಮರವೆಂದು ತಿಳಿಯಿತೇ? ಚರ್ಚೆ
- ಗೊತ್ತಾಗಬೇಕಾದರೆ ಮರದ ಸೂಕ್ಷ್ಮಾಂಶಗಳನ್ನು ಚಿತ್ರೀಕರಿಸಬೇಕಾಗಿದೆ.
- ಸೂಕ್ಷ್ಮಾಂಶಗಳನ್ನು ತಿಳಿಯಲು ವಸ್ತುವನ್ನು ನೇರವಾಗಿ ನೋಡಿ ತಿಳಿಯಬೇಕಾಗಿದೆ.
- ಮರವನ್ನು ಸೂಕ್ಷ್ಮವಾಗಿ ನಿರೀಕ್ಷಣೆ ನಡೆಸುವುದು (ಔಟ್‌ಡೋರ್)
- ಪ್ರತ್ಯೇಕತೆಗಳ ರಫ್‌ಸ್ಕೆಚ್ ಸ್ಕ್ರಿಬ್ಲಿಂಗ್ ತಯಾರಿಸುವುದು.
- ಕ್ಲಾಸ್ ರೂಮಿನಲ್ಲಿ ಕಂಡುಹಿಡಿದ ಸೂಕ್ಷ್ಮಾಂಶಗಳನ್ನು ಚರ್ಚೆ ಮಾಡುವುದು.

- ಇಂತಹುದೇ ಮರವೆಂದು ತಿಳಿಯಲು ಸಾಧ್ಯವಾಗುವ ರೀತಿಯಲ್ಲಿ ಮರದ ಚಿತ್ರವನ್ನು ಬಿಡಿಸುವುದು.
- ಪ್ರದರ್ಶಿಸುವುದು

*ಹಂತ – 2*

- ಬಿಡಿಸಿದ ಚಿತ್ರಕ್ಕೆ ಯೋಗ್ಯವಾದ ಬಣ್ಣವನ್ನು ನೀಡಿ ಪೂರ್ತೀಕರಿಸುವುದು.
- ಬಣ್ಣ ನೀಡುವುದಕ್ಕೆ ವಾಟರ್ ಕಲರ್, ಕ್ರೆಯೋನ್ಸ್, ಅಕ್ರಿಲಿಕ್., ಕಲರ್ ಪೆನ್ಸಿಲ್ ಎಂಬಿವುಗಳನ್ನು ಉಪಯೋಗಿಸುವುದು.
- ಬಣ್ಣವನ್ನು ನೀಡಿದ ಚಿತ್ರ ಪ್ರದರ್ಶಿಸುವುದು.

**ಮೌಲ್ಯಮಾಪನ**

- ಮರವನ್ನು (ವಸ್ತುವನ್ನು) ಗುರುತಿಸುವುದಕ್ಕೆ ಸಾಧ್ಯವಾಗುವ ರೀತಿಯಲ್ಲಿ ಬಿಡಿಸುವುದಕ್ಕೆ ಸಾಧ್ಯವಾಗುವುದು.
- ವಸ್ತುವಿನ ಸೂಕ್ಷ್ಮಾಂಶಗಳ ಮೂಲಕ ಹಾದುಹೋಗುವುದು.
- ವಸ್ತುವಿನ ನಿಜವಾದ ಪ್ರತಿಫಲನದ ರೀತಿಯಲ್ಲಿ ಬಣ್ಣ ನೀಡುವುದಕ್ಕಿರುವ ಪ್ರತಿಭೆ ಲಭಿಸುವುದು.

## ಯೂನಿಟ್ – 2 : ಶಿಲ್ಪಗಳು

ಒಂದು ವಸ್ತುವಿನ ಸೂಕ್ಷ್ಮಾಂಶವಾದ ಕಲಿಕಾ ಆವಿಷ್ಕಾರವಾಗಿದೆ ಶಿಲ್ಪ. ಹಲವು ಮಾಧ್ಯಮಗಳು ಒಂದು ಶಿಲ್ಪದಿಂದಲೇ ಉಪಯೋಗಿಸುವುದಕ್ಕಾಗಿ ಸಾಧ್ಯವಾಗುತ್ತದೆ. ವ್ಯತ್ಯಸ್ಥ ಮಾಧ್ಯಮಗಳು ಒಂದು ಶಿಲ್ಪವನ್ನು ಉಪಯೋಗಿಸುವಾಗ ಹಲವು ಮಾಧ್ಯಮಗಳಲ್ಲಿ ಒಂದೇ ಸಮಯ ಮೂಡಿಸಲು ಸಾಧ್ಯವಾಗುತ್ತದೆ. ಅಲ್ಲದೇ ವಸ್ತುಗಳ ನಿಜವಾದ ರೂಪಘಟಕಗಳ ಕುರಿತು ಸರಿಯಾದ ತಿಳುವಳಿಕೆಯನ್ನು ಉಂಟು ಮಾಡಲು ಶಿಲ್ಪ ನಿರ್ಣಯವು ಸಹಾಯ ಮಾಡುತ್ತದೆ. ಕಾರಣ ಶಿಲ್ಪ ನಿರ್ಮಿಸುವಾಗ ವಸ್ತುವಿನ ಎಲ್ಲಾ ಭಾಗಗಳಿಂದಲೂ ಇರುವ ನಿರೀಕ್ಷಣೆಯ/ ಕಲಿಕೆಯ ಬೆಳವಣಿಗೆ ಅಗತ್ಯವಾಗುತ್ತದೆ.

**ಕಲಿಕಾ ಸಾಧನೆ**

ವಿವಿಧ ವಸ್ತುಗಳಲ್ಲಿ ಶಿಲ್ಪಗಳನ್ನು ನಿರ್ಮಿಸುವುದು.

**ಆಶಯ, ತಿಳುವಳಿಕೆ**

- ಶಿಲ್ಪ ತ್ರಿಮಾನ ಸ್ವಭಾವ ಇರುವುದು.
- ಶಿಲ್ಪವನ್ನು ನಿರ್ಮಿಸುವಾಗ ವಸ್ತುವಿನ ನಾಲ್ಕು ಭಾಗಗಳಿಂದಲೂ ನಿರೀಕ್ಷಣಾ ಕಲಿಕೆಯನ್ನು ಪಡೆಯುವುದು.
- ವಸ್ತುವಿಗೆ ದುಂಡವಾದ, ದಪ್ಪವಾದ, ತೆಳುವಾದ, ಪಾಳಿ ಸ್ವಭಾವದಲ್ಲಿರುವ ಅನುಬಂಧ ಘಟಕಗಳು ಇವೆ.
- ಶಿಲ್ಪ ನಿರ್ಮಿಸುವುದಕ್ಕೆ ಆವೆಮಣ್ಣು, ಮರದ ತುಂಡು ಮುಂತಾದ ವಸ್ತುಗಳ ಹೊರತಾಗಿ ಪ್ಲೋಪ್ಪ್, ಪೇಪರ್ ಪಲ್ಪ್, ವಾಕ್ಸ್ ಎಂಬೀ ಆಧುನಿಕ ವಸ್ತುಗಳೂ ಕೊಡೆಸರಿಕೆ, ಕಡ್ಡಿ, ಪೇಪರ್ ಮುಂತಾದವುಗಳನ್ನು ಉಪಯೋಗಿಸಬಹುದಾಗಿದೆ.

### ಕಲಿಕಾ ಚಟುವಟಿಕೆಗಳು

- ಯಾವ ವಸ್ತುವನ್ನು ನಿರ್ಮಿಸಬೇಕಾಗಿದೆ ಎಂದು ಕಂಡುಹಿಡಿಯಲು ಚರ್ಚೆ. ಪಟ್ಟಿ ತಯಾರಿಸಿ.
- ಕಂಡುಹಿಡಿದ ವಸ್ತುಗಳನ್ನು ನಿರ್ಮಿಸುವುದಕ್ಕಾಗಿ ಯಾವುದೆಲ್ಲಾ ಮಾಧ್ಯಮಗಳನ್ನು ಉಪಯೋಗಿಸಬಹುದು – ಚರ್ಚೆ. ಲಿಸ್ಟ್ ತಯಾರಿ.

  ಉದಾ : ಒಂದು ಹಾಯಿ ದೋಣಿ ತಯಾರಿಸುವುದು.

  ನೀರು – ಜೇಡಿಮಣ್ಣೋ, ಪ್ಲಾಸ್ಟಿಕ್, ವಾಕ್ಸೋ ಉಪಯೋಗಿಸಬಹುದು.

  ಹಾಯಿಯನ್ನು ನಿರ್ಮಿಸುವುದಕ್ಕೆ ಪೇಪರ್

  ಅದನ್ನು ದೋಣಿಯೊಂದಿಗೆ ದೃಢಪಡಿಸುವುದಕ್ಕೆ ಚೀಪೆಕಡ್ಡಿ, ಅಂಟು, ನೂಲು ಎಂಬಿವುಗಳನ್ನು ಉಪಯೋಗಿಸಬಹುದು.

  ಕಂಡುಹಿಡಿದ ವಸ್ತುವಿನ ರೂಪರೇಷೆಯನ್ನು ನಿರ್ಮಿಸುವುದು.

  ಶಿಲ್ಪ ನಿರ್ಮಾಣಕ್ಕಾಗಿ ಮಾಧ್ಯಮ ತಯಾರಿಸಿರಿ.

  ತೆಗೆದು ಹಾಕುವ ರೀತಿಯಲ್ಲಿರುವ ಕಾರ್ಡ್, ಸ್ಟ್ರೋಬೋರ್ಡ್ ಎಂಬಿವುಗಳ ಮೇಲೆ ಶಿಲ್ಪವನ್ನು ನಿರ್ಮಿಸುವುದು.
- ಪ್ರದರ್ಶನ, ಸ್ವಯಂ – ಪರಸ್ಪರ ಮೌಲ್ಯಮಾಪನ ಎಂಬಿವುಗಳನ್ನು ನಡೆಸುವುದು.
- ಮೌಲ್ಯಮಾಪನದ ನಂತರ ಶಿಲ್ಪ ನ್ಯೂನತೆಗಳನ್ನು ಪರಿಹರಿಸುವುದೋ ಹೊಸ ಶಿಲ್ಪವನ್ನು ನಿರ್ಮಿಸುವುದೋ ಇರುವ ಜ್ಞಾನವನ್ನು ಉಪಯೋಗಿಸಿರುವುದಕ್ಕಾಗಿ ಅವಕಾಶ ನೀಡುವುದು.

### ಮೌಲ್ಯಮಾಪನ

- ಶಿಲ್ಪ ನಿರ್ಮಾಣಕ್ಕಿರುವ ವಸ್ತು/ ಆಶಯ ಕಂಡುಹಿಡಿಯುವುದು.
- ವಿವಿಧ ಮಾಧ್ಯಮಗಳನ್ನು ಕಂಡುಹಿಡಿದು ಉಪಯೋಗಿಸುವುದಕ್ಕಿರುವ ಸಾಮರ್ಥ್ಯ
- ಮಾಧ್ಯಮದ ಆಯ್ಕೆ
- ನಿರ್ಮಾಣ ಚಾತುರ್ಯ
- ನಿಜವಾದ ವಸ್ತುವಿನೊಂದಿಗಿರುವ ತಾರತಮ್ಯ ಇವುಗಳಲ್ಲಿರುವ ಗುಣಾತ್ಮಕ ಮೌಲ್ಯಮಾಪನ

## ಯೂನಿಟ್ – 3 : ರೂಪ, ವರ್ಣವಿನ್ಯಾಸ

ಪ್ರಕೃತಿಯ/ವಸ್ತುಗಳ ಉತ್ತಮವಾದ ಚಿತ್ರೀಕರಣವು ವೀಕ್ಷಕರನ್ನು ಹೆಚ್ಚಾಗಿ ಆಕರ್ಷಿಸುವುದು. ಆಶಯ ನಿಬಿಡತೆಯು ಇಲ್ಲ ಎಂಬುದು ಪ್ರಕೃತಿಯಲ್ಲಿನ ಸೌಂದರ್ಯ ಅದೇ ರೀತಿ ದರ್ಶಿಸುವುದಕ್ಕೆ ಸಾಧ್ಯವಾಗುವುದು ಎಂಬುದಾಗಿದೆ ಈ ರೀತಿಯಲ್ಲಿ ಜನರನ್ನು ಹೆಚ್ಚಾಗಿ ಜನಪ್ರಿಯವಾಗಿಸುವುದು.

### ಕಲಿಕಾ ಸಾಧನೆ

ರೂಪ ಪರವಾದ ತಿಳುವಳಿಕೆ, ಅನುಮತಿ, ವರ್ಣವಿನ್ಯಾಸ ಎಂಬಿವುಗಳಲ್ಲಿ ಪ್ರತಿಭೆಯನ್ನು ಪಡೆಯುವುದು.

**ಆಶಯ, ತಿಳುವಳಿಕೆ**


- ವಸ್ತುವಿನ/ವಸ್ತುಗಳ ರೂಪವನ್ನು ಒಟ್ಟಾಗಿ ಒಂದೇ ತಲದಲ್ಲಿ (ಔಟ್‌ಲೈನ್)ನಲ್ಲಿ ಪ್ರದರ್ಶಿಸಬಹುದಾದ ರೀತಿಯಾಗಿದೆ ರೂಪ ಪರವಾದ ತಿಳುವಳಿಕೆ.
- ವಸ್ತುಗಳ ಅಸ್ತಿತ್ವ, ದಿಕ್ಕು ಎಂಬಿವುಗಳಿಗೆ ಅನುಸರಿಸಿಯಾಗಿದೆ ರೂಪ ತಿಳುವಳಿಕೆ.
- ವಸ್ತುವಿನ ಪ್ರತಿಯೊಂದು ಭಾಗದಲ್ಲೂ ವಿವಿಧ ವಸ್ತುಗಳು ಒಟ್ಟಾಗಿಯೋ ಅಥವಾ ಸಮಗ್ರವಾಗಿ ಒಂದೇ ರೂಪದಲ್ಲಿಯೋ ದರ್ಶಿಸುವುದಕ್ಕೆ ಸಾಧ್ಯವಾಗುತ್ತದೆ.
- ಒಂದು ವಸ್ತುವಿನ ವಿವಿಧ ಭಾಗಗಳಲ್ಲೋ, ವಿವಿಧ ವಸ್ತುಗಳಲ್ಲೋ ಗಾತ್ರದಲ್ಲಿರುವ ಅನುಪಾತ ಸೂಕ್ಷ್ಮವಾಗಿ ತಿಳಿದುಕೊಂಡಾಗಿದೆ ಚಿತ್ರೀಕರಣ ನಡೆಸಬೇಕಾದುದು.
- ಒಂದು ವಸ್ತುವಿನ ಒಟ್ಟಾಗಿರುವ ಬಣ್ಣ ಒಂದೇ ಆದರೂ ಕೂಡ ವಸ್ತುವಿನಲ್ಲಿ ಬೀಳುವ ಬೆಳಕಿನ ಅಳತೆಗನುಸರಿಸಿ ಬಣ್ಣಗಳ ಗಾಢತೆಯಲ್ಲಿ ವ್ಯತ್ಯಾಸವಿರುತ್ತದೆ.

**ನೈಪುಣ್ಯಗಳು**

- ವಸ್ತುವಿನ/ವಸ್ತುಗಳ ಸಮಗ್ರತೆಯಿಂದ ದರ್ಶಿಸುವುದಕ್ಕಿರುವ ನೈಪುಣ್ಯಗಳು.
- ವಸ್ತುವಿನ/ವಸ್ತುಗಳ ವಿವಿಧ ಘಟಕಗಳಾಗಿ ಬೇರ್ಪಡಿಸುವುದಕ್ಕಾಗಿಯೂ ಅನುಮತಿಯನ್ನು ಪಡೆಯುವುದಕ್ಕಿರುವ ನೈಪುಣ್ಯಗಳು.
- ವಸ್ತುವಿನಲ್ಲಿ ಬಣ್ಣಗಳ ತೀಕ್ಷ್ಣತೆಯನ್ನು ತಿಳಿಯುವುದಕ್ಕೂ ಅದೇ ರೀತಿ ಚಿತ್ರೀಕರಿಸುವುದಕ್ಕೂ ಇರುವ ನೈಪುಣ್ಯಗಳು

**ಕಲಿಕಾ ಚಟುವಟಿಕೆಗಳು**

- ಯಥಾರ್ಥ ಚಿತ್ರಗಳ ಚಿತ್ರೀಕರಣದ ರೀತಿಯ ಕುರಿತು ಇರುವ ಚರ್ಚೆ.
  - ವಸ್ತುಗಳ/ವಸ್ತುಗಳೊಂದಿಗೆ ದೃಶ್ಯ ವ್ಯಕ್ತತೆಯೊಂದಿಗೆ ಅದೇ ರೀತಿ ಮಾಡುವುದು.
  - ಬಿಡಿಸಬೇಕಾದ ವಸ್ತುಗಳ ಕುರಿತು ಸಮಗ್ರತೆಯಿಂದ ರೂಪಕಲ್ಪನೆಯನ್ನು ಉಂಟು ಮಾಡುವುದು.
  - ಜ್ಯಾಮಿತಿಯ ರೂಪಗಳನ್ನು ಉಪಯೋಗಿಸಿ ಸಮಗ್ರತೆಯ ತಿಳುವಳಿಕೆಯನ್ನು ಬರಿಸುವುದು. (ಟೀಚರ್ ಚಾರ್ಟ್ ಪ್ರದರ್ಶಿಸುವುದು)
- ಯಾವುದೆಲ್ಲಾ ಪ್ರತ್ಯೇಕತೆಗಳು?
  - ದೂರವಿರುವ ಮರವನ್ನು ವೀಕ್ಷಿಸಿರಿ.
  - ಮರದ ವಿವಿಧ ಭಾಗಗಳಲ್ಲಿ ಯಾವುದೆಲ್ಲಾ ಜ್ಯಾಮಿತೀಯ ರೂಪಗಳಿಗೆ ಸಮಾನವಾಗಿದೆ?
  - ವೀಕ್ಷಿಸಿದ ರೂಪಗಳನ್ನು ದಾಖಲಿಸುವುದು.



- ಪ್ರತಿಯೊಂದು ರೂಪವನ್ನು ಪರಸ್ಪರ ಮೌಲ್ಯಮಾಪನಕ್ಕೆ ಒಳಪಡಿಸುವುದು. ಚರ್ಚೆ.
- ಮರದ ಕೆಳಗಿರುವ ಮರದ ತುಂಡಿನ ಉದ್ದದ ಎಷ್ಟು ಪಟ್ಟು ಎಲೆಕೂಟಗಳ ಉದ್ದವೂ ಅಗಲವೂ ಗಮನಿಸಿರಿ.
- ಮರದ ಈ ರೂಪಗಳನ್ನು ಸಾಮಾನ್ಯವಾಗಿ ಒಟ್ಟಾಗಿ ಚಿತ್ರೀಕರಿಸಬಹುದೇ?
- ಮಕ್ಕಳು ರೂಪಗಳನ್ನು ಅನುಪಾತಿಕವಾಗಿ ದಾಖಲಿಸುವುದು.
- ಈ ರೂಪಗಳನ್ನು ಹೋಲಿಸಿ ಆ ಮರವನ್ನು ಚಿತ್ರೀಕರಿಸಿ ನೋಡಿರಿ.
- ಮಕ್ಕಳಿಗೆ ಚಿತ್ರೀಕರಿಸುವುದಕ್ಕೆ ಸಮಯವನ್ನು ನೀಡುವುದು.
- ಚಿತ್ರಗಳು ಆರ್ಟ್ ಗ್ಯಾಲರಿಯಲ್ಲಿ ಪ್ರದರ್ಶಿಸುವುದು.
- ಟೀಚರ್ ಮೌಲ್ಯಮಾಪನದ ಸೂಚಕಗಳನ್ನು ಬೋರ್ಡಿನಲ್ಲಿ ದಾಖಲಿಸುವುದು.
- ಬೋರ್ಡಿನಲ್ಲಿರುವ ಸೂಚಕಗಳಿಗೆನುಸಾರವಾಗಿ ಮಕ್ಕಳು ಸ್ವಂತ ರಚನೆಗಳನ್ನು ಮೌಲ್ಯಮಾಪನ ಮಾಡುವುದು.

## ಯೂನಿಟ್ – 4 : ಜೀವಜಾಲಗಳು

ಜೀವಜಾಲಗಳನ್ನು ಬಿಡಿಸುವಾಗ ನಿಶ್ಚಲ ವಸ್ತುಗಳನ್ನು ಬಿಡಿಸುವುದಕ್ಕಿಂತ ಹೆಚ್ಚಾಗಿ ಗಮನಿಸಬೇಕು. ಜೀವಜಾಲಗಳ ಶರೀರ ಘಟಕ ಸಂಕೀರ್ಣವೂ ಚಲಿಸುವಾಗ ಬದಲಾವಣೆ ಬರುವುದಾಗಿದೆ. ಆದ್ದರಿಂದ ಜೀವಿಗಳನ್ನು ಬಿಡಿಸುವಾಗ ಅವುಗಳ ಘಟಕಗಳ ಕುರಿತು ಚಲಿಸುವಾಗ ಉಂಟಾಗುವ ಬದಲಾವಣೆಗಳ ಕುರಿತು ಸ್ಪಷ್ಟ ತಿಳುವಳಿಕೆ ಇರಬೇಕು.

### ಕಲಿಕಾ ಸಾಧನೆ

ಜೀವಜಾಲಗಳ ಘಟಕವನ್ನು ಒಳಗೊಂಡು ಚಿತ್ರ ರಚನೆಯನ್ನು ಮಾಡಬೇಕು.

### ಆಶಯ, ತಿಳುವಳಿಕೆ

- ಪ್ರತಿಯೊಂದು ಜೀವಿಗಳಿಗೂ ಪ್ರತ್ಯೇಕವಾದ ರೂಪ ಘಟಕಗಳಿವೆ.
- ಈ ಅನುಪಾತಿಕ ತಂತ್ರವನ್ನು ಉಪಯೋಗಿಸಿ ಜೀವಿಗಳ ಪ್ರತಿಯೊಂದು ಭಾಗವು ವ್ಯಕ್ತವಾಗಿ ಚಿತ್ರೀಕರಿಸುವುದಕ್ಕೆ ಸಾಧ್ಯವಾಗುತ್ತದೆ.
- ಜ್ಯಾಮಿತೀಯ ರೂಪಗಳ ಸಂಕಲ್ಪ, ಜೀವಿಗಳ ಚಿತ್ರೀಕರಣಕ್ಕೆ ಸಹಾಯವಾಗುತ್ತದೆ.

### ನೈಪುಣ್ಯಗಳು

- ಜೀವಜಾಲಗಳ ರೂಪ ಘಟಕಗಳನ್ನು ನಿರೀಕ್ಷಿಸುವುದಕ್ಕಿರುವ ಸಾಮರ್ಥ್ಯ.
- ಅನುಪಾತಿಕ ತಂತ್ರವನ್ನು ಉಪಯೋಗಿಸಿ ಜೀವಜಾಲಗಳ ಯಥಾರ್ಥ ಚಿತ್ರೀಕರಣ ಸುಲಭವಾಗುವುದು.

### ಕಲಿಕಾ ಚಟುವಟಿಕೆಗಳು

***ಚಟುವಟಿಕೆ – 1***

- ಆನೆಯ ಹಾಗೂ ಜಿರಾಫೆಯ ಚಿತ್ರವನ್ನು ಪ್ರದರ್ಶಿಸುವುದು. (ಫೋಟೋಗ್ರಾಫ್)
- ಈ ಮೃಗಗಳು ಪರಸ್ಪರ ನೋಡುವಿಕೆಯಲ್ಲಿ ವ್ಯತ್ಯಾಸವಿದೆ? ಚರ್ಚೆ.
- ಇವುಗಳಲ್ಲಿರುವ ಗಾತ್ರ ವ್ಯತ್ಯಾಸವನ್ನು ಗಮನಿಸಿರಿ.

- ಆನೆಯ ಹತ್ತಿರ ಆಡು ನಿಂತರೆ ಯಾವ ರೀತಿಯ ಗಾತ್ರವ್ಯತ್ಯಾಸ ಕಂಡುಬರುವುದು?
- ನಿಮಗಿಷ್ಟವಾದ ಒಂದು ಮೃಗ/ಜೀವಿಯ ಚಿತ್ರ ಬಿಡಿಸಬಹುದೇ?
- ರಚಿಸಿದ ಚಿತ್ರಗಳನ್ನು ಪ್ರದರ್ಶಿಸುವುದು, ಮೌಲ್ಯಮಾಪನ ಮಾಡುವುದು.

***ಚಟುವಟಿಕೆ – 2***

- ಆನೆಯ ಚಿತ್ರವನ್ನು ಪುನಃ ನಿರೀಕ್ಷಿಸುವುದು. ಏನಾದರೂ ಜ್ಯಾಮಿತೀಯ ರೂಪಗಳು ಕಾಣಲು ಸಾಧ್ಯವಾಗುವುದೇ? ಚರ್ಚೆ.
- ಆನೆಯಾದರೆ ಜ್ಯಾಮಿತೀಯ ರೂಪಗಳ ಬಿಡಿಸಲು ಸಾಧ್ಯವಾದರೆ ಆನೆಯನ್ನು ಸುಲಭವಾಗಿ ಬಿಡಿಸಬಹುದೇ?
- ಚಿತ್ರವನ್ನು ರಚಿಸಿ ನೋಡೋಣ. ರಚಿಸುವುದು, ಪ್ರದರ್ಶಿಸುವುದು.
- ವಿವಿಧ ಮೃಗಗಳನ್ನು ನಿರೀಕ್ಷಿಸುವುದಕ್ಕೆ, ಚಿತ್ರ ರಚಿಸುವುದಕ್ಕೆ ಅವಕಾಶವನ್ನುಂಟು ಮಾಡುವುದು.

***ಚಟುವಟಿಕೆ – 4***

- ಬಣ್ಣ ನೀಡುವುದು
- ಕಲರ್‌ಪೆನ್ಸಿಲುಗಳನ್ನು ಉಪಯೋಗಿಸಿ ಚಿತ್ರಕ್ಕೆ ಬಣ್ಣವನ್ನು ನೀಡುವುದು.
- ಟೀಚರಿನ ಗುಣಾತ್ಮಕವಾದ ಮೌಲ್ಯಮಾಪನ
- ಭಾಗಿಕವಾಗಿ ನಿರ್ವಹಿಸಿದವರು ಯಾರೆಲ್ಲಾ?
- ಇನ್ನು ಉತ್ತಮಪಡಿಸಬೇಕಾದವರು
- ಪರಿಹಾರ ನಿರ್ದೇಶನಗಳು
- ಕ್ಲಾಸ್ ರೂಂ ಆರ್ಟ್ ಗ್ಯಾಲರಿಯಲ್ಲಿ ಪ್ರದರ್ಶಿಸುವುದು.

### ಮೌಲ್ಯಮಾಪನ

- ರೂಪ ಘಟಕಗಳಲ್ಲಿ ಸ್ವಚ್ಛತೆ ಲಭಿಸಿದೆ.
- ಅನುಪಾತಿಕತೆಯನ್ನು ಕಾಪಾಡಿಕೊಳ್ಳಲಾಗಿದೆ.
- ಸ್ವಾಭಾವಿಕತೆ, ಭಾವ, ಸಮಾನತೆ

## ಯೂನಿಟ್ – 5 : ಮನುಷ್ಯ ಶರೀರ ಘಟಕ

ಮನುಷ್ಯ ಶರೀರವನ್ನು ಚಿತ್ರೀಕರಿಸಿರಿ. ಅದು ಅತೀ ಹೆಚ್ಚು ಸಂಕೀರ್ಣವಾದ ಪ್ರಯತ್ನವಾಗಿದೆ. ಪ್ರತಿಯೊಂದು ಜೀವಿಗೂ ಎಂದ ಹಾಗೆ ಮನುಷ್ಯ ಶರೀರದ ಘಟಕಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಮಾತ್ರವೇ ಆಕರ್ಷಕವಾಗಿ ಚಿತ್ರೀಕರಿಸಲು ಸಾಧ್ಯವಾಗುವುದು.


### ಕಲಿಕಾ ಸಾಧನೆ

ಮನುಷ್ಯ ಶರೀರಕ್ಕೆ ರಚನೆಯನ್ನು ತಿಳಿದುಕೊಂಡು ಚಿತ್ರರಚನೆ ಮಾಡಲು ಸಾಧ್ಯವಾಗುವುದು.

### ಆಶಯ, ತಿಳುವಳಿಕೆ

- ಮನುಷ್ಯ ಶರೀರಕ್ಕೆ ಸ್ಪಷ್ಟವಾದ ರಚನೆ ಮತ್ತು ಅನುಪಾತ ಇದೆ.

- ಮನುಷ್ಯನ ತಲೆಯ ಗಾತ್ರವನ್ನು ಆಧಾರವಾಗಿರಿಸಿಕೊಂಡು ಶರೀರ ಭಾಗಗಳನ್ನು ಅನುಪಾತಿಕ ಚಿತ್ರೀಕರಣವಾಗಿ ನಡೆಸಬಹುದು.




**ನೈಪುಣ್ಯ**

- ಅನುಪಾತಿಕ ರಚನಾ ಸಾಮರ್ಥ್ಯ
- ಮನುಷ್ಯ ಶರೀರ ಘಟಕದ ರಚನಾ ಸಾಮರ್ಥ್ಯ ಸಾಧ್ಯವಾಗುವುದು.

**ಕಲಿಕಾ ಚಟುವಟಿಕೆಗಳು**

- ಪೂರ್ಣ ಬೆಳವಣಿಗೆ ಹೊಂದಿದ ಮನುಷ್ಯನ ಘಟಕ ತಲೆಯ ಅಳತೆ ಇಟ್ಟು ಅನುಪಾತಿಕವಾಗಿ ದಾಖಲಿಸಿದ ಶರೀರ ಘಟಕದ ಚಾರ್ಟ್ ಪ್ರದರ್ಶಿಸುವುದು.
- ಮನುಷ್ಯ ಶರೀರದ ಘಟಕದಲ್ಲಿ ಶರೀರದ ಅಳತೆಯನ್ನು ದಾಖಲಿಸಿದ್ದು ತಲೆಯ ಅಳತೆಯಿಂದಾಗಿ ಎಂದು ಕಾಣುವಿರಾ? ಚರ್ಚೆ.
- ತಲೆಯ ಅಳತೆಯಲ್ಲಿ ಅನುಪಾತಿಕವಾಗಿ ಯಾವುದೆಲ್ಲಾ ಅಳತೆಗಳು ಪ್ರಕಟವಾಗಿ ಕಾಣುತ್ತಿವೆ?
- ಇದೇ ರೀತಿ ಅಳತೆಗಳನ್ನು ಇಟ್ಟು ಒಂದು ಪೂರ್ಣ ಬೆಳವಣಿಗೆ ಹೊಂದಿದ ಮನುಷ್ಯ ರೂಪವನ್ನು ಬಿಡಿಸಬಹುದೇ?
- ಬಿಡಿಸುವುದಕ್ಕಿರುವ ಸಮಯವನ್ನು ನೀಡುವುದು.
- ಪ್ರದರ್ಶನ, ಮೌಲ್ಯಮಾಪನ




**ಮೌಲ್ಯಮಾಪನ**

- ಅನುಪಾತಿಕ ರಚನೆಯನ್ನು ನಡೆಸಿರುವುದು.
- ತಲೆಯ ಅಳತೆಯಲ್ಲಿ ಅನುಪಾತಿಕವಾಗಿ ಒಟ್ಟಾರೆ ಶರೀರ ಭಾಗಗಳನ್ನು ಪಡೆದಿರುವುದು.

## ಯೂನಿಟ್ – 6 : ರೂಪಭದ್ರತೆ, ಆಲಂಕಾರಿಕತೆ

ಅಲಂಕಾರಿಕತೆಗೆ ಸೌಂದರ್ಯ ವೀಕ್ಷಣೆಯಲ್ಲಿ ಅತಿಯಾದ ಪ್ರಾಧಾನ್ಯವಿದೆ. ಮನಸ್ಸನ್ನು ಸಂತೋಷಪಡಿಸುವ ಅಲಂಕಾರದಿಂದ ಯಾವ ಭಾಗದಲ್ಲೂ ಡಿಸೈನ್ನುಗಳನ್ನು ಮಾಡಬಹುದು. ರೇಖೆಗಳ ಸೌಂದರ್ಯಾತ್ಮಕ ರಚನೆಯು ಅಲಂಕಾರಿಕ ಡಿಸೈನುಗಳನ್ನು ನಿರ್ಮಿಸಲು ಉಪಯೋಗಿಸುವುದಾಗಿದೆ. ಇಂತಹ ಡಿಸೈನುಗಳ ಕ್ರಮಗಳ ಆವರ್ತನವಾಗಿದೆ ಅಲಂಕಾರಿಕ ಪ್ಯಾಟರ್ನುಗಳಾಗಿ ದಾಖಲಿಸಿರುವುದು.

**ಕಲಿಕಾ ಸಾಧನೆ**

ನಿಖರತೆ, ರೂಪಭದ್ರತೆ, ಅಲಂಕಾರಿಕತೆ ಇವುಗಳು ಒಳಪಡುವ ಮಾದರಿಗಳನ್ನು ಚಿತ್ರೀಕರಿಸುವುದು.

**ಆಶಯ, ತಿಳುವಳಿಕೆ**

- ನಿಖರತೆಯೂ ರೂಪಭದ್ರತೆಯೂ ಅಲಂಕಾರಿಕತೆಯ ಪ್ರಧಾನ ಘಟಕಗಳಾಗಿವೆ.
- ರೇಖೆಗಳ ಸೌಂದರ್ಯಾತ್ಮಕ ರಚನೆಯೂ ಸಂಯೋಜನೆಯಾಗಿದೆ ಅಲಂಕಾರಿಕ ನಮೂನೆಗಳು.
- ಅಲಂಕಾರಿಕ ನಮೂನೆಗಳನ್ನು ಉಪಯೋಗಿಸಿ ಪ್ರತಲಗಳನ್ನು ಆಕರ್ಷಕವಾಗಿ ಅಲಂಕರಿಸಲು ಸಾಧ್ಯವಾಗುತ್ತದೆ.
- ಜ್ಯಾಮಿತೀಯ ರೂಪಗಳನ್ನು ಉಪಯೋಗಿಸಿ ನಮೂನೆಗಳನ್ನು ನಿರ್ಮಿಸಬಹುದು.

**ನೈಪುಣ್ಯ**

- ರೇಖೆಗಳನ್ನು ಸೌಂದರ್ಯಾತ್ಮಕವಾಗಿ ಚಿತ್ರೀಕರಣಕ್ಕೂ ಸಂಯೋಜಿಸುವುದಕ್ಕೂ ಇರುವ ಸಾಮರ್ಥ್ಯ.
- ಅಲಂಕಾರಿಕ ನಮೂನೆಗಳು ನಿರ್ಮಿಸುವುದಕ್ಕಿರುವ ಸಾಮರ್ಥ್ಯ.

**ಕಲಿಕಾ ಚಟುವಟಿಕೆಗಳು**

- ರೇಖೆಗಳ ನಮೂನೆಗಳಿಂದ ರೂಪೀಕರಿಸಿದ ಅಲಂಕಾರ ಕೆಲಸಗಳ ಮಾದರಿಗಳನ್ನು ಪ್ರದರ್ಶಿಸುವುದು.
- ಇವುಗಳಲ್ಲಿ ರೇಖೆಗಳ ಹರಿಯುವಿಕೆಯನ್ನು ಕಾಣಲು ಸಾಧ್ಯವೇ?
- ರೇಖೆಗಳ ಹರಿಯುವಿಕೆಯಿಂದ ರೂಪೀಕರಣಗೊಂಡ ಪ್ಯಾಟರ್ನುಗಳಿಂದಾಗಿದೆ ಇದನ್ನು ಅಲಂಕರಿಸಿರುವುದು.
- ಇದೇ ರೀತಿಯಲ್ಲಿ ಅಲಂಕಾರಿಕ ಪ್ಯಾಟರ್ನುಗಳನ್ನು ನಿರ್ಮಿಸಲು ಸಾಧ್ಯವಾಗುವುದೇ?
- ಮೇಲ್ಕಂಡ ಹೇಳಿದಂತೆ ಆಶಯಗಳನ್ನು ಕ್ರೋಡೀಕರಿಸಿಕೊಂಡು ಅಲಂಕಾರಿಕ ಪ್ಯಾಟರ್ನುಗಳನ್ನು ನಿರ್ಮಿಸಲು ಅವಕಾಶವನ್ನು ನೀಡುವುದು.
- ಪ್ರದರ್ಶನ, ಸ್ವಯಂ ಮೌಲ್ಯಮಾಪನ

**ಮೌಲ್ಯಮಾಪನ**

- ನಿಖರತೆ, ರೂಪಭದ್ರತೆ ಎಂಬಿವುಗಳಿವೆ.
- ಆಕರ್ಷಣೀಯವಾಗಿದೆ.

## ಯೂನಿಟ್ – 7 : ಕಾರ್ಟೂನುಗಳು

ಬಹಳ ಕಡಿಮೆ ರೇಖೆಗಳಿಂದ ವಿಶಾಲವಾದ ಆಶಯಗಳನ್ನು ಸಂವೇದನೆಗೊಳಿಸಲು ಸಾಧ್ಯವಾಗಬಹುದೆಂಬುದು ಕಾರ್ಟೂನ್ ವಲಯದ ಪ್ರತ್ಯೇಕತೆ. ಚಿತ್ರೀಕರಣಕ್ಕೆ ಘಟಕ ಶಾಸ್ತ್ರವಾದ ಒಂದಂಶವೂ ಸ್ವೀಕರಿಸದೇ ಹಾಸ್ಯಾತ್ಮಕವಾಗಿಯೂ ಅತಿಶಯೋಕ್ತಿ ಬೆರೆಸಿ ಅಗತ್ಯವಿರುವಷ್ಟು ರೇಖೆಗಳಿಂದ ಕಾರ್ಟೂನ್ ರಚನೆ ನಡೆಸುವುದು.

**ಕಲಿಕಾ ಸಾಧನೆ**

ಸಕಾಲಿಕ ಆಶಯಗಳನ್ನು ಆಧಾರವಾಗಿರಿಸಿ ಕಾರ್ಟೂನ್‌ಗಳನ್ನು ನಿರ್ಮಿಸುವುದು.

**ಆಶಯ/ತಿಳುವಳಿಕೆ**

- ಹಾಸ್ಯರಸದೊಂದಿಗೆಯಿರುವ ಕಾರ್ಟೂನ್ ಚಿತ್ರಗಳು ಹೆಚ್ಚು ಆಕರ್ಷಣೀಯವಾಗಿರುವುದು.
- ಕೈ ಸಾಮರ್ಥ್ಯವಾಗಿದೆ ಕಾರ್ಟೂನ್ ರಚನೆಯಲ್ಲಿ ಅಗತ್ಯವಾಗಿರುವುದು.
- ಅತಿ ಅಗತ್ಯವಿರುವ ಗೆರೆಗಳನ್ನು ಮಾತ್ರವೇ ಉಪಯೋಗಿಸುವುದು.

**ನೈಪುಣ್ಯ**

- ಕಾರ್ಟೂನ್ ರಚನೆಗಾಗಿ ಅಗತ್ಯವಿರುವ ಡಾಕ್ಯುಮೆಂಟುಗಳನ್ನು ಕಂಡುಹಿಡಿಯಲಿಕ್ಕಿರುವ ಸಾಮರ್ಥ್ಯ.
- ಕಾರ್ಟೂನ್ ರಚನೆಯನ್ನು ನಡೆಸಲಿಕ್ಕಿರುವ ನೈಪುಣ್ಯ

**ಕಲಿಕಾ ಚಟುವಟಿಕೆಗಳು**

- ವಿವಿಧ ಕಾರ್ಟೂನ್‌ಗಳ ಮಾದರಿಯನ್ನು ಪ್ರದರ್ಶಿಸಬಹುದು.
- ಕಾರ್ಟೂನ್‌ನ ಸವಿಶೇಷತೆಗಳು ಯಾವುವು? ಚರ್ಚೆ.
- ಆವರ್ತಕ ವಿಷಯಗಳನ್ನು ಕಂಡುಹಿಡಿಯುವುದು. ಅಗತ್ಯವಾದ ಆಕಾರಗಳು.
  ಉದಾ:
  ಪರಿಸರ ಶುಚಿತ್ವ (ವಿಷಯ)
- ಉತ್ಪ್ರೇಕ್ಷ್ಯೊಂದಿಗಿರುವ ಚಿತ್ರೀಕರಣೆ
- ಸರಳವಾಗಿ ಚಿತ್ರಿಸುವುದು.
- ಹಾಸ್ಯರಸ ಇದೆ.
- ವಿಮರ್ಶನಾತ್ಮಕವಾಗಿದೆ.
- ಚಿಂತಾ ಪ್ರಾಧಾನ್ಯವಾಗಿದೆ.
- ಸರಳವಾಗಿ ಓದುವುದಕ್ಕೆ ಸಾಧ್ಯವಾಗಿದೆ.
- ರಚನೆಯಲ್ಲಿ ನಿಜವಾದ ಘಟನಾನುಪಾತವನ್ನು ಸ್ವೀಕರಿಸಿಲ್ಲ.
- ರೂಪಗಳನ್ನು ಅದರ ನಿಜವಾದ ಘಟನೆಗಳಿಗನುಸರಿಸಿ ಬರೆಯಬೇಕು? ಅತಿಶಯೋಕ್ತಿಯ ಅವಶ್ಯಕತೆ ಏನು?
- ಮೇಲ್ಕಂಡ ಹೇಳಿದ ಆಶಯಗಳಲ್ಲಿ ಗಮನವಿಟ್ಟು ಕ್ರೋಢೀಕರಿಸಬೇಕು.
- ಕಾರ್ಟೂನ್ ರಚನೆಗನುಸರಿಸಿ ವಿಷಯವನ್ನು ಕಂಡುಹಿಡಿಯಬಹುದೇ?
- ಆನುಕಾಲಿಕ ವಿಷಯವನ್ನು ಕಂಡುಹಿಡಿಯುವುದು. ಸುಲಭವಾಗಿ ಕಾರ್ಟೂನ್ ಹಾರಿಸುವುದು.
- ಅತಿಶಯೋಕ್ತಿ ಎಷ್ಟರಮಟ್ಟಿಗೆ ಬೇಕು? ಚರ್ಚೆ.
- ಮನಸ್ಸಿನಲ್ಲಿ ರೂಪ ಪಡೆದ ಕಾರ್ಟೂನುಗಳು ಹೇಳಿಸಬಹುದು. ಪ್ರದರ್ಶಿಸುವುದು.

**ಮೌಲ್ಯಮಾಪನ**

- ಆಶಯ ಪ್ರಕಟನೆಯ ಶಕ್ತಿ
- ಅತಿಶಯೋಕ್ತಿಯ ಅಳತೆ
- ರೇಖೆಗಳ ಮಿತ

# ಏಳನೇ ತರಗತಿ

## ಯೂನಿಟ್ – 1 : ನೆರಳು ಮತ್ತು ಬೆಳಕು

ತ್ರಿಮಾನ ಚಿತ್ರ ರೂಪೀಕರಣದಲ್ಲಿ ಬಹಳ ಪ್ರಾಧಾನ್ಯವಿರುವ ವಲಯಗಳಾಗಿವೆ ನೆರಳು ಮತ್ತು ಬೆಳಕು. ಬೆಳಕಿನ ಸಹಾಯದೊಂದಿಗೆ ನಮಗೆ ವಸ್ತುಗಳನ್ನು ಕಾಣಲು ಸಾಧ್ಯವಾಗುವುದು. ಆದ್ದರಿಂದ ವಸ್ತುಗಳ ಪ್ರತಲಗಳಲ್ಲೂ ಸುತ್ತಮುತ್ತಲೂ ಬೀಳುವ ಬೆಳಕಿನ ಗಾಢತೆಯನ್ನು ಅನುಸರಿಸಿಯಾಗಿದೆ ಬೆಳಕಿನ ಹಾಗೂ ನೆರಳಿನ ಭಾಗಗಳನ್ನು ಚಿತ್ರೀಕರಿಸುವುದು. ಬೆಳಕು ಬೀಳುವ ಭಾಗದಲ್ಲಿ ಮೃದುಲ ಬಣ್ಣವೂ ಬೀಳದ ಭಾಗದಲ್ಲಿ ಗಾಢ ಬಣ್ಣವು ಕಾಣುವುದು. ಅಂತಹ ರೀತಿಯಲ್ಲಿ ಬಣ್ಣಗಳ ವಿವಿಧ ಟೋನುಗಳಾಗಿ ಚಿತ್ರದಲ್ಲಿ ನಾವು ಕ್ರಮೀಕರಿಸಬೇಕಾಗಿದೆ.

### ಕಲಿಕಾ ಸಾಧನೆ

ವಸ್ತುಗಳಲ್ಲಿ ನೆರಳು ಹಾಗೂ ಬೆಳಕಿಗೆ ಸಂಬಂದಪಟ್ಟಂತೆ ಪತನರೀತಿಯನ್ನು ತಿಳಿದು ಸ್ವಾಭಾವಿಕ ಚಿತ್ರೀಕರಣವನ್ನು ನಡೆಸುವುದು.

### ಆಶಯ, ತಿಳುವಳಿಕೆ

- ಬೆಳಕು ಬೀಳುವ ಭಾಗದಲ್ಲಿ ಎಳೆ ಬಣ್ಣವು ಬೆಳಕು ಬೀಳದ ಭಾಗದಲ್ಲಿ ಕಡುಬಣ್ಣವು ಕಾಣಬರುತ್ತದೆ.
- ಬೆಳಕಿನ ತೀವ್ರತೆಯನ್ನು ಅನುಸರಿಸಿ ನೆರಳೂ ಗಾಢವಾಗಿರಬೇಕು.

### ನೈಪುಣ್ಯಗಳು


- ಬೆಳಕಿನ ಪತನರೀತಿಗೆ ಅನುಸರಿಸಿ ಬಣ್ಣಗಳಲ್ಲಿ ಬದಲಾವಣೆಯನ್ನು ಮಾಡುವುದಕ್ಕಾಗಿರುವ ನೈಪುಣ್ಯ.
- ಭಾವನೆಯಲ್ಲಿ ಬೆಳಕಿನ ಗಾಢತೆ ತೀರ್ಮಾನಿಸುವುದೂ ಅದಕ್ಕನುಸರಿಸಿ ನೆರಳಿನಲ್ಲಿ ಗಾಢತೆಯನ್ನು ಸೇರಿಸುವುದಕ್ಕಿರುವ ಪ್ರತಿಭೆ.

### ಕಲಿಕಾ ಚಟುವಟಿಕೆಗಳು

- ಮೇಜಿನ ಮೇಲೆ ಒಂದೋ ಎರಡೋ ದೊಡ್ಡ ವಸ್ತುಗಳನ್ನು (ಹೊಳೆಯುವಿಕೆ ಇಲ್ಲದ) ಪ್ರದರ್ಶಿಸುವುದು. .
- ಈ ವಸ್ತುಗಳಲ್ಲಿ ಮಿತವಾದ ಬೆಳಕನ್ನು ಬೀಳುವ ಹಾಗೆ ಅವಸ್ಥೆಯನ್ನು ಸೃಷ್ಟಿ ಮಾಡುವುದು ಮತ್ತು ನಿರೀಕ್ಷಣೆಗೆ ನಿರ್ದೇಶನವನ್ನು ನೀಡುವಂತೆ ಮಾಡುವುದು.







- ಇವುಗಳಲ್ಲಿ ಯಾವ ಭಾಗದಿಂದ ಬೆಳಕು ಬೀಳುತ್ತಿರುವುದು? ನೆರಳು ಕಾಣುವುದು ಯಾವೆಲ್ಲಾ ಭಾಗಗಳಿಂದ?
- ಮೇಲೆ ಪ್ರತಿಪಾದಿಸಿದ ಆಶಯಗಳು ಕ್ರೋಡೀಕರಿಸಿಕೊಂಡು ಚರ್ಚೆಯನ್ನು ಕೊನೆಗೊಳಿಸುವುದು.
- ಎಂದರೆ ಈ ವಸ್ತುವಿನಲ್ಲಿ ಯಾವುದಾದರೂ ಒಂದು ದಿಕ್ಕಿನಿಂದ ಬೆಳಕು ಬೀಳುವ ರೀತಿಯಲ್ಲಿ ಚಿತ್ರೀಕರಿಸಿ ನೋಡಿರಿ.
- ಬಿಡಿಸಿದ ನಂತರ ಪ್ರದರ್ಶನ, ಸ್ವಯಂ ಮೌಲ್ಯಮಾಪನ

### ಮೌಲ್ಯಮಾಪನ

- ನಿರೀಕ್ಷಣಾ ಕಲಿಕೆ
- ಬೆಳಕಿನ ಮೂಲಕ್ಕೆ ಅನುಸರಿಸಿ ನೆರಳುಗಳನ್ನು ಸೇರಿಸುವುದು.
- ರಚನಾ ಶೈಲಿ

## ಯೂನಿಟ್ – 2 : ಮನುಷ್ಯ ರೂಪಗಳು

ಮನುಷ್ಯ ರೂಪಗಳನ್ನು ಸರಿಯಾಗಿ ಅಳತೆಗಳೊಂದಿಗೆ ಹೇಳಿಸುವುದಕ್ಕೆ ಕಳೆದ ಕ್ಲಾಸಿನಲ್ಲಿ ಕಲಿತ್ತಿದ್ದೀರಲ್ಲವೇ?. ಚಿಕ್ಕದಾದ ಕೆಲಸಗಳನ್ನು ಮಾಡುವ ಮನುಷ್ಯ ರೂಪಗಳನ್ನು ಈ ಕ್ಲಾಸಿನಲ್ಲಿ ಮಾಡಬೇಕಾದುದು. ಮನುಷ್ಯ ಶರೀರದ ಘಟನಾ ಪರವಾದ ತಿಳುವಳಿಕೆಗಳನ್ನು ತಿಳಿದುಕೊಂಡು ಚಲನಾತ್ಮಕವಾದ ಅವಯವಗಳನ್ನು ಸೇರಿಸಿದರೆ ಇದೇ ರೀತಿಯಲ್ಲಿರುವ ಮನುಷ್ಯ ರೂಪಗಳನ್ನು ಬಿಡಿಸಬಹುದು.

### ಕಲಿಕಾ ಸಾಧನೆ

ಅನುಪಾತದಲ್ಲಿರುವ ಮನುಷ್ಯ ರೂಪಗಳು ಸಣ್ಣ ಕೆಲಸಗಳನ್ನು ಮಾಡುವ ಚಿತ್ರವನ್ನು ಬಿಡಿಸುವುದು.


### ಆಶಯ, ತಿಳುವಳಿಕೆ

- ಪೂರ್ಣ ಬೆಳವಣಿಗೆ ಹೊಂದಿದ ಮನುಷ್ಯ ರೂಪವನ್ನು ಚಿತ್ರೀಕರಿಸುವ ತಲೆಯ ಉದ್ದವನ್ನು ಅಳತೆ ಮಾಡಿ ಅನುಪಾತ ತಿಳಿಯುವುದು.
- ಕೆಲಸ ಮಾಡುವ ಮನುಷ್ಯ ರೂಪದಲ್ಲಿ ಅದೇ ಅನುಪಾತದಲ್ಲಿರುವ ಅವಯವಗಳ ಸ್ಥಾನ ಚಲನೆಯನ್ನು ತಿಳಿಯಬೇಕಾಗಿದೆ.


### ಕಲಿಕಾ ಚಟುವಟಿಕೆಗಳು

- ಸುಲಭವಾದ ಒಂದು ಕೆಲಸ ಮಾಡುವ ಮನುಷ್ಯ ರೂಪದ ಚಿತ್ರವನ್ನು ಕ್ಲಾಸಿನಲ್ಲಿ ಪ್ರದರ್ಶಿಸುವುದು, ಕ್ರೋಢೀಕರಿಸುವುದು.
- ಯಾವುದೆಲ್ಲಾ ಭಾಗಗಳು ಚಲಿಸಿದಂತೆ ತೋರುತ್ತದೆ?
- ಎಷ್ಟರ ಮಟ್ಟಿಗೆ ಅಕಾಲದಲ್ಲಿ ಚಲಿಸಿರುವುದು?

  ಆದರೆ ಅವುಗಳ ಅನುಪಾತಗಳೋ ಸ್ವಲ್ಪ ಕೂಡ ಬದಲಾಗಲಿಲ್ಲ.



- ವಿವಿಧ ಆ್ಯಕ್ಷನ್ ಚಿತ್ರಗಳು ಮಕ್ಕಳಿಗೆ ತೋರಿಸುವುದು. ಉದಾ – ಸ್ಪೋರ್ಟ್ಸ್ ಚಿತ್ರಗಳು ಮಕ್ಕಳಿಗೆ ತೋರಿಸಿಕೊಡುವುದು.
- ಇವುಗಳಲ್ಲಿ ಯಾವುದು ಆ್ಯಕ್ಷನ್ ಚಿತ್ರವೆಂದು ಹೇಳಿಸಲು ಸುಲಭ?
- ಮಕ್ಕಳಿಗೆ ಇಷ್ಟವಾದ ಆ್ಯಕ್ಷನ್ ಚಿತ್ರಗಳನ್ನು ಬಿಡಿಸುವುದು.
- ಪ್ರದರ್ಶಿಸುವುದು, ಸ್ವಯಂ ಮೌಲ್ಯಮಾಪನ



## ಮೌಲ್ಯಮಾಪನ

- ಅನುಪಾತಿಕ
- ಚಲನಾತ್ಮಕವಾದ ಶರೀರ ಭಾಗಗಳು
- ಆಕರ್ಷಣೀಯತೆ
- ಕೆಲಸದ ಸೂಚನೆ

# ಯೂನಿಟ್ – 3 : ಚಿತ್ರವೀಕ್ಷಣೆ

ಚಿತ್ರರಚನೆಯ ಸಾಂಕೇತಿಕ ಕಾರ್ಯಗಳಲ್ಲಿ ಪ್ರಧಾನವಾದುದು ವೀಕ್ಷಣೆ ಪರವಾದ ವಿಶೇಷತೆ. ಯಥಾರೀತಿಯ ಚಿತ್ರಗಳನ್ನು ರಚಿಸುವಾಗ ಈ ವಿಶೇಷತೆಗಳನ್ನು ಸೇರಿಸಿದರೆ ಚಿತ್ರವು ವಾಸ್ತವದಂತೆ ಕಾಣುತ್ತದೆ. ಚಿತ್ರದಲ್ಲಿ ವಸ್ತುಗಳ ಸ್ಥಾನ, ಅಗಲ, ವಿನ್ಯಾಸ ಮುಂತಾದ ಪ್ರತ್ಯೇಕತೆಗಳನ್ನು ನೋಟಕ್ಕನುಸರಿಸಿ ಸೇರಿಸುವುದು ಈ ರೀತಿ. ಪ್ರಕೃತಿ ಚಿತ್ರ ರಚನೆಯಲ್ಲಾಗಿದೆ ಪ್ರಮುಖವಾಗಿ ಇದು ಉಪಯೋಗಿಸುವುದು.

## ಕಲಿಕಾ ಸಾಧನೆ

ವೀಕ್ಷಣೆಯಲ್ಲಿ ಕಂಡ ವಿಶೇಷತೆಗಳನ್ನು ಉಪಯೋಗಿಸಿಕೊಂಡು ಚಿತ್ರ ರಚನೆಯನ್ನು ನಡೆಸುವುದು.

## ಆಶಯ, ತಿಳುವಳಿಕೆ

- ಒಂದೇ ಗಾತ್ರದಲ್ಲಿರುವ ವಸ್ತು ಹತ್ತಿರ ನಿಲ್ಲುವಾಗಲೂ ದೂರ ನಿಲ್ಲುವಾಗಲೂ ಒಂದೇ ಗಾತ್ರದಲ್ಲಿಯಲ್ಲ ಕಾಣಲು ಸಾಧ್ಯವಾಗುವುದು.
- ದಿಗಂತದ ಕುರಿತು ಇರುವ **ತಿಳುವಳಿಕೆ**ಯನ್ನು ತಿಳಿಯುವುದು.
- ದೂರವಾದಷ್ಟೂ ವಸ್ತುಗಳು ಚಿಕ್ಕದಾಗಿಯೂ ಸ್ಪಷ್ಟತೆ ಕಡಿಮೆಯಾಗಿಯೂ ಕಾಣುತ್ತದೆ. ಒಂದು ಬಿಂದುವಿನಲ್ಲಿ ಅಂತಿಮಗೊಳ್ಳುವಂತೆ ಅನಿಸುತ್ತದೆ.
- ವಾರ್ನಿಶಿಂಗ್ ಪೋಯಿಂಟ್ ಎಂಬ ತಂತ್ರವನ್ನು ತಿಳಿಯುವುದು.

## ನೈಪುಣ್ಯಗಳು

- ವೀಕ್ಷಣಾ ಪರವಾದ ವಿಶೇಷತೆಗಳೊಂದಿಗೆ ವಸ್ತುಗಳನ್ನು ಭಾವನೆಯಲ್ಲಿ ಕಾಣುವುದಕ್ಕಿರುವ ಸಾಮರ್ಥ್ಯ.
- ಚಿತ್ರದಲ್ಲಿ ವಸ್ತುಗಳನ್ನು ವೀಕ್ಷಣೆಯ ವಿಶೇಷತೆಗಳೊಂದಿಗೆ ಕ್ರಮೀಕರಿಸುವ ಸಾಮರ್ಥ್ಯ.
- ದೂರ ಮತ್ತು ಗಾತ್ರಗಳ ಪರಸ್ಪರ ಸಂಬಂಧವನ್ನು ತಿಳಿಯುವುದು.

## ಕಲಿಕಾ ಚಟುವಟಿಕೆಗಳು

- ಪ್ರಕೃತಿಯೊಂದಿಗೆ ಸಂಬಂಧಪಟ್ಟ ರಚನೆಗಳಲ್ಲಿ ವೀಕ್ಷಣಾ ಪರವಾದ ಸವಿಶೇಷತೆಗಳು ಪ್ರಕಟವಾಗಿ ಕಾಣುತ್ತಿವೆ.
- ಒಂದೇ ಎತ್ತರದಲ್ಲಿ ಹತ್ತಿರವೂ ದೂರವೂ ನಿಲ್ಲುತ್ತಿರುವ ವಸ್ತುಗಳನ್ನು ನಿರೀಕ್ಷಿಸುವುದು.
- ಆಕಾಶವನ್ನೂ ಭೂಮಿಯನ್ನೂ ಬೇರ್ಪಡಿಸಿ ದೃಷ್ಟಿಕೋನದ ಪರಿಧಿ (ದಿಗಂತ ರೇಖೆ) ಚರ್ಚೆ ವಾರ್ನಿಶಿಂಗ್ ಪೋಯಿಂಟ್ ಗುರುತಿಸುವುದು. ಹತ್ತಿರ ನಿಲ್ಲುವ ವಸ್ತುವಿನಿಂದ ವಾರ್ನಿಶಿಂಗ್


ಪೋಯಿಂಟಿಗೆ ರೇಖೆಯನ್ನು ಬಿಡಿಸಿ ದೂರದಲ್ಲಿ ನಿಲ್ಲುವ ವಸ್ತುವಿನ ಎತ್ತರವನ್ನು ಕಂಡುಹಿಡಿಯುವುದು.

ಉದಾ : ರೈಲ್ವೇ ಹಳಿಗಳು ಒಂದು ಬಿಂದುವಿನಲ್ಲಿ ಚಿಕ್ಕದಾಗಿ ಕಾಣುವ ರೀತಿ.

- ಹತ್ತಿರ ನಿಂತಿರುವ ವಸ್ತುವೂ ದೂರದಲ್ಲಿರುವ ನಿಂತಿರುವ ವಸ್ತುವೂ ಒಂದೇ ಗಾತ್ರದಲ್ಲಿ ಕಾಣುವುದಕ್ಕೆ ಸಾಧ್ಯವಾಗುವುದೇ? ದೂರಕ್ಕೆ ಹೋಗುತ್ತಿದ್ದಂತೆ ವಸ್ತುವಿನ ಅಳತೆಯಲ್ಲಿ ವ್ಯತ್ಯಾಸ ಬರುತ್ತಿದೆಯೇ? ಚರ್ಚೆ ಮಾಡುವುದು.

**ಮೌಲ್ಯಮಾಪನ**

- ಚರ್ಚೆ ಮಾಡಿದ ಆಶಯಗಳು ಚಿತ್ರದಲ್ಲಿ ಪ್ರತಿಫಲಿಸುತ್ತಿವೆ.
- ದೂರವನ್ನು ತೋರಿಸಲು ಸಾಧ್ಯವಾಗಿದೆ.
- ಚಿತ್ರಕ್ಕೆ ಸ್ಪಷ್ಟತೆಯೂ ಆಕರ್ಷಣೆಯೂ ಇದೆ.
- ಚಿತ್ರ ಸಮಗ್ರವಾಗಿದೆ.



## ಯೂನಿಟ್ – 4 : ಆಶಯ ಚಿತ್ರಗಳು

ಚಿತ್ರ ಆಶಯ ವಿನಿಮಯಕ್ಕೆ ಉಪಯೋಗಿಸುವ ಒಂದು ಮಾಧ್ಯಮವಾಗಿದೆ. ಒಂದು ಯಥಾರ್ಥ ಚಿತ್ರವೋ ಭಾವನಾಚಿತ್ರವೋ ಆಶಯ ವಿನಿಮಯಕ್ಕೆ ಉಪಯೋಗಿಸಬಹುದು. ಭಾವನಾ ಚಿತ್ರವು ಹೆಚ್ಚಾಗಿ ಸೃಜನಾತ್ಮಕವೂ ಆಗಿದೆ. ವೀಕ್ಷಿಸುವ ಪ್ರತಿಯೊಬ್ಬರಲ್ಲಿಯೂ ಆಶಯಗಳ ಮಹಾವೃಷ್ಠಿಯನ್ನು ಬರಿಸಲು ಭಾವನಾ ಚಿತ್ರಗಳಿಗೆ ಸಾಧ್ಯವಾಗುವುದು. ಆಸ್ವಾದನಾ ಮಟ್ಟದ ಎತ್ತರಗಳಿಗನುಸರಿಸಿ ಆಶಯ ಸಂಪುಷ್ಟವಾಗುತ್ತದೆ.

### ಕಲಿಕಾ ಸಾಧನೆ

ಆಶಯಗಳ ಆಧಾರದಲ್ಲಿ ಚಿತ್ರಗಳನ್ನು ರಚಿಸುವುದು.

### ಆಶಯ, ತಿಳುವಳಿಕೆ

- ಆಶಯ ಸಂವೇದನೆಗೆ ಉಪಯೋಗಿಸುವುದಾಗಿದೆ ಚಿತ್ರಗಳು.
- ಚಿತ್ರಗಳು ಆಶಯ ನಿಬಿಡವಾಗಿದೆ.
- ಬಿಡಿಸಿ ಬಣ್ಣವನ್ನು ನೀಡುವುದಕ್ಕೆ ವ್ಯತ್ಯಸ್ಥ ಮಾಧ್ಯಮಗಳನ್ನು ಉಪಯೋಗಿಸಬಹುದು.
- ಒಂದೇ ಚಿತ್ರವು ಆಶಯಗಳ ಭಂಡಾರವನ್ನು ಸೃಷ್ಟಿಸುತ್ತದೆ.

### ನೈಪುಣ್ಯ

- ಆಶಯ ಆಧಾರಿತವಾಗಿ ರಚನೆ ನಡೆಸುವುದಕ್ಕಿರುವ ನೈಪುಣ್ಯ
- ವಿವಿಧ ಮಾಧ್ಯಮಗಳನ್ನು ನೋಡಿಕೊಳ್ಳಲಿರುವ ಪ್ರತಿಭೆ
- ವರ್ಣ ವಿನ್ಯಾಸಗಳಿಗೆ ಇರುವ ಪ್ರತಿಭೆ

### ಕಲಿಕಾ ಚಟುವಟಿಕೆಗಳು

#### ಪ್ರಕ್ರಿಯೆ – *1*

- ಪ್ರದರ್ಶಿಸುವ ಚಿತ್ರ ಸೂಕ್ಷ್ಮವಾಗಿ ನಿರೀಕ್ಷಿಸುವುದು. ಈ ಚಿತ್ರ ಪ್ರತಿಬಿಂಬಿಸುವ ಆಶಯವನ್ನು ವೈಯಕ್ತಿಕವಾಗಿ ಗುರುತಿಸುವುದು. ಆಶಯ ಪ್ರಕಟಿಸುವುದಕ್ಕೆ ಯಾವುದೆಲ್ಲಾ ಸೂಚನೆಗಳನ್ನು (ಘಟಕಗಳು) ಚಿತ್ರದಲ್ಲಿ ಸೇರಿಸಿರುವುದು ಎಂದು ಕಂಡುಹಿಡಿಯುವುದು.

#### ಪ್ರಕ್ರಿಯೆ – *2*

- ಮೊದಲು ಮಾಡಿದ ಕಲಿಕಾ ಪ್ರಕ್ರಿಯೆಯ ಮುಂದುವರಿಕೆಯಾಗಿ ರಚನೆಗೆ ಸಹಾಯಕ ವಾಗಲು ಆಶಯವನ್ನು ಕಂಡುಹಿಡಿಯುವುದು.
- ಮಂಡಿಸುವುದು, ಟೀಚರ್ ಲಿಸ್ಟ್ ಮಾಡುವುದು.
- ಲಿಸ್ಟ್ ಮಾಡಿದ ಆಶಯಗಳನ್ನು ಸಾಮಾನ್ಯ ಚರ್ಚೆಗೆ ಒಳಪಡಿಸುವುದು.
- ಕೆಲವು ಆಶಯಗಳನ್ನು ಸೇರಿಸುವುದು, ಸೂಕ್ತವಲ್ಲದವುಗಳನ್ನು ಬಿಟ್ಟುಬಿಡುವುದು. ಚರ್ಚೆಗಳಿಂದ ಸಾಮಾನ್ಯ ಆಶಯವನ್ನು ಆಯ್ಕೆ ಮಾಡುವುದು.
- ಆಶಯವನ್ನು ಚಿತ್ರೀಕರಿಸುವುದಕ್ಕೆ ಅಗತ್ಯವಾದ ಘಟಕಗಳನ್ನು ವೈಯಕ್ತಿಕವಾಗಿ ಗುರುತಿಸುವುದು.

ಒಂದು ಚಿತ್ರವನ್ನೇ ಪ್ರತಿಯೊಬ್ಬರು ವಿವಿಧ ರೀತಿಯಲ್ಲಿ ಬಿಡಿಸುವುದು. (ಮಗುವಿನಮೊದಲಿನ ತಿಳುವಳಿಕೆ, ಸಾಮಾಜಿಕ ದೃಷ್ಟಿಕೋನ, ನಿರೀಕ್ಷಣೆಯ ಅನುಭವಗಳು ಇವುಗಳು ಚಿತ್ರ ಓದುವಿಕೆಯನ್ನು ಸ್ವಾಧೀನಪಡಿಸುವ ಘಟಕಗಳಾಗಿವೆ.)

- ರಚನೆಯನ್ನು ನಡೆಸುವುದು.
- ರಚನೆ ಮುಗಿದ ನಂತರ ಮಕ್ಕಳನ್ನು ಗುಂಪಾಗಿ ಮಾಡಿ ಚಿತ್ರಗಳನ್ನು ಪರಸ್ಪರ ಬದಲಾಯಿಸಿ, ಒಂದು ಬಾರಿಯು ಚಿತ್ರ ನಿರೀಕ್ಷಣೆ, ಓದುವಿಕೆ, ಟಿಪ್ಪಣಿಯನ್ನು ತಯಾರಿಸುವುದು, ಎಂಬಿವುಗಳನ್ನು ನಡೆಸುವುದು.
- ಟಿಪ್ಪಣಿಗಳನ್ನು ಗುಂಪಿನಲ್ಲಿ ಮಂಡಿಸಿ ಚರ್ಚೆ ಮಾಡುವುದು.
- ಗುಂಪು ಮಂಡನೆ
- ಮಂಡಿಸಿದ ನಂತರ ಪುನಃ ಚಿತ್ರವನ್ನು ಸುಂದರಗೊಳಿಸುವುದಕ್ಕೂ, ವರ್ಣಮಯವಾಗಿಸುವುದಕ್ಕೂ ಅವಕಾಶವನ್ನು ನೀಡುವುದು.
- ಹೊಸ ಚಿತ್ರವನ್ನು ಬಿಡಿಸಿ ಬಣ್ಣವನ್ನು ನೀಡುವುದಕ್ಕಿರುವ ಅವಕಾಶವನ್ನು ನೀಡುವುದು.

### ಮೌಲ್ಯಮಾಪನ

- ಚಿತ್ರಗಳನ್ನು ನಿರೀಕ್ಷಿಸಿ ಆಶಯವನ್ನು ತಿಳಿಯಲು ಸಾಧ್ಯವಾಗುತ್ತದೆ.
- ಹೊಸ ಆಶಯಗಳನ್ನು ಕಂಡುಹಿಡಿಯುವುದು.
- ಆಶಯವನ್ನು ಚಿತ್ರ ರೂಪದಲ್ಲಿ ಬದಲಾಯಿಸಲು ಸಾಧ್ಯವಾಗುವುದು.
- ಬಣ್ಣವನ್ನು ನೀಡಿ ಸುಂದರಗೊಳಿಸುವುದು.

## ಯೂನಿಟ್ – 5 : ಕಾರ್ಟೂನ್‌ಗಳು

ಚಿತ್ರಕಲೆಯ ವಲಯದಲ್ಲಿ ಹೆಚ್ಚು ಪ್ರಚಾರವನ್ನು ಪಡೆದುದು ಕಾರ್ಟೂನ್. ಮುದ್ರಣ ಮಾಧ್ಯಮಗಳಾಗಿವೆ ಕಾರ್ಟೂನನ್ನು ಹೆಚ್ಚು ಉನ್ನತಕ್ಕೆ ಕೊಂಡು ಹೋದದ್ದು. ಈಗ ಕಾರ್ಟೂನ್ ಮಾತ್ರವಾಗಿ ಒಳಪಡಿಸಿಕೊಂಡ ಪ್ರಕಟಣೆಗಳಿವೆ. ಇಲೆಕ್ಟ್ರೋನಿಕ್ ಮೀಡಿಯದಲ್ಲೂ ಕಾರ್ಟೂನ್ ವ್ಯಾಪಕವಾಗಿ ಉಪಯೋಗಪಡಿಸುವುದಿದೆ. ಕಾರ್ಟೂನ್ ಮಾತ್ರವಾಗಿರುವ ಚಾನೆಲುಗಳನ್ನು ನೆನಪಿಸಬೇಕು. ಕಾರ್ಟೂನಿಗೆ ಮಾತ್ರವಾಗಿ ರಚನಾ ಕಲಿಕೆಗಳು ಒಂದು ಉದ್ಯೋಗ ಎಂಬ ನೆಲೆಯಲ್ಲಿ ಗಮನಿಸಬೇಕು. ಅನಿಮೇಶನಿನಲ್ಲೂ ಕಾರ್ಟೂನ್ ಉಪಯೋಗಿಸಿ ಬರುತ್ತಿರುವುದನ್ನು CTP (Cartoon Television Programme) ಕಾಣಬಹುದು.

### ಕಲಿಕಾ ಸಾಧನೆ

ಆಶಯದಲ್ಲಿರುವ ಕಾರ್ಟೂನ್ ಬಿಡಿಸುವುದು.

### ಆಶಯ, ತಿಳುವಳಿಕೆ

- ವಿಮರ್ಶನೆಯೂ ಹಾಸ್ಯವೂ ಅತಿಶಯೋಕ್ತಿಯೂ ಸೇರಿದ್ದುದಾಗಿದೆ ಕಾರ್ಟೂನ್.
- ಒಂದು ನೋಟದಲ್ಲೇ ಓದುಗರು ಆಶಯವನ್ನು ಗ್ರಹಿಕೆ ಮಾಡಲು ಸಾಧ್ಯವಾಗುವುದು.
- ಸುಲಭವಾದ ರಚನಾ ಸಾಮರ್ಥ್ಯವಾಗಿದೆ ಇದರಲ್ಲಿ ಉಪಯೋಗಿಸುವುದು.

### ನೈಪುಣ್ಯಗಳು

- ಆಶಯಗಳು ಸುಲಭವಾಗಿ ಮಂಡಿಸುವುದಕ್ಕಿರುವ ದಾಖಲೆಗಳ ಆಯ್ಕೆ.
- ಆಶಯಗಳ ಅತಿಶಯೋಕ್ತಿಯನ್ನು ಸೇರಿಸಿ ಬಿಡಿಸುವುದಕ್ಕಿರುವ ಸಾಮರ್ಥ್ಯ.



## ಕಲಿಕಾ ಚಟುವಟಿಕೆಗಳು

- ವಿವಿಧ ಕಾರ್ಟೂನುಗಳನ್ನು ಪ್ರದರ್ಶಿಸುವುದು.
- ಚಿತ್ರ ತೋರಿಸುವುದು. ಪ್ರತ್ಯೇಕತೆಗಳು ಯಾವುದೆಲ್ಲಾ?
- ಕಾರ್ಟೂನಿನ ಆಶಯಗಳ ಕುರಿತು ಚರ್ಚೆ.
- ಇದೇ ರೀತಿಯಿರುವ ಬೇರೆ ವಿಷಯಗಳನ್ನು ಕಂಡುಹಿಡಿಯಲು ಹೇಳುವುದು.

  **ವಿಷಯಗಳು**

  - ಪರಿಸರ ಮಾಲಿನ್ಯ, ವನ ನಾಶ, ಶಬ್ದಮಾಲಿನ್ಯ, ಆರೋಗ್ಯ, ರಸ್ತೆ ಸುರಕ್ಷೆ.
- ಮಕ್ಕಳು ಇದೇ ರೀತಿಯಿರುವ ಬೇರೆ ವಿಷಯಗಳನ್ನು ಕಂಡುಹಿಡಿದು ಕಾರ್ಟೂನ್‌ನ್ನು ನಿರ್ಮಿಸಲು ಹೇಳುವುದು.
- ಬಿಡಿಸಿದವುಗಳ ಚರ್ಚೆ ಮಾಡುವುದು.

## ಮೌಲ್ಯಮಾಪನ

**ಸೂಚಕಗಳು**

- ಆಶಯ ವ್ಯಕ್ತವಾಗಿವೆ
- ಅತಿಶಯೋಕ್ತಿ ಇದೆ
- ಸುಲಭವಾಗಿದೆ
- ಭಾವನೆಯಿದೆ

# ಯೂನಿಟ್ – 8 : ಚಿತ್ರೀಕರಣ

ಕಥೆ, ಕವಿತೆ ಎಂಬಿವುಗಳ ಪ್ರಧಾನ ಘಟನೆಗಳನ್ನು ಚಿತ್ರೀಕರಿಸುವುದಕ್ಕೆ ಅದರದ್ದೇ ಆದ ಸಾಂಕೇತಿಕ ಜ್ಞಾನವು ಅಗತ್ಯವಾಗಿದೆ. ಕಥಾಪಾತ್ರಗಳು, ಹಿನ್ನಲೆ, ವೇಷವಿಧಾನ, ಪ್ರಾಯ ಮುಂತಾದ ಘಟಕಗಳು ಆಶಯಗಳಿಗನುಸರಿಸಿಯಾಗಿರಬೇಕು. ಆಶಯವನ್ನು ಪ್ರೋತ್ಸಾಹಿಸುವ ಭಾವನೆಯನ್ನು ಹೊರತೆಗೆಯಲು ಚಿತ್ರಗಾರನಿಗೆ ಸಾಧ್ಯವಾಗಬೇಕು.

## ಕಲಿಕಾ ಸಾಧನೆ

ಕಥೆ, ಕವಿತೆ ಎಂಬಿವುಗಳ ಪ್ರಧಾನ ಆಶಯವನ್ನು ಒಳಪಡಿಸಿಕೊಂಡು ಚಿತ್ರ ರಚನೆಯನ್ನು ನಡೆಸುವುದು.

## ಆಶಯ, ತಿಳುವಳಿಕೆ

- ಪ್ರಧಾನ ಆಶಯಗಳ ಚಿತ್ರೀಕರಣಕ್ಕೆ ಕಥಾಪಾತ್ರಗಳ ಪ್ರತ್ಯೇಕತೆಗಳು ಮತ್ತು ಅಗತ್ಯವಾದ ಹಿನ್ನಲೆಯು ಇರಬೇಕು. ಕಥಾಪಾತ್ರಗಳ ವೇಷವಿಧಾನ, ಭಾವ, ಪಾತ್ರ ಎಂಬಿವುಗಳು ಪ್ರಧಾನ ಹಂತಗಳಾಗಿವೆ.
- ಕಾಲಘಟ್ಟಗಳಿಗೆ ಅನುಸರಿಸಿ ಹಿನ್ನಲೆಯು ಬೇಕು.

## ನೈಪುಣ್ಯಗಳು

- ಮನೋಚಿತ್ರ/ಭಾವನೆ ರೂಪೀಕರಿಸುವುದಕ್ಕಿರುವ ಸಾಮರ್ಥ್ಯ.
- ಭಾವನೆಗಳಿಗನುಸರಿಸಿ ಚಿತ್ರೀಕರಿಸುವುದಕ್ಕಿರುವ ಸಾಮರ್ಥ್ಯ. ಕಥೆಗೆ ಅನುಸರಿಸಿ ಆಕರ್ಷಕವಾಗಿ ಬಿಡಿಸುವುದಕ್ಕಿರುವ ಸಾಮರ್ಥ್ಯ

## ಕಲಿಕಾ ಚಟುವಟಿಕೆಗಳು

- ಕವಿತೆಯ ಆಶಯಗಳೋ ಕಥೆಯ ಆಶಯಗಳೋ ಕೊಟ್ಟ ನಂತರ ಅವುಗಳಲ್ಲಿನ ಪ್ರಧಾನ ವಿಚಾರಗಳನ್ನು ಕಂಡುಹಿಡಿಯಲು ಹೇಳುವುದು. ಕಂಡುಹಿಡಿದ ವಿಚಾರಗಳ ಕುರಿತು ಚರ್ಚೆ – (ಕಥಾಪಾತ್ರಗಳು, ವೇಷ, ಪ್ರಾಯ, ಭಾವ, ಚಲನಾವಸ್ಥೆ)
- ಈ ಕಥಾವಿಚಾರದ ಹಿನ್ನಲೆಯಲ್ಲಿ ಯಾವುದೆಲ್ಲಾ ಚಿತ್ರೀಕರಿಸುವಾ? ಚರ್ಚೆ.
- ಮನೋಚಿತ್ರೀಕರಣವನ್ನು ನಡೆಸುವುದು.
- ಈಗ ನಿಮ್ಮ ಭಾವನೆಯಲ್ಲಿರುವ ರಂಗ ಒಂದು ಚಿತ್ರೀಕರಿಸಬಹುದೇ? ಚಿತ್ರೀಕರಿಸುವುದಕ್ಕಾಗಿ ಅವಕಾಶವನ್ನು ನೀಡುವುದು.
- ಚಿತ್ರೀಕರಣದ ನಂತರ ಪ್ರದರ್ಶನ, ಸ್ವಯಂ ಮೌಲ್ಯಮಾಪನ

## ಮೌಲ್ಯಮಾಪನ

**ಸೂಚಕಗಳು**

- ರಚನಾ ವೈವಿಧ್ಯತೆ
- ಕಥಾ ಸಂದರ್ಭದ ನೈಜತೆ
- ಯೋಗ್ಯವಾದ ಹಿನ್ನಲೆ
- ವಸ್ತುಗಳ ಸಮನ್ವಯ

# ಯೂನಿಟ್ – 9 : ಜ್ಯಾಮಿತೀಯ ರೂಪಗಳು

ಚಿತ್ರ ರಚನೆ ಸುಂದರಗೊಳಿಸಲು ಕೆಲವು ಸಾಂಕೇತಿಕ ತತ್ವಗಳನ್ನು ಉಪಯೋಗಿಸುವ ರೀತಿ ಮೊದಲೇ ಜಾರಿಯಲ್ಲಿದೆ. ಜ್ಯಾಮಿತಿಯ ರೂಪಗಳನ್ನು ಉಪಯೋಗಿಸಿ ವಸ್ತುವನ್ನು/ವಸ್ತುಗಳನ್ನು ಸಮಗ್ರವಾಗಿ ಕಂಡು ಅವುಗಳನ್ನು ದಾಖಲಿಸುವ ರೀತಿಯು ಹಾಗೂ ಇದರಲ್ಲಿ ಅಡಗಿಕೊಂಡು ವಸ್ತುವಿನ/ವಸ್ತುಗಳ ಚಿತ್ರೀಕರಿಸುವಿಕೆಯನ್ನು ಮಾಡುವ ರೀತಿಯಾಗಿದೆ ಇದು. ಯಾವುದೇ ವಸ್ತುವನ್ನು ಅದರ ವಿವಿಧ ಘಟಕಗಳನ್ನಾಗಿ ಮಾಡುವುದು. ಈ ರೀತಿಯಾಗಿರುವ ಜ್ಯಾಮಿತೀಯ ರೂಪವನ್ನು ನಿರೀಕ್ಷಿಸಬಹುದಾಗಿದೆ. ವಸ್ತುಗಳ ಸಮಗ್ರವಾದ ರೂಪಗಳನ್ನು ಸುಲಭವಾಗಿ ಚಿತ್ರೀಕರಿಸುವುದಕ್ಕೆ ಸಾಧ್ಯವಾಗುವುದು.

## ಕಲಿಕಾ ಸಾಧನೆ

ಪ್ರಕೃತಿಯಲ್ಲಿರುವ ವಸ್ತುಗಳನ್ನು ನಿರೀಕ್ಷಿಸಿ ಅವುಗಳಲ್ಲಿರುವ ಜ್ಯಾಮಿತೀಯ ರೂಪಗಳನ್ನು ತಿಳಿದು ಚಿತ್ರವನ್ನು ಬಿಡಿಸಿ ಬಣ್ಣವನ್ನು ನೀಡುವುದು.

## ಆಶಯ, ತಿಳುವಳಿಕೆ

- ಕೆಲವು ತಾಂತ್ರಿಕ ತತ್ವಗಳನ್ನು ಉಪಯೋಗಿಸಿದರೆ ವಸ್ತುಗಳನ್ನು ಚಿತ್ರೀಕರಿಸುವುದಕ್ಕೆ ಸುಲಭವಾಗುವುದು.
- ಜ್ಯಾಮಿತೀಯ ರೂಪಗಳನ್ನು ಬಹಳ ಸುಲಭದಲ್ಲಿ ಬಿಡಿಸಬಹುದು ಎಂಬುದರಿಂದ ಅವುಗಳನ್ನು ಉಪಯೋಗಿಸಿ ಪ್ರಕೃತಿಯಲ್ಲಿನ ವಸ್ತುಗಳನ್ನು ಸುಲಭವಾಗಿ ಚಿತ್ರೀಕರಿಸಬಹುದು.
- ವಸ್ತುವನ್ನು ಒಂದಾಗಿಯೋ ಅಥವಾ ಗುಂಪಾಗಿಯೋ ಜ್ಯಾಮಿತೀಯ ರೂಪಗಳಲ್ಲಿ ವೀಕ್ಷಿಸಲಿರುವ ನೈಪುಣ್ಯಗಳು.

## ನೈಪುಣ್ಯಗಳು

- ವಸ್ತುವನ್ನು ಒಂದಾಗಿಯೋ ಅಥವಾ ಗುಂಪಾಗಿಯೋ ಜ್ಯಾಮಿತೀಯ ರೂಪಗಳಲ್ಲಿ ವೀಕ್ಷಿಸಲಿರುವ ನೈಪುಣ್ಯಗಳು.

- ಒಂದು ವಸ್ತುವಿನ ವಿವಿಧ ಭಾಗಗಳನ್ನು ಜ್ಯಾಮಿತೀಯ ರೂಪಗಳಲ್ಲಿ ವೀಕ್ಷಿಸಲಿರುವ ನೈಪುಣ್ಯಗಳು.

**ಕಲಿಕಾ ಚಟುವಟಿಕೆಗಳು**

***ಪ್ರಕ್ರಿಯೆ – 1***

- ಮೇಜಿನ ಮೇಲೆ ಒಂದು ಕಿತ್ತಳೆ ಮತ್ತು ಒಂದು ಹೂಜಿಯನ್ನು ಇಟ್ಟಿರುವುದು.
- ಈ ಮೇಜಿನ ಮೇಲೆ ಯಾವುದೆಲ್ಲಾ ವಸ್ತುಗಳನ್ನು ಕಾಣಬಹುದು?
- ಮಕ್ಕಳ ಪ್ರತಿಕ್ರಿಯೆ
- ಜ್ಯಾಮಿತೀಯ ರೂಪಗಳು ಯಾವುದೆಲ್ಲಾ?
- ಮಕ್ಕಳ ಪ್ರತಿಕ್ರಿಯೆ
- ಮೇಜಿನ ಮೇಲೆ ಇಟ್ಟಿರುವ ವಸ್ತುಗಳಲ್ಲಿ ಯಾವುದಾದರೂ ಜ್ಯಾಮಿತಿಯ ರೂಪಗಳು ಕಂಡುಬರುತ್ತದೆಯೇ?
- ಮಕ್ಕಳ ಪ್ರತಿಕ್ರಿಯೆ
- ಮೇಜಿನ ಮೇಲೆ ಇಟ್ಟಿರುವ ವಸ್ತುಗಳಲ್ಲಿ ಗೋಳ, ಸಿಲಿಂಡರ್ ಎಂಬಿವುಗಳನ್ನು ಕಾಣಲು ಸಾಧ್ಯವಾಗುತ್ತಿಲ್ಲವೇ?
- ಆದರೆ ಈ ಜ್ಯಾಮಿತಿಯ ರೂಪಗಳನ್ನು ಬಿಡಿಸಿಕೊಂಡು ನಮಗೆ ಈ ವಸ್ತುಗಳನ್ನು ಚಿತ್ರೀಕರಿಸಬಹುದು.
- ಮಕ್ಕಳಿಗೆ ಚಿತ್ರವನ್ನು ಬಿಡಿಸುವುದಕ್ಕೆ ಅನುವು ಮಾಡಿಕೊಡುವುದು.
- ಹೀಗೆ ಒಂದು ವಸ್ತುವಿನ ವಿವಿಧ ಭಾಗಗಳಲ್ಲಾಗಿ ಒಂದಕ್ಕಿಂತ ಹೆಚ್ಚು ವಸ್ತುಗಳ ಗುಂಪುಗಳನ್ನು ಜ್ಯಾಮಿತೀಯ ರೂಪಗಳಲ್ಲಿ ಒಗ್ಗೂಡಿಸಿದರೆ ಚಿತ್ರೀಕರಣ ಸುಲಭವಾಗಿಸಬಹುದು.

***ಪ್ರಕ್ರಿಯೆ – 2***

- ಪ್ರಕೃತಿ ದೃಶ್ಯವನ್ನು ಬಿಡಿಸುವಾಗ ಜ್ಯಾಮಿತೀಯ ರೂಪಗಳನ್ನು ಉಪಯೋಗಿಸಿ ಚಿತ್ರೀಕರಿಸಲು ಸಾಧ್ಯವಾಗುವುದೇ?
- ನಮಗೆ ಹೊರಗಿಳಿದು ನಿರೀಕ್ಷಿಸಬಹುದು.
- ನಿರೀಕ್ಷಿಸುವ ಪ್ರಕೃತಿಯ ಚಿತ್ರವನ್ನು (ಫ್ರೇಮ್) ತೀರ್ಮಾನಿಸುವುದು.
- ದೃಶ್ಯದಲ್ಲಿನ ಒಂದೋ ಎರಡೋ ವಸ್ತುಗಳನ್ನು ಸಮಗ್ರವಾಗಿ ಯಾವುದಾದರೂ ಜ್ಯಾಮಿತೀಯ ರೂಪದಲ್ಲಿ ಒಗ್ಗೂಡಿಸಿ ನಿಲ್ಲಿಸಲು ಸಾಧ್ಯವಾಗುವುದೇ?

  (ಪ್ರತಿಯೊಂದು ಮಗುವು ವ್ಯತ್ಯಸ್ಥ ರೀತಿಯಲ್ಲಿರುವ ರೂಪಗಳಾಗಿರಬಹುದು. ನಿರೀಕ್ಷಿಸಿರಿ.)

- ಅಧ್ಯಾಪಕರ ಕ್ರೋಡೀಕರಣ
- ಜ್ಯಾಮಿತೀಯ ರೂಪಗಳನ್ನು ಒಂದಾಗಿಯೋ ಒಂದಕ್ಕಿಂತ ಹೆಚ್ಚಾಗಿರುವ ರೂಪದೊಳಗೋ ಪ್ರಕೃತಿ ದೃಶ್ಯವನ್ನು ಅಡಗಿಸಿ ದರ್ಶಿಸಬಹುದು.
- ಹೀಗೆ ದರ್ಶಿಸಿದ ಜ್ಯಾಮಿತೀಯ ರೂಪವಾಗಿದೆ ಮೊದಲು ಬಿಡಿಸಬೇಕಾದುದು.
- ಅದರೊಳಗೆ ಅಡಗಿಸಿ ನಿಲ್ಲಿಸಿಕೊಂಡಿರುವ ಪ್ರಕೃತಿ ದೃಶ್ಯವನ್ನು ಬಿಡಿಸಿರಿ.
- ಪ್ರಕೃತಿ ದೃಶ್ಯವನ್ನು ಸಮಗ್ರವಾಗಿ ನೋಡಲು ಈ ರೀತಿ ಸಾಧ್ಯವಾಗುತ್ತದೆ.
- ಪ್ರಕೃತಿ ದೃಶ್ಯ ರಚನೆಯನ್ನು ಸುಲಭವಾಗಿಸಲು ಈ ತಾಂತ್ರಿಕತೆ ಸಹಾಯ ಮಾಡುವುದು.

## ಮೌಲ್ಯಮಾಪನ

- ನಿರೀಕ್ಷಣಾ ಕಲಿಕೆ
- ಜ್ಯಾಮಿತೀಯ ರೂಪಗಳನ್ನು ಕಂಡುಹಿಡಿಯುವುದು.
- ರೇಖೆಗಳ ಸ್ವಭಾವ, ಪೂರ್ಣತೆ, ವೇಗತೆ, ರಚನಾ ಸಾಮರ್ಥ್ಯ
- ಹೊರಾಂಗಣ ಚಿತ್ರೀಕರಣದೊಂದಿಗೆ ಮಗುವಿಗಿರುವ ಆಸಕ್ತಿ
- ಸಾಧನೆಗಳು
- ಪ್ರಕೃತಿಯನ್ನು ಸೂಕ್ಷ್ಮವಾಗಿ ನಿರೀಕ್ಷಿಸಿದರೆ ಅವನು ಒಬ್ಬ ಒಳ್ಳೆಯ ಚಿತ್ರಗಾರನಾಗಿರುತ್ತಾನೆ.
- ಪ್ರಕೃತಿ ಸ್ನೇಹ, ಸಂರಕ್ಷಣೆ ಇವುಗಳಿಗೆ ಪ್ರೇರಣೆ.
- ಜ್ಯಾಮಿತೀಯ ರೂಪಗಳ ಕಲಿಕೆ ಪ್ರಕೃತಿಯಿಂದ.
- ಜೀವಜಾಲಗಳೊಂದಿಗಿರುವ ಸ್ನೇಹವನ್ನು ಹೆಚ್ಚಿಸುತ್ತದೆ.

## ಯೂನಿಟ್ – 10 : ಶಿಲ್ಪಗಳು

ಶಿಲ್ಪಗಳು ಎಂಬುದು ಒಂದು ವಸ್ತುವಿನ ಎಲ್ಲಾ ದಿಕ್ಕುಗಳಿಂದ ದೃಶ್ಯಗಳ ಒಂದುಗೂಡುವಿಕೆ ಯಾಗಿದೆ. ಒಂದು ವಸ್ತುವನ್ನು ನಿರ್ಮಿಸಲು ಆರಂಭಿಸುವಾಗ ನಿರ್ಮಿಸಲು ಉದ್ದೇಶಿಸುವ ವಸ್ತುವಿನ ಎಲ್ಲಾ ದಿಕ್ಕುಗಳಿಂದಲಿರುವ ವೀಕ್ಷಣೆ ಅತ್ಯಗತ್ಯವಾಗಿರುತ್ತದೆ. ಆದ್ದರಿಂದಲೇ ಒಂದು ತ್ರಿಮಾನ ವಸ್ತುವನ್ನು ನಿರ್ಮಿಸಲು ಅಗತ್ಯವಾದ ಕಲಿಕೆ ಎಂದರೆ ಅದನ್ನು ಸೂಕ್ಷ್ಮವಾಗಿ ಮೌಲ್ಯಮಾಪನ ಮಾಡುವುದು ಎಂಬುದಾಗಿದೆ ಇದರ ಅರ್ಥ. ಆದ್ದರಿಂದಲೇ ಶಿಲ್ಪ ನಿರ್ಮಾಣವೆಂಬುದು ವಸ್ತುವಿನ ಸೂಕ್ಷ್ಮಾಂಶಗಳಿಗೆ ಸಂಗ್ರಹಿಸಬಹುದಾದ ಮಗುವಿನ ಆಸಕ್ತಿಯನ್ನೂ ಸಾಮರ್ಥ್ಯವನ್ನೂ ಕಂಡುಹಿಡಿದು ವಿಕಸನಗೊಳಿಸುವುದಾಗಿದೆ.

## ಕಲಿಕಾ ಸಾಧನೆ

ತ್ರಿಮಾನತೆಗಳಿರುವ ಶಿಲ್ಪಗಳನ್ನು ವಿವಿಧ ಮಾಧ್ಯಮಗಳಿಂದ ನಿರ್ಮಿಸುವುದು.

## ಆಶಯ, ತಿಳುವಳಿಕೆ

- ಶಿಲ್ಪವು ತ್ರಿಮಾನ ಸ್ವಭಾವವುಳ್ಳದ್ದಾಗಿದೆ.
- ಶಿಲ್ಪವನ್ನು ನಿರ್ಮಿಸುವಾಗ ವಸ್ತುವಿನ ನಾಲ್ಕು ಭಾಗದಿಂದಲೂ ಇರುವ ದೃಶ್ಯಗಳ ಅಧ್ಯಯನವನ್ನು ನಡೆಸಬೇಕಾಗಿದೆ.
- ಶಿಲ್ಪ ನಿರ್ಮಾಣಕ್ಕಾಗಿ ಜೇಡಿಮಣ್ಣು, ಮರದ ತುಂಡು, ಲೋಹ ಎಂಬೀ ಪರಂಪರಾಗತವಾದ ಮಾಧ್ಯಮಗಳೂ ಪೋಪ್, ಪೇಪರ್ ಪಲ್ಪ್, ಪ್ಲಾಸ್ಟಿಕ್ ವ್ಯಾಕ್ಸ್ ಎಂಬೀ ಆಧುನಿಕ ವಸ್ತುಗಳ ಜೊತೆ ಪ್ರಕೃತಿಯಿಂದ ನಮಗೆ ದೊರೆಯುವ ಮಸಿ, ಚೇರಿ, ಚೇಪೆಕಡ್ಡಿ ಎಂಬೀ ವಸ್ತುಗಳನ್ನು ಉಪಯೋಗಿಸಬಹುದಾಗಿದೆ.
- ನಾವು ನಿರ್ಮಿಸಲು ಉದ್ದೇಶಿಸುವ ವಸ್ತುವಿನ ಸ್ವಭಾವದೊಂದಿಗೆ ಹೋಲಿಕೆಯಾಗುವ ಮಾಧ್ಯಮವಾಗಿರಬೇಕು ಶಿಲ್ಪ ನಿರ್ಮಾಣಕ್ಕೆ ಉಪಯೋಗಿಸಬೇಕಾದುದು.

## ಕಲಿಕಾ ಚಟುವಟಿಕೆಗಳು

- ವಿವಿಧ ಮಾಧ್ಯಮಗಳಲ್ಲಿ ಮಾಡಿದ ಶಿಲ್ಪಗಳ ಪ್ರದರ್ಶನ. (ಐ.ಟಿ. ಸಾಧ್ಯತೆಗಳನ್ನು ಉಪಯೋಗಿಸಬಹುದು)
- ಯಾವುದನ್ನು ನಿರ್ಮಿಸುವುದು ಎಂದು ಕಂಡುಹಿಡಿಯಲಿರುವ ಚರ್ಚೆ. ಪಟ್ಟಿ ತಯಾರಿಸುವುದು.
- ಕಂಡುಹಿಡಿದ ವಸ್ತುವನ್ನು ನಿರ್ಮಿಸಲು ಯಾವುದೆಲ್ಲಾ ಮಾಧ್ಯಮ ಉಪಯೋಗಿಸಬಹುದು ಎಂಬ ಚರ್ಚೆ. ಲಿಸ್ಟ್ ತಯಾರಿಸುವುದು.

  ***ಉದಾ : ಒಂದು ಗೂಡಿನಲ್ಲಿ ಗಿಳಿ ಇರುವ ಶಿಲ್ಪವನ್ನು ನಿರ್ಮಿಸುವಾಗ ಗಿಳಿಯನ್ನು ಜೇಡಿಮಣ್ಣಿನಿಂದಲೋ ವ್ಯಾಕ್ಸಿನಿಂದಲೋ ನಿರ್ಮಿಸಬಹುದು. ಗಿಳಿಯ ಗೂಡನ್ನು ಚೇರಿಯಿಂದ ನಿರ್ಮಿಸಿದರೆ ಹೆಚ್ಚು ನೈಜತೆಯನ್ನು ನಿಜವಾದ ಬೋಧವನ್ನು ಉಂಟು ಮಾಡುತ್ತದೆ.***


- ಮಾಡಲು ಉದ್ದೇಶಿಸುವ ವಸ್ತುವಿನ ರೂಪರೇಖೆಯನ್ನು ಬಿಡಿಸಿ ಮಾಡುವುದು. ಮೇಲಿನಿಂದ ಕೆಳಗೆಯೂ ಎಲ್ಲಾ ಭಾಗಗಳಿಂದಲಿರುವ ದೃಷ್ಟಿಕೋನ.
- ಮಾಧ್ಯಮವನ್ನು ದೃಢಪಡಿಸುವುದು, ಸ್ಕೆಲ್ಟನ್ ನಿರ್ಮಿಸುವುದು.
- ಶಿಲ್ಪವನ್ನು ನಿರ್ಮಿಸುವುದು.

- ಅಗತ್ಯವಾದ ಬಣ್ಣವನ್ನು ನೀಡಿ ಸುಂದರಗೊಳಿಸುವುದು. ಬಣ್ಣವನ್ನು ನೀಡಲು ಸ್ಕೆಚ್‌ಪೆನ್, ವ್ಯಾಕ್ಸ್ ಕ್ರೆಯೋನ್ಸ್, ಕಲರ್ ಚೋಕ್ ಎಂಬಿವುಗಳನ್ನು ಉಪಯೋಗಿಸಬಹುದು.
- ಪ್ರದರ್ಶನ, ಸ್ವಯಂ – ಪರಸ್ಪರ ಮೌಲ್ಯಮಾಪನ
- ಮೌಲ್ಯಮಾಪನದ ನಂತರ ಶಿಲ್ಪದ ನ್ಯೂನತೆಗಳನ್ನು ಪರಿಹರಿಸಿ ರಿಪೇರಿ ಕೆಲಸಗಳನ್ನು ಮಾಡಲು ಅವಕಾಶವನ್ನು ನೀಡುವುದು. ಅಲ್ಲದಿದ್ದರೆ ಹೊಸ ಶಿಲ್ಪವನ್ನು ನಿರ್ಮಿಸಲು ಸಾಧ್ಯವಾಗಬೇಕು.

## ಮೌಲ್ಯಮಾಪನ

- ನಿರ್ಮಾಣಕ್ಕಾಗಿರುವ ವಸ್ತು/ ಆಶಯವನ್ನು ಕಂಡುಹಿಡಿಯುವುದು.
- ವಿವಿಧ ಮಾಧ್ಯಮಗಳನ್ನು ಕಂಡುಹಿಡಿದು ಉಪಯೋಗಿಸುವುದಕ್ಕಿರುವ ಸಾಮರ್ಥ್ಯ
- ಮಾಧ್ಯಮಗಳ ಆಯ್ಕೆ, ನಿರ್ಮಾಣ ಸಾಮರ್ಥ್ಯ.
- ಯಥಾರ್ಥ ವಸ್ತುವಿನೊಂದಿಗೆ ಹೋಲಿಕೆ.
- ಬಣ್ಣಗಳ ಸೌಂದರ್ಯ

# 7.2



# ಸಂಗೀತ



# ಸಂಗೀತ

## ಮುನ್ನುಡಿ

ಎಲ್ಲ ಕಲೆಗಳು ಮನಸ್ಸನ್ನು ಮುದಗೊಳಿಸಲಿಕ್ಕಿರುವವುಗಳಾಗಿವೆ. ಆ ಆನಂದವು ಚರಾಚರಗಳೊಂದಿಗಿನ ಪ್ರೀತಿಯಾಗಿ ಬೆಳೆಯುವುದೇ ಸಂಸ್ಕೃತಿ. ಪ್ರಕೃತಿ ಮತ್ತು ಮನುಷ್ಯನನ್ನು ಪ್ರತ್ಯೇಕಿಸಿ ಕಾಣದೆ ಅನ್ಯೋನ್ಯತೆಯ ಸಮನ್ವಯಭಾವ ನಮಗೆ ಹಾಗೆ ಲಭಿಸುವುದು. ಎಲ್ಲ ಜೀವಜಾಲಗಳಿಗೂ ಒಂದೇ ರೀತಿ ಆಸ್ವಾದಿಸಬಹುದಾದ ಕಾರಣ ಸಂಗೀತವು ಇತರ ಕಲೆಗಳಿಗಿಂತ ಭಿನ್ನವಾಗಿದೆ. ಮನುಷ್ಯನ ಮನಸ್ಸನ್ನು ನಿರ್ಮಲಗೊಳಿಸಿ ಅಮೂರ್ತವಾದ ಧನ್ಯತೆಯೆಡೆಗೆ ಕೊಂಡೊಯ್ದು ಶಾಂತಗೊಳಿಸಲು ಸಾಮರ್ಥ್ಯವಿರುವ ಕಲೆಯೆ ಸಂಗೀತ. ಸಾರ್ವತ್ರಿಕವಾಗಿ ಮನುಷ್ಯನನ್ನು ಒಂದಾಗಿ ಕಾಣುವ ವಿಶಾಲವಾದ ದೃಷ್ಟಿಕೋನ ಸಂಗೀತ ಸಂಸ್ಕೃತಿಯಿಂದ ಕೈಗೂಡುವುದು. ಆದ್ದರಿಂದಲೇ ಸಂಗೀತ ಕಲಿಕೆಯು ವ್ಯಕ್ತಿತ್ವದ ವಿಕಾಸ ಹಾಗೂ ಸಾಮಾಜಿಕ ಹೊಂದಾಣಿಕೆಗೆ ಅನಿವಾರ್ಯವಾಗಿದೆ.

ಸುತ್ತುಮುತ್ತಲಿನ ಕುರಿತು ತಿಳುವಳಿಕೆ ಉಂಟಾಗುವ ಕಾಲಕ್ಕಿಂತ ಮೊದಲೇ ನಿಸರ್ಗದ ಸಂಗೀತವು ಮಗುವಿನ ಶಾರೀರಿಕ ಹಾಗೂ ಮಾನಸಿಕ ಬೆಳವಣಿಗೆಗೆ ಕಾರಣವಾಗುತ್ತದೆ ಎಂದು ವೈಜ್ಞಾನಿಕವಾದ ಅಧ್ಯಯನದಿಂದ ಸಾಬೀತಾಗಿದೆ. ಶಾಲಾಶಿಕ್ಷಣದ ಕಾಲಘಟ್ಟದಲ್ಲಿ ಮಕ್ಕಳಲ್ಲಿ ಉಂಟಾಗಬಹುದಾದ ಮಾನಸಿಕ ಸಂಘರ್ಷವನ್ನು ಹೋಗಲಾಡಿಸಿ ಮನಸ್ಸನ್ನು ಪ್ರಸನ್ನಗೊಳಿಸಿ ಜ್ಞಾನಾರ್ಜನೆಗೆ ಪ್ರೇರೇಪಿಸಲು ಸಂಗೀತ ಕಲಿಕೆಯಿಂದ ಸಾಧ್ಯವಿದೆಯೆಂದು ಸಂಶೋಧನೆಗಳಿಂದ ಸಾಬೀತಾಗಿದೆ. ಸಂಗೀತವನ್ನು ಆಸ್ವಾದಿಸುವ ಮಗುವಿಗೆ ತಾನು ಮಾಡುವ ಯಾವುದೇ ಕಾರ್ಯದಲ್ಲಿ ನಿಗೂಢವಾಗಿ ಸ್ಥಿತವಾಗಿರುವ ತಾಳವನ್ನು ಕಂಡುಹಿಡಿಯಲು ಸಾಧ್ಯವಾಗುವುದರ ಮೂಲಕ ಜೀವನದ ಪರಮ ಸತ್ಯವನ್ನು ಸುಲಭವಾಗಿ ತಿಳಿದುಕೊಳ್ಳಲು ಸಾಧ್ಯವಾಗುವುದು. ಈ ಆಸ್ವಾದನಾ ಸಾಮರ್ಥ್ಯವನ್ನು ಹೆಚ್ಚಿಸಲು ನಿಖರವಾದ ಅಧ್ಯಯನದ ಅಗತ್ಯವಿದೆ. ಇದರಿಂದ ಪ್ರತಿಯೊಬ್ಬನಲ್ಲಿ ಸುಪ್ತವಾಗಿರುವ ಪ್ರತಿಭೆಯನ್ನು ಸ್ವತಃ ತಿಳಿದುಕೊಳ್ಳಲು ಅದನ್ನು ವಿಕಾಸಗೊಳಿಸಲು ಸಾಧ್ಯವಾಗುವುದು. ಇದು ಮಕ್ಕಳಲ್ಲಿ ಅತಿಯಾದ ಆತ್ಮವಿಶ್ವಾಸವನ್ನು ಉಂಟುಮಾಡುವುದಲ್ಲದೆ ಎಲ್ಲ ವಿಷಯಗಳ ಕಲಿಕೆಯಲ್ಲಿ ಅತ್ಯಾಸಕ್ತಿಯಿಂದ ವ್ಯವಹರಿಸಲು ಸಾಧ್ಯವಾಗುವ ರೀತಿಯಲ್ಲಿ ಉತ್ಸಾಹಭರಿತರನ್ನಾಗಿಸುತ್ತದೆ.

ಅತಿ ಮಹತ್ತರವಾದ ಸಂಗೀತ ಪರಂಪರೆ ನಮಗಿತ್ತು. ಸಂಗೀತವನ್ನು ಅದರ ಔನತ್ಯಕ್ಕೆ ತಲುಪಿಸಿದ ಅನೇಕವಾಹಿನಿಗಳು ಆ ಪ್ರದೇಶದಲ್ಲಿದೆ. ಜನಸಾಮನ್ಯರ ಮನಸ್ಸಿನಲ್ಲಿಯೂ ಜೀವನಾಡಿಯಾಗಿ ಸಂಗೀತವು ಹಾಸುಹೊಕ್ಕಾದ ಪರಂಪರೆ ನಮ್ಮದು. ಇಲ್ಲಿ ಅವಿಶ್ರಾಂತವಾಗಿ ನೆಲೆಗೊಂಡ ಆ ಸಂಗೀತ ಸಂಸ್ಕೃತಿಯು ನಮ್ಮನ್ನು ಯಾವಾಗಲೂ ಪ್ರಚೋದಿಸುತ್ತಿತ್ತು. ಲೋಕ ಸಂಗೀತದ ಎಲ್ಲ ಗುಣಾತ್ಮಕ ಅಂಶಗಳನ್ನು ಸ್ವೀಕರಿಸಿ ಭಾರತದ ಸಂಗೀತ ವಿಕಾಸಗೊಂಡ ಕಾರಣ ಅದಕ್ಕೆ ಸಾರ್ವತ್ರಿಕ ಮನ್ನಣೆ ದೊರೆತಿದೆ.

# ಕಲಿಕಾ ಸಾಧನೆಗಳು

**ಐದನೇ ತರಗತಿ**

- ಪ್ರಕೃತಿಯ ಸೂಕ್ಷ್ಮ ಶಬ್ಧಗಳನ್ನು ಗುರುತಿಸಿ ನಿಖರವಾಗಿ ಅನುಕರಿಸುವುದು
- ಪರಿಚಿತವಾದ ಶಬ್ಧಗಳನ್ನು ವಿವಿಧ ಮಾನದಂಡಗಳನ್ನು ಉಪಯೋಗಿಸಿ ವರ್ಗೀಕರಿಸುವುದು
- ಸಂಭಾಷಣಾ ಹಾಡುಗಳನ್ನು ಸಂದರ್ಭೋಚಿತವಾಗಿ ಏರು ಸ್ವರದಲ್ಲಿಯೂ ಇಳಿಸ್ವರದಲ್ಲಿಯೂ ಸಾಮಾನ್ಯ ವೇಗದಲ್ಲಿಯೂ ಕಥಾಪಾತ್ರಗಳಿಗನುಸಾರವಾಗಿ ಶಬ್ಧ ನಿಯಂತ್ರಣದೊಂದಿಗೆ ಹಾಡುವುದು.
- ಒಗಟುಗಳು, ಗಾದೆಗಳು ಎಂಬಿವುಗಳನ್ನು ತಾಳಾತ್ಮಕವಾಗಿ ಹಾಡುವುದು, ಹೇಳುವುದು.

**ಆರನೇ ತರಗತಿ**

- ಸಂದರ್ಭ ಅಥವಾ ವಿಷಯಕ್ಕೆ ತಕ್ಕಂತೆ ಪ್ರಕೃತಿಯ ಶಬ್ಧಗಳನ್ನು ಆರಿಸಿ ಪ್ರಸ್ತುತಪಡಿಸಲು ಸಾಧ್ಯವಾಗುವುದು.
- ಪರಿಚಿತವಾದ ಹಾಡುಗಳು ಪ್ರಾದೇಶಿಕ ಗೀತೆಗಳು, ಬಾಯಿತಾಳಗಳು, ಶಿಶುಗೀತೆಗಳು ಎಂಬಿವುಗಳನ್ನು ತಾಳಾತ್ಮಕವಾಗಿ ಚಲನೆಯೊಂದಿಗೆ ವೇಗ ಹೆಚ್ಚಿಸಿ ಅಥವಾ ಇಳಿಸಿ ಹಾಡುವುದು.
- ಒಂದೇ ರೀತಿಯ ಹಾಡುಗಳು ಕವಿತೆಗಳು ಎಂಬಿವುಗಳನ್ನು ಕೇಳಿ ಜೊತೆಯಲ್ಲಿ ಹಾಡುತ್ತಾ ತಾಳಹಾಕುವುದು.
- ಹಾಡುಗಳನ್ನು ಶಬ್ಧ ನಿಯಂತ್ರಣದೊಂದಿಗೆ ಹಾಡುವಾಗ ಉಂಟಾಗುವ ಆಸ್ವಾದನೆಯನ್ನು ತಿಳಿದುಕೊಳ್ಳುವುದು.

**ಏಳನೇ ತರಗತಿ**

- ವಾದ್ಯೋಪಕರಣ ಸಂಗೀತದಿಂದೊಡಗೂಡಿದ ಹಾಡನ್ನು ಕೇಳಿ ಅದರ ಹಿನ್ನಲೆಯನ್ನು ತಿಳಿದುಕೊಳ್ಳುವುದು.
- ಪ್ರಕೃತಿಯ ಶಬ್ಧಗಳೊಂದಿಗೆ ಹೊಂದುವ ವಾದ್ಯೋಪಕರಣಗಳ ನಾದಗಳನ್ನು ಕಂಡುಹಿಡಿದು ಮೌಖಿಕವಾಗಿ ವಿವರಿಸುವುದು ಮತ್ತು ಅನುಕರಿಸುವುದು.
- ಚಲನೆಯ ವೇಗಕ್ಕನುಸಾರವಾಗಿ ಸರಳವಾದ ತಾಳವಾದ್ಯಗಳಲ್ಲಿ ತಾಳಹಿಡಿಯುವಾಗ ಚಲನೆ ಮತ್ತು ತಾಳ ಎಷ್ಟರ ಮಟ್ಟಿಗೆ ಹೊಂದಿಕೆಯಾಗುತ್ತದೆ ಎಂದು ತಿಳಿಯುವುದು.
- ಏಕಕಾಲದಲ್ಲಿ ಕೇಳಿಬರುತ್ತಿರುವ ವಿವಿಧ ಸ್ವರ ಮತ್ತು ತಾಳಗಳಲ್ಲಿರುವ ಸಂಗಿತದ ತುಣುಕುಗಳನ್ನು ಆಲಿಸಿ ಸ್ವರ ತಾಳ ಎಂಬಿವುಗಳ ನಡುವಿನ ವ್ಯತ್ಯಾಸವನ್ನು ಗುರುತಿಸುವುದು.
- ಕೇರಳೀಯ ಕಲಾರೂಪಗಳಿಗೆ ಹಿನ್ನಲೆಯಾಗಿ ಉಪಯೋಗಿಸುವ ಸಂಗೀತೋಪಕರಣಗಳನ್ನು ವರ್ಗೀಕರಿಸಲು ಸಾಧ್ಯವಾಗುವುದು.
- ದೈರ್ಘ್ಯವ್ಯತ್ಯಾಸ ಇರುವವುಗಳನ್ನು ಗುರುತಿಸಿ ಹಾಡುವುದು.
- ವೇಗವನ್ನು ಹೆಚ್ಚಿಸಿ ಅಥವಾ ಕಡಿಮೆ ಮಾಡಿ ಸರಳವಾಕ್ಯಗಳಲ್ಲಿ ತಾಳಹಿಡಿದು ಪರಿಚಿತವಾದ ಹಾಡುಗಳ ಆಲಾಪನೆ ಮಾಡಲು ಸಾಧ್ಯವಾಗುವುದು.

# ಐದನೇ ತರಗತಿ

## ಯೂನಿಟ್ – 1

### ಮುನ್ನುಡಿ

ಪ್ರತಿಯೊಂದು ಶಬ್ದವೂ ಅವುಗಳ ತಾಳಗಳೆಲ್ಲವೂ ಆಸ್ವಾದಕರಿಗೆ ಬಂದು ಸೇರುವುದು ಹಲವು ಬಾರಿ ಸುಲಭವೂ ಮನೋಹರವಾಗಿಯೂ ಕೆಲವು ಬಾಯಿತಾಳಗಳಿಂದೊಡಗೂಡಿದೆ. ನಿತ್ಯ ಜೀವನದಲ್ಲಿ ನಮ್ಮ ಪ್ರತಿಯೊಂದು ಕಾರ್ಯಗಳಲ್ಲೂ ಅವುಗಳ ವಿರಾಮಗಳಲ್ಲೆಲ್ಲಾ ತಿಳಿದೋ ತಿಳಿಯದೆಯೋ ಶಬ್ದಗಳು ಹಾಡಿಯೋ ಅನುಕರಿಸಿಯೋ ಸಂಗೀತವನ್ನು ನಮ್ಮೊಳಗೆ ಸೇರಿಸಿರುವುದು. ಸಾಹಿತ್ಯವು ಹಲವು ಬಾರಿ ಅವ್ಯಕ್ತವಾದರೂ ಶಬ್ದಗಳು ಸುಪರಿಚಿತವಾಗಿವೆ. ಈ ರೀತಿಯಲ್ಲಿರುವ ಶಬ್ದಗಳು ಕೆಲವು ಅಕ್ಷರಗಳ ಗುಂಪಿನಿಂದಲೋ ಹಲವು ಬಾರಿ ಒಂದು ಅಕ್ಷರ ಮಾತ್ರವಾಗಿಯೋ ಪ್ರಕಟಿಸುವುದು. ಶಬ್ದಗಳು ಮತ್ತು ತಾಳ ವೈವಿಧ್ಯಗಳೆಲ್ಲಾ ನಕಲು ಮಾಡಲು ನಾವು ಯಾವಾಗಲೂ ಆಶ್ರಯಿಸುವ ಮೊದಲ ಮಾಧ್ಯಮವು ಬಾಯಿತಾಳವಾಗಿದೆ. ನಮ್ಮ ಸಂಗೀತದಲ್ಲಿ ಯಾವ ವಿಧದ ಗಾನರೂಪಗಳಲ್ಲಿಯೂ ಬಾಯಿತಾಳ ಪ್ರಯೋಗವನ್ನು ಕಾಣಲು ಸಾಧ್ಯವಾಗಬಹುದು. ಪ್ರತ್ಯೇಕವಾಗಿ ಅರ್ಥವೊಂದೂ ಇದಕ್ಕಿಲ್ಲದಿದ್ದರೂ ಶಬ್ದದ ವಿಶೇಷತೆಯಿಂದ ಕೆಲವು ಭಾವನೆಗಳು, ಸಂದರ್ಭಗಳು ಮೊದಲಾದವುಗಳು ಪ್ರತಿಬಿಂಬಿಸುವುದು. ಬಾಯಿತಾಳಗಳೊಂದಿಗೆ ಸಂಗೀತದ ಪ್ರಧಾನ ಆಶಯಗಳು ನಕಲು ಮಾಡುವುದೂ, ಅದನ್ನು ಉತ್ತಮಗೊಳಿಸಲು ಬೇಕಾಗಿರುವ ಕಾರ್ಯಗಳು ಹೆಚ್ಚು ಸೇರಿಸಿಕೊಂಡು ಸಂಗೀತ ವಿಭಾಗಗಳು ಹೆಚ್ಚು ಉತ್ಸಾಹದೊಂದಿಗೆ ಮಕ್ಕಳಿಗೆ ತಲುಪಿಸುವುದಾಗಿದೆ ಈ ಪಾಠಭಾಗದ ಉದ್ದೇಶವಾಗಿದೆ.

### ಒಳಪುಟಗಳಲ್ಲಿ

ವಿವಿಧ ರೀತಿಯಲ್ಲಿರುವ ಬಾಯಿತಾಳಗಳು ಅವುಗಳ ಪ್ರತ್ಯೇಕತೆಗಳನ್ನು ಪ್ರತಿಪಾದಿಸುತ್ತವೆ. ಹೆಚ್ಚಿನ ಸ್ಪಷ್ಟತೆಯಿಂದ ಹಾಡಿ ಖಾತರಿಪಡಿಸಲು ಸಮಾನ ಸ್ವಭಾವವಿರುವವುಗಳನ್ನು ಆರಿಸಿ ಆವರ್ತನಾ ಆಲಾಪಕ್ಕೆ ದಾರಿಮಾಡಿಕೊಟ್ಟಿದೆ. ಬಾಯಿತಾಳಗಳಲ್ಲಿ ವಿಜಾತಿಯಗಳನ್ನು ಅರ್ಥಮಾಡಿಕೊಳ್ಳಲು ವಿಭಿನ್ನ ತಾಳ ಪ್ರಯೋಗಗಳೊಂದಿಗೆ ಹಾಡುವವುಗಳನ್ನು ಸೇರಿಸಿಕೊಳ್ಳಲಾಗಿದೆ. ಹೊಸತನ್ನು ಸೃಷ್ಟಿಸಲು ತರಬೇತಿ ನೀಡಲಾಗುತ್ತದೆ. ಮಕ್ಕಳ ಸೃಜನಾತ್ಮಕ ಜ್ಞಾನವನ್ನು ಉಪಯೋಗಿಸಿ ನಿರ್ಮಿಸುವ ಬಾಯಿತಾಳಗಳು ಸಂದರ್ಭೋಚಿತವಾಗಿ ಪ್ರಯೋಗಿಸಲು ಈ ಯೂನಿಟಿನಲ್ಲಿ ಅವಕಾಶ ಕಲ್ಪಿಸಲಾಗಿದೆ.

### ಕಲಿಕಾ ಸಾಧನೆಗಳು

ವೈವಿಧ್ಯಪೂರ್ಣ ಬಾಯಿತಾಳಗಳನ್ನು ಕೇಳಿ ಆಲಾಪಿಸುವುದು. ತಾಳವನ್ನು ಹಿಡಿಯುವುದು.

## ಆಶಯ, ತಿಳುವಳಿಕೆ

- ಭಾರತೀಯ ಸಂಗೀತಕ್ಕೆ ಹಲವು ಗಾನಶಾಖೆಗಳಿವೆ.
- ವೈವಿಧ್ಯಮಯವಾದ ಗಾನರೂಪಗಳು.
- ಗಾನಶಾಖೆಗಳಲ್ಲಿ ಪ್ರತಿಯೊಂದಕ್ಕೂ ಅದರದ್ದೇ ಆದ ಶೈಲಿಗಳಿವೆ.

## ಪ್ರಕ್ರಿಯೆ

- ಸುತ್ತಮುತ್ತಲೂ ಇರುವ ಶಬ್ದಗಳನ್ನು ಕೇಳಲು ಮತ್ತು ಗುರುತಿಸಲಿರುವ ವೈವಿಧ್ಯಮಯವಾದ ಚಟುವಟಿಕೆಯಲ್ಲಿ ತೊಡಗುವುದು.
- ರೆಕಾರ್ಡ್ ಮಾಡಿದ ಶಬ್ಧಗಳನ್ನು ಕೇಳಿ ಶಬ್ದ ಸಂದರ್ಭ ಎಂಬಿವುಗಳನ್ನು ತಿಳಿದುಕೊಳ್ಳುವುದು.

## ಮೌಲ್ಯನಿರ್ಣಯ

- ಆಲಾಪನೆಯನ್ನು ಮೌಲ್ಯನಿರ್ಣಯ ಮಾಡುವುದು.
- ಗಾನರೂಪ ವೈವಿಧ್ಯವನ್ನು ಗುರುತಿಸುವುದನ್ನು ಮೌಲ್ಯನಿರ್ಣಯ ಮಾಡುವುದು.

## ಮೌಲ್ಯನಿರ್ಣಯ

***ಚಟುವಟಿಕೆ – 1***

- ದೋಣಿ ಹಾಡಿನ ರಾಗದಲ್ಲಿ ಬಾಯಿತಾಳಗಳನ್ನು ಹಾಡುವುದು. ಮಕ್ಕಳಿಗೆ ಬಾಯಿತಾಳಗಳನ್ನು ಹಾಡುವುದರೊಂದಿಗೆ ಅದಕ್ಕೆ ಅನುಗುಣವಾದ ವಡಕ್ಕನ್ ಹಾಡಿನ್ನು/ ದೋಣಿಹಾಡಿನ ಸಾಲುಗಳನ್ನು ಅಧ್ಯಾಪಕರು ಸೇರಿ ಹಾಡುವುದು. ಇದೇ ಚಟುವಟಿಕೆಯನ್ನು ಪುನರಾವರ್ತಿಸುವುದು.
- ಮಕ್ಕಳು ಬಾಯಿತಾಳಗಳನ್ನು ಹಾಡುವಾಗ ಅಧ್ಯಾಪಕರು ಸಾಲುಗಳನ್ನು ಹಾಡುವುದು. ಅಧ್ಯಾಪಕರು ಬಾಯಿತಾಳಗಳನ್ನು ಹಾಡುವಾಗ ಮಕ್ಕಳು ಸಾಲುಗಳನ್ನು ಹಾಡುವುದು.

1. ತತ್ತತ/ ತಾನ್ನಾರೋ/ ತಂದಿನ್ನಾ/ ರೋ..../
ತಿತ್ತತ್ತಾರೋ/ತಂದಿನ್ನ/ ತನ್ನಾರೋ/ ತಕತ್ತೈ/ ರೋ.../
ತತ್ತತ/ ತಾನ್ನಾರೋ/ ತಂದಿನ್ನಾ/ ರೋ..../
ಪೂವಾಲೋಳುಕುನ್ನರಾಯಿರುನ್ನು.

2. ತಿತ್ತಿತ್ತಾರೋ/ ತಿತ್ತಿತ್ತಾರೋ /ಧಿತ್ತೈ ತಕ/ತಿತ್ತಿತ್ತೋರೋ
ತಿತ್ತಿತ್ತಾರೋ/ ತಿತ್ತಿತ್ತಾರೋ/ ತಿತ್ತಿತ್ತಾರೋ/ ತೈ......
ಕುಟ್ಟನಾಡನ್ ವುಂಜೆಯಿಲೇ ಕೋಚ್ಚುಪೆಣ್ಣೆ ಕುಯಿಲಾಳೆ
ಕೊಟ್ಟುಪೆಣ್ಣೆ ಕುಳಲ್ ವೇಣಂ ಕುರವ್ ವೇಣಂ

3. ತತ್ತತ/ ತಾನ್ನಾರೋ/ ತಂದಿನ್ನಾ/ ರೋ..../
ತಿತ್ತತ್ತಾರೋ/ತಂದಿನ್ನ/ ತನ್ನಾರೋ/ ತಕತ್ತೈ/ ರೋ.../
ತತ್ತತ/ ತಾನ್ನಾರೋ/ ತಂದಿನ್ನಾ/ ರೋ..../
ಪೂವಾಲೋಳುಕುನ್ನರಾಯಿರುನ್ನು..

4. ತಿತ್ತಿತ್ತಾರೋ/ ತಿತ್ತಿತ್ತಾರೋ /ಧಿತ್ತೈ ತಕ/ತಿತ್ತಿತ್ತೋರೋ
ತಿತ್ತಿತ್ತಾರೋ/ ತಿತ್ತಿತ್ತಾರೋ/ ತಿತ್ತಿತ್ತಾರೋ/ ತೈ......
ಕುಟ್ಟನಾಡನ್ ವುಂಜೆಯಿಲೇ ಕೋಚ್ಚುಪೆಣ್ಣೆ ಕುಯಿಲಾಳೆ
ಕೊಟ್ಟುಪೆಣ್ಣೆ ಕುಳಲ್ ವೇಣಂ ಕುರವ್ ವೇಣಂ

5. ತಿತ್ತಿತ್ತಾರೋ/ ತಿತ್ತಿತ್ತಾರೋ /ಧಿತ್ತೈ ತಕ/ತಿತ್ತಿತ್ತೋರೋ
ತಿತ್ತಿತ್ತಾರೋ/ ತಿತ್ತಿತ್ತಾರೋ/ ತಿತ್ತಿತ್ತಾರೋ/ ತೈ......
ಕುಟ್ಟನಾಡನ್ ವುಂಜೆಯಿಲೇ ಕೋಚ್ಚುಪೆಣ್ಣೆ ಕುಯಿಲಾಳೆ
ಕೊಟ್ಟುಪೆಣ್ಣೆ ಕುಳಲ್ ವೇಣಂ ಕುರವ್ ವೇಣಂ

- ಕರ್ನಾಟಕ ಸಂಗೀತ ಕಛೇರಿಯ ವಿಸಿಡಿ ತರಗತಿಯಲ್ಲಿ ಪ್ರದರ್ಶಿಸುವುದು. ಸಂಗೀತ ಕಛೇರಿಯಲ್ಲಿ ಹಾಡುಗಾರನೊಂದಿಗೆ ನುಡಿಸುವ ಉಪಕರಣಗಳ ಕುರಿತು ಅನ್ವೇಷಿಸುವುದು.

**ಸೂಚಕಗಳು**

  - ದೃಶ್ಯದಲ್ಲಿ ಎಷ್ಟು ಸಂಗೀತೋಪಕರಣಗಳನ್ನು ಕಾಣಲು ಸಾಧ್ಯವಿದೆ?
  - ಅವುಗಳ ಯಾವುದೆಂದು ಹೇಳಲು ಸಾಧ್ಯವಿದೆ?
  - ಉಪಕರಣಗಳನ್ನು ನುಡಿಸುವವರು ಹಾಡುಗಾರನ ಯಾವ ಯಾವ ಬದಿಗಳಲ್ಲಾಗಿ ಕುಳಿತಿದ್ದಾರೆ?
- ಸೂಚಕಗಳ ಆಧಾರದಲ್ಲಿ ಟಿಪ್ಪಣಿಯನ್ನು ತಯಾರಿಸಲು ಹೇಳುವುದು.
- ವೈಯಕ್ತಿಕವಾಗಿ ಮಂಡಿಸಲಿರುವ ಅವಕಾಶ ನೀಡುವುದು.
  - ದೃಶ್ಯದಲ್ಲಿ, ಮೃದಂಗ, ವಯಲಿನ್, ಘಟಂ, ಮೌತ್ ಓರ್ಗನ್, ಗಂಜಿರ ಎಂಬ ಉಪಕರಣಗಳು.
  - ತಂಬೂರಿ, ಮೃದಂಗ ಎಂಬೀ ಉಪಕರಣಗಳು ಹಾಡುಗಾರನ ಎರಡು ಬದಿಗಳಲ್ಲಾಗಿಯೂ ಉಳಿದವುಗಳು ಹಿಂಬದಿಯಲ್ಲಿ ಕುಳಿತುಕೊಳ್ಳುತ್ತಾರೆ.
  - ವಯಲಿನ್, ಮೃದಂಗ ಎಂಬೀ ಉಪಕರಣಗಳು ಹಾಡುಗಾರನ ಎರಡು ಬದಿಗಳಲ್ಲಾಗಿಯೂ, ಉಳಿದವುಗಳು ಹಿಂಬದಿಯಲ್ಲಿ ಕುಳಿತುಕೊಳ್ಳುತ್ತಾರೆ.

***ಚಟುವಟಿಕೆ – 2***

- ಇದೇ ಶಬ್ದಗಳಿಗೋ ಅಲ್ಲದಿದ್ದರೆ ಹೊಸದಾಗಿ ಕಂಡುಹಿಡಿದ ಯೋಗ್ಯವಾದ ತಾಳಾತ್ಮಕವಾದ ಶರೀರ ಚಲನೆ ನಷ್ಟವಾಗುವುದು.
- ದೋಣಿಹಾಡಿನ ರಾಗಗಳಲ್ಲಿ ಆಲಾಪಿಸಿ ಬಾಯಿತಾಳಗಳನ್ನು ಮಕ್ಕಳೂ ಅಧ್ಯಾಪಕರೂ ಸೇರಿಸಿ ಹಾಡುವುದು.
- ಹಾಡಿಗೆ ಯೋಗ್ಯವಾದ ರೀತಿಯಲ್ಲಿ ಮಕ್ಕಳಲ್ಲಿ ಚಿಟಿಕೆ ಹೊಡೆಯಲು ಹೇಳುವುದು.
- ಹೊಸ ಬಾಯಿತಾಳಗಳಿಗೆ ಇದೇ ಚಟುವಟಿಕೆಯನ್ನು ಆವರ್ತಿಸುವುದು.
- ಆವರ್ತಿಸಲ್ಪಡುವಾಗ ಚಿಟಿಕೆ ಹೊಡೆಯುವುದು ಕೈಯ ಚಲನೆಗೂ ಶರೀರ ಚಲನೆಗೂ ಮಾರ್ಪಡುತ್ತವೆ.
- ಬಾಯಿತಾಳಗಳಿಗೆ ವೈವಿಧ್ಯತೆಗಳಿಗನುಸರಿಸಿ ಚಲನೆಗಳೂ ವ್ಯತ್ಯಸ್ತವಾಗಿದೆ.

***ಚಟುವಟಿಕೆ – 3***

- ಹಾಡಿದುದು ಹಾಗೂ ಕಂಡುಹಿಡಿದವುಗಳಿಗಿರುವ ಸಮಾನತೆಗಳನ್ನು, ವೈವಿಧ್ಯತೆಗಳನ್ನು ಬೇರ್ಪಡಿಸುವುದು ಅಗತ್ಯವಾಗಿದೆ.

  ***ಸೂಚಕಗಳು***

- ❖ ರಾಗಗಳಲ್ಲಿರುವ ಸಮಾನತೆ/ವೈವಿಧ್ಯತೆ
- ❖ ತಾಳಗಳಲ್ಲಿರುವ ಸಮಾನತೆ/ವೈವಿಧ್ಯತೆ

***ಚಟುವಟಿಕೆ – 4***

- ಲಭ್ಯವಾದ ಕೆಲವು ವಸ್ತುಗಳನ್ನು ಪ್ರತಿಯೊಂದು ಗುಂಪಿಗೂ ನೀಡುವುದು.
  ***1. ಗೆರಟೆ, 2. ಕಲ್ಲಿನ ತುಂಡುಗಳು, 3. ಮರದ ತುಂಡುಗಳು, 4. ಹಂಚಿನ ತುಂಡುಗಳು, 5. ಬಿದಿರಿನ ತುಂಡುಗಳು, 6. ಪ್ರಾದೇಶಿಕವಾಗಿ ಮಕ್ಕಳು ನಿರ್ಮಿಸಿ ಉಪಯೋಗಿಸಬಹುದು.***
- ಮೊದಲು ಬೇರ್ಪಡಿಸಿ ಪ್ರತಿಯೊಂದು ಗುಂಪುಗಳಿಗೂ ನಿರ್ದೇಶವನ್ನು ನೀಡುವುದು.
- ಹಾಡಿ ಅಭ್ಯಾಸ ಮಾಡುವುದು ಬಾಯಿತಾಳಗಳೊಂದಿಗೆ/ ಕಂಡುಹಿಡಿದ ಬಾಯಿತಾಳ ಗಳೊಂದಿಗೆ ದೊರೆತ ವಸ್ತುಗಳ ಲಘು ವಾದ್ಯೋಪಕರಣಗಳನ್ನು ಉಪಯೋಗಿಸಿ ಪ್ರದರ್ಶನ ನೀಡುವುದು. (ಮರದ ತುಂಡು, ಗೆರಟೆ, ಮುಂತಾದವುಗಳು)

***ಮುಂದುವರಿಕೆಯ ಚಟುವಟಿಕೆಗಳು***

- ಪ್ರಾದೇಶಿಕವಾಗಿ ಹಾಡಿದ ಬಾಯಿತಾಳಗಳನ್ನು ದಾಖಲಿಸುವುದು.

**ಮೌಲ್ಯಮಾಪನ**

- ರಾಗವನ್ನು ಕೇಳಲಿರುವ ಸಾಮರ್ಥ್ಯ
- ಗುಂಪಿನಲ್ಲಿ ತಾಳಾತ್ಮಕವಾಗಿ ಹಾಡುವುದಕ್ಕಿರುವ ಸಾಮರ್ಥ್ಯ
- ತಾಳ ಚಲನೆಗಳಲ್ಲಿರುವ ನಿಖರತೆ
- ತಿಳಿಯುವುದು (ಸಮಾನತೆ/ವೈವಿಧ್ಯತೆಗಳು)
- ಮಂಡನೆಯ ಹಿರಿಮೆ
- ವಾದ್ಯೋಪಕರಣ ಪ್ರಾಯೋಗಿಕ ಹಿರಿಮೆ

**ಕ್ರೋಡೀಕರಣ**

- ವೈವಿಧ್ಯತೆಯಿಂದ ಕೂಡಿದ ಬಾಯಿತಾಳಗಳಿಂದ ಸಮೃದ್ಧವಾಗಿದೆ ನಮ್ಮ ಈ ನಾಡಿನ ಸಂಗೀತ. ಅರ್ಥವಿಲ್ಲದಿದ್ದರೂ ಹಲವು ಬಾರಿ ಅವುಗಳ ಆಲಾಪನಾ ಸವಿಶೇಷತೆಯಿಂದ ರಾಗ ವೈವಿಧ್ಯವೂ ತಾಳ ವೈವಿಧ್ಯಗಳಿಂದ ಸಂಸ್ಕಾರವನ್ನು, ಶೈಲಿಗಳನ್ನು, ಭಾವಗಳನ್ನು, ಆಶಯಗಳನ್ನು ವೈವಿಧ್ಯಪೂರ್ಣಗೊಳಿಸುತ್ತವೆ. ತಾಳ ಚಲನೆಗಳಲ್ಲಿ ಆಲಾಪನೆಗೂ ಪ್ರಕಟಣೆಗೂ ವ್ಯತ್ಯಸ್ತವಾದ ಪ್ರತಿ ಆಕರ್ಷಕವಾಗುವುದು.

## ಯೂನಿಟ್ – 2

### ಮುನ್ನುಡಿ

ಭಾರತೀಯ ಸಂಗೀತ ವಾದ್ಯೋಪಕರಣ ವೈವಿಧ್ಯಗಳಿಂದ ಹೆಚ್ಚು ಸಂಪನ್ನವಾಗಿದೆ. ಪ್ರತಿಯೊಂದು ವಾದ್ಯವು ಶಬ್ದ ಸವಿಶೇಷತೆಗಳಿಂದ ಸೃಷ್ಟಿಸುವ ಭಾವತಲ ಅವರ್ಣನೀಯವಾಗಿದೆ. ತಂತಿವಾದ್ಯಗಳೂ ಸುಶೀರವಾದ್ಯಗಳೂ ಹಾಗೆ ಇನ್ನಿತರ ನಮ್ಮ ಉಪಕರಣಗಳ ಸಂಗೀತ ಶಾಖೆಗಳು ಬೇರೆ ರಾಜ್ಯಗಳಲ್ಲಿ ಸಂಗೀತ ವಲಯದೊಂದಿಗೆ ತಾರತಮ್ಯ ಮಾಡುವುದಾದರೆ ಬಹಳ ಪ್ರಶಸ್ತವಾಗಿದೆ. ವೈವಿಧ್ಯತೆಯಿಂದ ಕೂಡಿದ ಬಾಯಿತಾಳಗಳಿಂದ ಸಮೃದ್ಧವಾಗಿದೆ ನಮ್ಮ ಈ ನಾಡಿನ ಸಂಗೀತ. ಅರ್ಥವಿಲ್ಲದಿದ್ದರೂ ಹಲವು ಬಾರಿ ಅವುಗಳ ಆಲಾಪನಾ ಸವಿಶೇಷತೆಯಿಂದ ರಾಗ ವೈವಿಧ್ಯವೂ ತಾಳ ವೈವಿಧ್ಯಗಳಿಂದ ಸಂಸ್ಕಾರವನ್ನು, ಶೈಲಿಗಳನ್ನು, ಭಾವಗಳನ್ನು, ಆಶಯಗಳನ್ನು ವೈವಿಧ್ಯಪೂರ್ಣಗೊಳಿಸುತ್ತವೆ. ತಾಳ ಚಲನೆಗಳಲ್ಲಿ ಆಲಾಪನೆಗೂ ಪ್ರಕಟಣೆಗೂ ವ್ಯತ್ಯಸ್ತವಾದ ಪ್ರತಿ ಆಕರ್ಷಕವಾಗುವುದು.

### ಒಳಪುಟಗಳಲ್ಲಿ

ವಿವಿಧ ಉಪಕರಣಗಳೂ ಅವುಗಳ ವಿಶೇಷತೆಗಳೂ ಉಪಕರಣದ ಮೂಲಕ ತಿಳಿಯುವುದಕ್ಕೆ ಮತ್ತು ನಮ್ಮ ಸಂಗೀತ ಶಾಖೆಯ ವಾದ್ಯೋಪಕರಣ ಸಂಸ್ಕಾರ ಮಕ್ಕಳಿಗೆ ತಿಳಿಸುವುದಕ್ಕಾಗಿರುವ ಕಲಿಕಾ ಸಾಧನೆಗಳು, ICT ಸಾಧ್ಯತೆಗಳನ್ನು ಪರಮಾವಧಿ ಪ್ರಯೋಜನಪಡಿಸಲು ಈ ಅಧ್ಯಾಯದಲ್ಲಿ ಶ್ರಮಿಸಲಾಗಿದೆ.

### ಕಲಿಕಾ ಸಾಧನೆಗಳು

ಸಂಗೀತೋಪಕರಣಗಳು, ಆಲಾಪನೆ ಎಂಬಿವುಗಳಿಂದ ವ್ಯತ್ಯಸ್ತ ಹಾಡುಗಳನ್ನು ಕೇಳುವುದು. ಕೇಳಿದ ಚಲನಚಿತ್ರ ಹಾಡುಗಳನ್ನು ಆಲಾಪಿಸಿಯೂ ಹಾಡಿಯೂ ಅನುಕರಿಸಬಹುದು.

### ಆಶಯ, ತಿಳುವಳಿಕೆ

- ಉಪಕರಣಗಳ ವೈವಿಧ್ಯ, ವಿಶೇಷತೆ
- ಆಲಾಪನೆ ಶೈಲಿಯ ವೈವಿಧ್ಯತೆ, ವಿಶೇಷತೆ
- ಅನುಕರಣೆ

### ಪ್ರಕ್ರಿಯೆ

- ವಿವಿಧ ಸಂಗೀತೋಪಕರಣಗಳನ್ನು ಪರಿಚಯಪಡಿಸುವುದು. (ಐ.ಸಿ.ಟಿ. ಸಾಧ್ಯತೆ)
- ವಿವಿಧ ಸಂಗೀತೋಪಕರಣಗಳ ವಾದನ ಶೈಲಿಗಳನ್ನು ಪರಿಚಯಪಡಿಸುವುದು. ( ಐ.ಸಿ.ಟಿ. ಸಾಧ್ಯತೆ)
- ವಿಶೇಷತೆಗಳನ್ನು ದಾಖಲಿಸುವುದು.
- ಅನುಕರಿಸುವುದು, ಆಲಾಪಿಸುವುದು.

### ಮೌಲ್ಯನಿರ್ಣಯ

- ಸಂಗೀತೋಪಕರಣಗಳನ್ನು ಕುರಿತು ಇರುವ ತಿಳುವಳಿಕೆ
- ಅನುಕರಣ ಸಾಮರ್ಥ್ಯ, ಆಲಾಪನಾ ಶೈಲಿ
- ವಾದನ, ಸುಶೀರ ಉಪಕರಣಗಳ ಕುರಿತಾದ ತಿಳುವಳಿಕೆ

## ಕಲಿಕಾ ಚಟುವಟಿಕೆಗಳು

***ಚಟುವಟಿಕೆಗಳು – 1***

- ಮೂರು ಹಾಡುಗಳೂ ಒಂದೇ ರೀತಿಯಲ್ಲಿರುವವುಗಳೋ?
    - ರಾಗಗಳನ್ನು ಮಾತ್ರ ಉಪಕರಣಗಳಿಂದ ಕೇಳುವಾಗ ಏನು ಅನುಭವಪಡಲಾಗುತ್ತದೆ?
    - ಪ್ರತಿಯೊಂದು ಹಾಡುಗಳು ಹಮ್ಮಿಂಗ್‌ಗಳಿಂದ ಪುನಃ ಸೃಷ್ಟಿ ಮಾಡಲು ಸಾಧ್ಯವಾಗುವುದೇ?
    - ಪ್ರತಿಯೊಂದು ಹಾಡು ಯಾವ ಶೈಲಿಯಲ್ಲಿದೆ ? (ಸೂಚನೆ)
    - ಇದೇ ಹಾಡುಗಳು ಹಮ್ಮಿಂಗಿನ ಮೂಲಕ ಪುನಃ ಸೃಷ್ಟಿ ಮಾಡಲು ಸಾಧ್ಯವಾಗುವುದೇ?
- ಈ ಪ್ರಶ್ನೆಗಳನ್ನು ಆಧಾರವಾಗಿರಿಸಿಕೊಂಡು ಮಕ್ಕಳ ಪ್ರತಿಕ್ರಿಯೆಯ ಟಿಪ್ಪಣಿಯನ್ನು ಓದುವುದು. ಪ್ರಧಾನ ವಿಷಯಗಳನ್ನು ಅಧ್ಯಾಪಕರು B.B. ಯಲ್ಲಿ ವ್ಯಕ್ತಿಗತವಾಗಿ ದಾಖಲಿಸಲು ಸಾಧ್ಯವಾಗುವುದು.
- ಮೊದಲೇ ಕೇಳಿಸಿದ ಒಂದು ಹಾಡಿನ ವಾದನವನ್ನು ಪುನಃ ಕೇಳಿಸುವುದು. ಕೇಳಿದ ಹಾಡಿನ ರಾಗವನ್ನು ಪುನಃ ಸೃಷ್ಟಿಸಬಹುದೇ? ವ್ಯಕ್ತಿಗತವಾಗಿ ಮಕ್ಕಳು ಆವರ್ತಿಸುವುದು.
    - ಸಾಹಿತ್ಯದ ಸೇರಿಸುವಿಕೆಯಿಲ್ಲದೆ ಈ ಆಲಾಪನೆ ಉತ್ತಮವಾಗಿದೆಯೇ?
    - ನಿಜವಾದ ಹಾಡಿನ ಶೈಲಿಯೂ ಇದರಿಂದ ದೊರೆತಿದೆಯೇ?
- ಮಕ್ಕಳ ಪ್ರತಿಕ್ರಿಯೆಗಳನ್ನು ದಾಖಲಿಸುವುದು (BB/ಚಾರ್ಟ್)

***ಚಟುವಟಿಕೆ – 2***

- ವಿವಿಧ ಉಪಕರಣಗಳನ್ನು ಮೀಟಿದ ವಿವಿಧ ಹಾಡುಗಳನ್ನು ಕೇಳುವುದು.

  *(ಜಾನಪದಹಾಡು, ಮಾಪ್ಪಿಳಹಾಡು, ಭಕ್ತಿಹಾಡು, ದೇಶಭಕ್ತಿ ಹಾಡು)*
- ಪ್ರತಿಯೊಂದು ಹಾಡನ್ನು ನುಡಿಸಲ್ಪಟ್ಟ ಉಪಕರಣಗಳು ಯಾವುವು?

  *(ಉಪಯೋಗದ ಹೆಸರು, ಶಬ್ದದ ಪ್ರತ್ಯೇಕತೆ, ಘಟನಾ ಪರವಾದ ಸವಿಶೇಷತೆ)*
- ಮನುಷ್ಯನ ಆಲಾಪನೆಯೊಂದಿಗೆ ಸೇರಿ ನಿಲ್ಲುವುದೇ ಈ ವಾದನ?
- ಸಾಹಿತ್ಯವಿಲ್ಲದೆ ಉಪಕರಣದ ಮೂಲಕ ಕೇಳಿದ ಹಾಡಿನ ಪೂರ್ಣತೆಗೆ ಯಾವುದಾದರೂ ಕೊರತೆಗಳಿವೆ?
- ಮಕ್ಕಳಿಗೆ ವಾಚಿಕವಾಗಿ ಪ್ರತಿಕ್ರಿಯಿಸಬಹುದು.

***ಸೂಚಕಗಳು***

- ರಾಗ ಉಂಟುಮಾಡುವ ಭಾವ
- ಉಪಕರಣಗಳ ಶಬ್ದದ ಪ್ರತ್ಯೇಕತೆಗಳೂ ಸಾಧ್ಯತೆಗಳೂ
- ಚಿತ್ರವೂ ವಾದನವೂ ತೋರಿಸುವುದು
- ಒಂದು ಉಪಕರಣದ ಚಿತ್ರ ತೋರಿಸುವುದು. ಆಗಲೇ ಅದರ ವಾದನವೂ ತೋರಿಸುವುದು.

- **ಪ್ರದರ್ಶಿಸಬಹುದಾದ ಉಪಕರಣಗಳು**

ವೀಣೆ, ವಯಲಿನ್, ಫ್ಲೂಟ್, ಗಿಟಾರ್, ಹಾರ್ಮೋನಿಯಂ, ಶೆಹನಾಯಿ, ನಾದಸ್ವರ, ತಬಲ, ಮೃದಂಗ, ಚೆಂಡೆ, ಮದ್ದಳೆ, ಚಕ್ರತಾಳ, ಕೈಮಣಿ



ಗಿಟಾರ್



ಚೆಂಡೆ



ಕೊಳಲು



ಗಂಜಿರ



ಹಾರ್ಮೋನಿಯಂ



ಮದ್ದಳೆ



ಮೃದಂಗ



ನಾದಸ್ವರ



ಶೆಹನಾಯಿ



ತಬಲ



ವೀಣೆ



ವಯಲಿನ್

## ಮುಂದುವರಿಕೆಯ ಚಟುವಟಿಕೆ

- ಮಕ್ಕಳು ನಿರೀಕ್ಷಿಸಿದ ಉಪಕರಣಗಳಲ್ಲಿ ಕೆಲವು ಉಪಕಣಗಳ ವಾದನ ರೀತಿಯನ್ನು, ಶಬ್ದ ರೀತಿಯನ್ನು ಅನುಕರಣೆ ಮಾಡುವಂತೆ ಹೇಳುವುದು. ಇಂತಹ ಉಪಕರಣಗಳಿಂದ ಮಾಡಲಾದ ಸಂಗೀತದ ಹಾಡುಗಳನ್ನು ಸಂಗ್ರಹಿಸಿರಬೇಕು.

## ಕ್ರೋಡೀಕರಣ

ಪ್ರತಿಯೊಂದು ಉಪಕರಣಗಳಿಗೂ ಅದರ ಶಬ್ದದಲ್ಲಿಯೂ ಪ್ರಯೋಗ ರೀತಿಯಲ್ಲಿಯೂ ಅದರದ್ದೇ ಆದ ಪ್ರತ್ಯೇಕತೆಗಳಿವೆ. ಅವುಗಳ ರಚನಾ ಪರವಾದ ವಿಶೇಷತೆಗಳಿಗೆ ಅನುಗುಣವಾಗಿ ಕೆಲವು ಬೇರ್ಪಡಿಸುವಿಕೆಯನ್ನು ನಡೆಸಬೇಕಾಗಿದೆ. ಆಲಾಪನೆಯೆಂಬುದು ಸಾಹಿತ್ಯವನ್ನೊಳಗೊಂಡು ಹಾಡುವುದಲ್ಲದೆ, ಉಪಕರಣಗಳ ಮೂಲಕ ಪ್ರಯೋಗಿಸಲ್ಪಟ್ಟ ರಾಗಗಳು ಇದರಲ್ಲಿ ಒಳಗೊಂಡಿವೆ. ಸಾಹಿತ್ಯವಿಲ್ಲದಿದ್ದರೂ ಗಾನರೂಪದ ಶೈಲಿಯೂ ಮಾಧುರ್ಯವೂ ಮಾತ್ರವಲ್ಲದೇ ಅಸಾಧ್ಯಕರವಾಗುವ ರೀತಿಯಲ್ಲಿ ಮಂಡಿಸಲ್ಪಡುವ ಉಪಕರಣಗಳ ಮೂಲಕ ಕೇಳಲ್ಪಡುವ ಹಾಡುಗಳೂ ಕೇಳಲ್ಪಡುವ ಶಬ್ದದ ಆಧಾರದಲ್ಲಿ ಪ್ರತಿಯೊಂದು ಉಪಕರಣಗಳನ್ನು ತಿಳಿಯುವುದಕ್ಕೆ ಸಾಧ್ಯವಾಗುತ್ತದೆ.

# ಯೂನಿಟ್ – 3

## ಮುನ್ನುಡಿ

ಅರ್ಥವನ್ನು ತಿಳಿದು ಹಾಡನ್ನು ಹಾಡುವಾಗಲೇ ಅದು ಉತ್ತಮವೂ ಶ್ರೇಷ್ಠವೂ ಆಗುವುದು. ಮಾತೃಭಾಷೆಯ ಹಾಡುಗಳು ಮಾತ್ರವಲ್ಲ. ಆಲಾಪಿಸುವ ಯಾವುದೇ ಗಾನದ ಆಶಯವು ಸರಿಯಾಗಿ ತಿಳಿದು ಯೋಗ್ಯವಾದ ರಾಗಗಳನ್ನು ಸೇರಿಸಿ ಹಾಡುವಾಗ ಹಾಡು ಹೆಚ್ಚು ಆಸ್ವಾದನಾಕರವಾಗುವುದು. ವಿದ್ಯಾಲಯಗಳಲ್ಲಿ ವಿವಿಧ ಸಂದರ್ಭಗಳಲ್ಲಿ ಆಲಾಪಿಸಬೇಕಾದ ಹಾಡುಗಳನ್ನು ಉತ್ತಮವಾಗಿ ಮಂಡಿಸಲು ಮಕ್ಕಳ ಸಂಗೀತಾಭಿರುಚಿಯನ್ನು ತಿಳಿದು ಅವರನ್ನು ಸಂಗೀತ ಲೋಕಕ್ಕೆ ಕರೆದುಕೊಂಡು ಬರಬೇಕಾಗಿದೆ. ಪರಿಚಿತವಾದ ಗಾನಗಳಿಂದ ಮಕ್ಕಳನ್ನು ಸಂಗೀತ ಆಸ್ವಾದನಾ ಹಂತಕ್ಕೆ ಕರೆದುಕೊಂಡು ಬರುವುದು. ಹೆಚ್ಚು ಹಾಡುಗಳನ್ನು ಕೇಳಲು ಅವಕಾಶಗಳನ್ನು ಉಂಟು ಮಾಡುವುದು. ಉತ್ತಮ ಸಂಗೀತ ಜ್ಞಾನವುಳ್ಳವರಾಗಿ ಮಾಡಬೇಕಾದುದು ಅನಿವಾರ್ಯವಾಗಿದೆ. ಗಾನರೂಪಗಳು ಹಾಗೂ ಆಲಾಪನೆಯ ವಿಶಾಲತೆ ಮತ್ತು ವೈವಿಧ್ಯತೆಯು ಅವರ ಮುಂದೆ ತೋರಿಸಿ ಕೊಡಲು ಸಾಧ್ಯವಾದರೆ ಅವರ ಲೋಕವು ಸೃಜನಾತ್ಮಕವಾಗುವುದು. ಶಬ್ದವನ್ನು ಪ್ರತಿಯೊಂದು ಶೈಲಿಯಲ್ಲಿರುವ ಗಾನಗಳಿಗೂ ಸರಿಯಾಗುವ ರೀತಿಯಲ್ಲಿ ಮಾಡಲು ಬೇಕಾದ ರೀತಿಯಲ್ಲಿ ವ್ಯತ್ಯಾಸಗಳನ್ನು ತಂದು ಪ್ರಕಟಿಸಬೇಕು.

## ಒಳ ಪುಟಗಳಲ್ಲಿ

ಮಾತೃಭಾಷೆಯಲ್ಲಿಯೂ ಇತರ ಭಾಷೆಗಳಲ್ಲೂ ತಯಾರಿಸಿದ ಗಾನಗಳನ್ನು ತನ್ನ ಶೈಲಿಯಲ್ಲಿ ಆಶಯಕ್ಕನುಸರಿಸಿ ಆಲಾಪಿಸಬೇಕಾದ ಅವಶ್ಯಕತೆ ಈ ಅಧ್ಯಾಯದ ವಿಷಯವಾಗಿದೆ. ಗುಂಪು ಹಾಡುಗಳಲ್ಲಿ ಪಾಲಿಸಬೇಕಾದ ನಿಬಂಧನೆಗಳು, ಶಬ್ದದ ವಿವಿಧ ಘಟ್ಟದಲ್ಲಿರುವ ಕ್ರಮೀಕರಣ ಸಾಧ್ಯವಾಗುವ ಚಟುವಟಿಕೆಗಳು ಎಂಬಿವುಗಳೆಲ್ಲ ಈ ಯೂನಿಟಿನಲ್ಲಿ ಒಳಪಡಿಸಲಾಗಿದೆ.

## ಕಲಿಕಾ ಸಾಧನೆ

ಮಾತೃಭಾಷೆಯ ಹಾಡುಗಳೊಂದಿಗೆ ಇತರ ಭಾಷೆಗಳಲ್ಲೂ ದೇಶಭಕ್ತಿಗಳನ್ನು ಆಶಯಗಳಿಗೆ ಅನುಸರಿಸಿ ರಾಗದಲ್ಲೂ ಭಾವದಲ್ಲೂ ಹಾಡುವುದು. ಗುಂಪಾಗಿ ಹಾಡುವಾಗ ಆಲಾಪನೆಯ ವೇಗತೆ, ಉಚ್ಚಸ್ಥಾಯಿ, ಭಾವ ಎಂಬಿವುಗಳನ್ನು ನಿರ್ದೇಶಗಳಿಗನುಸರಿಸಿ ವ್ಯತ್ಯಾಸವನ್ನು ಮಾಡಿ ಆಲಾಪಿಸಬೇಕು.

## ಆಶಯ, ತಿಳುವಳಿಕೆ

- ಆಶಯ ವಿಶೇಷತೆಗಳು
- ದೇಶಭಕ್ತಿ
- ಉತ್ತಮ ಆಲಾಪನೆ
- ಸಮೂಹ ಹಾಡುಗಳನ್ನೂ ನಿರ್ದೇಶಗಳಿಗೆ ಅನುಸರಿಸಿ ಹಾಡಲಿರುವ ನೈಪುಣ್ಯ
- ವೇಗತೆ, ಉಚ್ಚತೆ, ಭಾವ, ಶ್ರುತಿ ಇವುಗಳ ಕುರಿತು ಇರುವ ಜ್ಞಾನ
- ಗುಂಪು ಜ್ಞಾನ

## ಪ್ರಕ್ರಿಯೆ

- ವಿವಿಧ ಸಂದರ್ಭಗಳಿಗೆ ಅನುಸರಿಸಿ ಸಂಗೀತ ರೂಪಗಳ ಆಲಿಸುವಿಕೆ
- ಹಾಡುಗಳ ಆಯ್ಕೆ
- ಪಟ್ಟಿ ತಯಾರಿಸುವುದು
- ಆಲಾಪನಾ ತರಬೇತಿ, ಮಂಡನೆ
- ಒಬ್ಬಂಟಿಯಾಗಿಯೂ ಗುಂಪಾಗಿಯೂ ಆಲಾಪನಾ ಸಾಧ್ಯತೆ
- ತಾಳ, ಶ್ರುತಿ ಇವುಗಳನ್ನು ಆಧಾರವಾಗಿರಿಸಿ ಗುಂಪಾಗಿ ಹಾಡಲು ತರಬೇತಿ.
- ಸಾಹಿತ್ಯದ ರಾಗಗಳಿಗೆ ಅನುಸರಿಸಿ ಶಬ್ದ ಕ್ರಮೀಕರಣ ನೀಡುವುದು.

## ಮೌಲ್ಯನಿರ್ಣಯ

- ಉತ್ತಮ ಆಯ್ಕೆ – ಉತ್ತಮ ಆಲಾಪನೆ
- ಆಲಾಪನೆಯ ಒಗ್ಗಟ್ಟು
- ನಿರ್ದೇಶಗಳನ್ನು ಒಳಪಡಿಸಿಕೊಂಡಿರುವ ಆಲಾಪನೆ

## ಕಲಿಕಾ ಚಟುವಟಿಕಗಳು

***ಚಟುವಟಿಕೆಗಳು – 1***

- ದಿನಾಚರಣೆಗಳಿಗೆ ಸಂಬಂಧಪಟ್ಟಂತೆ ನಾಲ್ಕು ಪ್ರಧಾನ ದಿನದ ಕುರಿತು ಇರುವ ಟಿಪ್ಪಣಿಗಳು ಮಕ್ಕಳಿಗೆ ನೀಡುವುದು.

| | |
|---|---|
| ಜೂನ್ ಪ್ರವೇಶೋತ್ಸವ | ಆಗಸ್ಟ್ 15 – ಸ್ವಾತಂತ್ರ್ಯ ದಿನಾಚರಣೆ |
| ನವೆಂಬರ್ 1 – ಕೇರಳ ರಾಜ್ಯೋತ್ಸವ | ಡಿಸೆಂಬರ್ 25 – ಕ್ರಿಸ್‌ಮಸ್ |

- ಪ್ರತಿಯೊಂದು ಟಿಪ್ಪಣಿಗಳು ಸಿಕ್ಕಿದ ಮಕ್ಕಳು ನಾಲ್ಕು ರಾಗಗಳ ಹೆಸರುಗಳಲ್ಲಿ ಗುಂಪು ಮಾಡುವುದು.

ಆದೇರಿ, ಆರಬಿ, ಅಠಾಣ, ಆಹಿರಿ

- ಪ್ರತಿಯೊಂದು ಗುಂಪಿಗೂ ಸಿಕ್ಕಿದ ಟಿಪ್ಪಣಿಗಳಲ್ಲಿ ದಿನಗಳಿಗೆ ಸಂಬಂಧಿಸಿದಂತೆ ಹಾಡುಗಳನ್ನು ಅಧ್ಯಾಪಕರು ನೀಡುತ್ತಾರೆ.
- ಸಿಕ್ಕಿದ ಸಾಲುಗಳಿಗೆ ಸಂದರ್ಭಗಳಿಗೆ ಅನುಗುಣವಾದ ರೀತಿಯಲ್ಲಿ ರಾಗಗಳನ್ನು ಕಂಡುಹಿಡಿಯುವಂತೆ ನಿರ್ದೇಶಿಸುವುದು.

**ಪ್ರವೇಶೋತ್ಸವ ಗೀತೆ**

*ಪುಸ್ತಕದ ಹೂವಿಂದ ಮಕರಂದ ಹೀರಲು*
*ಚಿತ್ರಶಲಭಗಳೊಂದು ಗೂಡಿ*
*ಉತ್ಸಾಹದಿಂದಲಿ ಕುಣಿದು ನಲಿಯುತ್ತಲಿ*
*ಉತ್ಸವದಿ ಮಾಡಿದರು ಮೋಡಿ ॥*
*ಮನೆಯ ಕಾರ್ಯಗಳನ್ನು ಮನದ ಭಾವಗಳನ್ನು*
*ಮನಮುಟ್ಟುವಂತೆ ಹಾಡಿದರು*
*ಪುಸ್ತಕದ ಹೂಗಳಿಗೆ ವರ್ಣಚಿಟ್ಟೆಯು ಬಂದು*
*ಮುತ್ತನ್ನು ಕೊಡುವಂತ ಕಾಲ ಬಂತು ॥*
*ಉದ್ಯಾನ ವಿದ್ಯಾಲಯವು ತೆರೆಯಿತು*
*ಸರ್ಕಾರಿ ಶಾಲೆಯಿದೊ ತೆರೆಯಿತು*
*ಉಲ್ಲಾಸದ ಸಮಯ ಕೂಡಿ ಬಂತು*
*ಬಂತು ಬಂತು ಓಡಿ ಬಂತು ॥*
*ಗದ್ದೆ ಪರ್ವತ ಶಿಖರ ನದಿ ಬಯಲನು*
*ಗೆದ್ದೆವೆಂದೆನುತ ದಾಟುತ ಬಂದರು*
*ಮುಟ್ಟಿ ಆಡುವ ಆಟ ಆಡಿಕೊಂಡು*
*ಮಿಠಾಯಿ ಅರ್ಧವನು ಹಂಚಿಕೊಂಡು ॥*
*ಸೋತನೆವನದಿ ಬರಿದೆ ಸಿಟ್ಟುಗೊಂಡು*
*ಮಾತನಾಡುತ ಒಡನೆ ಸೇರಿಕೊಂಡು*
*ಎಲ್ಲರೂ ಒಂದೆಂಬ ಪಾಠವಿದುವೆ*
*ಎಲ್ಲ ಜ್ಞಾನವ ಪಡೆವ ಕಾಲವಿದುವೆ ॥*
*ಅಂದದುಡುಗೆಯನ್ನುಟ್ಟು ಸಣ್ಣ ನಗೆ ಬೀರಿ*
*ಓಡಿಯಾಡುತಲಿರುವ ಮರಿದುಂಬಿಯೇ ...*
*ಅಮ್ಮನಾಶ್ರಯದ ಬಿಸಿ ಅಪ್ಪುಗೆಯ ಹಾಗೆ*
*ಸಮ್ಮತದಿ ಪೋಷಿಸುವ ವಿದ್ಯಾಲಯ ॥*
*ಮಕರಂದ ಹೀರಲು ದುಂಬಿ ಬಂತು*
*ಮನವನ್ನು ರಂಜಿಸಲು ಗಿಳಿ ಬಂದಿತು*
*ಹಾಡುಗಳ ಕಲಿಸುತ್ತ ಜೊತೆಯಲ್ಲಿ ಕುಣಿಯಲು*
*ಹಾಡಿನ ರಾಣಿ ಕೋಗಿಲೆಯು ಬಂತು ॥*
*ಉದ್ಯಾನ ವಿದ್ಯಾಲಯವು ತೆರೆಯಿತು*
*ಸರ್ಕಾರಿ ಶಾಲೆಯಿದೊ ತೆರೆಯಿತು*
*ಉಲ್ಲಾಸದ ಸಮಯ ಕೂಡಿ ಬಂತು*
*ಬಂತು ಬಂತು ಓಡಿ ಬಂತು ॥*

***–ಶೇಖರ ಶೆಟ್ಟಿ***

**ರಾಗವನ್ನು ನೀಡುವಾಗ ಗಮನಿಸಬೇಕಾದದ್ದು**

- ದಿನಗಳ ಪ್ರಾಧಾನ್ಯವನ್ನು ಅನುಸರಿಸಿ ಸಾಲುಗಳ ಆಶಯವನ್ನು ಒಳಗೊಂಡು ರಾಗವನ್ನು ನೀಡಬೇಕು.
- ಗುಂಪಿನಲ್ಲಿರುವವರಿಗೆ ಒಟ್ಟಾಗಿ ಆಲಾಪಿಸುವುದಕ್ಕೆ ಸಾಧ್ಯವಾಗುವ ರಾಗ

- ಅಭ್ಯಾಸ ಮಾಡಿದ ಹಾಡುಗಳನ್ನು ಮಂಡಿಸುವುದು.
- ಮಂಡಿಸುವಿಕೆಯ ಸಂಘಗಳನ್ನು ಪರಸ್ಪರ ಮೌಲ್ಯಮಾಪನ ಮಾಡುವುದು.
- ಶಾಲೆಯ ವಾರ್ಷಿಕೋತ್ಸವದ ಭಾಗವಾಗಿಯೂ ಆಚರಣೆಗಳ ಭಾಗವಾಗಿಯೂ ಆಲಾಪಿಸಬೇಕಾದ ಹಾಡುಗಳ ಪಟ್ಟಿಯನ್ನು ತಯಾರಿಸಬೇಕು.
- ಈ ಪಟ್ಟಿಯಲ್ಲಿ ಇತರ ಭಾಷೆಯ ಹಾಡುಗಳಿಗೂ ದೇಶಭಕ್ತಿ ಹಾಡುಗಳಿಗೂ ಸ್ಥಳವನ್ನು ನೀಡ ಬೇಕು.
- ಇವುಗಳಲ್ಲಿ ಆಯ್ಕೆಮಾಡಿದ ಹಾಡುಗಳನ್ನು ಹಾಡಿ ಪ್ರಾಕ್ಟೀಸ್ ಮಾಡುವುದು.
- ತರಬೇತಿ ದೊರೆತ ಹಾಡುಗಳನ್ನು ಗುಂಪಿನಲ್ಲಿ ಆಲಾಪನೆ, ಮಂಡಿಸುವಿಕೆ
- ಮಂಡಿಸುವಿಕೆಯನ್ನು ಮೌಲ್ಯಮಾಪನ ಮಾಡುವಾಗ ಅಧ್ಯಾಪಕರು ಆಲಾಪನೆ ಮಾಡುವಾಗ ಇದಕ್ಕೆ ಸೇರಿಸಬೇಕಾದವುಗಳನ್ನು ದಾಖಲಿಸಿ ಅವುಗಳನ್ನು ಸೇರಿಸಿ ಹಾಡಿ ಪುನಃ ಅಭ್ಯಾಸ ಮಾಡಿಸಬೇಕು.

**ಇತರ ಭಾಷೆ ದೇಶಭಕ್ತಿಗಳು**

1. ಓಡಿವಿಳೆಯಾಡ್....
2. ಭಾರತ ಸಮುದಾಯ
3. ಒ ಗುಣ ಬೀಜೆ
4. ಚೆಲುವಿನ ಮುದ್ದಿನ ಮಕ್ಕಳೆ
5. ಐವಕ್ತ್ ಕಿ ಆವಾಸ್
6. ಸಾರೇ ಜಹಾನ್ ಸೇ ಅಚ್ಚ
7. ಭಾಷಲನ್ನಿ ವೇರೇನ

***ಗುಂಪಾಗಿ ಹಾಡುವಾಗ ಗಮನಿಸಬೇಕಾದ ಅಂಶಗಳು***

- ಶಬ್ದ ಏಕೀಕರಣ
- ಶ್ರುತಿ ಏಕೀಕರಣ
- ತಾಳ ಏಕೀಕರಣ
- ಭಾವನಾತ್ಮಕ ಆಲಾಪನೆ

- ಗುಂಪಾಗಿಯೂ ಒಬ್ಬನೇ/ಳೇ ಆಲಾಪಿಸುವಾಗ ಪಾಲಿಸಬೇಕಾದ ಸಂಗೀತ ಅಂಶಗಳ ಕುರಿತು ತಿಳಿಯುವುದಕ್ಕಾಗಿರುವ ಚಟುವಟಿಕೆಗಳು

1. ಹಾಡುಗಳನ್ನು ಕೇಳಿಸುವುದು

**ಉದಾ :** ಗಂಗಾ ಯಮುನಾ ....
ಚಾಂಜಾಡಿಯಾಡಿ
ಗಂಗೇ......
ಎಂದಿನ್ ವೇರೊರು ಸೂರ್ಯೋದಯಂ

- ಕೇಳಿಸಿದ ಹಾಡುಗಳಲ್ಲಿ ಆಲಾಪನೆಯಲ್ಲುಂಟಾದ ಪ್ರತ್ಯೇಕತೆಗಳನ್ನು ಕೇಳುವುದು.

***ಸೂಚಕಗಳು***

- ಸಾಲುಗಳನ್ನು ಏರು ಸ್ವರದಲ್ಲಿ ಹಾಡಿದ್ದು
- ವೇಗತೆಯ ಕ್ರಮೀಕರಣ
- ಏರುಸ್ವರದಲ್ಲೂ ಕೆಳಸ್ವರದಲ್ಲೂ ಹಾಡುವಾಗ ಇರುವ ಪ್ರತ್ಯೇಕತೆಗಳು
- ಒಂದು ಹಾಡಿಗೆ ಶಬ್ದವು ಹೇಗೆಲ್ಲಾ ಪ್ರಯೋಗಿಸಬಹುದು.

- ಸೂಚನೆಗಳಿಗೆ ಅನುಗುಣವಾಗಿ ಪ್ರತಿಕ್ರಿಯೆ.
- ಮೌಲ್ಯಮಾಪನ (ವಾಚಿಕವಾಗಿ – ವ್ಯಕ್ತಿಗತವಾಗಿ)
- ಆಲಾಪನೆಯಲ್ಲಿರುವ ಪ್ರತ್ಯೇಕತೆಗಳ ಕುರಿತು ಶಬ್ದ ಮೇಲೆ ಕೆಳಗೆ ಕುರಿತು ಇರುವ ಸರಳ ಚರ್ಚೆ ಮಾಡುವುದು.

**ಜೋರಾಗಿ**

ಶಬ್ದದಲ್ಲಿ ರಾಗದ ಅಥವಾ ಸಾಲುಗಳ ಸವಿಶೇಷತೆಗೆ ಅನುಸರಿಸಿ/ ಆಶಯಕ್ಕನುಗುಣವಾಗಿ ನೀಡುವ ಎತ್ತರ.

- ಎಲ್ಲಾ ರಾಗಗಳನ್ನು ಒಂದೇ ಶಬ್ದ ಕ್ರಮೀಕರಣದಲ್ಲಿ ಹಾಡುವಾಗ ಆಸ್ವಾದಿಸಲು ಸಾಧ್ಯವಾಗುವುದಿಲ್ಲ. ಕೆಲವು ಏರು ಸ್ವರದಲ್ಲಿಯೂ ಕೆಲವು ಕೆಳಗಿನ ಸ್ವರದಲ್ಲೂ ಕೆಲವೊಂದು ರಾಗಗಳನ್ನು ಇವೆರಡರ ನಡುವೆಯು ಹಾಡುವಾಗ ಅವುಗಳ ಅರ್ಥ ತಿಳಿಯುವುದು.

**ವೇಗತೆ (Tempo)**

ಪ್ರತಿಯೊಂದು ಹಾಡಿನ ಆಸ್ವಾದನೆಗೆ ತನ್ನದಾದ ತಾಳ ಕ್ರಮೀಕರಣವಿದೆ. ತಾಳಗಳ ವೇಗತೆಯು ವ್ಯತ್ಯಾಸವಾಗಬಹುದು. ಕೆಲವು ಹಾಡುಗಳು ಒಂದೇ ವೇಗತೆಯನ್ನು ನೆಲೆನಿಲ್ಲಿಸುವುದು ಎಂದರೆ ಇನ್ನಿತರ ಸಾಲುಗಳಿಗೆ ಸಂದರ್ಭಗಳಿಗನುಸರಿಸಿ ವಿವಿಧ ವೇಗತೆಯಲ್ಲಿ ಹಾಡುವುದಾಗಿರುತ್ತದೆ. ಹಾಡಿನ ತಾಳ, ಚಲನ ಗತಿಗಳಾಗಿವೆ ವೇಗತೆ. ಈ ರೀತಿಯಲ್ಲಿರುವ ಹಾಡುಗಳು ಆಯ್ಕೆ ಮಾಡಿ ಕೇಳಿಸುವುದು.

| ಒಂದೇ ವೇಗತೆ ಇರುವವುಗಳು | ವ್ಯತ್ಯಸ್ತ ವೇಗತೆ ಇರುವವುಗಳು |
|---|---|
| ಜನ್ಮಕಾರಿಣಿ ಭಾರತಂ<br>ಮಿನ್ನಾಮಿನೀ<br>ಮಿನ್ನಮಿನುಜಿ | ಆರುಮುಗನ್ ಮುಂಬಿಲ್<br>ವನ್ನಾಲ್<br>ಸಂಸ್ಕೃತ ಪಮಗರಿ<br>ಪಳ್ಳಿವಾಳ್ |

- "ಅಂದಿಕಡಪುರತ್ತೊರೋಲಕುಡಯೆಡುತ್ತ್"
  "ತಾಂಗಿಣಕ್ಕತಿಲ್ಲಂ ತಿಲ್ಲಂ"
  "ಪಡಕಾಳಿ ಚಂಡಿಚ್ಚಂಗಿರಿ"
  ಈ ಹಾಡುಗಳಲ್ಲಿ ಯಾವುದಾದರೊಂದು ಬಹಳ ದೊಡ್ಡದಾದ ವೇಗತೆಯಲ್ಲಿ (ಚೌಕಕಾಲ) ಆಲಾಪಿಸುವುದು. ಇದೇ ಹಾಡಿನ ನಿಜವಾದ ಆಡಿಯೋ ಕೇಳಿಸುವುದು.
- ವ್ಯತ್ಯಾಸಗಳನ್ನು ಮಕ್ಕಳು ಮೌಲ್ಯಮಾಪನ ಮಾಡುತ್ತಾರೆ.

***ಸೂಚಕಗಳು***

- ಆಸ್ವಾದಿಸಲು ಬೇಕಾದ ವೇಗತೆಯಲ್ಲಿರುವ ಆಲಾಪನೆ.
- ಯಥಾರ್ಥ ವೇಗತೆಯಲ್ಲಿರುವ ಆಲಾಪನೆಯನ್ನು ಒಪ್ಪಿಕೊಳ್ಳುವುದು.

**ಮೌಲ್ಯಮಾಪನ**

- ಆಲಾಪನದಲ್ಲಿನ ಹಿರಿಮೆ
- ಆಯ್ಕೆ ಮಾಡಿದ ಹಾಡುಗಳಲ್ಲಿನ ವೈವಿಧ್ಯತೆ
- ಭಾವವನ್ನು ಒಳಗೊಳ್ಳಿಸುವುದು
- ಗುಂಪು ಚರ್ಚೆಗಳಲ್ಲಿ ಮಂಡಿಸುವಿಕೆಯ ತಿಳುವಳಿಕೆ
- ಶಬ್ಧ ಕ್ರಮೀಕರಣಕ್ಕಾಗಿರುವ ಸಾಮರ್ಥ್ಯ
- ಟೆಂಪೋ, ವೇಗತೆ ಎಂಬಿವುಗಳನ್ನು ಬದಲಾವಣೆಗಳನ್ನು ತಿಳಿಯಲಿರುವ ಸಾಮರ್ಥ್ಯ

**ಕ್ರೋಢೀಕರಣ**

- ಭಾವಪರವಶವಾದ ಹಾಡುಗಳನ್ನು ಹಾಡುವಾಗ ಆಲಾಪನೆಯು ಹೆಚ್ಚಾಗಿ ಮನೋಹರವಾಗುವುದು. ಮಾತೃಭಾಷೆಯ ಹಾಡುಗಳಾದರೂ ಇತರ ಭಾಷೆಯ ಹಾಡುಗಳಾದರೂ ಭಾವಪರವಶವಾದ ಆಲಾಪನೆ ಅನಿವಾರ್ಯವಾಗಿದೆ. ಪ್ರತಿಯೊಂದು ವಸ್ತುವಿಗೂ ತನ್ನದಾದ ಭಾವಗಳಿವೆ. ನಿರ್ದೇಶಗಳಿಗನುಗುಣವಾಗಿ ಪ್ರತಿಯೊಂದು ಆಲಾಪನೆಯೂ ಭಾವಾತ್ಮಕವೂ ಹೆಚ್ಚು ಆಸ್ವಾದನಾಕರವಾಗುವ ರೀತಿಯಲ್ಲಿ ಬೇಕಾದ ವ್ಯತಿಯಾನಗಳನ್ನೂ ಬರಿಸಿ ಆಲಾಪನೆ ಮಾಡಬೇಕಾಗಿದೆ.

# ಆರನೇ ತರಗತಿ

## ಯೂನಿಟ್ – 1

### ಮುನ್ನುಡಿ

ಪ್ರತಿಯೊಂದು ಶಬ್ದವೂ ಅವುಗಳ ತಾಳಗಳೆಲ್ಲವೂ ಆಸ್ವಾದಕರಿಗೆ ಬಂದು ಸೇರುವುದು ಹಲವು ಬಾರಿ ಸುಲಭವೂ ಮನೋಹರವಾಗಿಯೂ ಕೆಲವು ಬಾಯಿತಾಳಗಳಿಂದಾಗಿದೆ. ನಿತ್ಯ ಜೀವನಲ್ಲಿ ನಮ್ಮ ಪ್ರತಿಯೊಂದು ಚಟುವಟಿಕೆಗಳಲ್ಲೂ ಅವುಗಳ ವಿರಾಮಗಳಲ್ಲೆಲ್ಲಾ ತಿಳಿದೋ ತಿಳಿಯದೆಯೋ ಪದಗಳು ಹಾಡಿಯೋ ಅನುಕರಿಸಿಯೋ ಸಂಗೀತವನ್ನು ನಮ್ಮೊಳಗೆ ಸೇರಿಸಿರುವುದು.

ಮೋಟರ್ ವಾಹನಗಳ ಶಬ್ದ, ರೈಲಿನ ಶಬ್ದ, ಕಾರ್ಖಾನೆಗಳ ಸೈರನ್ ಮೊಳಗುವ ಶಬ್ದ ಹೀಗೆ ಅನೇಕ ಕೃತಕ ಶಬ್ದಗಳೂ ನಮ್ಮ ಸುತ್ತಲೂ ಇವೆ. ಕೆಲವು ಶಬ್ದಗಳು ನಮಗೆ ಆನಂದವನ್ನುಂಟುಮಾಡಿದರೆ ಕೆಲವು ಅರೋಚಕವಾಗಿರುತ್ತವೆ. ಆನಂದವನ್ನುಂಟುಮಾಡುವ (ಇಂಪನ್ನು ನೀಡುವ) ಶಬ್ದಗಳ ಸಾನಿಧ್ಯವೇ ಸಂಗೀತದ ಮೊದಲ ಪಾಠ.

### ಕಲಿಕಾ ಸಾಧನೆ

- ಸಂಗೀತದ ಅಂಶಗಳನ್ನು ನೆಲೆ ನಿಲ್ಲಿಸಿ ಹಾಡುವುದು.
- ಒಬ್ಬಂಟಿಯಾಗಿಯೂ ಗುಂಪಾಗಿಯೂ ಆಲಾಪನೆಯಲ್ಲಿ ಬರುವ ಶ್ರುತಿಭಾಗ, ತಾಳಭಾಗ ಇವುಗಳನ್ನು ತಿಳಿಯುವುದು.

### ಆಶಯ, ತಿಳುವಳಿಕೆ

- ಶ್ರುತಿ, ರಾಗ, ತಾಳ, ಲಯ ಮುಂತಾದವುಗಳು ಸಂಗೀತದ ಭಾಗಗಳಾಗಿವೆ.
- ಸಂಗೀತದ ಭಾಗಗಳು ಯೋಗ್ಯವಾಗಿ ಒಗ್ಗೂಡುವಾಗ ಆಲಾಪನೆಯ ಶ್ರೇಷ್ಠತೆ ಸೃಷ್ಟಿಯಾಗುತ್ತದೆ.
- ಶ್ರುತಿಭಾಗ, ತಾಳಭಾಗ ಇವುಗಳು ಆಲಾಪನೆಯ ಶ್ರೇಷ್ಠತೆಯನ್ನು ಕಡಿಮೆ ಮಾಡುತ್ತದೆ.

### ಪ್ರಕ್ರಿಯೆ

- ಆಲಾಪನೆಗಳನ್ನು ಗಮನಿಸಿ ಸಂಗೀತದ ಭಾಗಗಳನ್ನು ತಿಳಿಯುವುದು. (Audio, ಗ್ರಂಥಗಳು ಎಂಬಿವುಗಳ ಸಹಾಯದಿಂದ)
- ಗುಂಪಾಗಿ ಮತ್ತು ವೈಯಕ್ತಿಕವಾಗಿ ಇರುವ ಆಲಾಪನೆ ಮತ್ತು ತರಬೇತಿ
- ಸಂಗೀತದ ಕುರಿತು ಇರುವ ಸಂಶೋಧನೆ, ಶ್ರುತಿ, ರಾಗ, ತಾಳ, ಭಾವ (ರೆಫರೆನ್ಸ್ ಉಪಯೋಗಿಸಿ ವಿವರವನ್ನು ಸಂಗ್ರಹಿಸುವುದು)
- ಆಲಾಪನಾ ಕಮ್ಮಟ (ಆವಿಷ್ಕಾರ)
- ಪರಸ್ಪರ ಮೌಲ್ಯಮಾಪನ, ಉತ್ತಮಗೊಳಿಸಬೇಕಾದುದು
- ಹಾಡನ್ನು ಭಾವಾತ್ಮಕವಾಗಿ ಮಂಡಿಸುವುದು. (ಪ್ರಯೋಗ)
- ಆಲಾಪನೆ

- ಆಲಾಪನೆಯನ್ನು ಮೌಲ್ಯಮಾಪನ ಮಾಡುವುದು.
- ತೊಂದರೆಗಳನ್ನು ಕಂಡುಹಿಡಿಯುವುದು, ಚರ್ಚೆ
- ಶ್ರುತಿ, ತಾಳ – ಪ್ರಸಕ್ತಿ, ಚರ್ಚೆ

## ಮೌಲ್ಯನಿರ್ಣಯ

- ಚರ್ಚೆಯಲ್ಲಿ ಭಾಗವಹಿಕೆಯನ್ನು ಮೌಲ್ಯಮಾಪನ ಮಾಡುವುದು.
- ಆಲಾಪನೆಯನ್ನು ಮೌಲ್ಯಮಾಪನ ಮಾಡುವುದು.
- ನಿರೀಕ್ಷಿಸಿ ಮೌಲ್ಯಮಾಪನ ಮಾಡುವುದು.

## ಒಳಪುಟಗಳಲ್ಲಿ

ಸಾಮಾನ್ಯ ಸಂದರ್ಭಗಳಲ್ಲಿ ಯೋಗ್ಯವಾದ ಶಬ್ದ ವ್ಯತ್ಯಯಗಳು ಸೇರುವಾಗ ಅವು ಆಲಾಪನೆಗಳಾಗುತ್ತವೆ. ಹೇಳುವುದು, ಉಚ್ಛರಿಸುವುದು, ಎಂಬೀ ಹಂತಗಳನ್ನು ದಾಟಿ ಆಲಾಪನೆಯ ಹಂತಕ್ಕೆ ತಲುಪುವುದು. ಆಲಾಪನೆಯ ಆಶಯಗ್ರಹಿಕೆಗೂ ವಿನಿಮಯಕ್ಕೂ ಸುಗಮವಾದ ಮಾಧ್ಯಮವಾಗಿದೆ. ಮಾತುಗಾರಿಕೆ ಮತ್ತು ಆಲಾಪನೆಗೆ ಭಾವ ಅಗತ್ಯ. ರಾಗ ಮತ್ತು ತಾಳ ಸೇರುವಾಗ ಆಲಾಪನೆ ಪೂರ್ಣವಾಗುವುದು.

## ಕಲಿಕಾ ಚಟುವಟಿಕೆಗಳು

*ಚಟುವಟಿಕೆ 2*

- ಪ್ರತಿಯೊಂದು ಚಟುವಟಿಕೆಗಳ ಮಧ್ಯದಲ್ಲಿಯೂ ಅಧ್ಯಾಪಕರ ಧನಾತ್ಮಕ ಮೌಲ್ಯಮಾಪನ ನಡೆಯಬೇಕು.
- ಹಾಡಿನ ತುಣುಕುಗಳನ್ನು ನಿಖರತೆಯಿಂದ ಆವರ್ತಿಸಿ ಹಾಡುವ ಸಾಮರ್ಥ್ಯ
- ಗುಂಪಿನಲ್ಲಿ ಹಾಡುವಾಗ ಸ್ವರಸಾಮರಸ್ಯ
- ಶಬ್ದಕ್ರಮೀಕರಣದಲ್ಲಿ ಸ್ಪಷ್ಟತೆ
- ರಾಗ, ಭಾವ, ತಾಳ
    - ಮಂಡನೆಯ ಹಿರಿಮೆ
    - ಆಸ್ವಾದನೆ
    - ಮನೋಭಾವ
    - ತಾಳದ ನಿಖರತೆ
    - ತಾಳಾತ್ಮಕ ಆರಾಧನೆ
    - ತಾಳಪ್ರಜ್ಞೆ

*ಚಟುವಟಿಕೆ 2*

- ಬಿದಿರುಗಳು ಒರಸುವಾಗ ಉಂಟಾಗುವ ಶಬ್ದ ಗೆರಟೆಯನ್ನು ತಟ್ಟಿ ತಾಳ ಹಾಕುವ ಶಬ್ದ, ಕಲ್ಲುಗಳನ್ನು ಪರಸ್ಪರ ಕುಟ್ಟಿ ಉಂಟುಮಾಡುವ ಶಬ್ದ, ಮರದತುಂಡುಗಳನ್ನು ಪರಸ್ಪರ

ತಟ್ಟಿ ತಾಳ ಹಿಡಿಯುವ ಶಬ್ದ, ಕಲ್ಲಿಗೆ ಗೆರಟೆಯನ್ನು ಉಜ್ಜುವಾಗ ಉಂಟಾಗುವ ಶಬ್ದ, ಟಿನ್‌ಶೀಟಿಗೆ ಬಡಿಯುವಾಗ ಉಂಟಾಗುವ ಶಬ್ದ, ನಯವಾದ ನೆಲದಲ್ಲಿ ಚಪ್ಪಲಿ ಧರಿಸಿ ನಡೆಯುವ ಶಬ್ದ, ಬಾಚಣಿಗೆಯಲ್ಲಿ ಪೇಪರನ್ನಿರಿಸಿ ಊದುವ ಶಬ್ದ, ಶಂಖದ ಶಬ್ದ, ಗೆರಟೆಗೆ ಪ್ಲಾಸ್ಟಿಕ್ ವಯರನ್ನು ಎಳೆದುಕಟ್ಟಿ ಮೀಟುವ ಶಬ್ದ, ತಂತಿಗಳನ್ನು ಎಳೆದು ಕಟ್ಟಿ ತಟ್ಟುವ ಶಬ್ದ, ಗ್ಲಾಸಿನಲ್ಲಿ ನೀರು ತುಂಬಿಸಿ ಅಥವಾ ತುಂಬಿಸದೆ ತಟ್ಟುವ ಶಬ್ದ, ಸೋರೆಕಾಯಿಗೆ ತಂತಿಬಿಗಿದು ಮೀಟುವ ಶಬ್ದ ಎಂಬಿವುಗಳನ್ನು ಅಧ್ಯಾಪಕರು ರೆಕಾರ್ಡ್ ಮಾಡಿ ತಂದು ಮಕ್ಕಳನ್ನು ಮೌನವಾಗಿ ಕಣ್ಣುಮುಚ್ಚಿ ಕುಳಿತುಕೊಳ್ಳಿಸಿದ ಬಳಿಕ ಕೇಳುವಂತೆ ಮಾಡಬೇಕು.

- ಶಬ್ದಗಳನ್ನು ಒಂದೆರಡು ಸಲ ಕೇಳಿಸಿದ ಬಳಿಕ ಅಧ್ಯಾಪಕರು ಒಂದು ಕಿರು ಚರ್ಚೆಯತ್ತ ಮುನ್ನಡೆಸಬೇಕು.
  - ಈ ರೀತಿಯ ಶಬ್ದಗಳನ್ನು ನಾವು ಧಾರಾಳವಾಗಿ ಕೇಳಿರುವೆವು.
  - ಯಾವ ಯಾವ ಶಬ್ದಗಳನ್ನು ಕೇಳಿರುವಿರಿ ಎಂದು ನೆನಪು ಮಾಡಿ ಹೇಳಬಹುದೇ?
  - ಯಾವ ಯಾವ ವಸ್ತುಗಳನ್ನು ತಟ್ಟಿದಾಗ ಅಥವಾ ಕುಟ್ಟಿದಾಗ ಶಬ್ದ ಬದಲಾಯಿತು.
  - ಪತ್ತೆ ಹಚ್ಚಲು ಕಷ್ಟವಾದ ಶಬ್ದಗಳಿದ್ದುವೇ?

- ಹಾಗಾದರೆ ಚಿನ್ನುವಿನಲ್ಲಿ ನಾವೊಂದು ಹಾಡುಹಾಡಿಸೋಣ.
- ಗೆಳೆಯರಾದ ನೀವು ನಿಮಗೆ ನೀಡಿದ ವಸ್ತುಗಳನ್ನು ಉಪಯೋಗಿಸಿ ತಾಳ ಹಾಕುವಿರಾ?
  - ಗೆರಟೆಗಳು
  - ಬಿದಿರಿನ ತುಂಡುಗಳು
  - ಮರದ ತುಂಡುಗಳು
  - ಸೋಡಾಬಾಟಲಿಯ ಮುಚ್ಚಳಗಳು (ಒಂದಕ್ಕಿಂತ ಹೆಚ್ಚು ಸಂಖ್ಯೆಗಳಲ್ಲಿ ಪೋಣಿಸಿದವುಗಳು)
  - ಕಾರ್ಡ್‌ಬೋರ್ಡ್ ಪೆಟ್ಟಿಗೆಗಳು
  - ಚಿಕ್ಕ ಸ್ಟೀಲ್‌ಪ್ಲೇಟ್, ಚರ್ಮ ಇತ್ಯಾದಿ
- ಚಿನ್ನುವಿನ ಹಾಡಿನ ಪ್ರತಿಯೊಂದು ಚರಣದಲ್ಲಿಯೂ ಬೇರೆ ಬೇರೆ ವಸ್ತುಗಳಿಂದ ತಾಳ ಹಿಡಿಯಲು ಹೇಳಬೇಕು.
- ಹಾಡಿನ ಕೊನೆಯಲ್ಲಿ ಎಲ್ಲ ಉಪಕರಣಗಳನ್ನು ಒಟ್ಟಿಗೆ ಉಪಯೋಗಿಸಬೇಕು. (ತಾಳದಲ್ಲಿ ನಿಖರತೆಯನ್ನು ಪ್ರದರ್ಶಿಸುವ ಮಕ್ಕಳನ್ನು ಅಧ್ಯಾಪಕರು ಕಂಡುಹಿಡಿಯಬೇಕು.
- ಗುರುತಿಸಲಾದವೂ ಸಂಗೀತವೂ ಪರಸ್ಪರವಿರುವ ಸಂಬಂಧ – ವಿಶ್ಲೇಷಣೆ (ಸಣ್ಣದಾಗಿ)
- ಸಂಗೀತದಲ್ಲಿ ಬದಿಗಿರಿಸಲು ಸಾಧ್ಯವಾಗದ ಅಗತ್ಯವಾದ ಘಟಕಗಳಾಗಿವೆ ಇವೆಲ್ಲಾ. ಅಲಾಪನೆಯ ಪೂರ್ಣತೆಗೆ ಇವುಗಳನ್ನೆಲ್ಲಾ ಬೇಕಾದ ರೀತಿಯಲ್ಲಿ ಒಗ್ಗೂಡಿಸಿ ಬರಬೇಕಾಗಿದೆ.
  - ಸಂಗೀತಾಂಶಗಳ ಲಘುವಿವರಣೆ
  - ಮನೋಹರವಾದ ಒಂದು ಹಾಡನ್ನು ಕೇಳಿಸುವುದು.
- ಈ ಗಾನವೇ ಶಬ್ಧ ನಿಯಂತ್ರಣವಿಲ್ಲದೇ ಶಬ್ದದಲ್ಲಿ ಅಂದಾಜು ಏರಿಳಿತ ಮಾಡಿ ಅದರ ಯಥಾರ್ಥದಿಂದ ಅಧ್ಯಾಪಕರು ಬದಲಾಯಿಸಿ ಕೇಳಿಸುವುದು.

- ನಿರ್ದಿಷ್ಟ ಸಮಯಾಂತರಗಳಲ್ಲಿ ಜಾಗರೂಕತೆಯಿಂದ ಎಣಿಕೆಮಾಡುವವರು, ತಾಳಹಾಕುವವರು, ತಾಳಪ್ರಜ್ಞೆಯುಳ್ಳವರು ಉಳಿದವರಿಗಿಂತ ಮುಂದಿದ್ದಾರೆ.
- ಅವರಿಗೆ ಹಾಡಿನೊಂದದಿಗೆ ನಿಖರವಾಗಿ ಚಪ್ಪಾಳೆ ತಟ್ಟಲೂ ಸಾಧ್ಯವಾಗುವುದು.

***ಸೂಚಕಗಳು***

- ಸಭಾಕಂಪನವಿಲ್ಲದೆ ಹಾಡುವುದು.
- ಮಂಡನೆಯ ಹಿರಿಮೆ
- ಆಸ್ವಾದನೆ
- ಮನೋಭಾವ
- ತಾಳದಲ್ಲಿ ನಿಖರತೆ
- ತಾಳಾತ್ಮಕವಾದ ಆಲಾಪನೆ
- ತಾಳಪ್ರಜ್ಞೆ

***ಚಟುವಟಿಕೆ 3***

- ನಮಗೆ ಲಭ್ಯವಾದ ಈ ರೀತಿಯ ವಸ್ತುಗಳಿಂದ ಸರಳವಾದ ವಾದ್ಯೋಪಕರಣಗಳನ್ನು ತಯಾರಿಸಬಹುದೇ?
- ನಿರ್ಮಾಣ ಕಲೆಯಲ್ಲಿ ನಿಪುಣರಾದ ಮಕ್ಕಳು ಮತ್ತು ಅಧ್ಯಾಪಕರ ನೇತೃತ್ವದಲ್ಲಿ ನಿರ್ಮಾಣ ಚಟುವಟಿಕೆಗಳಿಗೆ ಚಾಲನೆ ನೀಡುವುದು.
  - ಸೋಡಾಬಾಟ್ಲಿಯ ಮುಚ್ಚಳಗಳನ್ನು ಸರಿಯಾದ ಕ್ರಮದಲ್ಲಿ ಸರಿಗೆಯಿಂದ ಜೋಡಿಸುವುದು.
  - ದೊಡ್ಡ ಗೆರಟೆಯ ಹೊರಬದಿಗಳನ್ನು ನಯಗೊಳಿಸಿದ ಬಳಿಕ ತೆರೆದ ಬದಿಗೆ ಪ್ಲಾಸ್ಟಿಕ್ ಶೀಟನ್ನು ಬಿಗಿಯಾಗಿ ಅಂಟಿಸುವುದು.
  - ಎರಡು ಗೆರಟೆಗಳನ್ನು ಎದುರುಬದುರಾಗಿ ಅಂಟಿಸಿ (ಒಳಗೆ ಸ್ವಲ್ಪ ಹರಳು ಕಲ್ಲುಗಳನ್ನು ಹಾಕಿದ ಬಳಿಕ) ಒಂದು ಕೋಲನ್ನು ಜೋಡಿಸುವುದು.

**ಶ್ರುತಿ ಎಂದರೇನು?**

ಪ್ರತಿಯೊಬ್ಬ ವ್ಯಕ್ತಿಯ ಶಬ್ದ ಪ್ರತ್ಯೇಕತೆಗಳಿಗನುಸರಿಸಿ ಏರು ಸ್ವರದಲ್ಲಿಯೂ ಕೆಳಸ್ವರದಲ್ಲಿಯೂ ಮಧ್ಯ ಭಾಗದಲ್ಲೂ ಅನಾಯಾಸವಾಗಿ ಹಾಡಲು ಆಯ್ಕೆ ಮಾಡುವ ನಾದವಾಗಿದೆ ಶ್ರುತಿ

- ಮಕ್ಕಳ ಪ್ರತಿಕ್ರಿಯೆ
  - ಮೂರು ಮಕ್ಕಳಿಗೂ ಒಂದೇ ರೀತಿ ಹಾಡಲು ಸಾಧ್ಯವಾಗುತ್ತಿಲ್ಲ.
  - ಒಬ್ಬರು ಮಾತ್ರ ಹಾಡಿನ ಎಲ್ಲಾ ಭಾಗವನ್ನು ಹಾಡುತ್ತಿದ್ದಾರೆ.
  - ಒಬ್ಬರು ಕೆಳಸ್ವರವನ್ನು ಹಾಡುತ್ತಿಲ್ಲ.
  - ಒಬ್ಬರು ಏರುಸ್ವರವನ್ನು ಹಾಡುತ್ತಿಲ್ಲ.
- ಮಕ್ಕಳೊಂದಿಗಿರುವ ಪ್ರಶ್ನೆ
  - ಹಾಡು ವ್ಯಕ್ತಿಗತವಾಗಿ ಪೂರ್ತಿ ಭಾಗವೂ ಹಾಡಬೇಕೆಂದಿಲ್ಲವಲ್ಲ?
- ಅವರವರ ಶ್ರುತಿ ಕಂಡುಹಿಡಿಯಲು ಅಗತ್ಯತೆಯನ್ನು ತಿಳಿಸುವುದು.

- ಹಾಡುವುದು ಎಂಬುದು ಎಲ್ಲರ ಆಸೆಯಾಗಿದೆ. ಹಾಡುವ ಮಕ್ಕಳೆಲ್ಲರೂ ಪೂರ್ಣವಾಗಿ ಹಾಡಬೇಕೆಂಬುದು ಅಗತ್ಯವಾಗಿದೆ. ಅದಕ್ಕಾಗಿ ಅವರವರ ಶಬ್ಧ ಪ್ರತ್ಯೇಕತೆಗೆ ಅನುಗುಣವಾಗಿ ಒಂದು ಸ್ಥಾನ ಅನಿವಾರ್ಯವಾಗಿದೆ.
- ಶ್ರುತಿವಾದ್ಯಗಳು/ಶ್ರುತಿಬೋಕ್ಸ್ ಪರಿಚಯಪಡುವುದು.
- ಶ್ರುತಿಬೋಕ್ಸಿನ ಮೂಲಕ ಮಕ್ಕಳು ಶ್ರುತಿಗಳನ್ನು ಪರಿಚಯಪಡುವುದು.

  *(ಮಕ್ಕಳಿಗೆ ಶಬ್ದಕ್ಕನುಗುಣವಾಗಿ ಶ್ರುತಿಗಳನ್ನು ಆಯ್ಕೆ ಮಾಡುವುದು. ಶ್ರುತಿಯಿಂದ ಹಾಡಿಸುವುದು. ಅವರವರ ಮೂಲ ಶ್ರುತಿಯನ್ನು ತಿಳಿಸುವುದು)*

***ಚಟುವಟಿಕೆ – 4 : ರಾಗ***

- ಪಾಠಭಾಗದಲ್ಲಿ ಒಂದು ಕವಿತೆಯ ಪ್ರಸಕ್ತವಾದ ಕೆಲವು ಸಾಲುಗಳನ್ನು ಹಾಡಿ ಕೇಳಿಸುವುದು.
- ಈ ಸಾಲುಗಳ ಅರ್ಥಕ್ಕನುಗುಣವಾಗಿ ಕ್ರಮೀಕರಣಗಳನ್ನು ಶಬ್ದಕ್ಕೆ ನೀಡಿ ಪುನಃ ಹಾಡಿಸುವುದು.
- ಆಶಯ ತಲದಲ್ಲಿ ಹೆಚ್ಚಾಗಿ ತಿಳಿಯುವ ಶಬ್ದ ಕ್ರಮೀಕರಣವನ್ನು ಬರಿಸಿ ಸ್ವಲ್ಪ ಯೋಗ್ಯವಾದ ರೀತಿಯಲ್ಲಿ ಹೇಳುವುದು.
- ಮೂರನೇ ಮಂಡಿಸುವಿಕೆಯ ಪ್ರತ್ಯೇಕತೆ ಏನಾಗಿತ್ತು?
  - ಮೊದಲ ಓದುವಿಕೆಯೂ ಎರಡನೇ ಓದುವಿಕೆಯೂ ಪರಸ್ಪರ ವ್ಯತ್ಯಸ್ಥವಾಗಿರುವುದೇ?
  - ಮೂರನೇ ಮಂಡಿಸುವಿಕೆಗೆ ಇನ್ನಿತರ ಮಂಡನೆಗಳಿಂದ ಯಾವ ವ್ಯತ್ಯಾಸ ಅನುಭವಪಡುತ್ತದೆ?
- ಮಕ್ಕಳ ವಾಚಿಕವಾದ ಪ್ರತಿಕ್ರಿಯೆಗಳನ್ನು ದಾಖಲಿಸುವುದು.
  - ಒಂದನೇಯದು ಸುಮ್ಮನೆ ಓದುವುದು.
  - ಎರಡನೆಯದರಲ್ಲಿ ಸ್ವಲ್ಪ ಸ್ಪಷ್ಟತೆ, ಕ್ರಮೀಕರಣ ಎಲ್ಲವೂ ಉಂಟಾಗಿತ್ತು.
  - ಮೂರನೆಯದಕ್ಕೆ ಒಂದು ರಾಗ ಮೂಡಿತು. ಒಳ್ಳೆಯ ರೀತಿಯಲ್ಲಿ ಉಂಟಾಗಿತ್ತು.
- ಮಕ್ಕಳ ಪ್ರತಿಕ್ರಿಯೆಯ ಆಧಾರದಲ್ಲಿ ಯಾವ ರೀತಿ? ಯಾವ ರಾಗ?
  - ಆಲಿಸಲು ಹೆಚ್ಚು ಇಂಪನ್ನು ಉಂಟು ಮಾಡುವುದಕ್ಕಾಗಿ ಶಬ್ದವನ್ನು ಮನೋಹರವಾಗಿ ಕ್ರಮೀಕರಿಸಿ ಪ್ರಯೋಗಿಸುವಾಗ ರಾಗಗಳು ಉಂಟಾಗುತ್ತವೆ. ರಾಗವು ಸೃಷ್ಟಿಸಲ್ಪಡುವುದು.
  - ಸಂಯೋಜಿಸಲಾದ ಒಂದು ಗುಂಪು ನಾದಗಳು ಸೇರಿ ಬರುವಾಗ ರಾಗಗಳುಂಟಾಗುವುದು.
  - ರಾಗಗಳು ಉಂಟಾಗುವ ವಿವಿಧ ಹಂತಗಳು
  - ಹೇಳುವುದು, ಹಾಡುವುದು.
  - ರಾಗದ ವಿಶೇಷತೆಗಳು.

**ರಾಗ**

ಒಂದು ಹಾಡಿನ, ಸಂಗೀತ ಸೃಷ್ಟಿಯನ್ನು ಇನ್ನಿತರ ಹಾಡುಗಳಿಂದ ಬೇರ್ಪಡಿಸಿ ನೋಡುವುದಕ್ಕಿರುವ ವಿಶೇಷತೆಗಳೊಂದಿಗಿನ ಪ್ರಧಾನವಾದ ಘಟಕವಾಗಿದೆ

### ಚಟುವಟಿಕೆಗಳು – 5 : ತಾಳ

- ಅಧ್ಯಾಪಕರು ಒಂದು ವಾದ್ಯವನ್ನು ತಾಳಾತ್ಮಕವಾಗಿ ಹೇಳುವುದು.
- ಹೇಳುವುದಕ್ಕೆ ಅನುಗುಣವಾಗಿ ಚಪ್ಪಾಳೆಯನ್ನು ತಟ್ಟಲು ಹೇಳುವುದು.
- ಗುಂಪಾಗಿ ಕೈತಟ್ಟುವಾಗ ಕೆಲವರು ಹಾಡಿಗೆ ಯೋಗ್ಯವಾಗದ ರೀತಿಯಲ್ಲೂ ಕೈ ತಟ್ಟುವುದನ್ನು ನಮಗೆ ಕೇಳಬಹುದು.
- ಅಧ್ಯಾಪಕನ ಪ್ರಶ್ನೆ
  - ಎಲ್ಲಾರೂ ಬೇರೆ ಬೇರೆ ರೀತಿಯಲ್ಲಿಯೇ ಅಲ್ಲವೇ ಕೈತಟ್ಟುವುದು?
  - ಹೇಗೆ ಚಪ್ಪಾಳೆ ಬೇರೆ ಬೇರೆ ರೀತಿಯಲ್ಲಾಗಿದೆ?
- ಮೊದಲು ಹೇಳಿದ ಪದ್ಯದ ಚಪ್ಪಾಳೆಗೆ ಯೋಗ್ಯವಾದ ಸಂಖ್ಯೆಗಳನ್ನು ಹೀಗೆ ಲೆಕ್ಕ ಮಾಡುವುದು.

/123/123/123/123/123/123/123/....

ಮಲಯಪ್ಪುಲಯನಾ ಮಾಡತ್ತಿನ್ ಮುಟ್ಟತ್

ಮಳವನ್ನ ನಾಳೋರು ವಾಳನಟ್ಟು

ಮನತಾರಿಲಾಶಗಳ್ ಪೋಲತಿಲೋರೋರೋ

ಮರದಗಕ್ಕಾಂಬು ಪೋಡಿಚ್ಚುವನ್ನು

ಅಧ್ಯಾಪಕನ ಸೂಚನೆ ಪ್ರಕಾರ ಮಕ್ಕಳು ಕೈ ತಟ್ಟುವುದು.

- ಮಕ್ಕಳು ಹಾಡುವಾಗ ಟೀಚರ್ ಎಣಿಸಿಕೊಂಡು ಕೈತಟ್ಟುವುದು.
- ನಂತರ ರಾಗದೊಂದಿಗೆ ಮಕ್ಕಳು ಕೈತಟ್ಟುವುದು. (ಸಂಖ್ಯೆಗಳನ್ನು ಎಣಿಸಿಕೊಂಡು)
- ಈ ಚಟುವಟಿಕೆಯನ್ನು ಆವರ್ತಿಸುವುದು.
- ಸಮಾನಗತಿಯಲ್ಲಿರುವ (ವೇಗತೆ) ಎರಡು ಹಾಡುಗಳನ್ನು ಟೀಚರ್ ಆಲಾಪಿಸುವುದು.
- ಮಕ್ಕಳು ಸೇರಿ ಹಾಡುವುದು.

ಪಚ್ಚಪ್ಪಾನಂದತ್ತೆ........
ಕಣ್ಣೀರ್ ಪೂವಿಂಡೆ......

- ಅಧ್ಯಾಪಕನ ನಿರ್ದೇಶ ಪ್ರಕಾರ ಮಕ್ಕಳು ಕೈ ತಟ್ಟುವುದು.
- ಹಾಡಿನೊಂದಿಗೆ ಅಧ್ಯಾಪಕರೂ ಮಕ್ಕಳೂ ಸೇರಿ ಕೈ ತಟ್ಟುವುದು.
- ಆಲಾಪನೆಯೊಂದಿಗೆ ಕೈತಟ್ಟಿ ವೇಗತೆಯನ್ನು ಸರಿಪಡಿಸಿದಾಗ ಹಾಡಿಗೆ ಉಂಟಾದ ಹಿರಿಮೆ ಏನು?
- ಮಕ್ಕಳ ಪ್ರತಿಕ್ರಿಯೆ
  - ಪ್ರತಿಯೊಂದು ಸಮಯದಲ್ಲಿ ಎಲ್ಲರಿಗೂ ಒಂದೇ ರೀತಿಯಲ್ಲಿ ಸಾಲುಗಳನ್ನು ಹಾಡಲು ಸಾಧ್ಯವಾಯಿತು.
  - ಒಂದೇ ರೀತಿಯಲ್ಲಿ ಆರಂಭಿಸಲೂ ಅಂತ್ಯಗೊಳಿಸಲೂ ಸಾಧ್ಯವಾಯಿತು.
  - ಹಾಡಿನೊಂದಿಗೆ ಸೇರಿಸಿದ ಸಮಯ ಕ್ರಮೀಕರಣ ಏನೆಂದು ತಿಳಿಯಬೇಕಾಗಿದೆ.
  - ಆಲಾಪನೆಯೊಂದಿಗೆ ಸರಿಯಾದ ವಿರಾಮಗಳಲ್ಲಿ ಸರಿಯಾಗಿ ಆವರ್ತಿಸಿ ಬರುವ ಚಲನೆಗಳಾಗಿವೆ ತಾಳ.
  - ಈ ತಾಳಗಳಾಗಿವೆ ಹಾಡಿನ ಸಮಯ, ಹಾಡಿನ ವೇಗತೆಯನ್ನು ನಿಯಂತ್ರಿಸುವುದು.

ಆಲಾಪನೆಯ ಸಮಯ ಕ್ರಮೀಕರಣವಾಗಿದೆ ತಾಳ. ಇಂತಹ ರೀತಿಯಲ್ಲಿ ವೈವಿಧ್ಯವಾದ ಸಮಯ ಕ್ರಮೀಕರಣಗಳು ಆಲಾಪನೆಯಲ್ಲಿ ಪ್ರಯೋಗಿಸುವುದು, ಅವುಗಳ ತಾಳ ವೈವಿಧ್ಯಕ್ಕೆ ಕಾರಣವಾಗುವುದು.

### ಚಟುವಟಿಕೆಗಳು – 6 : ಭಾವ

- ಯಾವುದಾದರೂ ಹಾಡಿನ ಸಾಲುಗಳನ್ನು ಚಾರ್ಟಿನಲ್ಲಿ ಬರೆಯುವುದು.

***ಅಮ್ಮ ನೀನು ಸಾಯಬೇಕೆ?***
***ನನ್ನ ತಬ್ಬಲಿ ಮಾಡಬೇಕೆ?***
***ಸುಮ್ಮನಿಲ್ಲಿಯೆ ನಿಲ್ಲು ಎಂದು***
***ಅಮ್ಮನಿಗೆ ಕರು ಹೇಳಿತು***

- ಮಕ್ಕಳಿಂದ ಹೇಳಿಸುವುದು.
- ಆಶಯವನ್ನು ತಿಳಿಯಲು ಹೇಳುವಂತೆ ನಿರ್ದೇಶಿಸುವುದು.
- ಆಶಯ ಹೆಚ್ಚಾಗಿ ತಿಳಿಯಲು ಕಥೆಯ ಹಿನ್ನಲೆಯನ್ನು ಅಧ್ಯಾಪಕರು ಹೇಳುವುದು.
- ಅದರ ನಂತರ ಒಂದೋ ಎರಡೋ ಮಕ್ಕಳಿಂದ ಸಾಲುಗಳನ್ನು ಹೇಳಿಸುವುದು.
- ಅಧ್ಯಾಪಕರು ಸಾಲುಗಳನ್ನು ಹೇಳುವುದು.
- ವಿವಿಧ ರೀತಿಯಲ್ಲಿ –
    - ಆಶಯವನ್ನು ಅಂತರ್ಗತವಾಗಿಸದೆ.
    - ಆಶಯವನ್ನು ಭಾಗಿಕವಾಗಿ ಒಳಗೊಳ್ಳಿಸಿ.
    - ಆಶಯವನ್ನು ಪೂರ್ಣವಾಗಿ ಒಳಗೊಳ್ಳಿಸಿ
- ಅಧ್ಯಾಪಕರು ಹೇಳುವ ರೀತಿಯನ್ನು ಮಕ್ಕಳು ಗಮನಿಸುವುದು – ಪ್ರತಿಕ್ರಿಯಿಸುವುದು.
- ಇಷ್ಟವಾದ ರೀತಿಯೂ ಇಷ್ಟವಾಗದ ರೀತಿಯನ್ನು ಮಕ್ಕಳು ಬೇರ್ಪಡಿಸಿ ಮಂಡಿಸುವುದು.
- ಇಷ್ಟವಾದುದನ್ನು ಆಯ್ಕೆ ಮಾಡುವುದರ ಮಾನದಂಡಗಳನ್ನು ತಿಳಿಯುವುದು.
- ಮಕ್ಕಳು ಹೇಳಿದ ಸೂಚನೆಗಳನ್ನು ಹೆಚ್ಚು ದೃಢಪಡಿಸಲು ಅಧ್ಯಾಪಕರು ಹೆಚ್ಚು ಇಷ್ಟವಾದ ರೀತಿಯನ್ನು ಮತ್ತೊಂದು ಬಾರಿ ಹೇಳುವುದು.
    - ಸಾಲುಗಳು ಆಶಯವನ್ನರಿತು ಹೇಳುವಾಗ ಆಶಯಕ್ಕೆ ಹೆಚ್ಚು ಸ್ಪಷ್ಟತೆ ಬರಲು ಶಬ್ದವನ್ನು ಒದುಕುವುದು ಹಾಗೂ ತೆರೆಯುವುದನ್ನು ಮಾಡುವುದರ ಮೂಲಕ ಆಲಾಪನೆ ಧನ್ಯವಾಗುವುದು.
    - ಸಾಲುಗಳ ಆಶಯಕ್ಕೆ ಅನುಗುಣವಾಗಿ ಗಾಯಕನು ಶಬ್ದವನ್ನು ಅಡಗಿಸಿಯೂ ತೆರೆದೂ ಪ್ರಯೋಗಿಸುವುದರ ಮೂಲಕ ಆಶಯ ಗ್ರಹಣ ಹೆಚ್ಚು ಸುಗಮವಾಗುವುದು.

> ***ಭಾವ***
>
> *ಶಬ್ದವನ್ನು ಸಾಲುಗಳಿಗೆ ಅನುಸರಿಸಿ/ರಾಗಗಳಿಗೆ ಅನುಸರಿಸಿ ಸಂಯೋಜಿಸಿ ಉಪಯೋಗಿಸುವ ಸಂಗೀತದ ವಿಶೇಷತೆಯಾಗಿದೆ ಭಾವ.*

    - ಸಾಲುಗಳಿಗೂ ರಾಗಗಳಿಗೂ ಅನುಗುಣವಾಗಿ ಶಬ್ದಕ್ಕೆ ನೀಡುವ ವಿವಿಧ ರೀತಿಯಲ್ಲಿರುವ ಕ್ರಮೀಕರಣವಾಗಿದೆ ಭಾವವನ್ನು ಹುಟ್ಟಿಸುವುದು.
    - ಆಲಾಪನೆಯಲ್ಲಿ ಸಂಗೀತಾಂಶಗಳ ಪ್ರಸಕ್ತಿ.
    - ಆಲಾಪನೆಗೆ ಶ್ರುತಿಯೂ ರಾಗವೂ ತಾಳವೂ ಭಾವವೂ ಯೋಗ್ಯವಾದ ರೀತಿಯಲ್ಲಿ ಒಟ್ಟಿಗೆ ಸೇರುವಾಗ ಮಾತ್ರ ಉತ್ತಮ ಆಲಾಪನೆಯಾಗುವುದು.

    ಸಂಗೀತದ ಅಂಶಗಳಾದ ರಾಗ, ಶ್ರುತಿ, ತಾಳ, ಭಾವ ಇವುಗಳ ಕುರಿತು ಆಯಾ ಸಂದರ್ಭಗಳಲ್ಲಿ ಕ್ಲಾಸ್‌ರೂಮಿನಲ್ಲಿ ಮಕ್ಕಳು ರೂಪೀಸಿದ ಟಿಪ್ಪಣಿಗಳು ಅಧ್ಯಾಪಕರ ಸಹಾಯದೊಂದಿಗೆ ಸರಿಪಡಿಸಿ ಮಕ್ಕಳು ನೋಟು ಪುಸ್ತಕದಲ್ಲಿ ಟಿಪ್ಪಣಿಗಳಾಗಿ ಬರೆಯಬೇಕಾಗಿದೆ.

## ಮೌಲ್ಯಮಾಪನ

- ಆಸ್ವಾದನಾ ಹಿರಿಮೆ
- ಟಿಪ್ಪಣಿಗಳಲ್ಲಿನ ಅಧಿಕೃತತೆ
- ಆಲಾಪನೆಯ ಹಿರಿಮೆ
- ಸರಿಯಾದ ತಾಳ
- ಭಾವ, ರಾಗ
- ಸಂಗೀತಾಂಶಗಳನ್ನು ತಿಳಿಯುವುದು, ಸೇರಿಸಿ ಹಾಡಲಿರುವ ಸಾಮರ್ಥ್ಯ

## ಕ್ರೋಡೀಕರಣ

ಶ್ರುತಿ ಮಧುರವಾಗಿ ಹಾಡುವಾಗ ಒಂದು ಆಲಾಪನೆ ಪೂರ್ಣತೆಯನ್ನು ಪಡೆಯುವುದು. ಶ್ರುತಿ ಶುದ್ಧತೆಯೊಂದಿಗೆ ಸರಿಯಾದ ತಾಳವೂ ರಾಗವೂ ಭಾವವು ಎಲ್ಲಾ ಒಟ್ಟಿಗೆ ಸೇರಬೇಕು. ಸಂಗೀತಾಂಶಗಳನ್ನು ತಿಳಿದು ಅವುಗಳ ಹೊಂದಾಣಿಕೆಯನ್ನು ಮೌಲ್ಯಮಾಪನ ಮಾಡಿ ಆಸ್ವಾದಿಸುವಾಗ ಆಲಾಪನೆಯ ಆಸ್ವಾದನೆಯ ಎತ್ತರಕ್ಕೇರುವುದು.

# ಯೂನಿಟ್ – 2

## ಮುನ್ನುಡಿ

ಸಂಗೀತದಲ್ಲಿನ ಒಂದು ದೊಡ್ಡ ಆಧಾರವೂ ಪ್ರಧಾನವಾದುದಾದ ಘಟಕವಾಗಿದೆ ಶ್ರುತಿ. ಶ್ರುತಿ ಶುದ್ಧವಾಗಿರುವ ಆಲಾಪನೆಯು ಶ್ರುತಿ ತಪ್ಪಿದ ಆಲಾಪನೆಯು ಪರಸ್ಪರ ವ್ಯತ್ಯಾಸವಿದೆ. ಶ್ರುತಿ ತಿಳಿದು ಹಾಡುವುದು, ಶ್ರುತಿಯನ್ನು ಸೇರಿಸಿ ಹಾಡುವುದು ಪರಸ್ಪರ ವ್ಯತ್ಯಾಸವಿದೆ. ಶ್ರುತಿಯೊಂದಿಗೆ ಸೇರಿ ವಿಲೀನಗೊಂಡಿರುವ ಗಾನವನ್ನು ಕೇಳುವಾಗ ಉಂಟಾಗುವ ಆನಂದ ಅದ್ಭುತವಾದುದಾಗಿದೆ. ಪ್ರತಿಯೊಬ್ಬರ ಶಬ್ದ ಪ್ರತ್ಯೇಕತೆಗಳಿಗನುಸರಿಸಿ ಯೋಗ್ಯವಾದ ಶ್ರುತಿಗಳಿವೆ. ಶ್ರುತಿ ಸೇರಿರುವ ಆಲಾಪನೆಯ ಸವಿಶೇಷತೆಯನ್ನು ಆಸ್ವಾದಿಸದ ಮನುಷ್ಯ ಹೃದಯಗಳಿರುವುದಿಲ್ಲ. ಶ್ರುತಿಯ ಒಡಂಬಡಿಕೆಯೊಂದಿಗೆ ಹಾಡುವ ಹಾಡಿಗೆ ವಾದ್ಯೋಪಕರಣಗಳ ವಾದನ ಸಮೃದ್ಧಿಯು ಕೂಡ ಸೇರಿದಾಗ ಸಿಗುವ ಮಂಡನೆಯ ವಿಸ್ಮಯ ಅಪಾರವಾಗಿದೆ. ಆಲಿಸುವವರಿಗೆ ಉತ್ತಮ ಸಂಗೀತ ಪ್ರದರ್ಶನಗಳನ್ನು ನೀಡಬೇಕಾದುದು ಎಲ್ಲಾ ಗಾಯಕರ ಕರ್ತವ್ಯವಾಗಿದೆ. ಇದಕ್ಕಾಗಿ ಶ್ರುತಿಯ ಅರಿವಿನೊಂದಿಗೆ ಹಾಡಬೇಕಾದುದು ಅತ್ಯಗತ್ಯವಾಗಿದೆ.

## ಕಲಿಕಾ ಸಾಧನೆ

ಸುಲಭವಾದ ಹಾಡುಗಳನ್ನು ಶ್ರುತಿ ಉಪಕರಣದ ಲಘುವಾದ್ಯೋಪಕರಣಗಳ ಸಹಾಯದೊಂದಿಗೆ ಆಲಾಪಿಸುವುದು.

## ಆಶಯ, ತಿಳುವಳಿಕೆ

- ಶ್ರುತಿ ಸೇರಿದ ಆಲಾಪನೆ
- ಸಂಗೀತದಲ್ಲಿ ಶ್ರುತಿಗೆ ತಾಯಿಯ ಸ್ಥಾನವಿರುವುದು.
- ವೈವಿಧ್ಯವಿರುವ ಶ್ರುತಿ ಉಪಕರಣಗಳಿವೆ.

- ಸರಳವಾದ ವಾದ್ಯೋಪಕರಣದ ಸಹಾಯದೊಂದಿಗಿರುವ ಆಲಾಪನೆ
- ಹಾಡುವಾಗ ವಾದ್ಯೋಪಕರಣಗಳನ್ನು ಉಪಯೋಗಿಸುವುದು ಹಾಡನ್ನು ಹೆಚ್ಚು ಆಸ್ವಾದಕರವಾಗಿಸುತ್ತದೆ.
- ಸರಳವಾದ ತಾಳವಾದ್ಯಗಳನ್ನು ನಿರ್ಮಿಸಲು ಸಾಧ್ಯವಾಗುವುದು.
- ಸರಳವಾದ ಉಪಕರಣಗಳೂ ಆಲಾಪನೆಯೂ ಪರಸ್ಪರವಿರುವ ಶ್ರುತಿಚರ್ಚೆ.

## ಪ್ರಕ್ರಿಯೆ

- ವ್ಯತ್ಯಸ್ಥ ಶ್ರುತಿ ವಾದ್ಯಗಳನ್ನು ಪರಿಚಯಪಡುವುದು. (ಐ.ಸಿ.ಟಿ. ಸಾಧ್ಯತೆಗಳನ್ನು ಉಪಯೋಗಿಸಬಹುದು.)
- ಶ್ರುತಿ ಉಪಯೋಗಿಸಿಕೊಂಡಿರುವ ಆಲಾಪನೆ
- ಶ್ರುತಿಯ ಪ್ರಾಧಾನ್ಯವನ್ನು ತಿಳಿಯುವುದು.
- ಆಲಾಪನೆ – ಪರಸ್ಪರ ಮೌಲ್ಯಮಾಪನ – ಉತ್ತಮಗೊಳಿಸುವುದು.
- ವ್ಯತ್ಯಸ್ತ ವಾದ್ಯೋಪಕರಣಗಳ ಪರಿಚಯಪಡುವುದು.
- ಸರಳವಾದ್ಯೋಪಕರಣ ಪ್ರಯೋಗ ಪರಿಶೀಲನೆ
- ಸರಳ ವಾದ್ಯೋಪಕರಣಗಳ ಉಪಯೋಗದೊಂದಿಗಿನ ಆಲಾಪನೆ

## ಮೌಲ್ಯನಿರ್ಣಯ

- ಶ್ರುತಿ ಉಪಕರಣಗಳನ್ನು ತಿಳಿಯುವುದು.
- ಶ್ರುತಿ ಸೇರಿಸಿ ಆಲಾಪನೆ
- ವಾದ್ಯೋಪಕರಣಗಳ ಆಲಾಪನೆ
- ಸರಳವಾದ ಉಪಕರಣಗಳ ಪ್ರಯೋಗ ವೈಶಿಷ್ಟ್ಯತೆ
- ಆಲಾಪನೆಯನ್ನು ಮೌಲ್ಯಮಾಪನ ಮಾಡುವುದು.
- ಸಂಗೀತದ ಕುರಿತು ಇರುವ ತಿಳುವಳಿಕೆಯನ್ನು ಮೌಲ್ಯಮಾಪನ ಮಾಡುವುದು.

## ಒಳಪುಟಗಳಲ್ಲಿ

ಶ್ರುತಿಯ ಕುರಿತು ತಿಳಿಯುವುದಕ್ಕೂ ಶ್ರುತಿ ಉಪಕರಣವನ್ನು ಪರಿಚಯಪಡುವುದಕ್ಕೂ ಈ ಯೂನಿಟ್ ಪ್ರೋತ್ಸಾಹವನ್ನು ನೀಡುತ್ತದೆ. ಶ್ರುತಿಯ ವೈವಿಧ್ಯತೆಯನ್ನು ತಿಳಿಯುವುದಕ್ಕಾಗಿ ಹಲವು ಚಟುವಟಿಕೆಗಳನ್ನು ಒಳಪಡಿಸಲಾಗಿದೆ. ಶ್ರುತಿ ಉಪಕರಣಗಳ ಚಿತ್ರಸಹಿತವಾದ ಆಡಿಯೋ ಸಹಾಯದಿಂದ ಅವುಗಳನ್ನು ಪರಿಚಯಪಡಿಸುವುದು. ವಾದ್ಯೋಪಕರಣಗಳನ್ನು ಆಲಾಪನೆಯೊಂದಿಗೆ ಯೋಗ್ಯವಾದ ರೀತಿಯಲ್ಲಿ ವಾದನವನ್ನು ನಡೆಸುವಾಗ ಉಂಟಾಗುವ ಸಂಗೀತ ಪ್ರದರ್ಶನದ ಸಮಗ್ರತೆಯೂ ಸಮೃದ್ಧಿಯೂ ಇಲ್ಲಿ ಪ್ರದರ್ಶಿಸಲಾಗಿದೆ.

## ಕಲಿಕಾ ಚಟುವಟಿಕೆಗಳು

### *ಚಟುವಟಿಕೆ – 1*

- ಶ್ರುತಿ ಉಪಕರಣಗಳ ಸಹಾಯವಿಲ್ಲದೆ ಅಧ್ಯಾಪಕರು ಒಂದು ಹಾಡನ್ನು ಹಾಡುತ್ತಾರೆ.
- ಶ್ರುತಿಪೆಟ್ಟಿಗೆ/ತಂಬುರು ಇವುಗಳ ಶಬ್ದ ರೆಕಾರ್ಡ್ ಮಾಡಿ ಸಿ.ಡಿ. ಉಪಯೋಗಿಸಿ ಶ್ರುತಿ ಕ್ಲಾಸಿನಲ್ಲಿ ಕೇಳಿಸುತ್ತಿರುವುದು. ಕೇಳುತ್ತಿರುವ ಶ್ರುತಿಯೊಂದಿಗೆ ಸೇರಿ ಅದೇ ಹಾಡನ್ನು ಅಧ್ಯಾಪಕರು ಹಾಡುವುದು.
- ಮಕ್ಕಳಿಗೆ ಎರಡು ಆಲಾಪನೆಯೂ ಹೇಳಿಕೊಡುವುದು.

- ಮಕ್ಕಳು ವ್ಯಕ್ತಿಗತವಾಗಿ ಪ್ರತಿಕ್ರಿಯಿಸುತ್ತಾರೆ.

  ***ಎರಡನೆಯ ಆಲಾಪನೆಯಾಗಿದೆ ಶ್ರುತಿ ಸೇರಿದ್ದೂ ಮನೋಹರವಾಗಿದ್ದು ಇಂಪಾಗಿರುವುದು.***

- ಶ್ರುತಿವಾದ್ಯಗಳನ್ನು ಪರಿಚಯಪಡಿಸೋಣ. ಪರಿಚಿತವಾದ ಶ್ರುತಿವಾದ್ಯಗಳನ್ನು ಅಧ್ಯಾಪಕರು BB ಯಲ್ಲಿ ಲಿಸ್ಟ್ ಮಾಡುವುದು.
  - ತಂಬುರು
  - ಶ್ರುತಿಪೆಟ್ಟಿಗೆ
  - ಹಾರ್ಮೋನಿಯಂ
- ಇವುಗಳ ಚಿತ್ರಗಳನ್ನು ತೋರಿಸುವುದು.
- ಚಟುವಟಿಕಾ ರೀತಿಯೂ ಶಬ್ದವನ್ನು ಕೇಳಿಸುವುದು. (ಐ.ಸಿ.ಟಿ.ಸಾಧ್ಯತೆ)
- ಎಲ್ಲಾ ಮಕ್ಕಳಿಗೂ ಹಾಡಲು ಸಾಧ್ಯವಾಗುವ ರೀತಿಯಲ್ಲಿ ಒಂದು ಹಾಡು ಕಲಿಸುವುದು. ಲಘುಸಂಗೀತವಾಗಿಸಬಹುದು.
- ಸಾಲುಗಳು ಬಿ.ಬಿ.ಯಲ್ಲಿ ಬರೆಯುವುದು.

  ***ಮುನಿಸುತರವೇ***
  ***ಮುಗು ದೇ***
  ***ಹಿತವಾಗಿ ನಗಲೂ ಬಾರದೆ***

- ಭಾವ ತಲಕ್ಕೆ ಒತ್ತು ನೀಡಿ ಹಾಡುವುದಕ್ಕಾಗಿ ಕೆಲವು ವಾಕ್ಯಗಳಲ್ಲಿ ಸಾಲುಗಳ ಆಶಯ ವಿವರಿಸುವುದು.
- ಅಧ್ಯಾಪಿಕ ಹಾಡಿ ಕೇಳಿಸುವುದು – ಶ್ರುತಿಯ ಒಡಂಬಡಿಕೆಯೊಂದಿಗೆ.
- ನಂತರ ಶ್ರುತಿಯನ್ನು ಸೇರಿಸಿ ಪ್ರತಿಯೊಂದು ಸಾಲು ಹಾಡಿಕೊಡುವುದು.
- ಮಕ್ಕಳು ಒಟ್ಟಾಗಿ ಹಾಡುವುದು.
- ನಾಲ್ಕೋ ಐದೋ ಮಕ್ಕಳನ್ನು (ಹಾಡಲು ಉತ್ಸಾಹವಿರುವವರು) ಆಯ್ಕೆ ಮಾಡಿ ಗುಂಪಾಗಿ ಆಲಾಪನೆ ಮಾಡಿ ಅವರ ನೇತೃತ್ವದಲ್ಲಿ ಹಾಡಲು ತರಬೇತಿ ನೀಡುವುದು.
- ಪ್ರತಿಯೊಂದು ಗುಂಪು ಮಂಡಿಸುವುದು.
- ಗುಂಪುಚರ್ಚೆ, ತಾಳಚರ್ಚೆ ಇವುಗಳೆಲ್ಲ ಅಧ್ಯಾಪಕನು ಮೌಲ್ಯಮಾಪನ ಮಾಡಬೇಕು.
- ಶ್ರುತಿಯನ್ನು ಉಪಯೋಗಿಸಿರುವ ಆಲಾಪನಾ ಪಟ್ಟಿ. ಆಲಾಪನೆಯಲ್ಲಿನ ಚರ್ಚೆಯನ್ನು ಕುರಿತು ಪ್ರಶ್ನೆಗಳಾಗಬಹುದು.
  - ಶ್ರುತಿಯೊಂದಿಗೆ ಸೇರಿ ಹಾಡುವಾಗ ಆಲಾಪನೆ ಹೆಚ್ಚು ಉತ್ತಮಗೊಳ್ಳುತ್ತಿದೆಯೇ?
  - ಆಸ್ವಾದನಕರವಾಗಿದೆಯೇ?
- ಮಕ್ಕಳ ಪ್ರತಿಕ್ರಿಯೆಗಳನ್ನು ಅಧ್ಯಾಪಕರು ದಾಖಲಿಸುವುದು.
- ಇದೇ ಹಾಡನ್ನು ಗುಂಪುಗಳಾಗಿ ಮಾಡಿ ಶ್ರುತಿಯೊಂದಿಗೆ ಹಾಡಿಸುವುದು.
- ಪ್ರತಿಯೊಂದು ಗುಂಪಿನ ಆಲಾಪನೆ ಬೇರೆ ಗುಂಪುಗಳು ಮೌಲ್ಯಮಾಪನ ಮಾಡುವುದು.
  - ಸರಿಯಾಗಿ ಶ್ರುತಿಯಲ್ಲಿ ಹಾಡಲಾಗಿದೆಯೇ?
  - ಎಲ್ಲಾ ಸದಸ್ಯರು ಶ್ರುತಿ ಸೇರಿ ಹಾಡಿದರೇ?
  - ಆಲಾಪನೆಗೆ ಹಿರಿಮೆ ಉಂಟಾಗಿತ್ತೇ?

***ಚಟುವಟಿಕೆ – 2***

- ಮೊದಲು ನಿರ್ಮಿಸಿದ ಪರಿಚಿತವಾದ ಆದ ಸರಳವಾದ್ಯೋಪಕರಣಗಳನ್ನು ಉಪಯೋಗಿಸಿ ಆಲಾಪನೆ.
- ಶ್ರುತಿ ಸೇರಿ ಹಾಡಿ ಕಲಿತ ಗಾನವನ್ನು ಸರಳ ವಾದ್ಯೋಪಕರಣಗಳ ಸಹಾಯಯೊಂದಿಗೆ ಆಲಾಪಿಸುವುದು.
- ಸರಳವಾದ ವಾದ್ಯೋಪಕರಣಗಳು : ಕೈಮಣಿ, ಕಂಪಾಸ್, ಮೊದಲು ಕ್ಲಾಸ್‌ರೂಂನಲ್ಲಿ ನಿರ್ಮಿಸಿದ ವಾದ್ಯೋಪಕರಣಗಳು.
- ಸಿ.ಡಿ.ಗಳು ಲಭ್ಯವಾದರೆ ಇನ್ನಿತರ ಸರಳ ವಾದ್ಯೋಪಕರಣಗಳ ಚಿತ್ರಗಳನ್ನು ತೋರಿಸಿ ಪರಿಚಯಪಡಿಸುವುದು.

***ವಾದ್ಯೋಪಕರಣಗಳನ್ನು ಉಪಯೋಗಿಸುವಾಗ ಗಮನಿಸಬೇಕಾದ ಅಂಶಗಳು***

- ಹಾಡನ್ನು ತಾಳ ಸೇರಿಸಿ ಹಾಡುವುದು.
- ಆಲಾಪನೆ ವ್ಯಕ್ತವಾಗಿ ಕೇಳುವ ರೀತಿಯಲ್ಲಿ ವಾದ್ಯದ ಶಬ್ದ ನಿಯಂತ್ರಿಸಿರುವ ವಾದನ.
- ಮಕ್ಕಳನ್ನು ಎರಡು ಗುಂಪುಗಳಾಗಿ ಮಾಡಿ ತರಬೇತಿಗೆ ತಯಾರಾಗುವುದು.
- ಆಲಾಪನಾ ಗುಂಪು/ವಾದ್ಯೋಪಕರಣಗಳ ಗುಂಪು
- ಇವರಿಗೆ ತರಬೇತಿಗೆ ಸಮಯವನ್ನು ನೀಡುವುದು.
- ತರಬೇತಿಯ ಹಂತದಲ್ಲಿ ಅಧ್ಯಾಪಕರ ಭಾಗವಹಿಸುವಿಕೆ – ಸಹಾಯ ನೀಡುವುದು.
- ಅಧ್ಯಾಪಕರು ಭಾಗವಹಿಸಬೇಕಾದ ಸಂದರ್ಭಗಳು.
  - ರಾಗಕ್ಕೆ ಬದಲಾವಣೆ ಸಂಭವಿಸುವಾಗ
  - ತಾಳಚ್ಯುತಿ ಉಂಟಾಗುವಾಗ
  - ಶ್ರುತಿಚ್ಯುತಿ ಉಂಟಾಗುವಾಗ
  - ಉಪಕರಣಗಳನ್ನು ನಿರ್ವಹಿಸುವಾಗ
- ತರಬೇತಿ ಪಡೆದ ಹಾಡುಗಳು – ಮಂಡನೆ, ಅಧ್ಯಾಪಕರ ಮೌಲ್ಯಮಾಪನ, ಒಟ್ಟಿಗೆ ಮಕ್ಕಳು ಸ್ವಯಂ ಮೌಲ್ಯಮಾಪನ ಮಾಡುವುದು.

## ಮೌಲ್ಯಮಾಪನ

- ಶ್ರುತಿ ತಿಳಿಯುವುದು.
- ಶ್ರುತಿ ಸೇರಿಸಿಕೊಂಡಿರುವ ಆಲಾಪನೆ
- ವಾದ್ಯದೊಂದಿಗಿರುವ ಆಲಾಪನೆ
- ಶ್ರುತಿ ಏಕೀಕರಣ

## ಕ್ರೋಢೀಕರಣ

ಶ್ರುತಿ ಸೇರಿಸಿ ಹಾಡುವಾಗ ಯಾವುದೇ ಆಲಾಪನೆಯು ಪೂರ್ಣತೆಯನ್ನು ಪಡೆಯುವುದು. ಹಿನ್ನಲೆ ಸಂಗೀತವಿಲ್ಲದಿದ್ದರೂ ಕೂಡ ಶ್ರುತಿ ಸೇರಿ ಸೇರಿಸುವ ವಾದ್ಯೋಪಕರಣಗಳು ಸೇರಿಸಲ್ಪಡುವಾಗ ಆಲಾಪನೆಯು ಉತ್ತಮವಾಗಿ ಪ್ರದರ್ಶನವಾಗುವುದು.

## ಯೂನಿಟ್ – 3

### ಮುನ್ನುಡಿ

ನಾಡಿನ ಸಂಗೀತ ಸಂಸ್ಕೃತಿಯ ಉತ್ತಮ ದೃಷ್ಟಾಂತವಾಗಿದೆ ಜಾನಪದ ಹಾಡುಗಳು. ನಾಡು ಹಾಗೂ ನಾಡಿನ ಜನರೂ ಉತ್ಸವವೂ ಅನುಭವವೂ ಹಾಡಿನ ರೂಪದಲ್ಲಿ ಹಿಂದಿನ ತಲೆಮಾರಿಗೆ ಬಾಯ್ತಾಳ ಕಲಿಸಿದ್ದ ಕಾಲ ಹೋಗಿ ಪೂರ್ವಜರು ನಮಗಾಗಿ ಹಾಡಿನ ಸಂಸ್ಕೃತಿಯ ದೊಡ್ಡ ಸಂಗ್ರಹಣೆಯಾಗಿದೆ ತೆರೆದುಕೊಟ್ಟಿರುವುದು. ರಾಗದ ಸರಳತೆಯಲ್ಲೂ ತಾಳದ ಮನೋಹರತೆಯಲ್ಲೂ ಒಟ್ಟಾಗಿ ಸೇರಿ ಸೃಷ್ಟಿಸಲ್ಪಡುವ ಭಾವತಲವು ವಿಶಿಷ್ಟವಾಗಿದೆ. ವೈವಿಧ್ಯಗಳ ಆಗರವಾಗಿದೆ ಜಾನಪದ ಹಾಡುಗಳು. ಆಶಯ ವೈವಿಧ್ಯ, ಉಪಕರಣ ವೈವಿಧ್ಯ, ತಾಳವೈವಿಧ್ಯ ಇವುಗಳೆಲ್ಲಾ ಧಾರಾಳವಾಗಿ ಈ ಹಾಡಿನ ಶಾಖೆಯಲ್ಲಿದೆ. ಮನೋಹರವಾದ ಬಾಯಿತಾಳಗಳನ್ನು ಸೇರಿಸಿ ಆಲಾಪನೆಗೆ ಹೆಚ್ಚು ಇಂಪನ್ನು ನೀಡಿ ಈ ಹಾಡಿನ ಸರಮಾಲೆಗಳಿಗೆ ನಮ್ಮ ಮುಂದೆ ಕೆಲವು ಅನುಭವಗಳ /ಆಚಾರಗಳ/ಉತ್ಸವಗಳ ಲೋಕಕ್ಕೆ ನಮ್ಮನ್ನು ಕರೆದುಕೊಂಡು ಹೋಗುವುದು. ಜಾನಪದ ಹಾಡಿನ ವೈವಿಧ್ಯತೆಯನ್ನು ತಿಳಿಯುವುದಕ್ಕಿರುವ ಉಪಾಧಿಯಾಗಿದೆ ಈ ಪಾಠಭಾಗದ ಗುರಿ.

### ಕಲಿಕಾ ಸಾಧನೆ

ವಿಭಿನ್ನವಾದ ಜಾನಪದ ಹಾಡುಗಳೂ ಬಾಯಿತಾಳಗಳೂ ತನ್ಮಯತೆಯೊಂದಿಗೆ ಹಾಡುವುದು.

### ಆಶಯ, ತಿಳುವಳಿಕೆ

- ಭಿನ್ನ ತಾಳದಲ್ಲೂ ಭಾವದಲ್ಲೂ ಇರುವ ಜಾನಪದ ಹಾಡುಗಳು.
- ಜಾನಪದ ಹಾಡುಗಳಿಗೆ ತನ್ನದಾದ ಒಂದು ಆಲಾಪನಾ ಶೈಲಿಯಿದೆ.
- ಪ್ರತಿಯೊಂದು ಪ್ರದೇಶದ ಜನರಿಗೂ ಅವರವರದಾದ ಜಾನಪದ ಹಾಡುಗಳಿವೆ.
- ತಾಳಜ್ಞಾನ ಉಂಟಾಗಲು ಬಾಯಿತಾಳಗಳು ಸಹಾಯವಾಗುವುದು.
- ಪ್ರಾದೇಶಿಕ ಸಂಗೀತದ ತಿರುಳಲ್ಲಿರುವ ಆಲಾಪನೆ

### ಪ್ರಕ್ರಿಯೆ

- ವಿಭಿನ್ನವಾದ ಜಾನಪದ ಹಾಡುಗಳ ಮಂಡನೆ
- ಜಾನಪದ ಹಾಡುಗಳ ಸಂಗ್ರಹಣೆ, ಬೇರ್ಪಡಿಸುವಿಕೆ (ಪ್ರದೇಶ, ಉದ್ಯೋಗ)
- ಸಂಗ್ರಹಿಸಿದ ಹಾಡನ್ನು ಗುಂಪಾಗಿ ಆಲಾಪಿಸುವುದು.
- ಹಾಡಿನೊಂದಿಗೆ ಬಾಯಿತಾಳನ್ನು ಸೇರಿಸಿ ಹಾಡುವುದು.
- ಜಾನಪದ ಹಾಡಿನ ಕುರಿತು ಇರುವ ಚರ್ಚೆ.

### ಮೌಲ್ಯಮಾಪನ

- ಮಂಡನೆಯನ್ನು ಹಾಗೂ ಸಂಗ್ರಹಣೆಯನ್ನು ಮೌಲ್ಯಮಾಪನ ಮಾಡುವುದು.
- (ಮಕ್ಕಳು ಡೈರಿಯಲ್ಲಿ ಬರೆದ ಜಾನಪದ ಹಾಡುಗಳೂ ಬಾಯಿತಾಳಗಳೂ ಪರಿಶೋಧಿಸಲ್ಪಡುವುದು)
- ನೈಪುಣ್ಯಗಳನ್ನು ಮೌಲ್ಯಮಾಪನ ಮಾಡಲು ಕ್ವಿಜ್ ಏರ್ಪಡಿಸುವುದು.

## ಒಳಪುಟಗಳಲ್ಲಿ

ಜಾನಪದ ಹಾಡಿನ ರಾಗ, ತಾಳ, ವೈವಿಧ್ಯ, ಹಾಡಿನ ಶೈಲಿ, ಪ್ರಾದೇಶಿಕವಾದ ಜಾನಪದ ಹಾಡುಗಳು ಎಂಬಿವುಗಳು ಈ ಯೂನಿಟಿನಲ್ಲಿ ವಿವರಿಸಲಾಗಿದೆ. ತಾಳಜ್ಞಾನವು, ಗುಂಪು ಹಾಡಿನ ಜ್ಞಾನ ಉಂಟಾಗಲು ಹಲವು ರೀತಿಯ ಬಾಯಿತಾಳಗಳು ಈ ಪಾಠಭಾಗದಲ್ಲಿ ಒಳಗೊಳ್ಳಿಸಲಾಗಿದೆ.

## ಕಲಿಕಾ ಚಟುವಟಿಕೆಗಳು

### *ಚಟುವಟಿಕೆ – 1*

- ಕಥಾವಿವರಣೆ

  *ಹೆಣ್ಣಿಗೆ ತವರು ಮನೆ ಎಂಬುದು ಸ್ವರ್ಗವಿದ್ದ ಹಾಗೆ.*
  *ಅಣ್ಣ, ಅಮ್ಮ ಅವಳ ಪಾಲಿನ ದೇವರು.*
  *ಆ ಮನೆಗೆ ಹೋಗುವುದೇ ಆ ಮನೆಯ ಕುರಿತು*
  *ಚಿಂತಿಸುವುದೇ ಅವಳ ಬಾಳಿಗೆ ಉತ್ಕೃಷ್ಟ*

- ಈ ಕಥಾಸಂದರ್ಭ ಪ್ರತಿಫಲಿಸುವ ಒಂದು ಜಾನಪದ ಹಾಡುಗಳನ್ನು ಮಂಡಿಸಲು ಸೂಚಿಸುವುದು.

  *ಭಾಗ್ಯಾದ ಬಳೆಗಾರ*
  *ಹೋಗಿ ಬಾ ನನ್ ತವರೀಗೆ*

- ರಾಗದಲ್ಲಿ ಸಾಧಾರಣ ಜನರ ಜೀವನಾನುಭವಗಳನ್ನು ಮೂಲವಿಷಯವಾಗಿರುವ ಮೂರು ಹಾಡುಗಳನ್ನು ಆಯ್ಕೆಮಾಡುವುದು.

  ಉದಾ:

  *ಕುದುರೇನ ತಂದೀವ್ನಿ*
  *ಜೀನವ ಬಿಟ್ಟೀವ್ನಿ*
  *ಬರಬೇಕು ತಂಗಿ ಮದುವೇಗೆ*
  *ತವರೂರ ಮನೆ ನೋಡ ಬಂದೆ*
  *ಆಷಾಢ ಮಾಸ ಬಂದೀತವ್ವ*
  *ಅಣ್ಣ ಬರಲಿಲ್ಲ ಕರಿಯಾಕ*

  (ಅಧ್ಯಾಪಕರಿಗೆ ಯುಕ್ತವಾಗಿ ಅನಿಸುವ ಯಾವುದೇ ಜಾನಪದ ಹಾಡನ್ನು ಚಾರ್ಟಿನಲ್ಲಿ ಬರೆದು ಪ್ರದರ್ಶಿಸುವುದು)

- ಇವುಗಳನ್ನು ಹಾಡುವುದಕ್ಕಿರುವ ಅವಕಾಶವನ್ನು ಉಂಟುಮಾಡುವುದು.
- ತಿಳಿಯದ ಹಾಡುಗಳನ್ನು ಕಲಿಯುವುದು.
- ಹಾಡಿದ ಹಾಡುಗಳ ಆಶಯ ಪ್ರಕಟಣೆ
- ರಾಗದ ಕುರಿತು ಇರುವ ಚರ್ಚೆ, ಆಲಾಪನೆ

### *ಚಟುವಟಿಕೆ –2*

- ಕೃಷಿ, ವಿನೋದ, ಉತ್ಸವ, ಆಚಾರ ಎಂಬಿವುಗಳಿಗೆ ಹೀಗೆ ಹೆಸರು ನೀಡಿ ಮಕ್ಕಳನ್ನು ನಾಲ್ಕು ಗುಂಪುಗಳಾಗಿ ಮಾಡುವುದು. ಕೃಷಿ, ವಿನೋದ, ಉತ್ಸವ, ಆಚಾರ ಎಂದು ಹೀಗೆ ಕ್ರಮವಾಗಿ ಬೋರ್ಡಿನಲ್ಲಿ ಗುರುತಿಸುವುದು. ಮಕ್ಕಳು ಒಬ್ಬೊಬ್ಬರಾಗಿ ಒಂದು ಎಂಬಂತೆ ಕ್ರಮದಲ್ಲಿ ಓದುವುದು. ಓದಿದ ಮಾತಿನ ಆಧಾರದಲ್ಲಿ ಮಕ್ಕಳನ್ನು ಗುಂಪುಗಳಾಗಿಸುವುದು. ಪ್ರತಿಯೊಂದು ಗುಂಪಿಗೂ ಅವರಿಗೆ ಸಿಕ್ಕಿದ ಹೆಸರಿನ ಆಧಾರದಲ್ಲಿ ಅದಕ್ಕೆ ಸಂಬಂಧಪಟ್ಟ ಜಾನಪದ ಹಾಡುಗಳನ್ನು ಸಂಗ್ರಹಿಸಲು ಹಾಗೂ ಆಯ್ಕೆ ಮಾಡಿದ ಕೆಲವನ್ನು ಆಲಾಪಿಸಲು ಸೂಚಿಸುವುದು.

- ಗುಂಪುಗಳನ್ನು ಕಂಡುಹಿಡಿದ ಹಾಡುಗಳನ್ನು ಗುಂಪಿನ ನಾಯಕರು ಕ್ರೋಡೀಕರಿಸುವುದು, ಮಂಡಿಸುವುದು.
- ಸಂಗ್ರಹಿಸಿದ ಜಾನಪದ ಹಾಡುಗಳಲ್ಲಿ ತಾಳವೈವಿಧ್ಯವೂ ರಾಗವೈವಿಧ್ಯವೂ ನೀಡುವ ಯಾವುದಾದರೂ ಹಾಡುಗಳ ನಾಲ್ಕು ಸಾಲುಗಳಂತೆ ಮಂಡಿಸುವುದು.
- ಪ್ರತಿಯೊಂದು ಗುಂಪಿನ ಮಂಡನೆಯನ್ನು ಇನ್ನಿತರ ಗುಂಪೂ ಅಧ್ಯಾಪಕರು ಮೌಲ್ಯಮಾಪನ ಮಾಡುವುದು.
- ಚರಿತ್ರೆ, ತಾಳ, ಅವುಗಳಲ್ಲಿನ ರಾಗ ಎಂಬಿವುಗಳ ಕುರಿತು ಸರಳವಾದ ವಾಕ್ಯಗಳನ್ನು ಉಪಯೋಸುವುದು.
    - ಜಾನಪದ ಹಾಡುಗಳ ಉಗಮಕ್ಕೆ ಕಾರಣ?
    - ಜಾನಪದ ಹಾಡುಗಳ ಸವಿಶೇಷತೆಯೇನು?
    - ರಾಗಗಳಲ್ಲಿ ಸರಳತೆಯನ್ನು ಹೆಚ್ಚು ಅನುಭವಿಸಬಹುದೇ?
    - ಸ್ವಂತ ಪ್ರದೇಶದಲ್ಲಿ ಹಾಡಿ ಕೇಳಿದ ಜಾನಪದ ಹಾಡುಗಳಿವೆಯೇ?
    - ಜನಪದ ಹಾಡುಗಳ ಹಿನ್ನೆಲೆಯೇನು ?
    - ತಾಳವೈವಿಧ್ಯಗಳಿವೆಯೇ?
    - ಸಂಗೀತ ಪರವಾದ ಸಂಕೀರ್ಣತೆಗಳಿವೆಯೇ?
- ಉತ್ತರಗಳು ವೈಯಕ್ತಿಕವಾಗಿ ಮಕ್ಕಳು ಮಂಡಿಸುವುದು. ಮಕ್ಕಳ ಪ್ರತಿಕ್ರಿಯೆ ಒಳಗೊಳ್ಳಿಸಿ ವಿವರಿಸುವುದು.
    - ಬಾಯಿಯಿಂದ ಬಾಯಿಗೆ ಹೇಳಿ ಬಂದದ್ದು ಜನಪದ ಹಾಡುಗಳು.
    - ಜನರ ಹಾಡುಗಳಾಗಿವೆ/ಜಾನಪದ ಆಗಿದೆ, ಸರಳತೆಯನ್ನು ಹೊಂದಿದವುಗಳಾಗಿವೆ.
    - ಸಾಧಾರಣ ಜನತೆಯ ಅನುಭವಗಳಾಗಿವೆ ಹಾಡಿನ ಮೂಲತತ್ವ.
    - ಜಾನಪದ ಹಾಡನ್ನು ಸ್ವಾಗತಿಸಿ ತನ್ನದಾಗಿಸಿದ ಜಾನಪದ ವಾದ್ಯೋಪಕರಣಗಳು ಹಲವು.
    - ಪ್ರತಿಯೊಂದು ಜನವಿಭಾಗಕ್ಕೂ ಅವರದ್ದೇ ಆದ ಸಾಂಪ್ರಾದಾಯಿಕ ಜಾನಪದ ಅಭ್ಯಾಸಗಳು/ಹಾಡುಗಳು ಇವೆ.
    - ರಾಗಗಳಿಗೂ ತಾಳಗಳಿಗೂ ಸರಳತೆಯು ಮನೋಹರವೂ ಭಾವಾತ್ಮಕತೆಯೂ ಹೆಚ್ಚು ಆಸ್ವಾದಕರವಾಗಿಸುತ್ತದೆ.
    - ಯಾರೊಬ್ಬರಿಗೂ ಅನುಕರಿಸಲು, ಆಲಾಪಿಸಲು ಸಾಧ್ಯವಾಗುತ್ತದೆ.
    - ನಾಡಿನ ತಿರುಳು/ಸಂಸ್ಕಾರವು ಹಲವು ಹಾಡಿನ ಮೂಲಕ ತಿಳಿಯಲು ಸಾಧ್ಯವಾಗುವುದು.
- ಹೊಸ ಕೆಲವು ಜಾನಪದ ಹಾಡುಗಳನ್ನು ಕಂಡುಹಿಡಿಯಬೇಕು. (ಪಾಠಪುಸ್ತಕದಲ್ಲಿರಬಹುದು, ನಾಡಿನಲ್ಲಿ ಪ್ರಚಾರದಲ್ಲಿರಬಹುದು)
- ಅವುಗಳನ್ನು ಗುಂಪಾಗಿಯೋ ವ್ಯಕ್ತಿಗತವಾಗಿಯೋ ಆಲಾಪಿಸುವುದು.
- ಈ ಹಾಡುಗಳಿಗೆ ಉಚಿತವಾದ ಬಾಯಿತಾಳಗಳನ್ನು ಸೇರಿಸುವುದು.

*ಸುಗ್ಗಿ ಕಾಲ ಹಿಗ್ಗಿ ಬಂದಿತೋ*

*ನಮ್ಮ ನಾಡಿಗೆಲ್ಲ ಭಾಗ್ಯ ತಂದಿತೋ*

*ಜಕ್ಕಣಕ್ಕ ಣಕ್ಕಜಕ್ಕ ಜಕ್ಕಣಕ್ಕಣ್ಣ*

*ಜಕ್ಕಣಕ್ಕ ಣಕ್ಕಜಕ್ಕ ಜಕ್ಕಣಕ್ಕಣ್ಣ*

- ಪ್ರತಿಯೊಂದು ನಾಡಿನ ತಿರುಳು ಸಂಸ್ಕಾರವೂ ಪ್ರತಿಫಲಿಸುವ ಜಾನಪದ ಹಾಡುಗಳ ಸಂಗ್ರಹಣಾ ಮಂಡನೆಗಳನ್ನು ತಯಾರಿಸಲು ಸೂಚನೆ ನೀಡುವುದು.

## ಮೌಲ್ಯಮಾಪನ

- ಹಾಡುಗಳನ್ನು ಕಂಡುಹಿಡಿಯುವುದು
- ಹಾಡುವುದು
- ಬಾಯಿತಾಳಗಳೊಂದಿಗಿನ ಹಾಡುಗಳು
- ತಾಳಜ್ಞಾನ
- ತಿರುಳು
- ಸಂದರ್ಭೋಚಿತವಾದ ಹಾಡುಗಳನ್ನು ಆಯ್ಕೆ ಮಾಡುವುದು.

## ಕ್ರೋಢೀಕರಣ

ಬಾಯಿತಾಳಗಳನ್ನು ತಮ್ಮಲ್ಲಿಗೆ ಪರಂಪರೆಯಾಗಿ ಬಂದ ಇಂತಹ ಹಾಡುಗಳ ಮೂಲಕ ಕಾಲಘಟ್ಟದಲ್ಲಿನ ಜನಗಳೊಂದಿಗೆ ಜೀವನಶೈಲಿಯನ್ನು ಕುರಿತು ಅನುಭವಗಳನ್ನು ಕುರಿತು ಒಂದು ನೇರಚಿತ್ರವನ್ನು ತಿಳಿಸಲಾಗುವುದು. ರಾಗಗಳು ಸರಳತೆಯುಳ್ಳ ಬಾಯಿತಾಳಗಳಾದರೂ ಭಾವಗಳು ತೀವ್ರತರದವುಗಳಾಗಿವೆ.

# ಯೂನಿಟ್ – 4

## ಮುನ್ನುಡಿ

ಭಾಷೆಗೆ ಅತೀತವಾಗಿದೆ ಸಂಗೀತಾಸ್ವಾದನೆ. ಭಾಷೆ ತಿಳಿಯದೇ ರಾಗದಲ್ಲಿ ಮಾಧುರ್ಯ ಮಾತ್ರ ಕೇಳಿ ಅನ್ಯಭಾಷಾ ಹಾಡುಗಳನ್ನು ಆಸ್ವಾದಿಸುವುದುಂಟು. ಆದರೂ ಅರ್ಥತಲವನ್ನು ತಿಳಿದುಕೊಂಡು ಆಸ್ವಾದನೆಯ ಶ್ರೇಷ್ಠತೆಯನ್ನು ತಿಳಿಯುವುದು ಬೇರೆಯಾಗಿದೆ. ದೇಶಭಕ್ತಿಗೀತೆಗಳಿಗೆ ಭಾರತೀಯ ಸಂಗೀತ ಚರಿತ್ರೆಯಲ್ಲಿ ಎಂದೂ ಪ್ರಮುಖವಾದ ಸ್ಥಾನವಿದೆ. ಎಲ್ಲಾ ಭಾಷೆಯಲ್ಲೂ ಶ್ರೇಷ್ಠವಾದ ಧಾರಾಳ ದೇಶಭಕ್ತಿ ಗೀತೆಗಳು ಸೃಷ್ಟಿಸಲ್ಪಟ್ಟಿದ್ದು ಅವುಗಳೆಲ್ಲ ಕಾಲ, ದೇಶ ವ್ಯತ್ಯಾಸವಿಲ್ಲದೆ ಪ್ರಚಾರವನ್ನು ಸೃಷ್ಟಿಸಿರುತ್ತದೆ. ದೇಶಭಕ್ತಿ ತುಂಬಿರುವ ರಾಗಗಳಿಂದ ಅರ್ಥಪೂರ್ಣವಾದ ಸಾಲುಗಳಿಂದ ಸಮೃದ್ಧವಾಗಿವೆ ಈ ಹಾಡುಗಳು. ದೇಶದ ಅಮೂಲ್ಯ ಸಂಪತ್ತಿಗಾಗಿ ದೇಶಭಕ್ತಿಗೀತೆಗಳನ್ನು ಕ್ಲಾಸ್ ರೂಮಿನಲ್ಲಿ ಪರಿಚಯಪಡಿಸುವುದು ಅದರ ಮೂಲಕ ದೇಶಭಕ್ತಿಗೀತೆಗಳ ಪ್ರಾಧಾನ್ಯವನ್ನು ತಿಳಿಯುವಂತೆ ಮಾಡುವುದೂ ರಾಗಗಳನ್ನು ಪರಂಪರೆಯ ಘಟಕವಾಗಿಸುತ್ತದೆ.

## ಕಲಿಕಾ ಸಾಧನೆಗಳು

ವಿವಿಧ ಭಾಷೆಗಳಲ್ಲಿರುವ ದೇಶಭಕ್ತಿಗೀತೆಗಳನ್ನು ಆಲಾಪಿಸುವುದು. ಅವುಗಳನ್ನು ಹಾಡುವುದು.

## ಆಶಯ, ತಿಳುವಳಿಕೆ

- ವಿವಿಧ ಭಾಷೆಗಳಲ್ಲಿ ದೇಶಭಕ್ತಿಗಳಿವೆ.
- ಆಶಯಕ್ಕೆ ಅನುಗುಣವಾಗಿ ರಾಗ – ತಾಳ ವೈವಿಧ್ಯತೆ.
- ವಿವಿಧ ಭಾಷೆಯ ಹಾಡುಗಳ ಸಂಗ್ರಹ

## ಪ್ರಕ್ರಿಯೆ

- ದೇಶಭಕ್ತಿಗಳ ಹಾಡುಗಳ ಮಂಡನೆ
- ಹಾಡಿನ ತಾಳ, ರಾಗವನ್ನು ಬದಲಾಯಿಸಿ ಮಂಡನೆ.
- ಕಲಿತ ವಿವಿಧ ಭಾಷಾ ಹಾಡುಗಳನ್ನು ಸಂಗ್ರಹಿಸಿ ಭಾವಾತ್ಮಕವಾಗಿ ಆಲಾಪಿಸುವುದು.

## ಮೌಲ್ಯನಿರ್ಣಯ

- ಆಲಾಪನೆ
- ರಾಗವನ್ನು ಮೌಲ್ಯಮಾಪನ ಮಾಡುವುದು. ರಾಗ ನೀಡುವುದಕ್ಕೆ ಮೌಲ್ಯಮಾಪನ ಮಾಡುವುದು.
- ಚರ್ಚೆಯಲ್ಲಿ ಭಾಗವಹಿಸುವಿಕೆ

## ಒಳಪುಟಗಳಲ್ಲಿ

ವಿವಿಧ ಭಾಷಾ ದೇಶಭಕ್ತಿ ಹಾಡುಗಳು, ಆಶಯ ಒಳಗೊಳ್ಳಿಸಿ ಹಾಡುವುದು ಹೇಗೆ, ಅವಶ್ಯಕತೆಯನ್ನು ತಿಳಿಯುವುದು. ವಿವಿಧ ಭಾಷಾಗಾನಗಳನ್ನು ಉಪಯೋಗಿಸಿಕೊಂಡು ಗೀತಮಾಲೆ ನಿರ್ಮಿಸುವುದು, ಇವುಗಳೆಲ್ಲ ಈ ಯೂನಿಟಿನ ಒಳಪುಟಗಳಲ್ಲಿವೆ. ಪರಿಚಿತವಾದ ಸಾಲುಗಳಿಗೆ ಹೊಸದಾದ ರಾಗ ಕಂಡುಹಿಡಿಯುವುದು, ಹಾಡಿ ಕಲಿತ ಹಾಡುಗಳನ್ನು ಗುಂಪಾಗಿ ಶ್ರುತಿಯನ್ನು ಸೇರಿಸಿ ಹಾಡುವುದು ಎಂಬಿವುಗಳು ಈ ಯೂನಿಟಿನಲ್ಲಿದೆ.

## ಕಲಿಕಾ ಚಟುವಟಿಕೆಗಳು

### *ಚಟುವಟಿಕೆ – 1*

- ಕೆಳಗೆ ನೀಡಿರುವ ಸಾಲುಗಳನ್ನು ಬರೆದ ಚಾರ್ಟನ್ನು ಕ್ಲಾಸಿನಲ್ಲಿ ಪ್ರದರ್ಶಿಸುವುದು.

  *"ನಾನಾಭಾಷಗಳ್ ಅಮ್ಮದಂ ಚೊರಿಯುಂ*
  *ನಾವುಂ ಪುಂಜಿರಿಯುಂ*
  *ನಾನಾದೇಶಕ್ಕಾರುಡೆ ನಾನಾ*
  *ವೇಷತ್ತಿನ್ನೊಳಿಯುಂ"*

- ಪ್ರಶ್ನೆ –
  - ಈ ಸಾಲುಗಳ ಆಶಯ ಏನನ್ನು ಸೂಚಿಸುತ್ತಿದೆ?
  - ಈ ಸಾಲುಗಳು ಯಾವ ಗಾನ ಶಾಖೆಯಲ್ಲಿ ಒಳಪಡಿಸಬಹುದಾಗಿದೆ?
  - ಇದೇ ಆಶಯವನ್ನು ನೀಡುವ ಇನ್ನಿತರ ಸಾಲುಗಳನ್ನು ಕಂಡುಹಿಡಿಯಬಹುದೇ?

    ಉದಾ :

    1. "ಭಾಷಾ ವೇಷ ಜಾತಿಮದಂಗಳ್
       ವಿವಿಧಮೆಂಗಿಲುಂಒಕ್ಕುಲಂ
       ಒರಮ್ಮ ಪೆಟ್ಟವರ್ ನಾಮೆಲ್ಲವರುಂ
       ಒರೊಟ್ಟ ತಂತುವಿನ್ ಮುಕ್ಕುಗಳ್ ನಾಂ"
    2. 'ಹಿಂದ್ ದೇಶ್ ಕೆ ನಿವಾಸಿ
       ಸಬಿಜನ್ ಏಕ್ ಹೋ
       ರಂಗ್ ರೂಪ್ ವೇಷ್ ಭಾಷಾ
       ಚಾಹಿ ಅನೇಕ್ ಹೆ......'

- ವಾಚಿಕವಾಗಿ ಮಕ್ಕಳ ಉತ್ತರಗಳು. ಪ್ರತಿಕ್ರಿಯೆಗಳಿಂದ –
    - ಭಾರತದ ಕುರಿತಿರುವ ಹಾಡುಗಳು.
    - ದೇಶಭಕ್ತಿ ಗೀತೆಯಾಗಿದೆ.
    - ಭಾಷೆಗಳು ವ್ಯತ್ಯಸ್ತವಾದರೆ ನಾವು ಒಂದೇ
- ಮಕ್ಕಳು ಕಂಡುಹಿಡಿದ ಸಮಾನತೆಯಿರುವ ಸಾಲುಗಳನ್ನು ಅವರೇ ಆಲಾಪಿಸುವುದು.
- ದೇಶಭಕ್ತಿ ಹಾಡುಗಳ ಪ್ರಾಮುಖ್ಯತೆ ತಿಳಿಯುವ ಪ್ರಶ್ನೆಗಳನ್ನು ಮಕ್ಕಳೊಂದಿಗೆ ಕೇಳುವುದು.
    - ದೇಶಭಕ್ತಿಗಾನಗಳ ಸಂದೇಶವೇನು?
    - ಇನ್ನಿತರ ಭಾಷೆಗಳಲ್ಲೂ ಇಂತಹ ಹಾಡುಗಳು ಸೃಷ್ಟಿಸಲ್ಪಟ್ಟಿದೆಯೋ?
    - ಇಂತಹ ಗಾನಗಳಿಗೆ ಏನೆಲ್ಲಾ ಪ್ರತ್ಯೇಕತೆಗಳಿವೆ? ಇವುಗಳನ್ನು ಹಾಡಬೇಕಾದ ಅಗತ್ಯವೇನು?
    - ಇಂತಹವುಗಳು ವೈಯಕ್ತಿಕವಾಗಿ ಹೇಳಲು ಅಗತ್ಯಪಡುವುದು. ಗುರುತಿಸಿದವುಗಳನ್ನು ರ್‍ಯಾಂಡಂ ಆಗಿ ಮಂಡಿಸುವುದು.
- ಉತ್ತರಗಳು ವೈಯಕ್ತಿಕವಾಗಿ ಗುರುತಿಸಲು ಹೇಳುವುದು. ಗುರುತಿಸಿದವುಗಳನ್ನು ರ್‍ಯಾಂಡಂ ಆಗಿ ಮಂಡಿಸುವುದು. ಮಕ್ಕಳ ಟಿಪ್ಪಣಿಗಳ ಆಧಾರದಲ್ಲಿ ಇವುಗಳಿಗೆ ಹೆಚ್ಚು ನಿಖರತೆ ನೀಡುವ ವಿವರಣೆ.
    - ದೇಶವನ್ನು ಅದರದಿಂದ, ಭಕ್ತಿಭಾವದಿಂದ ನೋಡಬೇಕು.
    - ಭಾರತೀಯರೆಲ್ಲರೂ ಒಂದು ಎಂಬ ಸಂದೇಶ.
    - ನಮ್ಮ ನಾಡನ್ನು ಸಂರಕ್ಷಿಸಬೇಕಾದ ಅವಶ್ಯಕತೆಯನ್ನು ತಿಳಿಸುವುದು.
    - ವಿವಿಧ ಕಾಲಘಟ್ಟದಲ್ಲಿನ ಪ್ರಾಧಾನ್ಯತೆಯನ್ನು ಅನುಸರಿಸಿ ವಿವಿಧ ಭಾಷೆಗಳಲ್ಲಿ ದೇಶಭಕ್ತಿ ಗೀತೆಗಳು ಸೃಷ್ಟಿಸಲ್ಪಟ್ಟವು.
    - ದೇಶಭಕ್ತಿ ಹೊಂದಿರುವ ರೀತಿಯಲ್ಲಿರುವ ರಾಗವೂ ಸಾಹಿತ್ಯವೂ ಇದರ ಪ್ರತ್ಯೇಕತೆಗಳಾಗಿವೆ.
    - ನಾವೆಲ್ಲರೂ ನಮ್ಮ ರಾಷ್ಟ್ರದ ಕಾವಲುಗಾರರೆಂಬ ತಿಳುವಳಿಕೆಯನ್ನು ಬಲಪಡಿಸಲು ಇಂತಹ ಹಾಡುಗಳಿಂದ ಸಾಧ್ಯವಾಗುವುದು.
- ಹೆಚ್ಚು ದೇಶಭಕ್ತಿ ಗೀತೆಗಳ ಬಗ್ಗೆ ತಿಳಿಯುವುದು, ಆಲಾಪಿಸುವುದು.
- ಭಾರತದ ವಿವಿಧ ಭಾಷೆಗಳಲ್ಲಿರುವ ಹಾಡುಗಳ ಆಯ್ಕೆ ಮಾಡುವುದು. ಸಂಗೀತದ ಹಿನ್ನಲೆಯನ್ನು ಆಲಾಪಿಸುವುದು.
- ಹಾಡುಗಳನ್ನು ರಚಿಸಿದವರನ್ನು ಪರಿಚಯಪಡಿಸುವುದು. ಅವುಗಳ ಆಲಾಪನಾ ರೀತಿ ಕಲಿಸುವುದು.
    - 'ಓಡಿವಿಳೆಯಾಡ್ ಪಾಪ.....' (ಸುಬ್ರಹ್ಮಣ್ಯ ಭಾರತಿ)
    - 'ಹಿಂದ್ ದೇಶ್ ಕೇ ನಿವಾಸಿ....' (ವಿನಯಚಂದ್ರ ಮಂದ್‌ಗಲ್ಯ) (Vinaya chandra Mandgalya)
    - 'ಭಾಷಯೆನ್ನಿ ವೆರೈನ....' (ನವ್ವುಗಾನಿ ಸುಬ್ಬರಾವ್)
    - 'ಜ್ಯೋತಿತೋರು......' (ರವೀಂದ್ರನಾಥ ಠಾಗೋರ್)
- ಇವುಗಳನ್ನು ಸರಿಯಾದ ಕ್ರಮದಲ್ಲಿ ಆಲಾಪಿಸಿ ಕಲಿಯುವುದು.
- ಕಲಿತ ಹಾಡುಗಳನ್ನು ಮಕ್ಕಳು ಆಲಾಪಿಸುವುದು. (ಗುಂಪಾಗಿ)
- ಅವುಗಳ ರಾಗ, ತಾಳ, ಅಲಾಪನಾ ಶೈಲಿ ಇವುಗಳನ್ನು ಮೌಲ್ಯಮಾಪನ ಮಾಡುವುದು.
- ವಿವಿಧ ಭಾಷೆಗಳಲ್ಲಿನ ಹಾಡುಗಳನ್ನು ಒಳಪಡಿಸಿ ಗೀತ್‌ಮಾಲ ನಿರ್ಮಿಸುವುದು.
    - ಭಾಷಾ ವೈವಿಧ್ಯವುಂಟು ಮಾಡಬೇಕು.
    - ರಾಗವೈವಿಧ್ಯ

- ತಾಳವೈವಿಧ್ಯ
- ಗುಂಪಿನಲ್ಲಿರುವವರಿಗೆ ಹಾಡಲು ಸಾಧ್ಯವಿರುವ ರೀತಿಯಲ್ಲಿರುವವುಗಳು.
- ತಯಾರಿಸಿದ ಗೀತ್‌ಮಾಲ ಮಂಡನೆ

***ಚಟುವಟಿಕೆ – 2***

- ದೇಶಭಕ್ತಿ ಹಾಡುಗಳಿಗೆ ರಾಗವೂ ತಾಳವೂ ಬದಲಾಯಿಸಿ ಹೊಸ ರೂಪವೂ ಭಾವವೂ ನೀಡುವುದು.
- ಪರಿಮಿತವಾದ ಸಾಲುಗಳನ್ನು ಮಕ್ಕಳಿಗೆ ನೀಡುವುದು.
    - 'ಭಾರತಮೆನ್ನಾಲ್......'
    - 'ಗಂಗಾ.... ಯಮುನಾ....'
    - 'ವರಿಗ ವರಿಗ ಸಹಜರಂ್ೀ.....'
    - 'ಪೋರೋ ಪೋರೋ.....'
- ಇವುಗಳಿಗೆ ಅನುಗುಣವಾದ ರಾಗವೂ ತಾಳವೂ ಕಂಡುಹಿಡಿಯಲು ಗುಂಪುಗಳಿಗೆ ಸಮಯವನ್ನು ನೀಡುವುದು.
- ಗುಂಪುಗಳ ಮಂಡನೆ – ಮೌಲ್ಯಮಾಪನ
- ನೀಡಿದ ರಾಗದ ಸರಿಪಡಿಸುವಿಕೆ ಅಗತ್ಯವಿದ್ದರೆ ಅಧ್ಯಾಪಕರಲ್ಲಿ ಹೇಳುವುದು.
- ಸರಿಪಡಿಸುವಿಕೆ ಅಗತ್ಯವಾಗಿ ಬರುವುದು –
    - ರಾಗವೂ ಸಾಲುಗಳೂ ಪರಸ್ಪರ ಯೋಗ್ಯವಾದವುಗಳಲ್ಲದಿದ್ದಾಗ
    - ರಾಗಕ್ಕೆ ಬೇಕಾದಷ್ಟು ಭಾವವಿಲ್ಲದಾಗುವಾಗ
    - ತಾಳ ಪ್ರಯೋಗದಲ್ಲಿ ತೊಂದರೆಗಳು ಬರುವಾಗ

## ಮೌಲ್ಯಮಾಪನ

- ರಾಗದ ಮೌಲ್ಯಮಾಪನ
- ಮಂಡನೆಯ ಮೌಲ್ಯಮಾಪನ
- ಅಲಾಪನೆಯ ಹಿರಿಮೆ
- ಗೀತ್‌ಮಾಲ ಮೌಲ್ಯಮಾಪನ

# ಏಳನೇ ತರಗತಿ

## ಯೂನಿಟ್ – 1

### ಮುನ್ನುಡಿ

ಕಲೆಗಳಿಗೆಲ್ಲಾ ಸ್ಥಾಯೀಭಾವವಾಗಿದೆ ತಾಳ. ತಾಳಾತ್ಮಕವಲ್ಲದೆ ಒಂದು ಚಲನೆಯು ಪ್ರಪಂಚದಲ್ಲಿಲ್ಲ. ಕಾಲಾವಧಿಯನ್ನು ಸರಿಯಾಗಿಯೂ ಕ್ರಮದಲ್ಲೂ ಲೆಕ್ಕ ಮಾಡಲು ಉಪಯೋಗಿಸುವ ಪ್ರವೃತ್ತಿ ವಿಶೇಷವಾಗಿದೆ ತಾಳ. ಸಂಗೀತದಲ್ಲಿ ತಾಳಕ್ಕೆ ಪ್ರಥಮ ಸ್ಥಾನವಿದೆ. ಆಲಾಪನೆಯ ನಿಖರತೆಯೊಂದಿಗಿರುವ ಸಮಯ ಏಕೀಕರಣ ವ್ಯವಸ್ಥೆಯಾಗಿದೆ ತಾಳ. ಭಾರತೀಯ ಸಂಗೀತ ಪರಂಪರೆ ಎಲ್ಲಾ ಕಾಲದಲ್ಲೂ ಹೆಚ್ಚು ಪ್ರಾಧಾನ್ಯವನ್ನು ನೀಡಿದ್ದು ತಾಳಕ್ಕಾಗಿದೆ. ಬೇರೆ ರಾಜ್ಯಗಳಲ್ಲಿರುವುದಕ್ಕಿಂತ ಧಾರಾಳ ಸಂಗೀತ ವೈವಿಧ್ಯತೆಗಳು ನಮ್ಮ ನಾಡಿನಲ್ಲಿದೆ. ಭಾರತೀಯ ಸಂಗೀತದಲ್ಲಿ ಪ್ರಧಾನವಾಗಿ ದಕ್ಷಿಣ ಇಂಡಿಯಾ ಸಂಗೀತವು ಅತೀ ಹೆಚ್ಚು ವೈವಿಧ್ಯಗಳ ಉಗ್ರಾಣವಾಗಿದೆ. ನಾಟ್ಯಭಾವ ಸಂಗಮವಾಗಿದೆ ತಾಳಗಳು. ತಾಳ ವೈವಿಧ್ಯಗಳು ಪರಿಚಿತವಾದ ವಲಯಗಳ ಮೂಲಕ ತಿಳಿಯುವುದಕ್ಕೂ ಪ್ರಯೋಗಿಸುವುದಕ್ಕೂ ನಮ್ಮ ಮಕ್ಕಳನ್ನು ಪ್ರಾಪ್ತರಾಗಿಸುವುದು ಎಂಬ ಲಕ್ಷ್ಯದೊಂದಿಗೆ ಯೂನಿಟ್ಟಿನ ಚಟುವಟಿಕೆಗಳನ್ನು ತಯಾರಿಸಿರುವುದು.

### ಕಲಿಕಾ ಸಾಧನೆ

ವಿವಿಧ ತಾಳಗಳಲ್ಲಿರುವ ಹಾಡುಗಳನ್ನು ಹಾಡುವುದು.

### ಆಶಯ, ಧಾರಣೆ

- ವ್ಯತ್ಯಸ್ಥ ತಾಳಗಳು ಇವೆ.
- ಪ್ರಧಾನ ತಾಳಗಳು ಏಳು
- ತಾಳಕ್ಕೆ ಐದು ನಡೆಗಳು
- ಪ್ರತಿಯೊಂದು ತಾಳಕ್ಕೂ ಐದು ಜಾತಿಗಳು
- ಭಾವತಲ (ತಾಳ ವೈವಿಧ್ಯ ನೀಡುವ ಭಾವತಲ)

### ಪ್ರಕ್ರಿಯೆ

- ವಿವಿಧ ತಾಳದಲ್ಲಿರುವ ಹಾಡುಗಳನ್ನು ಕೇಳುವುದು.
- ತಾಳಗಳನ್ನು ನಿರೀಕ್ಷಿಸುವುದು..
- ಸಾಮ್ಯವ್ಯತ್ಯಾಸಗಳನ್ನು ನಿರೀಕ್ಷಿಸುವುದು.
- 'ಧ' ತಾಳದಲ್ಲಿರುವ ಹಾಡುಗಳನ್ನು ಕಂಡುಹಿಡಿಯುವುದು, ಆಲಾಪಿಸುವುದು.

## ಮೌಲ್ಯನಿರ್ಣಯ

- ಟಿಪ್ಪಣಿಗಳ ಅಧಿಕೃತತೆ
- ತಾಳಗತಿ ತಿಳಿಯಲಿರುವ ಸಾಮರ್ಥ್ಯ
- ತಾಳ ಹಿಡಿದು ಹಾಡಲಿರುವ ಸಾಮರ್ಥ್ಯ

## ಒಳಪುಟಗಳಲ್ಲಿ

ತಾಳವೈವಿಧ್ಯವನ್ನು ತಿಳಿಯಲು ಪರಿಚಿತವಾದ ಹಾಡುಗಳನ್ನು ಒಳಪಡಿಸಿ ಸರಿಯಾದ ರೀತಿಯ ಚಟುವಟಿಕೆಗಳೇ ಈ ಯೂನಿಟಿನ ಪ್ರತ್ಯೇಕತೆಯಾಗಿದೆ. ವಿವಿಧ ತಾಳಗಳನ್ನು ಕುರಿತು ಅವುಗಳ ಪ್ರಯೋಗರೀತಿ, ಇದೇ ತಾಳಗಳು ಉಪಯೋಗಿಸುವ ವಿವಿಧ ಹಾಡುಗಳ ರೂಪಗಳು. ಸವಿಶೇಷತೆ ಎಂಬಿವುಗಳನ್ನು ತಿಳಿಯಲು ಈ ಪಾಠಭಾಗ ಸಹಾಯ ಮಾಡುತ್ತದೆ. ನಿತ್ಯವು ನಾವು ಕೇಳುವ ಪ್ರತಿಯೊಂದು ಹಾಡಿಗೂ ವೈವಿಧ್ಯವಾದ ತಾಳ ಪ್ರಯೋಗಗಳಿವೆ ಎಂದು ತಿಳಿಯುವುದು. ತಾಳಗಳ ವ್ಯತ್ಯಾಸಕ್ಕೆ ಅನುಗುಣವಾಗಿ ಅಲಾಪನೆಗೆ ಭಾವತಲಕ್ಕೂ ವ್ಯತ್ಯಾಸ ಮಾಡುವುದು ಎಂದು ಈ ಪಾಠಭಾಗದ ಮೂಲಕ ಹೊರಬರುವುದು.

## ಕಲಿಕಾ ಚಟುವಟಿಕೆಗಳು

***ಚಟುವಟಿಕೆಗಳು***

- ಕೆಲವು ಹಾಡುಗಳನ್ನು ಬರೆದ ಚಾರ್ಟುಗಳನ್ನು ಪ್ರದರ್ಶಿಸುವುದು. ಅವುಗಳನ್ನು ಹಲವು ಬಾರಿ ಓದಿ ಪರಿಚಯಿಸಿಕೊಳ್ಳಲು ನಿರ್ದೇಶಿಸುವುದು. ಹೀಗೆ ಮಕ್ಕಳಿಗೆ ಪರಿಚಯವಾದ ಹಳೆಯದೂ ಹೊಸದಾದ ಸಿನೆಮಾ ಹಾಡುಗಳು, ಲಘುಸಂಗೀತ ಗೀತೆಗಳು, ನಾಟಕ ಗೀತೆಗಳು ಇವುಗಳು ಐ.ಸಿ.ಟಿ. ಸಾಧ್ಯತೆಯೊಂದಿಗೆ ಕೇಳಿಸುವುದು. ಇದರೊಂದಿಗೆ ಕೇಳುವ ಹಾಡುಗಳಿಗೆ ಸಂಬಂಧಪಟ್ಟು ತಿಳಿದ ಸತ್ಯಾಂಶಗಳನ್ನೂ ಗುರುತಿಸಲು ನಿರ್ದೇಶಿಸುವುದು.
- ಅಧ್ಯಾಪಕರು ಕೇಳಿಸುವ ಹಾಡುಗಳು
  1. 'ಮಾರಿವಿಲ್ಲಿನ್ ತೇನ್‌ಮಲರ್'
  2. 'ಲಾಲಿ ಲಾಲೀಲೋ... ಲಾ ಲಿ ಲಾಲಿ ಲಾಲೋ'
  3. 'ಇಲ್ಲಿಮುಳಂ ಕಾಡುಗಳಿಲ್'
  4. 'ಸೂರ್ಯಕಾಂತಿ..... ಸೂರ್ಯಕಾಂತಿ'
  5. 'ತಳೀರಿಟ್ಟ ಕಿನಾಕಳ್ಕ್ ತನ್....'
  6. 'ಪೂಮುಖವಾದಿಲ್'
  7. 'ಸೌಪರ್ಣಿಕಾಮೃತ ವೀಚಿಗಳು'
  8. 'ಪದಿನೇಳಿಂಡೆ ಪೂಂಗರಳಿನ್'
  9. 'ಕಾಯಲರಿಗತ್ತ್ ವಲಯೆರಿಞಪ್ಪೋ'
  10. 'ಪಿನ್ನೆಯುಂ ಪಿನ್ನೆಯುಂ ಆರೋ....'
- ಮಕ್ಕಳಿಗೆ ನೋಟುಪುಸ್ತಕದಲ್ಲಿ ಬರೆದ ವಿಚಾರಗಳನ್ನು ಮಂಡಿಸಲು ಅವಸರವನ್ನು ನೀಡುವುದು. (ರಾಂಡಮ್ ಆಗಿ ಮಂಡಿಸುವ ರೀತಿ) ಅಧ್ಯಾಪಕರು BB ಯಲ್ಲಿ ಗುರುತಿಸುವುದು.
- ಮಕ್ಕಳು ಹೀಗೆಲ್ಲಾ ಗುರುತಿಸಬಹುದು.

- ಸಿನಿಮಾ ರಂಗಗಳು
- ಗಾಯಕರ ಹೆಸರುಗಳು
- ನಾಟಕ ಗೀತೆಗಳು
- ಸಿನೆಮಾದ ಹೆಸರು
- ಸಾಮ್ಯವಿರುವ ರಾಗಗಳು
- ತಾಳದಲ್ಲಿರುವ ಸಾಮ್ಯತೆ, ವ್ಯತ್ಯಾಸ

● ಕೇಳಿಸಿದ ಹಾಡುಗಳನ್ನು ಮಕ್ಕಳಿಂದ ಗುಂಪಾಗಿ ಹಾಡಿಸುವುದು. (ಪೂರ್ಣವಾಗಿ ಬೇಕೆಂದಿಲ್ಲ, ಪಲ್ಲವಿ ಸಾಕಾಗಬಹುದು). ಸಮಾನ ಸ್ವಭಾವವಿರುವ ಹಾಡುಗಳನ್ನು ಕಂಡುಹಿಡಿದಿದ್ದರೆ ಹಾಡುವುದಕ್ಕೆ ಅವಕಾಶವನ್ನು ನೀಡುವುದು. ನಂತರ ಮಕ್ಕಳನ್ನು ಐದು ಗುಂಪುಗಳಾಗಿ ಮಾಡಿರಿ. ಮೊದಲೇ ಹಾಡುಗಳೊಂದಿಗೆ ಸಂಬಂಧಪಟ್ಟಂತೆ ಹೆಸರುಗಳನ್ನು ಗುಂಪುಗಳಿಗೆ ನೀಡಬಹುದು.

**1. ಕಾಮನಬಿಲ್ಲು, 2. ಸೂರ್ಯಕಾಂತಿ, 3. ಮೊಗ್ಗು, 4. ಸೌಪರ್ಣಿಕ, 5. ಚಿಗುರು**

● ಈ ಐದು ಗುಂಪುಗಳಿಗೂ ಸಿನಿಮಾ ಹಾಡುಗಳು, ಲಲಿತಗೀತೆಗಳು ಸೇರಿಸಿಕೊಂಡು ಅಂತ್ಯಾಕ್ಷರಿ ಸ್ಪರ್ಧೆಯನ್ನು ಮಂಡಿಸಲು ನಿರ್ದೇಶಿಸುವುದು. ಪ್ರತಿಯೊಂದು ಗುಂಪು ಹಾಡುವ ಹಾಡುಗಳ ಗುಂಪಿನ ಒಬ್ಬ ಸ್ಪರ್ಧಿ ಪಟ್ಟಿ ಮಾಡುತ್ತಿರಬೇಕು. ಅಧ್ಯಾಪಕರ ನಿಯಂತ್ರಣವಿರಬೇಕು. ಹಾಡುಗಳನ್ನು ಕೈತಟ್ಟಿ ಹಾಡುವುದಕ್ಕೆ ನಿರ್ದೇಶಿಸಬೇಕು. ಹತ್ತು ನಿಮಿಷ ಈ ಸ್ಪರ್ಧೆ ಮುಂದುವರಿಯುವುದು. ಒಂದು ವಿರಾಮವನ್ನು ನೀಡಿ ಕೆಲವು ಪ್ರಶ್ನೆಗಳನ್ನು ಅಧ್ಯಾಪಕರು ಕೇಳುತ್ತಾರೆ.
  - ಪ್ರತಿಯೊಂದು ಗುಂಪು ಎಷ್ಟು ವಿಧದ ಹಾಡುಗಳನ್ನು ಹಾಡಿದರು ಎಂದು ಗೊತ್ತೇ?
  - ಹಾಡುವಾಗ ಚಪ್ಪಾಳೆ ಹೊಡೆದರೇ? ಪ್ರತಿಯೊಂದು ಹಾಡಿನ ವೇಗತೆಗೂ ವ್ಯತ್ಯಾಸವಿತ್ತೇ?
  - ಹಾಡಿನ ತಾಳವ್ಯತ್ಯಾಸಗಳನ್ನು ಗಮನಿಸಿದ್ದೀರಾ?

● ಮಕ್ಕಳಿಂದ ಬಯಸುವ ಉತ್ತರಗಳು :
  - ಹಾಡಿನ ವೇಗತೆಗಳಿಗಿರುವ ವ್ಯತ್ಯಾಸ. ಅದಕ್ಕೆ ಅನುಗುಣವಾದ ತಾಳ ಹಿಡಿಯುವುದು.
  - ವಿವಿಧ ತಾಳಗಳಲ್ಲಿರುವ ಹಾಡುಗಳನ್ನು ಹಾಡಿದ್ದು.

● ಮೊದಲು ಕೇಳಿಸಿದ ಹಾಡುಗಳನ್ನು ಪ್ರತಿಯೊಂದಾಗಿ ಮಕ್ಕಳಿಂದ ಗುಂಪಾಗಿ ಹಾಡಿಸುವುದು. ಸಂಖ್ಯೆಗಳನ್ನು ಎಣಿಸಿಕೊಂಡು ಚಪ್ಪಾಳೆ ಹೊಡೆಯಲು ಹೇಳುವುದು. ಒಂದು ಗುಂಪು ಹಾಡುವಾಗ ಇನ್ನಿತರ ಗುಂಪುಗಳು ಕೈತಟ್ಟಿ , ಸಂಖ್ಯೆಗಳನ್ನು ಎಣಿಸಿಕೊಂಡು ತಾಳದ ಎಣಿಕೆಯನ್ನು ದಾಖಲಿಸುವುದು. ಎಣಿಕೆಯ ಆಧಾರದಲ್ಲಿ ಮಕ್ಕಳು ತಿಳಿಯಬೇಕಾದ ಹೆಚ್ಚು ತಿಳುವಳಿಕೆಗಳನ್ನು ಅಧ್ಯಾಪಕರು ವಿವರಿಸುವುದು.
(ಕನ್ನಡ ಪದ್ಯಗಳನ್ನು ಆರಿಸಿಕೊಳ್ಳಿರಿ)

- 1. ಮಾರಿವಿಲ್ಲಿನ್ ತೇನ್‌ಮಲರೆ –
  ||1,2,3|1,2,3|ತಕಿಟ|ತಕಿಟ
  (ಮೂರು ಎಣಿಸುವುದು) = ತಿಶ್ರಗತಿ
- 2. ಲಾಲಿ ಲಾಲಿಲೋ ....... –
  ||1,2,3,4|1,2,3,4| ಥಕಧಿಮಿ| ಥಕಧಿಮಿ
  (ನಾಲ್ಕು ಎಣಿಕೆ) = ಚತುರಶ್ರಗತಿ
- 3. ಇಲ್ಲಿಮುಳಂ ಕಾಡುಗಳಿಲ್ –
  ||1,2,3|1,2,3| ತಕಿಟ|ತಕಿಟ
  (ಮೂರು ಎಣಿಸುವುದು) = ತಿಶ್ರಗತಿ

- 4. ಸೂರ್ಯಕಾಂತಿ... –
  I1,2,3,4I 1,2,3,4IಥಕಧಿಮಿIಥಕಧಿಮಿ
  (ನಾಲ್ಕು ಎಣಿಕೆ) = ಚತುರಶ್ರಗತಿ
- 5. ತಳಿರಿಟ್ಟ ಕಿನಾಕಳ್ಕ್
  I1,2,3, 1,2,3,4I 1,2,3, 1,2,3,4IತಕಿಟಥಕಧಿಮಿI ತಕಿಟಥಕಧಿಮಿ
  (ಏಳು ಎಣಿಕೆ) = ಮಿಶ್ರಗತಿ
- 6. ಪೂಮುಗವಾದಿಲ್ –
  I1,2,3I 1,2,3I 1,2,3IತಕಿಟIತಕಿಟIತಕಿಟ
  (ಮೂರು ಎಣಿಕೆ) = ತಿಶ್ರಗತಿ
- 7. ಸೌಪರ್ಣಿಕಾಮೃತ –
  II1,2,1,2,3,4I 1,2,1,2,3,4IಥಕತಕಿಟI ಥಕತಕಿಟ
  (ಐದು ಎಣಿಕೆ) = ಖಂಡಗತಿ
- 8. ಪದಿನೇಳಿಂಡೆ –
  II1,2,3,4I 1,2,3,4I 1,2,3,4IIಥಕಧಿಮಿI ಥಕಧಿಮಿ
  (ನಾಲ್ಕು ಎಣಿಕೆ)= ಚತುರಶ್ರಗತಿ
- 9. ಕಾಯಲರಿಗತ್ತ್ –
  II 1, 2, 3, 1, 2, 3, 4 I 1, 2, 3, 1, 2, 3, 4 II ತಕಿಟತಕಧಿಮಿI
  (ಏಳು ಎಣಿಕೆ) = ಮಿಶ್ರಗತಿ
- 10. ಪಿನ್ನೆಯುಂ ಪಿನ್ನೆಯುಂ
  II1,2,1,2,3,4I 1,2,1,2,3,4IIತಕತಕಿಟ
  (ಐದು ಎಣಿಕೆ) = ಖಂಡಗತಿ

- ಮೊದಲು ಹಾಡಿದ 10 ಹಾಡುಗಳನ್ನು ಪರಿಶೋಧಿಸುವಾಗ ಎಣಿಕೆಗಳು ನಾಲ್ಕು ವಿಧವಾಗಿ ವಿಂಗಡಿಸಬಹುದು.
  - II1,2,3II
  - II1,2,3,4II
  - II1,2,31,2,3,4II
  - II1,2,1,2,3II

> **ನಡೆ**
>
> ***ತಾಳ ಪ್ರಯೋಗದ ಕೆಲವು ಘಟನೆ ಸೂಚಿಸುವ ಪ್ರತಿಭಾಸವಾಗಿದೆ ನಡೆ***

- 3 ಎಣಿಕೆ ಬರುವ ಗತಿಯೇ/ಸ್ಟೆಪ್ಪನ್ನು – ತಿಶ್ರಗತಿ/ಸ್ಟೆಪ್ ಎಂದು ಹೇಳಬಹುದು.
- 4 ಎಣಿಕೆ ಬರುವ ಗತಿಯೇ/ಸ್ಟೆಪ್ಪನ್ನು – ಚತುರಶ್ರಗತಿ/ ಸ್ಟೆಪ್ ಎಂದು ಹೇಳಬಹುದು.
- 7 ಎಣಿಕೆ ಬರುವ ಗತಿಯೇ/ಸ್ಟೆಪ್ಪನ್ನು – ಮಿಶ್ರಗತಿ/ ಸ್ಟೆಪ್ ಎಂದು ಹೇಳಬಹುದು. (3+4= ತಿಶ್ರಂ + ಚತುರಶ್ರಂ)
- 5 ಎಣಿಕೆ ಬರುವ ಗತಿಯೇ/ಸ್ಟೆಪ್ಪನ್ನು – ಖಂಡಗತಿ/ ಸ್ಟೆಪ್ ಎಂದು ಹೇಳಬಹುದು. (2+3= 5, ಖಂಡಗತಿ)
- ಲಲಿತಗೀತೆ ವಲಯದಲ್ಲಿ ಅಪೂರ್ವವಾಗಿ ಕಾಣುವ ಇನ್ನಿತರ ಸ್ಟೆಪ್ ಕೂಡ ಇದೆ.
  II1,2,3,4+1,2+1,2,3II= IIಥಕಧಿಮಿ+ತಕ+ತಕಿಟII= 9 ಎಣಿಸುವುದು – ಸಂಕೀರ್ಣಸ್ಟೆಪ್.
- ಹೀಗೆ ನಡೆಗಳೂ ಜಾತಿಯೂ ತಾಳದಲ್ಲಿ 5 ವಿಧವಾಗಿದೆ.
- ಎಂದರೆ ನೀವು ನಡೆಸಿದ ಅಂತ್ಯಾಕ್ಷರಿಯಲ್ಲಿ ಬರುವ ಹಾಡುಗಳ ಒಂದು ಸಂಖ್ಯೆಗಳನ್ನು ಎಣಿಸಿ ನಡೆಗಳನ್ನು ಮಾಡೋಣವೇ?

- ಮಕ್ಕಳು ಒಂದು ಗುಂಪು ಹಾಡುವುದು. ಇನ್ನಿತರ ಗುಂಪುಗಳು ನಡೆಗಳನ್ನು ತಿಳಿದು BBಯಲ್ಲಿ ಬರೆಯುವುದು. ಹಾಡಿದ ಗುಂಪಿನ ಸಂಖ್ಯೆಯನ್ನು ನೋಡಿ ನಡೆ ನಿಖರತೆ ಪ್ರಕಟಪಡಿಸುವುದು.

**ಮುಂದುವರಿಯುವಿಕೆ**

- ಹೊಸದಾಗಿ ಮಕ್ಕಳು ಕೇಳುತ್ತಿರುವ ಹಾಡುಗಳು ಹಾಡಿನ ಪುಸ್ತಕದಲ್ಲಿ ಬರೆದು ಎಣಿಕೆಯನ್ನು ನೋಡಿ ನಡೆಗಳನ್ನು ನಿಖರತೆ ಮಾಡಿ ನಿರ್ದೇಶಿಸುವುದು.
- ವಾರದಲ್ಲಿ 5 ಚಟುವಟಿಕಾ ದಿನಗಳಲ್ಲಿ ಕ್ಲಾಸಿನ ಕಲಾವಿದ್ಯಾಭ್ಯಾಸ ಗೋಡೆಯಲ್ಲಿ ವಿವಿಧ ನಡೆಗಳುಳ್ಳ ಹಾಡುಗಳು ನಿರಂತರವಾಗಿ 5 ವಾರಗಳಲ್ಲಿ ಬರೆದು ಸೇರಿಸಲು ನಿರ್ದೇಶಿಸುವುದು.

## ಮೌಲ್ಯಮಾಪನ

- ಟಿಪ್ಪಣಿಗಳ ಅಧಿಕೃತತೆ
- ತಾಳ ಪ್ರಕಟಣೆಯ ಪ್ರದರ್ಶನ
- ತಾಳಗತಿ ತಿಳಿಯಲಿರುವ ಸಾಮರ್ಥ್ಯ
- ತಾಳವನ್ನು ಹಿಡಿದು ಹಾಡಲಿರುವ ಸಾಮರ್ಥ್ಯ

## ಕ್ರೋಡೀಕರಣ

ಸಂಗೀತದ ಆಧಾರ ಹಂತಗಳಲ್ಲಿ ಪರಮ ಪ್ರಧಾನವಾದ ಒಂದಾಗಿದೆ ತಾಳ. ಒಂದೇ ತಾಳಕ್ಕೆ ವಿವಿಧ ಸ್ಟೆಪ್‌ಗಳಿವೆ, ಜಾತಿಗಳಿವೆ. ತಾಳಗತಿಗಳು/ಸ್ಟೆಪ್‌ಗಳು ಹಾಡಿನ ಭಾವವನ್ನು, ಲಯವನ್ನು ಬಾಧಿಸುತ್ತಿವೆ. ವಿವಿಧ ಆಶಯಗಳನ್ನು ಒಳಗೊಂಡ ಹಾಡುಗಳನ್ನು ಮಾಧುರ್ಯವಾಗಿಸಲು ತಾಳ ನಿಖರತೆ ನಿರ್ಬಂಧವಾಗಿದೆ.

# ಯೂನಿಟ್ – 2

## ಮುನ್ನುಡಿ

ಮೂರು ಸಾವಿರಕ್ಕಿಂತ ಅಧಿಕ ವರ್ಷಗಳಷ್ಟು ಹಳೆಯ ಅಮೂಲ್ಯವಾದ ಸಂಗೀತ ಸಂಸ್ಕೃತಿಗಳಿಗೆ ಮಾಲಿಕರಾಗಿದ್ದಾರೆ ಭಾರತೀಯರು. ಸವಿಶೇಷತೆಯೂ ಅಮೂಲ್ಯವೂ ಆದ ಭಾರತೀಯ ಸಂಗೀತ ಶೈಲಿಯ ಚರಿತ್ರೆಯನ್ನು ಪರಿಶೋಧಿಸುವಾಗ ವಿದೇಶಿಗರ ಆಧಿಪತ್ಯಗಳೂ ಅಕ್ರಮಗಳ ಫಲವಾಗಿ ಕೆಲವು ಬದಲಾವಣೆಗಳೂ ತಪ್ಪುದಾರಿಗಳೂ ನಮ್ಮ ಸಂಗೀತದ ಸಂಪ್ರದಾಯಕ್ಕೆ ಸಂಭವಿಸಿದೆ ಎಂದು ಚರಿತ್ರೆಯನ್ನು ಅವಲೋಕಿಸುವಾಗ ನಮಗೆ ತಿಳಿಯಲು ಸಾಧ್ಯವಾಗುವುದು. ಇಂತಹ ಸಂದರ್ಭದಲ್ಲಿ ಸೃಷ್ಟಿಸಲ್ಪಟ್ಟಿದ್ದು ಭಾರತದ ಪ್ರಧಾನವಾದ ಎರಡು ಶೈಲಿಗಳಾದ ಹಿಂದೂಸ್ಥಾನಿ ಸಂಗೀತ ಹಾಗೂ ದಕ್ಷಿಣ ಭಾರತ ಸಂಗೀತ. ಹಳೆಯ ಭಾರತೀಯ ಸಾಂಪ್ರದಾಯಗಳು ಹೆಚ್ಚು ಕಡಿಮೆ ಒಳಗೊಳ್ಳುವ ಕರ್ನಾಟಿಕ್ ಸಂಗೀತ ಶಾಖೆ ದಕ್ಷಿಣಭಾರತದ ಸಂಗೀತ ಸಂಸ್ಕೃತಿಯ ಮೈಲುಗಲ್ಲಾಗಿದೆ. ಲೋಕವೆಲ್ಲಾ ಅದ್ಭುತವಾಗಿ ಕಾಣುವ ಈ ಸಾಂಪ್ರದಾಯದ ವಿಶಾಲವಾದ ಚರಿತ್ರೆಯ ಆಧಾರವಾದ ಕೆಲವು ವಿಷಯಗಳನ್ನು ತಿಳಿಯಲು ಈ ಪಾಠಭಾಗದ ಮೂಲಕ ಸಂಚರಿಸುವಾಗ ಯಾವುದೇ ಸಂಗೀತ ಆಸ್ವಾದಕರಿಗೆ ಸಾಧ್ಯವಾಗುವುದು. ಉಗಮ, ಚರಿತ್ರೆ, ಪ್ರಧಾನ ಸಂಗೀತದ ಸಂಬಂಧಿಯಾದ ಘಟನೆಗಳು ಇವುಗಳನ್ನೆಲ್ಲಾ ಈ ಯೂನಿಟಿನಲ್ಲಿ ಪ್ರತಿಪಾದಿಸುವ ವಿಷಯಗಳಾಗಿವೆ.

ಕರ್ನಾಟಕ ಸಂಗೀತದ ಮಹತ್ವವನ್ನು ಎತ್ತಿ ತೋರಿಸುವ ಈ ಪಾಠಭಾಗವು ನಮ್ಮ ಸಂಗೀತ ಸಂಸ್ಕೃತಿಯ ಪ್ರಕಾಶವನ್ನು ಮಕ್ಕಳಿಗೆ ತಿಳಿಸಲು ಹೆಚ್ಚು ಉಪಕಾರಿಯಾಗುವುದು ಎಂಬುದರಲ್ಲಿ ಸಂಶಯವಿಲ್ಲ.

## ಕಲಿಕಾ ಸಾಧನೆಗಳು

- ಕರ್ನಾಟಕ ಸಂಗೀತದೊಂದಿಗೆ ಸಂಬಂಧಪಟ್ಟ ಕಥೆಗಳು, ಚರಿತ್ರೆಯ ಘಟನೆಗಳು ಎಂಬಿವುಗಳನ್ನು ತಿಳಿಯುವುದು. ಸಂಗೀತದ ಆಧಾರ ಪಾಠಭಾಗಗಳಾದ ಸಪ್ತಸ್ವರಗಳಿಂದ ಹಿಡಿದು ಅಲಂಕಾರವರೆಗಿರುವ ಕೆಲವನ್ನು ಆಲಾಪಿಸುವುದು.

## ಆಶಯ, ತಿಳುವಳಿಕೆ

- ಕರ್ನಾಟಕ ಸಂಗೀತದ ಚರಿತ್ರೆ, ಸಂಸ್ಕೃತಿ
- ಆಲಾಪನೆಯ ಶೈಲಿ
- ಸಂಗೀತ ಕಥೆಗಳು
- ಆಧಾರ ಸ್ವರಗಳು
- ಶ್ರುತಿ ಅರಿವು ಉಂಟಾಗಲು, ಸ್ವರಸ್ಥಾನಗಳ ಉಚ್ಛಾರ ಶುದ್ಧಿಯಾಗಲು ಧಾರಾಳ ದಾರಿಗಳು ಇವೆ.
- ವಿಭಿನ್ನ ತಾಳಗಳಿಗಿರುವ ಸಾಲುಗಳು
- ಹಲವು ವೇಗದ ಸಾಲುಗಳು (ತಾಳವೇಗತೆ, ಕಾಲಪ್ರಮಾಣ)
- ಸಾಲುಗಳನ್ನು ಹಾಡುವುದು

## ಪ್ರಕ್ರಿಯೆ

- ಸಂಗೀತದ ಉಗಮ, ಸಂಸ್ಕೃತಿ ಇವುಗಳೊಂದಿಗೆ ಸಂಬಂಧಪಟ್ಟ ಪುಸ್ತಕಗಳು, ಬಿ.ಬಿಗಳು ಎಂಬಿವುಗಳನ್ನು ಪರಿಶೋಧಿಸುವುದು. ವಿವರಗಳನ್ನು ಸಂಗ್ರಹಿಸುವುದು.
- ಸ್ವರ ಸ್ಥಾನಗಳನ್ನು ಶ್ರುತಿ ಸೇರಿಸಿ ಹಾಡುವುದು.
- ಸಾಲುಗಳನ್ನು ಹಾಡುವುದನ್ನು ಕೇಳುವುದು.
- ಸ್ವರ ಸ್ಥಾನಗಳನ್ನು ಕುರಿತು ವಿವರಿಸುವುದು, ಚರ್ಚೆ.
- ಆಲಾಪನೆ

## ಮೌಲ್ಯನಿರ್ಣಯ

- ಸರಳ ವಾದ್ಯಗಳು
- ಪ್ರಕಟನೆಯನ್ನು ಮೌಲ್ಯಮಾಪನ ಮಾಡುವುದು.
- ಆಲಾಪನೆಯನ್ನು ಮೌಲ್ಯಮಾಪನ ಮಾಡುವುದು.
- ಸಂಗೀತವನ್ನು ಕುರಿತು ಇರುವ ಧಾರಣೆಯನ್ನು ಮೌಲ್ಯಮಾಪನ ಮಾಡುವುದು.

## ಒಳಪುಟಗಳಲ್ಲಿ

ಕರ್ನಾಟಕ ಸಂಗೀತ ಶಾಖೆಯ ಚರಿತ್ರೆ, ಉದ್ಭವ, ಶೈಲಿ, ಸಂಸ್ಕೃತಿ ಎಂಬಿವುಗಳ ಕುರಿತು ವಿವರವಾದ ಮಾರ್ಗಗಳು ಈ ಯೂನಿಟಿನಲ್ಲಿ ಒಳಗೊಳ್ಳಿಸಲಾಗಿದೆ. ಈ ಮೂಲಕ ಕರ್ನಾಟಕ ಸಂಗೀತದ ಸಂಪ್ರದಾಯವನ್ನು ಕುರಿತು ಇರುವ ಅಂದಾಜನ್ನು ಮಕ್ಕಳಲ್ಲಿ ಸೃಷ್ಟಿಸಲು ಸಾಧ್ಯವಾಗುವುದು.

## ಕಲಿಕಾ ಚಟುವಟಿಕೆಗಳು

### *ಚಟುವಟಿಕೆ – 1*

- ಪ್ರಸಿದ್ಧವಾದ ನಾಡಗೀತೆಯ ಆಲಾಪನೆ. C.D. ಕೇಳಿಸುವುದು/ಅಧ್ಯಾಪಕರು ಹಾಡುವಾಗ ಒಟ್ಟಿಗೆ ಸೇರಿ ಹಾಡುವುದು.

ಜಯ ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ!
ಜಯ ಸುಂದರ ನದಿ ವನಗಳ ನಾಡೇ,
ಜಯಹೇ ರಸಋಷಿಗಳ ಬೀಡೆ!
ಜಯ ಭಾರತ ಜನನಿಯ ತನುಜಾತೆ!
ಜಯ ಹೇ ಕರ್ನಾಟಕ ಮಾತೆ!

ಜನನಿಯ ಜೋಗುಳ ವೇದದ ಘೋಷ,
ಜನನಿಗೆ ಜೀವವು ನಿನ್ನಾವೇಶ!
ಹಸುರಿನ ಗಿರಿಗಳ ಸಾಲೇ,
ನಿನ್ನಯ ಕೊರಳಿನ ಮಾಲೆ!
ಕಪಿಲ ಪತಂಜಲ ಗೌತಮ ಜಿನನುತ,
ಭಾರತ ಜನನಿಯ ತನುಜಾತೆ!
ಜಯ ಹೇ ಕರ್ನಾಟಕ ಮಾತೆ!
ಶಂಕರ ರಾಮಾನುಜ ವಿದ್ಯಾರಣ್ಯ,
ಬಸವೇಶ್ವರ ಮಧ್ವರ ದಿವ್ಯಾರಣ್ಯ!
ರನ್ನ ಷಡಕ್ಷರಿ ಪೊನ್ನ,
ಪಂಪ ಲಕುಮಿಪತಿ ಜನ್ನ!
ಕುಮಾರವ್ಯಾಸರ ಮಂಗಳಧಾಮ!
ಕವಿಕೋಗಿಲೆಗಳ ಪುಣ್ಯಾರಾಮ!

ತೈಲಪ ಹೊಯ್ಸಳರಾಳಿದ ನಾಡೆ,
ಡಂಕಣ ಜಕಣರ ನೆಚ್ಚಿನ ಬೀಡೆ!
ಕೃಷ್ಣ ಶರಾವತಿ ತುಂಗಾ,
ಕಾವೇರಿಯ ವರ ರಂಗ,
ಚೈತನ್ಯ ಪರಮಹಂಸ ವಿವೇಕರ
ಭಾರತ ಜನನಿಯ ತನುಜಾತೆ!
ಜಯ ಹೇ ಕರ್ನಾಟಕ ಮಾತೆ!
ಸರ್ವಜನಾಂಗದ ಶಾಂತಿಯ ತೋಟ,
ರಸಿಕರ ಕಂಗಳ ಸೆಳೆಯುವ ನೋಟ!
ಹಿಂದೂ ಕ್ರೈಸ್ತ ಮುಸಲ್ಮಾನ,
ಪಾರಸಿಕ ಜೈನರುದ್ಯಾನ
ಜನಕನ ಹೋಲುವ ದೊರೆಗಳ ಧಾಮ,
ಗಾಯಕ ವೈಣಿಕರಾರಾಮ.

ಕನ್ನಡ ನುಡಿ ಕುಣಿದಾಡುವ ಗೇಹ!
ಕನ್ನಡ ತಾಯಿಯ ಮಕ್ಕಳ ದೇಹ!
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ!
ಜಯ ಸುಂದರ ನದಿ ವನಗಳ ನಾಡೆ,
ಜಯ ಹೇ ರಸಋಷಿಗಳ ಬೀಡೆ!

- ಈ ಹಾಡಿನಲ್ಲಿ ಪರಾಮರ್ಶಿಸಿರುವ ಪಕ್ಷಿಮೃಗಾದಿಗಳ ಹೆಸರು ಚಾರ್ಟಿನಲ್ಲಿ ಕ್ರಮವಾಗಿ ಕೆಳಗೆ ಬರೆಯಲಾಗಿದೆ.

| | | |
|---|---|---|
| ನವಿಲು | ಸ | ಷಡ್ಜಂ |
| ಹಸು | ರಿ | ಋಷಭಂ |
| ಆಡು | ಗ | ಗಾಂಧಾರ |
| ಕ್ರೌಂಚಪಕ್ಷಿ | ಮ | ಮಧ್ಯಮಂ |
| ಕೋಗಿಲೆ | ಪ | ಪಂಚಮಂ |
| ಕುದುರೆ | ಧ | ಧೈವತಂ |
| ಆನೆ | ನಿ | ನಿಷಾದಂ |

- ಸರಿಗಮಪದನಿ – ಸಪ್ತಸ್ವರಗಳು ಒಂದೊಂದಾಗಿ ಜೀವಿಗಳ ಹೆಸರಿನ ಮುಂದೆ ಬರೆಯುವುದು. ಕೆಲವು ಪ್ರಶ್ನೆಗಳನ್ನು ಅಧ್ಯಾಪಕರು ಕೇಳುತ್ತಾರೆ.
  - ಜೀವಜಾಲಗಳೂ ಸಂಗೀತವೂ ಪರಸ್ಪರ ಸಂಬಂಧವಿದೆಯೇ?

- ಮೇಲೆ ಹೇಳಿದ ಜೀವಿಗಳೂ ಸ್ವರಗಳೂ ಪರಸ್ಪರ ಯಾವ ಸಂಬಂಧವಿದೆ?
- ಸರಿಗಮಪದನಿ – ಸ್ವರ ಕ್ರಮವನ್ನು ಯಾವ ವಿಶೇಷಣವನ್ನು ಉಪಯೋಗಿಸಿ ಹೇಳುವಿರಾ?

- ಮಕ್ಕಳಿಂದ ನಿರೀಕ್ಷಿಸುವ ಉತ್ತರಗಳನ್ನು ಚಾರ್ಟಿನಲ್ಲಿ ಗುರುತಿಸಬಹುದು.
  - ಸಂಗೀತವು ಪ್ರಕೃತಿಯಿಂದ ಉಂಟಾಗಿದೆ.
  - ಹಲವು ಪಕ್ಷಿ ಶಬ್ಧಗಳು ಹಾಗೂ ಪ್ರಕೃತಿ ಶಬ್ದಗಳೂ ಪರಸ್ಪರ ಸಾಮ್ಯವಿದೆ.
  - ಪಕ್ಷಿ ಹಾಗೂ ಮೃಗಗಳೊಂದಿಗೆ ಸಾಮ್ಯವಿದೆ.
  - ಸ್ವರಗಳು, ಸಪ್ತಸ್ವರಗಳು
- ಸ್ವರಗಳ ಕುರಿತು ಹೆಚ್ಚು ವಿವರಣೆ
  - ಸಂಗೀತ ಉದ್ಭವ – ವಿವರಣೆಯ ಸೂಚನೆಗಳು
  - ಪ್ರಕೃತಿಯಾಗಿದೆ ಸಂಗೀತದ ಮೂಲ
  - ಪ್ರಕೃತಿಯಲ್ಲಿನ ಮಧುರ ಶಬ್ಧಗಳ ಒಂದಾಗುವಿಕೆ ಸಂಗೀತ ಸೃಷ್ಟಿಗೆ ಕಾರಣವಾಗುವುದು.
  - ವಾಯು, ಜಲ, ಮಣ್ಣು, ಅಗ್ನಿ, ಆಕಾಶ ಇವುಗಳೆಲ್ಲಾ ಸಂಗೀತ ಶಬ್ಧಗಳಿಗೆಲ್ಲಾ ಮೂಲಾಧಾರವಾಗಿದೆ.
  - ಪ್ರಕೃತಿಯಲ್ಲಿನ ಕೆಲವು ಪ್ರತ್ಯೇಕ ಜೀವಿಗಳ ಪ್ರತ್ಯೇಕತೆಗೆ ಅನುಸರಿಸಿ ಸಪ್ತ ಸ್ವರಗಳು ಕ್ರಮೀಕರಿಸಲ್ಪಟ್ಟಿದೆ.
  - ಸಪ್ತ ಸ್ವರಗಳ ನಾಮಗಳು ಷಡ್ಜಂ, ಋಷಭಂ, ಗಾಂಧಾರಂ, ಮಧ್ಯಮಂ, ಪಂಚಮಂ, ಧೈವತಂ, ನಿಷಾದಂ.
- ಶಬ್ಧ ಮೂಲಗಳು

1. ವಾಯು (ಗಾಳಿ) – ವಾಯು ಚಲಿಸುವಾಗ, ವಸ್ತುವಿಗೆ ತಟ್ಟುವಾಗ
2. ಜಲ – ಜಲವು ಹರಿಯುವಾಗ, ಮೇಲಿನಿಂದ ಕೆಳಕ್ಕೆ ಬೀಳುವಾಗ (ಮಳೆ)
3. ಮಣ್ಣು – ಕಂಪನ ಉಂಟಾಗುವಾಗ, ತಾಗುವಾಗ
4. ಅಗ್ನಿ – ಜ್ವಲಿಸುವಾಗ, ಹತ್ತಿ ಉರಿಯುವಾಗ
5. ಆಕಾಶ – ಆಕಾಶದಲ್ಲಿನ ವಿವಿಧ ಚಲನೆಗಳು (ಮಳೆ, ಗುಡುಗು, ಮಿಂಚು)

***ಚಟುವಟಿಕೆ – 2***

- ಸಂಗೀತದ ಬೆಳವಣಿಗೆಯ ವಿವಿಧ ಹಂತಗಳು
  - ಆದಿ ಮಾನವನ ನಿತ್ಯಜೀವನದ ಚಟುವಟಿಕೆಗಳು ಸಂಗೀತಾತ್ಮಕವಾಗಿ ಬದಲಾಗುವುದು. ವಿವಿಧ ಸಂದರ್ಭಗಳಲ್ಲಿ ವಿವಿಧ ಆಶಯಗಳಿಗೆ ಅನುಸರಿಸಿ ಶಬ್ದ ಪ್ರದರ್ಶನ. (ಕೂಗುವುದು, ಗುಣುಗುಟ್ಟುವುದು, ಅಟ್ಟಹಾಸ, ಆರೋಹಣ – ಅವರೋಹಣ ಕ್ರಮದಲ್ಲಿರುವ ಕೆಲವು ಶಬ್ದ ಪ್ರದರ್ಶನಗಳು)
- ಮಕ್ಕಳನ್ನು ನಾಲ್ಕು ಗುಂಪುಗಳಾಗಿಸುವುದು. ಪ್ರತಿಯೊಂದು ಗುಂಪಿಗೂ ನೀಡುವುದಕ್ಕೆ ವಿವಿಧ ಸಂದರ್ಭಗಳು ಸೃಷ್ಟಿಸುವ ಶಬ್ದ ಪ್ರದರ್ಶನವನ್ನು ಬರೆದ ಟಿಪ್ಪಣಿಗಳನ್ನು ತಯಾರಿಸಿ ನೀಡುವುದು. ಗುಂಪಿಗೂ ಮಂಡನೆಗೂ ಅವಕಾಶವನ್ನು ನೀಡುವುದುಂಟು.
  - *ಟಿಪ್ಪಣಿ 1 : ದೂರವಿರುವವರಿಗೆ ಗಮನವನ್ನು ಸೆಳೆಯಲು ಶಬ್ದಗಳನ್ನು ಸೃಷ್ಟಿಸಬೇಕು.*
  - *ಟಿಪ್ಪಣಿ 2 : ಅಮೂಲ್ಯವಾದದೊಂದು ದೊರೆತಾಗ ಇರುವ ಆಹ್ಲಾದ ಪ್ರದರ್ಶನ.*
  - *ಟಿಪ್ಪಣಿ 3: ಶ್ರಮದೊಂದಿಗಿರುವ ಶಬ್ದ ಪ್ರದರ್ಶನ.*

- *ಟಿಪ್ಪಣಿ 4 : ಆಚಾರಗಳು, ವಿನೋದಗಳು ಎಂಬೀ ವೇಳೆಗಳಲ್ಲಿ ಉಂಟಾಗುವ ಶಬ್ದ ಪ್ರದರ್ಶನ.*

- ಪ್ರತಿಯೊಂದು ಗುಂಪಿನ ಮಂಡನೆ. ಮಂಡನೆಯ ಹಿರಿಮೆಗಳನ್ನು ಅಧ್ಯಾಪಕರು ಮತ್ತು ಇನ್ನಿತರ ಗುಂಪುಗಳೂ ಮೌಲ್ಯಮಾಪನ ಮಾಡುವುದು.
- **ಸರಳ ವಿವರಣೆ**
  - ಇಂತಹ ಸಾಂದರ್ಭಿಕವಾಗಿರುವ ಶಬ್ದ ಪ್ರದರ್ಶನಗಳು, ಚಟುವಟಿಕೆಗಳಿಗೆ ಅನುಗುಣವಾದ ಶಾರೀರಿಕ ಚಲನೆಗಳಿಗನುಸರಿಸಿ ತಾಳಾತ್ಮಕವಾಗಿ ಪ್ರದರ್ಶಿಸಲ್ಪಡುವಾಗ ಸಂಗೀತಾತ್ಮಕವಾಗುವುದು. ಮೊದಲ ಸಂಗೀತ ಸೃಷ್ಟಿ ಆದಿ ಮಾನವನಿಂದಾಗಿದೆ.
- **ಕ್ರೋಡೀಕರಣ**
  - ಪ್ರಕೃತಿ ಶಬ್ದಗಳನ್ನು ಸಂದರ್ಭಗಳಿಗೆ ಅನುಸಾರವಾಗಿ ಕ್ರಮೀಕರಿಸಿ ಪ್ರಯೋಗಿಸಲ್ಪಡುವಾಗ ಸಂಗೀತವಾಗುವುದು.
  - ಆದಿ ಮಾನವರು ಪ್ರಯೋಗಿಸಿದ ಸಂಗೀತ ರೂಪಗಳಿಗೆ  ಕಾಲಾಂತರದಲ್ಲಿ ಹಲವು ಬದಲಾವಣೆಗಳು ಉಂಟಾಗಿದ್ದು, ಪುರೋಗತಿಯನ್ನು ಪಡೆದುವು. ಹಲವು ವರ್ಷಗಳ ಹಿಂದೆಯೇ ವೈವಿಧ್ಯಗಳು ಸೃಷ್ಟಿಸಲ್ಪಟ್ಟವು.

***ಚಟುವಟಿಕೆ 3 : ನಮ್ಮ ಸಂಗೀತ – ಶೈಲಿ : ಕರ್ನಾಟಕ ಸಂಗೀತವನ್ನು ಪರಿಚಯಪಡಿಸುವುದು.***

- ಪರಿಚಿತವಾದ ಎರಡು ಸಿನಿಮಾ ಹಾಡುಗಳನ್ನು ಕೇಳುವುದು. (ಒಂದು ಹಾಡು ಕರ್ನಾಟಕ ಶೈಲಿ, ಇನ್ನೊಂದು ಹಿಂದೂಸ್ಥಾನಿ ಶೈಲಿ)

  ಉದಾ :

  1. *"ಶಿಲೆಗಳು ಸಂಗೀತವ ಹಾಡಿದೆ"*
  2. *"ಶಂಕರಾ ನಾದ ಶರೀರ ಹರಾ'*
  3. *"ಆರಾಧಿಸುವೆ ಮದನಾರಿ"*
  4. *"ನೀ ಹಿಂಗ ನೋಡಬೇಡ ನನ್ನ"*

- ಕೇಳಿದ ನಾಲ್ಕು ಹಾಡುಗಳನ್ನು ಆಧಾರವಾಗಿರಿಸಿ ಪ್ರಶ್ನೆಗಳು.
  - ಈ ಎರಡು ಹಾಡುಗಳ ಶೈಲಿಯಲ್ಲಿ ಯಾವ ಶೈಲಿಯಲ್ಲಿರುವ ಹಾಡುಗಳಾಗಿವೆ ಹೆಚ್ಚು ಕೇಳಲಿರುವುದು?
  - ಇವುಗಳು ಪರಸ್ಪರ ವ್ಯತ್ಯಸ್ಥವಾಗಿವೆ?
- ಪ್ರತಿಕ್ರಿಯೆಗಳು – ವ್ಯಕ್ತಿಗತ. ಪ್ರತಿಕ್ರಿಯೆಗಳನ್ನು ಆಧಾರವಾಗಿರಿಸಿ ಸರಳವಾದ ವಿವರಣೆ.

*ನಾವು ಹೆಚ್ಚಾಗಿ ಕೇಳುವ ಹಾಡುಗಳು ನಮ್ಮ ಸ್ವಂತ ಸಂಗೀತ ಶೈಲಿಯಾದ ಕರ್ನಾಟಿಕ್ ಸಂಗೀತಕ್ಕೆ ಸಂಬಂಧಪಟ್ಟಿದೆ. ಇದನ್ನು ದಕ್ಷಿಣ ಭಾರತೀಯ ಸಂಗೀತ ಎಂದು ಕರೆಯಲ್ಪಡುತ್ತದೆ. ಇನ್ನಿತರ ಹಾಡುಗಳು ಹಿಂದೂಸ್ಥಾನಿ ಸಂಗೀತ ಶೈಲಿಯೊಂದಿಗೆ ಸಂಬಂಧಪಟ್ಟಿದೆ.*

*ಕರ್ನಾಟಕ ಸಂಗೀತ*

*ದಕ್ಷಿಣ ಭಾರತದ ರಾಜ್ಯಗಳಲ್ಲಿ ಪ್ರಚಾರದಲ್ಲಿರುವ ಸಂಗೀತ.*
*ಮೂಲಾಧಾರ ತತ್ವಗಳು : ಸಪ್ತಸ್ವರಗಳಲ್ಲಿ ಅಧಿಷ್ಠಿತವಾದ ಸಂಗೀತ.*
*ಷಡ್ಜಂ (ಸ), ಪಂಚಮಂ(ಪ), ಎಂಬಿವುಗಳಿಗೆ ಹೊರಗೆ ರಿ, ಗ, ಮ, ಧ, ನಿ ಎಂಬೀ ಐದು ಹಾಡುಗಳಿಗೆ ಎರಡು ವಕಬೇಧಗಳೆಂಬ ವಿಧಗಳಿವೆ.*

ರಿ – ಶುದ್ಧ ಋಷಭಂ, ಚತುರಶ್ರುತಿ ಋಷಭಂ

ಗ – ಸಾಧಾರಾಣ, ಅಂತರಗಾಂಧಾರಂ

ಮ – ಶುದ್ಧಮಾಧ್ಯರ್ಯಂ, ಪ್ರತಿಮಾಧ್ಯರ್ಯಂ

ಧ – ಶುದ್ಧದೇವತಂ, ಕಾಕಳಿ ನಿಷಾದಂ

**ಕರ್ನಾಟಿಕ್ ಸಂಗೀತ ರಾಗ ಸಂಪ್ರದಾಯಗಳು**

ಜನ್ಯರಾಗಗಳೂ ಜನಕ ರಾಗಗಳೂ ಆಗಿವೆ ಕರ್ನಾಟಿಕ್ ಸಂಗೀತ. 72 ಜನಕರಾಗಗಳಿವೆ. ಇವುಗಳಿಂದ ಜನಿಸುವ ಧಾರಾಳ ಜನ್ಯರಾಗಗಳಿವೆ. ಜನಕ ರಾಗಗಳು ಬೇರೊಂದು ರಾಗದ ಜನನಕ್ಕೆ ಕಾರಣವಾಗುವ ರಾಗಗಳಾಗಿವೆ. ಸಂಪೂರ್ಣ ಹಾಡುಗಳೆಂದು, ಮೇಳಕರ್ತರಾಗಗಳೆಂದು ಇವುಗಳಿಗೆ ಹೆಸರಿದೆ. ಆರೋಹಣ – ಅವರೋಹಣ ಸ್ವರಗಳು ಪೂರ್ಣವಾಗಿ ಕ್ರಮವಾಗಿಯೂ ಬರುವ ರಾಗಗಳು ಜನಕ ರಾಗಗಳು, ಉದಾ : ಕಲ್ಯಾಣಿ, ಮಾಯಮಾಳವಗೌಳ, ಶಂಕರಾಭರಣಂ.

**ಜನ್ಯರಾಗಗಳು**

ಜನಕ ರಾಗದಿಂದುಟಾಗುವ ರಾಗಗಳು. ಆರೋಹಣ – ಅವರೋಹಣಗಳಲ್ಲಿ ಸ್ವರಗಳು ಪೂರ್ಣವಾಗಿಯೂ ಕ್ರಮವಾಗಿಯೂ ಇರಬೇಕೆಂದಿಲ್ಲ. ಜನ್ಯರಾಗಗಳು ಅನೇಕವಿದೆ. ಹೊಸದಾಗಿ ಈಗಲೂ ಸಂಗೀತಜ್ಞರು ಸೃಷ್ಟಿಸುತ್ತಿದ್ದಾರೆ.

ಜನ್ಯ ರಾಗಕ್ಕೆ ಉದಾಹರಣೆ – ಮೋಹನಂ, ಹಿಂದೋಳಂ, ಹಂಸಧ್ವನಿ, ವಸಂತ.......

ಕರ್ನಾಟಿಕ್ ಸಂಗೀತ – ಸಂಗೀತ ಪಿತಾಮಹ

ಶ್ರೀನಿವಾಸ ನಾಯ್ಕರ್ – ಪುರಂದರದಾಸರಾಗಿ ಬದಲಾದ ಕಥೆ.

(ಧನಿಕನೂ, ದುರಾಗ್ರಹಿಯಾಗಿದ್ದ ರತ್ನವ್ಯಾಪಾರಿ ಶ್ರೀನಿವಾಸನಿಂದ ಉತ್ತಮ ಜ್ಞಾನವೂ ಸಂಗೀತ ಪಂಡಿತನೂ ಆಗಿದ್ದ ಕರ್ನಾಟಕ ಸಂಗೀತ ಪಿತಾಮಹನು ಆಗಿ ಬದಲಾದ ಪುರಂದರದಾಸರ ಕಥೆ.)

**ರೆಫರೆನ್ಸ್ :**

ಕರ್ನಾಟಿಕ್ ಸಂಗೀತ ಚರಿತ್ರೆ

ದಕ್ಷಿಣ ಇಂಡಿಯಾದಲ್ಲಿ ಸಂಗೀತ – ಕೆ.ಟಿ. ರವೀಂದ್ರನಾಥ್

ಸಂಗೀತ ಕಲ್ಪದ್ರುಮಂ – ಮುತ್ತಯ್ಯ ಭಾಗವತರ್

ಸಂಗೀತಶಾಸ್ತ್ರ ನವಸುಧ – ಜಿ. ದೇವರಾಜನ್ ಮಾಸ್ಟರ್

**ಕರ್ನಾಟಕ ಸಂಗೀತದ ತಯಾರಿ**

ಕರ್ನಾಟಕ ಸಂಗೀತ ಸಂಪ್ರದಾಯದಲ್ಲಿ ಮೂಲ ರಾಗ 'ಮಾಯಾಮಾಲವಗೌಳ' ವಾಗಿದೆ. ಈ ರಾಗದಲ್ಲಿ ಅಭ್ಯಾಸ ಪಾಠಕ್ರಮಗಳು ಎಲ್ಲವೂ ತಯಾರಿದೆ. ಇದಲ್ಲದೆ ಅಲಂಕಾರಗಳು, ಗೀತೆಗಳು, ಸ್ವರಜತಿಗಳು, ವರ್ಣಗಳು, ತಿಲ್ಲಾನಗಳು, ತರಂಗಗಳು ಎಂಬಿವುಗಳು ಸಂಗೀತ ರೂಪಗಳನ್ನು ಅವುಗಳ ವಿಶೇಷತೆಗಳಿಗನುಸಾರವಾಗಿ ಕ್ರಮೀಕರಿಸಿ ಕರ್ನಾಟಕ ಸಂಗೀತಕ್ಕೆ ಸರಿಯಾದ ಒಂದು ಕ್ರಮವನ್ನು ಮಾಡಿದ್ದು ಪುರಂದರದಾಸರು. ಕರ್ನಾಟಿಕ್ ಸಂಗೀತದ ಪಿತಾಮಹರು ಎಂದು ಬಿರುದಿಗೆ ಅರ್ಹರಾಗಿದ್ದಾರೆ ಶ್ರೀ ಪುರಂದರದಾಸರು.

***ಸಂಗೀತದ ಪಾಠಗಳ ಕುರಿತಾದ ಲಘು ವಿವರಣೆ***

*ಸಾಲುಗಳು : ಸಪ್ತಸ್ವರಗಳನ್ನು ಕೆಲವು ಪ್ರತ್ಯೇಕ ಕ್ರಮದಲ್ಲಿರಿಸಿ ಸ್ವರಸ್ಥಾನ ದೃಢಪಡುವುದಕ್ಕೆ ಶಬ್ದ ಕ್ರಮೀಕರಣ ಹೆಚ್ಚಾಗಿ ಉಂಟಾಗಲು ಉಪಯೋಗಿಸುವ ಸ್ವರದ ಗುಂಪುಗಳು.*

*ಅಲಂಕಾರಗಳು : ಸಪ್ತ ತಾಳಗಳನ್ನು ತಿಳಿಯುವುದಕ್ಕೆ ವಿವಿಧ ಸ್ವರ ಸಂಚಾರಗಳನ್ನು ಅನಾಯಾಸವಾಗಿ ಆಲಾಪಿಸಲು ಬೇಕಾದ ರೀತಿಯಲ್ಲಿ ಕ್ರಮಾನುಗತವಾಗಿಸಿದ ಸ್ವರದ ಗುಂಪುಗಳು.*

*ಗೀತೆ : ಸರಳವಾದ ಸಂಗೀತ ರೂಪ. ರಾಗದ, ತಾಳದ ಸಾಮಾನ್ಯ ರೂಪ. ಸ್ವರಗಳ ಪ್ರಯೋಗಗಳಿಗನುಗುಣವಾಗಿರುವ ಸಂಗೀತ ರೂಪ. ತಾಳಗಳ ಪ್ರಯೋಗಗಳಿಗೆ ಅನುಗುಣವಾಗಿ ಸಾಹಿತ್ಯವನ್ನು ಸೇರಿಸಿ ಹಾಡುವುದು.*

*ವರ್ಣ : ರಾಗದ ಹಾಗೂ ತಾಳದ ಸವಿಶೇಷ ಪ್ರಯೋಗಗಳು ಜೀವಸ್ವರ ಪ್ರಯೋಗಗಳನ್ನು ಹೊಂದಿದ ಸಂಗೀತ ರೂಪ. ಬಹಳ ದಿನಗಳ ನಂತರ ಆಲಾಪಿಸಲು ಸಾಧ್ಯವಾಗುವುದು.*

*ಕೀರ್ತನೆ : ಭಕ್ತಿರಸ ಪ್ರಧಾನವಿರುವ ಸಾಹಿತ್ಯವನ್ನೊಳಗೊಂಡ ಸಂಗೀತ ರೂಪ. ರಾಗದ ಹಾಗೂ ತಾಳದ ರಸ ಪ್ರಧಾನಗಳಾದ ಸಂಚಾರಗಳ ಪ್ರಯೋಗಗಳನ್ನು ಒಳಗೊಳ್ಳುವ ಸರಳವಾದ ಸಂಗೀತ.*

*ಕೃತಿ : ರಾಗಭಾವವನ್ನು ಹೆಚ್ಚು ಧ್ವನಿಸುವುದೂ ಸಾಹಿತ್ಯವೂ ಸಂಗೀತವೂ ಸಮಾನವಾದ ರೀತಿಯಲ್ಲಿ ಒಂದಾಗಿಸುವುದು ರಾಗದ ಜೀವ ಪ್ರಯೋಗಗಳು ಒಳಗೊಳ್ಳುವ ಸಾಹಿತ್ಯದ ಸವಿಶೇಷಗಳು ಹೆಚ್ಚಾಗಿ ಒಳಗೊಂಡ ವಿಸ್ತರಿಸಿರುವ ಆಲಾಪನಾ ಸಾಧ್ಯತೆ ಇರುವ ಸಂಗೀತ ರೂಪ.*

***ಸಂಗೀತ ಕಥೆಗಳು :***

***ಸಂತಕವಿ ಕನಕದಾಸರು : ಡಾ. ಚಿಕ್ಕಮಗಳೂರು ಗಣೇಶ***

***ಷಡ್ಕಾಲಗೋವಿಂದಮಾರಾರ್ – ತ್ಯಾಗರಾಜ ಸ್ವಾಮಿಗಳ ಅಡುಕ್ಕಲ್***

***ಎಂದಾರೋ ಮಹಾನುಭಾವುಲು – ರಚಿಕ್ಕಾನುಂಡಾಯ ಸಾಹಾಚರ್ಯಂ***

***ರಾಗಸವಿಶೇಷತೆಗಳನ್ನು ತಿಳಿಸುವ ಕಥೆಗಳು – ಅಮೃತವರ್ಷಿಣಿ (ಮುತ್ತುಸ್ವಾಮಿದೀಕ್ಷಿತರು), ಆಹಿರಿ (ಶ್ಯಾಮಶಾಸ್ತ್ರಿ), ದೀಪಕ್ (ತಾನ್‌ಸೇನ್)***

***ಸಂಗೀತಜ್ಞರ ಕಥೆಗಳು : ತ್ರಿಮೂರ್ತಿಗಳು, ಸ್ವಾತಿತಿರುನಾಳ್, ಚೆಂಬೈ***

***(ಆಲಾಪನೆ – ದಕ್ಷಿಣ ಇಂಡಿಯಾದಲ್ಲಿ ಸಂಗೀತ – ಎ.ಕೆ. ರವೀಂದ್ರನಾಥನ್)***

*History of Indian Music - Sambamoorthy)*

## ಕ್ರೋಡೀಕರಣ

ಕರ್ನಾಟಕ ಸಂಗೀತವು ಲೋಕ ಸಂಗೀತ ಸಂಸ್ಕೃತಿಯ ಮಹತ್ತರವಾದ ಮೊದಲ ಜೋಡಣೆಯಾಗಿದೆ. ರಾಗವೈವಿಧ್ಯಗಳಿಂದಲೂ ತಾಳವೈವಿಧ್ಯಗಳಿಂದಲೂ ಇನ್ನಿತರ ಸಂಗೀತ ಶೈಲಿಗಳಿಂದ ಕೂಡಿವೆ. ಸಂಗೀತದ ವಿಕಾಸಾತ್ಮಕವಾದ ಚರಿತ್ರೆಗಳೂ ಪುರೋಗಮನ ಚರಿತ್ರೆಯು ಬೃಹತ್ತಾಗಿದೆ. ಕರ್ನಾಟಕ ಸಂಗೀತದ ವಿವಿಧ ವಲಯಗಳ ಕುರಿತು ಪ್ರಾಥಮಿಕವಾದ ಆದರೆ ಅತ್ಯಂತಾಪೇಕ್ಷಿತವು ಆದ ತಿಳುವಳಿಕೆಗಳನ್ನು ಗ್ರಹಿಸಲು ಇಂತಹ ಸಂಗೀತದ ಚಟುವಟಿಕೆಗಳಿಂದ ಸಾಧ್ಯವಾಗುವುದು.

# ಯೂನಿಟ್ – 3

## ಮುನ್ನುಡಿ

ವಾದ್ಯೋಪಕರಣಗಳು ಆಲಾಪನಾ ಪ್ರಕ್ರಿಯೆಗೆ ನೀಡುವ ಸಮೃದ್ಧಿ ಆಕರ್ಷಕವಾಗಿದೆ. ಆಲಿಸುವವರಲ್ಲಿ ಹೆಚ್ಚು ಉತ್ಸಾಹ ಜನಿಸುವುದಕ್ಕೆ ಪುನಃ ಪ್ರಕಟನೆಯನ್ನು ಕೇಳಲು ಪ್ರೇರೇಪಿಸಲು ಹಿನ್ನಲೆ ಸಂಗೀತವು ದಾರಿ ಮಾಡಿಕೊಡುತ್ತದೆ. ಇದಲ್ಲದೇ ಗಾಯಕನಿಗೆ ಅವನ ಆಲಾಪನೆಗೆ ಹೆಚ್ಚು ಆತ್ಮವಿಶ್ವಾಸ ನೀಡಲು ಇಂತಹ ವಾದನಗಳಿಗೆ ಸಾಧ್ಯವಾಗುತ್ತದೆ. ಪೂರ್ಣವಾದ ಸಂಗೀತ ಜ್ಞಾನ ಗಾಯಕನಲ್ಲಿ ಸೃಷ್ಟಿಸಲು ವಾದ್ಯವಾದನಗಳು ಸಹಾಯ ಮಾಡುತ್ತವೆ. ಪ್ರಾಚೀನ ಕಾಲದಿಂದಲೇ ಭಾರತೀಯ ಸಂಗೀತದಲ್ಲಿ ವೃಂದಾವಾದನಗಳಿಗಿರುವ ಸ್ಥಾನವು ಬಹಳ ದೊಡ್ಡದಾಗಿದೆ. ಇಂದು ಧಾರಾಳ ವೈವಿಧ್ಯವಿರುವ ವಾದ್ಯಗಳ ಸಮ್ಮೇಳನವಾಗಿದೆ ಪ್ರತಿಯೊಂದು ಸಂಗೀತ ಪ್ರದರ್ಶನಗಳು. ವಾದ್ಯಗಳಿಗೆ ಅನುಗುಣವಾಗಿ ಮಕ್ಕಳನ್ನು ಸನ್ನದ್ಧರಾಗಿಸುವುದು ಈ ಯೂನಿಟಿನಲ್ಲಿರುವ ಚಟುವಟಿಕೆಗಳ ಗುರಿಯಾಗಿದೆ.

## ಕಲಿಕಾ ಸಾಧನೆ

- ಹಾಡುಗಳು ಕರೋಕ್ ಸಂವಿಧಾನಗಳೊಂದಿಗೂ ವಾದ್ಯೋಪಕರಣಗಳೊಂದಿಗೂ ಆಲಾಪಿಸುವುದು.

## ಆಶಯ, ತಿಳುವಳಿಕೆ

- ವಾದ್ಯೋಪಕರಣಗಳೊಂದಿಗೋ ಟ್ರಾಕ್ (ಕರೋಕ್) ಸಂವಿಧಾನಗಳೊಂದಿಗೋ ಹಾಡುವಾಗ ಆಸ್ವಾದನೆ ಹೆಚ್ಚಾಗುತ್ತದೆ.
- ತಾಳ, ಶ್ರುತಿ, ರಾಗ ಇವುಗಳನ್ನು ಗಮನಿಸಿ ಆಲಾಪನೆ ನಡೆಸಬೇಕಾಗಿದೆ.
- ವಾದ್ಯವಾದನ, ಬಾಯಿತಾಳಗಳ ಕುರಿತಾದ ಚರ್ಚೆ.
- ಉಪಕರಣಗಳ ವಿಶೇಷತೆಗಳನ್ನು ತಿಳಿಯುವುದು.

## ಪ್ರಕ್ರಿಯೆ

- ಟ್ರಾಕ್ ಸಂವಿಧಾನದಲ್ಲಿರುವ ಪರಿಶೀಲನೆ (ಐ.ಸಿ.ಟಿ)
- ನಿಖರವಾದ ಕಾಲಪ್ರಮಾಣ, ಹಾಡುವುದಕ್ಕಿರುವ ಪರಿಶೀಲನೆ, ಆಶಯಗ್ರಹಣ, ಮಂಡಿಸುವಿಕೆ.

## ಮೌಲ್ಯನಿರ್ಣಯ

- ಆಲಾಪನೆಯ ಹಿರಿಮೆ – ವಾದ್ಯೋಪಕರಣಗಳೊಂದಿಗೆ ಆಲಾಪಿಸಲಿರುವ ಸಾಮರ್ಥ್ಯ.
- ಸರಳವಾದ್ಯಗಳು

## ಒಳಪುಟಗಳಲ್ಲಿ

ನಿಖರವಾಗಿ ಸಂಗೀತಾಂಶಗಳನ್ನು ಒಳಗೊಂಡು ವಾದ್ಯಗಳಿಗೆ ಅನುಗುಣವಾಗಿ ಆಲಾಪನೆ ನಡೆಸಲು ಬೇಕಾಗಿರುವ ಚಟುವಟಿಕೆಗಳು ಈ ಯೂನಿಟಿನ ಒಳಪುಟಗಳಲ್ಲಿರುವುದು. ಅತ್ಯುತ್ತಮವಾದ ನಿರೀಕ್ಷಣಾ ಸಾಮರ್ಥ್ಯ, ಆಸ್ವಾದನಾ ಸಾಮರ್ಥ್ಯ ಎಂಬಿವುಗಳನ್ನು ಹೆಚ್ಚಿಸಲು ಇದರಲ್ಲಿ ಅಡಕವಾಗಿರುವ ಚಟುವಟಿಕೆಗಳು ಸಹಾಯಕವಾಗುತ್ತದೆ.

## ಕಲಿಕಾ ಚಟುವಟಿಕೆಗಳು

***ಚಟುವಟಿಕೆ – 1***

- ಪರಿಚಿತವಾದ ಸಿನಿಮಾ ಹಾಡುಗಳು/ದೇಶಭಕ್ತಿ ಹಾಡುಗಳು/ಉತ್ಸವ ಹಾಡುಗಳು ಇವುಗಳ ಮೈನಸ್ ಟ್ರಾಕ್ ಕೇಳಿಸುವುದು.
- ಪ್ರಸಿದ್ಧವಾದ ಹಾಡುಗಳನ್ನು ಮೊದಲೇ ತಯಾರಿಸಿದ/ಹಿನ್ನಲೆ ಸಂಗೀತದೊಂದಿಗೆ ಹಾಡುವುದು.
- ಕೇಳಿದ ಹಾಡುಗಳನ್ನು ಗುರುತಿಸುವುದು – ಪ್ರಶ್ನೆಗಳ ಆಧಾರದಲ್ಲಿ.
- ಕೇಳಿದ ವಾದ್ಯೋಪಕರಣಗಳ ಸಂಗೀತ ಯಾವ ಹಾಡಿನದ್ದಾಗಿದೆ?
- ಬಾಯಿತಾಳಗಳಿಲ್ಲದೆ ವಾದ್ಯ ಸಂಗೀತ ಮಾತ್ರ ಕೇಳಿದಾಗ, ಪೂರ್ಣವಾಗಿ ಆಸ್ವಾದಿಸಲು ಸಾಧ್ಯವಾಗಿದೆಯೋ?

**ಮೈನಸ್ ಟ್ರಾಕ್**

***ಬಾಯಿತಾಳಗಳಿಲ್ಲದೆ ಇರುವ ಇನ್‌ಸ್ಟ್ರುಮೆಂಟಿನ ಮಾತ್ರ ಸಂಗೀತವಾಗಿದೆ.***

- ಯಾವುದೆಲ್ಲಾ ಉಪಕರಣಗಳು ಈ ಮೈನಸ್ ಟ್ರಾಕಿನಲ್ಲಿ ಪ್ರಯೋಗಿಸಲಾಗುವುದು? (ಓದಲಾಗಿದೆ)

***ಚಟುವಟಿಕೆ – 2***

- ಉತ್ತರಗಳ ಪಟ್ಟಿ ತಯಾರಿ (ವ್ಯಕ್ತಿಗತವಾಗಿ) ಮಂಡನೆ/ದಾಖಲಿಸುವುದು.
  - ಕೇಳಿದ ಮೈನಸ್ ಟ್ರಾಕಿನ ಹಾಡಿನ ಹೆಸರು ಹೇಳುವುದು.
  - ಆಲಾಪನೆ ಇಲ್ಲದ ವಾದ್ಯ ಸಂಗೀತ (ಮೈನಸ್ ಟ್ರಾಕ್) ಮಾತ್ರ ಕೇಳಿದಾಗ ಹೆಚ್ಚು ಆಸ್ವಾದಿಸಲು ಸಾಧ್ಯವಾಯಿತು.
- ಮೈನಸ್ ಟ್ರಾಕ್ ವಾದ್ಯಗಳ ಪಟ್ಟಿ ತಯಾರಿಸುವುದು.
- ಮೊದಲು ಕೇಳಿದ ಮೈನಸ್ ಟ್ರಾಕಿನ ಬಾಯಿತಾಳಗಳೊಂದಿಗೆ (ಪ್ಲಸ್ ಟ್ರಾಕ್) ಪ್ರದರ್ಶನವನ್ನು ಕೇಳಿಸುವುದು. ಆಸ್ವಾದಿಸಲು ಸಮಯವನ್ನು ನೀಡುವುದು.
- ಮೈನಸ್ ಟ್ರಾಕ್ ಮತ್ತು ಪ್ಲಸ್ ಟ್ರಾಕ್ (ಬಾಯಿಹಾಡುಗಳಿಲ್ಲದೆಯೂ ಬಾಯಿಹಾಡುಗಳೊಂದಿಗೂ) ಪರಸ್ಪರ ತಾರತಮ್ಯ ಮಾಡುವುದು. ಹೆಚ್ಚು ಆಸ್ವಾದನಕರವಾದುದು ಆಯ್ಕೆ ಮಾಡಿ ವ್ಯಕ್ತಿಗತವಾದ ಆಸ್ವಾದನಾ ಟಿಪ್ಪಣಿ ತಯಾರಿಸುವುದು.
- ಮಂಡನೆ, ಮಂಡನೆಯ ಹಿರಿಮೆಯನ್ನು ಅಧ್ಯಾಪಕರು ಮೌಲ್ಯಮಾಪನ ಮಾಡುವುದು.
- ಮೈನಸ್ ಟ್ರಾಕಿನೊಂದಿಗೆ (ಕರೋಕ್) ಮಕ್ಕಳ ಆಲಾಪನೆ.
- ಮೈನಸ್ ಟ್ರಾಕಿನೊಂದಿಗೆ ಬಾಯಿತಾಳಗಳೊಂದಿಗೆ ಸಿ.ಡಿ. ಕೇಳಿಸುವುದು. ಒಂದು ಹಾಡು ಮೂರಕ್ಕಿಂತ ಹೆಚ್ಚು ಬಾರಿ ಕೇಳಿಸುವುದು.

***ಚಟುವಟಿಕೆ – 3***

- ಕೇಳಿಸಿದ ಹಾಡುಗಳೊಂದಿಗೆ ಮಕ್ಕಳೊಂದಿಗೆ ಆಲಾಪಿಸಲು ನಿರ್ದೇಶಿಸುವುದು.
- ಮೂರೋ ಅಥವಾ ಅದಕ್ಕಿಂತ ಹೆಚ್ಚು ಬಾರಿ ಆಲಾಪನೆಯನ್ನು ಆವರ್ತಿಸುವುದು.

  ಮಕ್ಕಳ ಅಲಾಪನೆಯ ನಂತರ ವಾದ್ಯೋಪಕರಣಗಳೊಂದಿಗೆ ಬಾಯಿತಾಳಗಳು ಸೇರಿ ಬರುವಾಗ ಪ್ರಕಟವಾಗುವ ಸವಿಶೇಷತೆಗಳನ್ನು ಕಂಡುಹಿಡಿಯುವುದು. (ಪ್ರಶ್ನೆಗಳ ಆಧಾರದಲ್ಲಿ)
  - ಬಾಯಿತಾಳಗಳೂ ವಾದ್ಯೋಪಕರಣಗಳೂ ಒಟ್ಟಾಗಿ ಬರುವಾಗ ಶ್ರುತಿಯ ಏಕೀಕರಣ. ಅವಶ್ಯಕತೆ ಇದೆಯೋ? (ಶ್ರುತಿ ಏಕೀಕರಣ – ಒಂದು ಶ್ರುತಿಯಲ್ಲಿರುವ ಪ್ರದರ್ಶನ)
  - ಬಾಯಿ ಹಾಡಿನ ವಾದ್ಯೋಪಕರಣಗಳ ತಾಳ ಕ್ರಮೀಕರಣ ಏಕೀಕರಿಸಲ್ಪಡುವುದಾಗಿದೆಯೇ?
  - ಪ್ರದರ್ಶನದಲ್ಲಿ ವಾದ್ಯಗಳ ವಾದನಕ್ಕೋ ಅಥವಾ ಹಾಡಿಗೋ ಮೊದಲ ಪರಿಗಣನೆ?

- ಈ ಪ್ರದರ್ಶನವನ್ನು ಬಾಯಿಹಾಡುಗಳ ಮೊದಲಿನಿಂದ ಕೊನೆಯವರೆಗೆ ವಾದನದೊಂದಿಗೆ ಕೇಳುತ್ತಿರುವಿರೇ?
- ವಾದ್ಯೋಪಕರಣಗಳ ವಾದನ ಹಾಡುಗಳೊಂದಿಗೆ ಹಾಡಿನ ಯಾವುದೆಲ್ಲಾ ಭಾಗಗಳಲ್ಲಿ ಹೆಚ್ಚು ಪ್ರಾಧಾನ್ಯವನ್ನು ನೀಡಿರುವುದು? ಯಾಕೆ?

● ಮಕ್ಕಳ ಉತ್ತರಗಳು

- ಒಂದೇ ಗುಂಪಿನಲ್ಲಿ ಪ್ರದರ್ಶನವನ್ನು ಕೇಳಿದರೆ ಮಾತ್ರವೇ ಆಲಿಕೆಯಲ್ಲಿ ಸುಖವಿರುವುದು.
- ತಾಳವು ಪ್ರದರ್ಶನದೊಂದಿಗೆ ಸೇರಿ ಬಂದರೆ ಆಲಿಕೆಯಲ್ಲಿ ಸುಖವಿರುವುದು.
- ಬಾಯಿಹಾಡಿನ ಮೊದಲು ಸಾಲುಗಳು 4, 6 ಕ್ರಮದಲ್ಲಿ ಮಧ್ಯೆ ಪಲ್ಲವಿ ಕಳೆದ ನಂತರ ನಿಲ್ಲಿಸುವುದು. ಓರ್ಕೇಸ್ಟ್ರಾ ವಾದನ ನಂತರ ಹತ್ತಿರದಲ್ಲೇ ಇರುವ ಇನ್ನೊಂದು ಸಾಲನ್ನು ಹಾಡುವುದು.
- ಪಲ್ಲವಿಗಿಂತ ಮೊದಲು, ಪಲ್ಲವಿಗಿಂತ ನಂತರ ಅನುಪಲ್ಲವಿಯನ್ನು ಹಾಡುವಾಗಲೂ, ಚರಣವನ್ನು ಹಾಡಿ ಆರಂಭಿಸುವುದಕ್ಕೂ ಮುನ್ನ, ತುಂಡು ಪಲ್ಲವಿ ಆಲಾಪನೆಯ ಮೊದಲು.

> **ತುಂಡುಪಲ್ಲವಿ**
>
> ಪಲ್ಲವಿ, ಅನುಪಲ್ಲವಿ, ಚರಣವನ್ನು ಹಾಡಿದ ನಂತರ ಪುನಃ ಹಾಡಿನ ಮೊದಲ ಭಾಗದ ಎರಡು ಸಾಲುಗಳನ್ನು ಹಾಡುವುದೇ ತುಂಡು ಪಲ್ಲವಿ.

● ಅಧ್ಯಾಪಕರು ಮಕ್ಕಳ ಉತ್ತರವನ್ನು ವ್ಯಕ್ತಿಪರವಾಗಿ ಗುರುತಿಸಲು ನಿರ್ದೇಶಿಸುವುದೂ ಅವರ ತೀರ್ಮಾನಗಳನ್ನು ಚಾರ್ಟಿನಲ್ಲಿ ಬರೆಯುವುದು. ಮಕ್ಕಳ ಉತ್ತರಗಳನ್ನು ಮೌಲ್ಯಮಾಪನದ ಮೂಲಾಧಾರದಲ್ಲಿ ಹೆಚ್ಚು ವಿವರಣೆಯನ್ನು ನೀಡುವುದು.

*ಸೂಚಕಗಳು*

- ವಾದ್ಯೋಪಕರಣಗಳೂ ಬಾಯಿಹಾಡು ಶ್ರುತಿ ಸೇರಿ ಬಂದರೆ ಮಾತ್ರವೇ ಹಾಡುಗಳು ಹೆಚ್ಚು ಆಸ್ವಾದಕರವಾಗುವುದು.
- ವಾದ್ಯೋಪಕರಣದ ಹಾಡಿನೊಂದಿಗಿರುವ ವಾದನಕ್ಕೆ ಹೆಚ್ಚು ಗಮನಕೊಟ್ಟು ಕೇಳಿದರೆ ಮಾತ್ರವೇ ನಿಖರವಾಗಿ ಅವುಗಳ ಸಾಲುಗಳನ್ನು ಇಂಪಾಗಿ ಹಾಡಲು ಸಾಧ್ಯವಾಗುವುದು.
- ಆರಂಭದಲ್ಲಿಯೂ ಮಧ್ಯದಲ್ಲೂ ಪ್ರದರ್ಶನದೊಂದಿಗೆ ಪ್ರಯೋಗಿಸುವ ವಾದನ ಸವಿಶೇಷತೆಯು ನಿಖರತೆಯೊಂದಿಗೆ ಅರ್ಥಮಾಡಿಕೊಳ್ಳಬೇಕು.
- ಪಲ್ಲವಿ, ಅನುಪಲ್ಲವಿ ಹಾಗೂ ಚರಣಗಳೊಂದಿಗೆ ಸಾಲುಗಳೆಡೆಯಲ್ಲಿ ಬರುವ ಚಿಕ್ಕ ಬಿಡುವುಗಳಲ್ಲಿ ವಾದ್ಯೋಪಕರಣದಲ್ಲಿ ಕೇಳಿದ ಸಂಗೀತ ಕಲೆಗಳಲ್ಲಿ ಮುಂದಿನ ಮಾತುಗಳೋ ಸಾಲುಗಳೋ ಹೆಚ್ಚು ಮನೋರಂಜನೆಯಾಗಿ ಆಲಾಪಿಸುವ ಸಂಗೀತ ವಿಶೇಷತೆ ನೀಡುವುದು.
- ಬಾಯಿಹಾಡು ಮತ್ತು ವಾದ್ಯೋಪಕರಣ ಸಂಗೀತವು ಬಹಳ ತನ್ಮಯದಿಂದೊಡಗೂಡಿ ಹೊಂದಿಕೊಂಡು ಸೇರಿದ ಪ್ರದರ್ಶನವನ್ನು ನೋಡಿದಾಗ ಮಾತ್ರವೇ ಒಂದು ಸಂಗೀತ ಪ್ರದರ್ಶನ ಕೇಳುವವನಿಗೆ ಸಮೃದ್ಧತೆಯೂ ಆಸ್ವಾದನೆಯೂ ಹೆಚ್ಚಾಗಿ ನೀಡುವುದು.
- ಹೆಚ್ಚಿನ ಆಲಾಪನೆಗಳನ್ನು ಕೇಳಿ ಒಳ್ಳೆಯ ಸಂಗೀತ ಪ್ರಜ್ಞೆಯನ್ನು ಉಂಟುಮಾಡಿದರೆ ಮಾತ್ರವೇ ಅತ್ಯುತ್ತಮ ಪ್ರದರ್ಶನ ತೋರಿಸಲು ಸಾಧ್ಯ.

● ವಾದ್ಯೋಪಕರಣಗಳ ತತ್ಸಮಯ ವಾದನದೊಂದಿಗಿರುವ ಆಲಾಪನೆ.

● ಸರಳವಾದ್ಯೋಪಕರಣಗಳೊಂದಿಗಿರುವ ಆಲಾಪನೆಗೆ ತರಬೇತಿಯೂ ಪ್ರದರ್ಶನವೂ.

- ಹಿಂದಿನ ಕ್ಲಾಸುಗಳಲ್ಲಿ ನಡೆಸಿದ ಸರಳವಾದ ಆವರ್ತನೆ.
- ಉಪಯೋಗಿಸಬೇಕಾದ ಉಪಕರಣಗಳು: ಶ್ರುತಿ ಬೋಕ್ಸ್, ಜಾಲರ, ಕೈಮಣಿ, ಕೀಬೋರ್ಡ್, ಹಾರ್ಮೋನಿಯಂ ಎಂಬಿವುಗಳು.

***ಚಟುವಟಿಕೆ – 4***

- ಪರಿಚಿತವಾದ ಗಾನಗಳೊಂದಿಗೆ ಆಯ್ಕೆ ಮಾಡಿದ ಎಲ್ಲರಿಗೂ ಹಾಡಲು ಸಾಧ್ಯವಾಗುವ ಒಂದು ಹಾಡು ಕ್ಲಾಸ್‌ರೂಮನ್ನು ಪೂರ್ಣವಾಗಿ ಒಳಗೊಳ್ಳಿಸಿ ಮಂಡಿಸುವುದು.
- ಒಂದು ವಿಭಾಗವನ್ನು ಆಲಾಪನಾ ಗುಂಪೂ ಅಭಿರುಚಿಗೆ ಅನುಸರಿಸಿ ಆಯ್ಕೆ ಮಾಡಲಾದ ಮತ್ತೊಂದು ವಿಭಾಗವನ್ನು ವಾದ್ಯೋಪಕರಣ ವಾದನ ಗುಂಪಾಗಿ ಬೇರ್ಪಡಿಸುವುದು.
- ಪ್ರಕಟಣೆ – ಗುಂಪು ಮೌಲ್ಯಮಾಪನ – ಅಧ್ಯಾಪಕರ ಮೌಲ್ಯಮಾಪನ.

### ಮುಂದುವರಿದ ಚಟುವಟಿಕೆಗಳು

- ಪರಿಚಿತವಾದ ಹಾಡುಗಳನ್ನು ಪ್ರಸಿದ್ಧರಾದ ವಾದ್ಯ ಕಲಾಕಾರರ ಜೊತೆ ಪ್ರದರ್ಶಿಸುವುದು: (ಸಿನಿಮಾಗಾನಗಳು, ಲಲಿತಗಾನಗಳು, ಕವಿತೆಗಳು ಸೇರಿಸಿದ ಸಂಗೀತ ಕಮ್ಮಟ, ದೇಶಭಕ್ತಿಗೀತೆ)
- **ತರಬೇತುಗೊಳಿಸುವುದು:**
  - ಸಿನಿಮಾ ಹಾಡುಗಳಿಗೆ ಅದರದ್ದೇ ಆದ ಹಿನ್ನಲೆ ಸಂಗೀತದೊಂದಿಗೆ ಆಲಾಪನೆಯಲ್ಲಿ ತರಬೇತಿ ನೀಡುವುದು.
  - ಕವಿತೆಗೆ ಅದರ ಆಶಯಕ್ಕೆ ಅನುಗುಣವಾಗಿ ನೀಡಿದ ಹಿನ್ನಲೆ ಸಂಗೀತ ಸೇರಿಸಿ ತರಬೇತಿ ನೀಡುವುದು.
- ದೇಶಭಕ್ತಿಗೀತೆಗಳು, ಇನ್ನಿತರ ಗಾನಗಳು ಇವುಗಳನ್ನೆಲ್ಲಾ ಕ್ರಮವಾಗಿರಿಸಿ ವಾದ್ಯೋಪಕರಣ ಸಂಗೀತದೊಂದಿಗೆ ಕಲಾಗಾರರೊಂದಿಗೆ ಆಲಾಪನಾ ತರಬೇತಿ.

  ***ಆಲಾಪನೆಯಲ್ಲಿ ಗಮನಿಸಬೇಕಾದವುಗಳು***

  - ಉಪಕರಣ ವಾದನದ ಯಾವ ಭಾಗಗಳಿಂದ ಹಾಡುಗಳು ಆರಂಭವಾಗಬೇಕಾದುದು ಎಂದು ತಿಳಿಯಬೇಕು.
  - ತಾಳ ಕ್ರಮೀಕರಣ, ಶ್ರುತಿ ಏಕೀಕರಣ, ಶಬ್ದ ಕ್ರಮೀಕರಣ.
  - ಆಲಾಪನೆಗೆ ಸಂದರ್ಭಕ್ಕೆ ಅನುಗುಣವಾಗಿ ಭಾವಾತ್ಮಕತೆಯನ್ನು ನೀಡುವುದು.
  - ಹಿನ್ನಲೆ ಸಂಗೀತದ ಕುರಿತು ನಿಖರವಾದ ತಿಳುವಳಿಕೆ, ಕೇಳಿ ಆರ್ಜಿಸುವುದು.
- ಅವಕಾಶಗಳನ್ನು ಕಂಡುಹಿಡಿಯುವುದು : ದಿನಾಚರಣೆಗಳು, ಕಲೋತ್ಸವಗಳು ಇವುಗಳನ್ನು ಕಂಡುಹಿಡಿದು ಹೊರಗಿರುವ ಸಾಂಸ್ಕೃತಿಕ ವೇದಿಕೆಗಳಲ್ಲೂ ಶಾಲಾ ಗಾಯಕ ಸಂಘವನ್ನು ರೂಪೀಕರಿಸಿ ಪ್ರದರ್ಶನ ಮಾಡುವುದು.

### ಮೌಲ್ಯಮಾಪನ

- ಉಪಕರಣಗಳನ್ನು ತಿಳಿಯುವುದು
- ಸಂಗೀತ ಜ್ಞಾನ
- ಟ್ರ್ಯಾಕ್ ಉಪಯೋಗಿಸಿ ನಿಖರವಾದ ಆಲಾಪನೆ

- ತತ್ಸಮಯ ವಾದ್ಯ ವಾದನಗಳೊಂದಿಗಿರುವ ಆಲಾಪನೆ
- ಮಂಡನೆಯ ಟಿಪ್ಪಣಿ/ವಾಚಿಕಾಭಿಪ್ರಾಯ ಪ್ರಕಟಣೆ.

**ಕ್ರೋಡೀಕರಣ**

- ಧಾರಾಳ ಸಂಗೀತೋಪಕರಣಗಳು ಸಂಗೀತ ಪ್ರದರ್ಶನದಲ್ಲಿ ಪ್ರಯೋಗಿಸುವುದೂ ಅವುಗಳ ವೈವಿಧ್ಯವೂ ಸವಿಶೇಷತೆಯೂ ತಿಳಿದು ಆಸ್ವಾದಿಸುವವರಾಗಿದ್ದಾರೆ ನಮ್ಮ ಸಂಗೀತಾಸ್ವಾದಕರು.
- ವಾದ್ಯೋಪಕರಣಗಳು ಬಾಯಿತಾಳಗಳಿಗೆ ನೀಡುವ ಶ್ರೇಷ್ಠತೆ, ಪೂರ್ಣತೆ ಇವುಗಳು ಬಹಳ ಅಮೂಲ್ಯವಾಗಿದೆ.
- ಶ್ರುತಿ ಏಕೀಕರಣದೊಂದಿಗೂ ತಾಳ ಏಕೀಕರಣದೊಂದಿಗೂ ಪರಿಪೂರ್ಣವಾದ ಗಮನದೊಂದಿಗೂ ಶ್ರದ್ಧೆಯಿಂದ ತರಬೇತಿ ಪಡೆದು ಪ್ರದರ್ಶನ ನಡೆಸಲು ಸಂಗೀತ ಮೇಳಗಳು ಆಸ್ವಾದಕರಲ್ಲಿ ಬಹುತೇಕ ಚಲನವನ್ನು ಸೃಷ್ಟಿಸುವುದು.
- ಒಳ್ಳೆಯ ಸಂಗೀತಜ್ಞಾನ ಸೃಷ್ಟಿಸಲ್ಪಟ್ಟಿರುವ ಜ್ಞಾನಶಾಖೆಯ ಸಂಗೀತ ಸಂಸ್ಕೃತಿಯನ್ನು ಪಡೆಯುವುದು ಎಂಬುದು ಪ್ರತಿಯೊಂದು ಗಾಯಕನ ಧರ್ಮವಾಗಿದೆ.
- ಗಾಯಕನೂ ವಾದಕನೂ ಸಮಾನರು. ಹಿರಿದು – ಕಿರಿದು ಎಂಬುದು ಇಲ್ಲವೇ ಇಲ್ಲ ಎಂಬ ಜ್ಞಾನವು ಹಾಡಿಗೂ ವಾದ್ಯಗಳಿಗೂ ನಮ್ಮ ಸಂಗೀತ ಸಂಸ್ಕೃತಿಯಲ್ಲಿ ಪ್ರಾಧಾನ್ಯವಿರುವುದು ಎಂದು ತೋರಿಸುವುದಾಗಿದೆ ಇಂತಹ ಗಾನಮೇಳ ಸಭೆಗಳು.

7.3



# ನೃತ್ಯಕಲೆ



# ನೃತ್ಯಕಲೆ

## ಮುನ್ನುಡಿ

ಪ್ರಪಂಚ ಚಲನಾತ್ಮಕವಾಗಿದೆ. ಶಾರೀರಿಕ ಚಲನೆಗಳಲ್ಲಿ ಅಡಕವಾಗಿರುವ ತಾಳವನ್ನು ಅಂದವಾಗಿ ಪ್ರದರ್ಶಿಸುವುದೇ ನೃತ್ಯ. ಶರೀರದ ಚೈತನ್ಯವನ್ನು ನಿಯಂತ್ರಿತವಾಗಿಯೂ ಕ್ರಮೀಕೃತವಾಗಿಯೂ ವಿನಿಯೋಗಿಸಲು ನೃತ್ಯ ಸಹಾಯಕವಾಗುತ್ತದೆ. ಸಾಮಾಜಿಕ ಹೊಂದಾಣಿಕೆ, ದೈಹಿಕ ಸಾಮರ್ಥ್ಯ, ಸೌಂದರ್ಯ ಪ್ರಜ್ಞೆ ಎಂಬಿವುಗಳನ್ನು ಬೆಳೆಸುವಲ್ಲಿ ನೃತ್ಯ ಮಹತ್ತರ ಪಾತ್ರವಹಿಸುವುದು.

ಯಾವುದೇ ಕಲೆಯಲ್ಲಿರುವಂತೆಯೇ ನೃತ್ಯ ಕಲೆಯಲ್ಲಿಯೂ ಪ್ರಧಾನವಾಗಿ ಎರಡು ಭಾಗಗಳಿವೆ. ರೂಪಶಿಲ್ಪ ಮತ್ತು ಭಾವ ಶಿಲ್ಪ. ಅವುಗಳಲ್ಲಿ ಸಾಮಾನ್ಯ ಜನರು ಭಾವಶಿಲ್ಪ ಎಂಬ ವಿಷಯವನ್ನು ಇಷ್ಟಪಡುತ್ತಾರೆ. ಒಂದು ನೃತ್ಯ ಸಂವಹನ ಮಾಡುವ ಕತೆ, ಸಂದರ್ಭ, ಆಶಯ ಇವುಗಳಲ್ಲಿ ಯಾವುದಾದರೂ ಒಂದು ಅದರ ವಿಷಯವಾಗಿರುವುದು. ಈ ವಿಷಯವೇ ಭಾವಶಿಲ್ಪ. ಭಾವಶಿಲ್ಪವನ್ನು ಪ್ರಸ್ತುತ ಪಡಿಸುವ ಶರೀರವನ್ನು ರೂಪಶಿಲ್ಪ ಎನ್ನುವರು.

ಉದಾಹರಣೆಗೆ ಒಬ್ಬ ವ್ಯಕ್ತಿಯನ್ನು ಕಲೆ ಎಂದಿಟ್ಟುಕೊಂಡರೆ ಅವನ ಮನಸ್ಸು ಭಾವಶಿಲ್ಪ ಹಾಗೂ ಶರೀರವು ರೂಪ ಶಿಲ್ಪ ಎಂದರ್ಥ. ಸಾಮಾನ್ಯ ಆಸ್ವಾದಕನು ರೂಪಶಿಲ್ಪದ ಮೂಲಕ ಹೊರಹೊಮ್ಮುವ ಭಾವಶಿಲ್ಪವನ್ನು ಆಸ್ವಾದಿಸುವನು. ಪಂಡಿತರು ಭಾವಶಿಲ್ಪ ಪ್ರಕಟವಾಗುವ ರೀತಿಯನ್ನು ರೂಪಶಿಲ್ಪದಲ್ಲಿ ಆಸ್ವಾದಿಸುವರು. ವಿವಿಧ ನೃತ್ಯ ರೂಪಗಳು ಭಾವಶಿಲ್ಪದ ರೂಪಾಂತರಗಳಾಗಿವೆ.

ನಮ್ಮ ಮಕ್ಕಳು ಮೊದಲು ಭಾವಶಿಲ್ಪದತ್ತ ಆಕರ್ಷಿತರಾಗುತ್ತಾರೆ. ಆದುದರಿಂದ ಅವರು ಮೊದಲು ಭಾವಶಿಲ್ಪವನ್ನು ತಿಳಿಯಲಿ. ಆಸ್ವಾದಿಸಲಿ. ಕಥಾರೂಪದಲ್ಲಿ ಒಂದು ನೃತ್ಯ (ಒಂದು ಪ್ರತ್ಯೇಕ ಕಲಾರೂಪ ಎಂಬ ನೆಲೆಯಲ್ಲಿ ಆಗಬಾರದು. ಸಾಮಾನ್ಯ ವೇಷದಲ್ಲಿ ನಿರ್ವಹಿಸುವುದು ಉತ್ತಮ) ಪ್ರದರ್ಶಿಸಲು ಅವಕಾಶ ಒದಗಿಸಬೇಕು.

ಹೀಗೆ ನೋಡಿದ, ಆಸ್ವಾದಿಸಿದ, ಭಾವಶಿಲ್ಪಗಳನ್ನು ಸ್ವತಃ ಮಾಡುವುದು ಮುಂದಿನ ಹಂತವಾಗಿರಬೇಕು. ಆ ಮೂಲಕ ರೂಪುಗೊಳ್ಳುವ ಚಲನೆಯ ಕ್ರಮಗಳನ್ನು 'ನೃತ್ಯ' ಎಂಬ ದೊಡ್ಡ ಹಿನ್ನೆಲೆಯಲ್ಲಿ ಮಕ್ಕಳು ತಿಳಿಯಬೇಕು. ನೈಸರ್ಗಿಕವಾಗಿ, ತಾಳಾತ್ಮಕವಾಗಿ ಶರೀರ ಎಂಬ ಮಾಧ್ಯಮದ ಮೂಲಕ ಸಂಗೀತಾತ್ಮಕವಾಗಿ ಚಲಿಸುವುದು ಹೇಗೆಂದು ತಿಳಿಯುವ ರೀತಿಯಲ್ಲಿ ತರಬೇತಿ ನೀಡಬೇಕು. ಶರೀರದ ಸಾಧ್ಯತೆಗಳನ್ನು ಪಾಠಪುಸ್ತಕದ ಮೂಲಕ ಅಥವಾ ಸಂಕೀರ್ಣವಾದ ತತ್ವಗಳ ನೆರವಿಲ್ಲದೆಯೇ ಅವನು ತಿಳಿಯಬೇಕು. ಇದಕ್ಕೆ ಸರ್ವಸ್ವಾತಂತ್ರ್ಯದೊಂದಿಗೆ ನಲಿಯಲು ಸೂಕ್ತವಾದ ಸಂದರ್ಭವನ್ನು ಒದಗಿಸುವ ಅಗತ್ಯವಿದೆ. ಸರ್ವಸ್ವಾತಂತ್ರ್ಯವಾಗಿದ್ದರೂ ಸೂರ್ಯ, ಚಂದ್ರ, ಗಾಳಿಗಳ ಚಲನೆಗಳಲ್ಲಿ ಅಂತರ್ಗತವಾದ ನಿಯಂತ್ರಣದಂತೆಯೇ ಹಿನ್ನಲೆ ಸಂಗೀತ ಮತ್ತು ತಾಳ ಅವರನ್ನು ನಿಯಂತ್ರಿಸುತ್ತಿದೆಯೇ ಎಂಬುದನ್ನು ಗಮನಿಸಬೇಕು. ನೀಲೆಳೆಗಳನ್ನು ಬಟ್ಟೆಯಾಗಿ ಪರಿವರ್ತಿಸುವಂತೆಯೇ ಶರೀರ ಚಲನೆಗಳನ್ನು ನೃತ್ಯವಾಗಿ ಪರಿವರ್ತಿಸಲಾಗುತ್ತದೆ.

## ಕಲಿಕಾ ಸಾಧನೆಗಳು

### ಐದನೇ ತರಗತಿ

- ಚಿರ ಪರಿಚಿತವಾದ ನೃತ್ಯ ರೂಪಗಳ ವಿಶೇಷತೆಗಳನ್ನು ತಿಳಿಯುವುದು.
- ಶರೀರದ ಬಾಗುವಿಕೆ
- ಪಂಚಹೆಜ್ಜೆಗಳನ್ನು ತಿಳಿಯುವುದು (ಪ್ರದರ್ಶನ)
- ಕೈಬೆರಳುಗಳನ್ನು ಉಪಯೋಗಿಸಿ ಸುತ್ತಲಿರುವ ವಸ್ತುಗಳನ್ನು ಅನುಕರಿಸುವುದು.
- ವಿದ್ಯಾಲಯಗಳಲ್ಲಿನ ವಿಶೇಷ ದಿನಗಳಲ್ಲಿ ಉತ್ತಮವಾದ ನೃತ್ಯ ರೂಪಗಳನ್ನು ಪ್ರದರ್ಶಿಸುವುದು.
- ಪಾಠಭಾಗಗಳ ಆಶಯಕ್ಕೆ ಅನುಗುಣವಾಗಿ ನೃತ್ಯ ಶಿಲ್ಪಗಳನ್ನು ಮಂಡಿಸುವುದು.

### ಆರನೇ ತರಗತಿ

- ಜಾನಪದ ನೃತ್ಯ ಕಲೆಗಳನ್ನು ಮಂಡಿಸುವುದು.
- ಕ್ರಮಬದ್ಧವಾಗಿರುವ ತಂತ್ರಗಳನ್ನು ಕಂಡು ಅನುಕರಿಸುವುದು.
- ಸುತ್ತಲಿರುವ ವಸ್ತುಗಳನ್ನು ಕೈಮುದ್ರೆಯ ಮೂಲಕ ಅನುಕರಿಸುವುದು.
- ಮೂಲಮುದ್ರೆಗಳನ್ನು (ಅಸಂಯುಕ್ತ) ನೋಡುವುದು, ಅನುಕರಿಸುವುದು.
- ಅಸಂಯುಕ್ತ ಹಸ್ತಗಳನ್ನು ಉಪಯೋಗಿಸಿ ಆಶಯ ವಿನಿಮಯವನ್ನು ನಡೆಸುವುದು.
- ಕಥಕ್ಕಳಿ/ಯಕ್ಷಗಾನ ವೇಷಗಳ ಅಭಿನಯದ ಕುರಿತು ವಿವರಗಳನ್ನು ಪಡೆಯುವುದು.
- ಸ್ವಯಂ ತಯಾರಿಸಿದ ಬಾಯಿತಾಳಗಳಿಂದ ನೃತ್ಯರೂಪಗಳನ್ನು ಮಾಡುವುದು.

### ಏಳನೇ ತರಗತಿ

- ಕೇರಳದಲ್ಲಿ ನೃತ್ಯ ರೂಪಗಳನ್ನು ಶಾಸ್ತ್ರೀಯ, ಜಾನಪದ ಎಂಬ ರೀತಿಯಲ್ಲಿ ವಿಭಾಗಿಸುವುದು.
- ನಿಶ್ಚಿತ ಹಾಡುಗಳೊಂದಿಗೆ ಒಂದಾಗಿ ನೃತ್ಯ ಮಾಡುವುದು.
- ನೃತ್ಯ ಸಂಕೇತಗಳನ್ನು ಉಪಯೋಗಿಸಿ ಆಶಯಗಳನ್ನು ಹಸ್ತಾಂತರಿಸುವ ರೀತಿಯಲ್ಲಿರುವ ರಂಗಾವಿಷ್ಕಾರಗಳನ್ನು ನಡೆಸುವುದು.
- ಮೂಲಮುದ್ರೆಗಳನ್ನು (ಸಂಯುಕ್ತ) ತಿಳಿಯುವುದು.
- ವ್ಯತ್ಯಸ್ಥ ತಾಳಗಳಲ್ಲಿ ಹೆಜ್ಜೆ ಇಡುವ ಪ್ರಾಯೋಗಿಕ ಸಾಮರ್ಥ್ಯ ಪಡೆಯುವುದು.

# ಐದನೇ ತರಗತಿ

## ಯೂನಿಟ್ 1 : ನೃತ್ಯರೂಪಗಳು – ಸಾಮ್ಯತೆಗಳು, ವಿಶೇಷತೆಗಳು

### ಮುನ್ನುಡಿ

ಧಾರಾಳ ನೃತ್ಯ ರೂಪಗಳು ಮಕ್ಕಳಿಗೆ ಪರಿಚಿತವಾದವುಗಳಾಗಿವೆ. ಇವುಗಳಲ್ಲೇ ಕೆಲವು ಅವರಿಗೆ ಮಂಡಿಸಲು ತಿಳಿದಿದೆ. ಅವರಿಗೆ ಪರಿಚಿತವಾದ ನೃತ್ಯರೂಪಗಳ ಘಟನಾ ವಿಶೇಷತೆಗಳು ಅವರನ್ನು ಹೆಚ್ಚಾಗಿ ಪರಿಚಯಗೊಳಿಸಿ ಅವುಗಳ ಸ್ವಜಾತಿ – ವಿಜಾತಿಗಳನ್ನು ಕಂಡುಹಿಡಿಯಲು ಪ್ರತಿಯೊಂದರ ಸವಿಶೇಷತೆಗಳನ್ನು ತಿಳಿಯುವುದಕ್ಕಿರುವ ಚಟುವಟಿಕೆಗಳಾಗಿವೆ ಈ ಯೂನಿಟಿನಲ್ಲಿ ಸಜ್ಜೀಕರಿಸಲಾಗಿರುವುದು.

ಈ ಯೂನಿಟನ್ನು ಕಲಿಯುವಾಗ ಮಕ್ಕಳಿಗೆ ಯಾವುದಾದರೂ ನೃತ್ಯ ರೂಪದ ಹೆಜ್ಜೆಗಳು ಕೂಡ ಪರಿಚಯಪಡಿಸಲು ಮರೆಯಬಾರದು. ಯಾವುದೆಲ್ಲಾ ವಿಷಯಗಳಲ್ಲಾಗಿದೆ ಪ್ರತಿಯೊಂದು ನೃತ್ಯ ರೂಪಗಳು ಇನ್ನೊಂದರಿಂದ ವ್ಯತ್ಯಸ್ಥವಾಗುವುದು, ಅದಕ್ಕಿರುವ ಕಾರಣಗಳೇನು.. ಇವುಗಳನ್ನೆಲ್ಲಾ ಚರ್ಚೆಗೆ ವಿಧೇಯವಾಗಿಸಬೇಕು.

### ಕಲಿಕಾ ಸಾಧನೆಗಳು

- ಚಿರಪರಿಚಿತವಾದ ನೃತ್ಯ ರೂಪಗಳ ವಿಶೇಷತೆಗಳನ್ನು ತಿಳಿಯುವುದು.

### ಆಶಯ, ತಿಳುವಳಿಕೆ

- ಧಾರಾಳ ನೃತ್ಯ ರೂಪಗಳು ನಮಗಿವೆ.
- ಪ್ರತಿಯೊಂದು ನೃತ್ಯಕಲೆಗೂ ಅದರದ್ದೇ ಆದ ವಿಶೇಷತೆಗಳಿವೆ.
- ವೇಷಗಳು, ಶೃಂಗಾರ, ವಾದ್ಯೋಪಕರಣಗಳು, ಹಿನ್ನಲೆ ಹಾಡುಗಳು ಎಂಬಿವುಗಳೊಂದಿಗೆ ನೃತ್ಯಕಲೆಗಳನ್ನು ನಿರೀಕ್ಷಿಸಿದರೆ ವ್ಯತ್ಯಾಸಗಳನ್ನು ತಿಳಿಯಲು ಸಾಧ್ಯವಾಗುತ್ತದೆ.
- ಶಾಸ್ತ್ರೀಯ ನೃತ್ಯಗಳು, ಜಾನಪದ ನೃತ್ಯಗಳು ಎಂಬಿತ್ಯಾದಿಗಳನ್ನು ಪ್ರಮುಖವಾಗಿ ವಿಭಾಗಿಸಲು ಸಾಧ್ಯವಾಗುತ್ತದೆ. ಉದ್ಯೋಗ, ಜಾತಿ, ದೇಶ ಇತ್ಯಾದಿಗಳಿಗನುಸಾರವಾಗಿ ನೃತ್ಯಕಲೆಗಳಿಗೂ ವ್ಯತ್ಯಾಸವಿದೆ.

### ಪ್ರಕ್ರಿಯೆ

- ನೃತ್ಯೋತ್ಸವ (ವಿವಿಧ ನೃತ್ಯಗಳ ಪ್ರದರ್ಶನ)
- ಹೆಜ್ಜೆಗಳು, ವೇಷಗಳು
- ನಾನು, ನನ್ನ ಕಥೆ (ನೃತ್ಯಗಳ ಕುರಿತು ಆತ್ಮಕಥೆಯ ರೂಪದಲ್ಲಿ)

- ಪಾಠ ಹೇಗೆ? (ಶಾಸ್ತ್ರೀಯ)
- ವೈವಿಧ್ಯದಲ್ಲಿ ಏಕತೆ. ಒಂದು ಕುಟುಂಬ, ಹಲವು ಸದಸ್ಯರು.

## ಕಲಿಕಾ ಚಟುವಟಿಕೆಗಳು

- **ನೃತ್ಯೋತ್ಸವ**

ವಿವಿಧ ನೃತ್ಯ ರೂಪಗಳ ಒಂದು ಪ್ರದರ್ಶನ ನಡೆಯಬೇಕಾಗಿದೆ. ಶಾಸ್ತ್ರೀಯ ನೃತ್ಯಗಳೂ ಜಾನಪದ ನೃತ್ಯಗಳೂ ಇದರಲ್ಲಿ ಅಳವಡಿಸಬೇಕು.

ಉದಾ : ಮೋಹಿನಿಯಾಟ್ಟಂ, ಭರತನಾಟ್ಯ, ಕುಚ್ಚಿಪುಡಿ, ಕಥಕಳಿ, ತಿರುವಾದಿರಕಳಿ, ಮಾರ್ಗಂಗಳಿ, ಒಪ್ಪನ, ಯಕ್ಷಗಾನ, ದೊಡ್ಡಾಟ, ಬೊಂಬೆಯಾಟ ಇತ್ಯಾದಿ.

- ಸಿ.ಡಿ. ಪ್ರದರ್ಶಿಸಿದ ನಂತರ ಸವಿಶೇಷತೆಗಳ ಪಟ್ಟಿ ತಯಾರಿಸುವುದು.
- ಮಕ್ಕಳನ್ನು ಕಲಾರೂಪಗಳ ಹೆಸರಿನಲ್ಲಿ ಗುಂಪಾಗಿಸಿದ ನಂತರ ಚರ್ಚೆ – ಸಾಮಾನ್ಯ ಮಂಡನೆ – ನಿರೀಕ್ಷಣಗಳ ಕ್ರೋಢೀಕರಣ.
- ವೇಷಗಳು, ಶೃಂಗಾರಗಳು, ವಾದ್ಯೋಪಕರಣಗಳು, ಹಿನ್ನಲೆ ಹಾಡುಗಳು ಎಂಬಿತ್ಯಾದಿಗಳ ವ್ಯತ್ಯಾಸವನ್ನು ಕಂಡುಹಿಡಿಯುವುದು, ಚರ್ಚೆ– ಸಾಮಾನ್ಯ ಮಂಡನೆ – ಕ್ರೋಢೀಕರಣ.
- ಹೆಜ್ಜೆಗಳು, ವೇಷಗಳು ಎಂಬಿವುಗಳಲ್ಲಿರುವ ಸಾಮ್ಯತೆಯಗಳು, ಚರ್ಚೆ – ಸಾಮಾನ್ಯ ಮಂಡನೆ – ಕ್ರೋಢೀಕರಣ

- **ನಾನು, ನನ್ನ ಕಥೆ**

ನೃತ್ಯ ರೂಪಗಳ ಆಧಾರದಲ್ಲಿ ಮಕ್ಕಳು ಗುಂಪಾಗಿ ತಿರುಗುವುದು. ಪ್ರತಿಯೊಂದು ಅವರಿಗೆ ಸಿಕ್ಕಿದ ನೃತ್ಯ ರೂಪಗಳ ಬಗ್ಗೆ ಇರುವ ಟಿಪ್ಪಣಿಗಳನ್ನು ತಯಾರಿಸುವುದು. ತರಗತಿ ಮಟ್ಟದಲ್ಲಿ ಆವೃತ್ತಿಗಳನ್ನು ನಿರ್ಮಿಸುವುದು. ಚಿತ್ರಗಳನ್ನು ಕೂಡ ಉಪಯೋಗಿಸಬಹುದಾಗಿದೆ. ಇದು ಆವೃತ್ತಿಗಳನ್ನು ಉಪಯೋಗಿಸಿ ನೃತ್ಯ ಪ್ರಶ್ನೋತ್ತರ, ಇದಕ್ಕೆ ಅಗತ್ಯವಾದ ಪ್ರಶ್ನೋತ್ತರಗಳನ್ನು ಮಕ್ಕಳಿಗೆ ಸ್ವತಃ ನಡೆಸಲಾಗುವುದು.

- ಮಕ್ಕಳಿಗೆ ದೊರೆತ ನೃತ್ಯ ರೂಪಗಳನ್ನು ಹೇಗೆ ಕಲಿಯಬಹುದು ಎಂಬ ಅನ್ವೇಷಣೆ, ಶಾಸ್ತ್ರೀಯ ನೃತ್ಯ ಕಲಾವಿದರು, ಜಾನಪದ ನೃತ್ಯ ಕಲಾವಿದರು ಎಂಬಿತ್ಯಾದಿಗಳ ಅಭಿಮುಖ್ಯದಲ್ಲಿ.
- ಅಭಿಮುಖ್ಯ ಪ್ರಶ್ನೋತ್ತರ ತಯಾರಿಸಿರಬೇಕು. ಇದು ನಡೆಸಬೇಕಾದದ್ದು ಶಾಸ್ತ್ರೀಯ ಕಲೆಗಳ ಹಾಗೂ ಅಭ್ಯಾಸ ಸಾಧ್ಯತೆಗಳಿಗೆ ತಿಳಿಯಲು ನಾಡೋಡಿ ಶಾಸ್ತ್ರೀಯ ಕಲೆಯ ಮೂಲಕವಿರುವ ಸಾಮ್ಯ ವ್ಯತ್ಯಾಸಗಳನ್ನು ಕಂಡುಹಿಡಿಯಲು ಸಾಮ್ಯ ವ್ಯತ್ಯಾಸಗಳನ್ನು ಕಂಡುಹಿಡಿಯಲು ಸಾಧ್ಯವಾಗುವ ರೀತಿಯಲ್ಲಾಗಬೇಕು.

- **ಒಂದು ಕುಟುಂಬ**

ನೃತ್ಯದಲ್ಲಿನ ವಿವಿಧ ರೀತಿಗಳು ಹಲವು ರೀತಿಯಲ್ಲಿ ವ್ಯತ್ಯಸ್ತವಾಗಿದೆ. ಇವರೆಡೆಯಲ್ಲಿರುವ ಸಾಮ್ಯತೆಗಳನ್ನು ಕಂಡುಹಿಡಿಯುವುದು (ವೇಷ, ಶೃಂಗಾರ, ಹೆಜ್ಜೆಗಳು, ಪಂಚಮಟ್ಟದಲ್ಲಿ ಹಾಡುಗಳು, ವಾದ್ಯಗಳು ಎಂಬೀ ಹಲವುಗಳಲ್ಲಿ ವ್ಯತ್ಯಾಸಗಳು ಇದ್ದರೂ ಏಕತೆಯ ದೃಶ್ಯವಾಗಿದೆ).

## ಯೂನಿಟ್ – 2 : ಹೆಜ್ಜೆಗಳು, ಕ್ರಮಗಳು

### ಮುನ್ನುಡಿ

ಪ್ರಕೃತಿಯ ಚಲನಗಳು ಸಾಮಾನ್ಯವಾಗಿ ತಾಳಬದ್ಧವಾಗಿರುತ್ತದೆ. ಈ ತಾಳಗಳನ್ನೆಲ್ಲಾ ಒಂದು ಶಾಸ್ತ್ರೀಯವಾದ ರೀತಿಯಲ್ಲಿ ವೀಕ್ಷಿಸುವಾಗ ಪಂಚಹೆಜ್ಜೆಗಳ ಶಬ್ದಕೋಶಗಳೆಂದು ನಮಗೆ ತಿಳಿಯಲು ಸಾಧ್ಯವಾಗುತ್ತದೆ. ಈ ಹೆಜ್ಜೆಗಳನ್ನು ದೃಢಪಡಿಸಬೇಕಾದುದು ಪ್ರತಿಯೊಂದು ನರ್ತಕರ ಮೂಲಭೂತ ಕ್ರಿಯೆಗಳಲ್ಲಿ ಹೆಚ್ಚು ಪ್ರಾಧಾನ್ಯವುಳ್ಳದ್ದಾಗಿರಬೇಕು. ನೃತ್ಯದಲ್ಲಿನ ಕಲಿಕಾ ಸಾಧನೆಗಳನ್ನು ಹೊರತುಪಡಿಸಿ ಹೆಚ್ಚು ಸಮಯವನ್ನು ವಿನಿಯೋಗಿಸಿ ಕಲಿಯಬೇಕಾದ ಒಂದು ತಿಳುವಳಿಕೆಯಾಗಿದೆ ಇದು. ಕಾರಣ, ಇದರ ಬೆಂಬಲದಲ್ಲಿ ನೃತ್ಯದ ಇತರ ಹೆಜ್ಜೆಗಳನ್ನು ಪರಿಶೀಲಿಸಬೇಕಾದುದು, ಮಂಡಿಸಬೇಕಾದುದು ಸಾಧ್ಯವಾಗುವಷ್ಟು ರಸಮಯವಾದ ಚಟುವಟಿಕೆಗಳನ್ನು ಆವಿಷ್ಕರಿಸಿ ಈ ಕಲಿಕಾ ಸಾಧನೆಗಳನ್ನು ಪಡೆಯುವುದಕ್ಕಾಗಿ ಶ್ರಮಿಸಬೇಕು.

### ಕಲಿಕಾ ಸಾಧನೆ

- ಪಂಚಹೆಜ್ಜೆಗಳಲ್ಲಿರುವ ಹೆಜ್ಜೆಗಳನ್ನು ತಿಳಿಯುವುದು.

### ಆಶಯ, ತಿಳುವಳಿಕೆ

- ಪಂಚಹೆಜ್ಜೆಗಳನ್ನು ತ್ರಿಶಂ, ಚತುರಶ್ರಂ, ಮಿಶ್ರಂ, ಖಂಡಂ, ಸಂಕೀರ್ಣಂ ಎಂದು ವಿಭಾಗಿಸಲಾಗಿದೆ.
- ಪ್ರಕೃತಿಯಲ್ಲಿನ ಚಲನೆಗಳು ಈ ಹೆಜ್ಜೆಗಳಿಗೆ ಅಧಿಷ್ಠಿತವಾಗಿರುತ್ತದೆ.
- ಪ್ರತಿಯೊಂದು ಹೆಜ್ಜೆಗೂ ಅದರದ್ದೇ ಆದ ಅಕ್ಷರ ಕ್ರಮಗಳಿವೆ.

### ಕಲಿಕಾ ಚಟುವಟಿಕೆ

- ಹೆಜ್ಜೆಗಳಿರುವ ಪರಿಚಿತವಾದ ಚಲನಚಿತ್ರಗೀತೆಗಳನ್ನು ಕೇಳಿಸುವುದು. ಕೈಗಳನ್ನು ಉಪಯೋಗಿಸಿ ತಾಳವನ್ನು ಹಿಡಿಯುವುದಕ್ಕೆ ಹೇಳುವುದು.

ಉದಾ– ತಕಧಿಮಿ

ಮಾನೆನ್ನುಂ ವಿಳಿಕ್ಕಿಲ್ಲ
ಮಯಿಲೆನ್ನುಂ ವಿಳಿಕ್ಕಿಲ್ಲ
ಮಾಡತ್ತಿನ್ ಮಣಿವಿಳಕ್ಕೆ
ನಿನ್ನೆಂಜಾನ್
ಮಾಡತ್ತಿನ್ ಮಣಿವಿಳಕ್ಕೆ

ತಕ್ಕಿಟ

ಎಲ್ಲಾರುಂ ಚೊಲ್ಲಣ್
ಎಲ್ಲಾರುಂ ಚೊಲ್ಲಣ್
ಕಲ್ಲಾಣೀ ನೆಂಜಿಲೆನ್ನ್
ಕರಿಂಗಲ್ಲಾಣ್
ಕರಿಂಗಲ್ಲಾಣ್ ನೆಂಜೀಲೆನ್ನ್....

ತಕತಕಿಟ

ಕಣ್ಣೀರ್‌ಪೂವಿಂಡೆ ಕವಿಳಿಲ್‌ತಲೋಡಿ
ಈಣಂ ಮುಳಗುಂ ಪಳಂಪಾಟು ಮುಂಜಿ
ಮರುವಾಕು ಕೇಳ್ಕಾನ್ ಕಾತುನಿಲ್ಕಾದೆ
ಪೂತುಂಬಿಯೆಜಕೋ ಮರಞು
ಎಂಡೆ ವುಳ್ಳೋರ್‌ಕೂಟಂ ಪೋಲೇ ತೇಜಿ

ತಕಿಟ್ಟ ತಕಧಿಮಿ

*ಪಾಟುಪಾಡಿಯುರಕ್ಕಂ ಇಶಾನ್*
*ತಾಮರಪೂಪೈದಲೆ*
*ಕೇಟುಕೇಟುನೀಯೊರಜಾನ್*
*ಕರಳಿಂಡೆ ಕಾದಲೇ.....*

- ಇದೇ ಹಾಡುಗಳ ತಾಳ ಮೊದಲೇ ಕಲಿತ ಹೆಜ್ಜೆಗಳನ್ನು ಉಪಯೋಗಿಸಿ ಪ್ರಯೋಗಿಸಿರಿ. ಹಾಡುಗಳಿಗೆ ಬದಲಾಗಿ ತಾಳ ಕ್ರಮದಲ್ಲಿರುವ ಬಾಯಿತಾಳಗಳನ್ನು ಉಪಯೋಗಿಸಿರಿ. ಸಮಾನ ತಾಳದಲ್ಲಿರುವ ಹಾಡುಗಳನ್ನು ಕಂಡುಹಿಡಿಯಿರಿ.
- ತಾಳದೊಂದಿಗೆ ಹೆಜ್ಜೆಗಳನ್ನು ಹಾಕಿರಿ.
- ಪ್ರತಿಯೊಂದು ಬಾಯಿತಾಳಗಳಿಗೂ ಅನುಸಾರವಾಗಿ ಪಂಚಹೆಜ್ಜೆಗಳಲ್ಲಿ ಹೆಜ್ಜೆಗಳನ್ನು ದೃಢಪಡಿಸುವುದು. ಇದು ಕಡಿಮೆ ವೇಗದಲ್ಲಿ ಆರಂಭಿಸಿ, ಹೆಚ್ಚು ವೇಗತೆಯೊಂದಿಗೆ ಪರಿಶೀಲಿಸಬೇಕಾಗಿರುತ್ತದೆ ಕಾಲಾವಧಿಗೆ ಅನುಸಾರವಾಗಿ.
- ಮಕ್ಕಳನ್ನು ಹೆಜ್ಜೆಗಳ ಹೆಸರಿನಲ್ಲಿ ಗುಂಪುಗಳಾಗಿಸುವುದು. ನಾಲ್ಕು ಹೆಜ್ಜೆಗಳನ್ನು ಉಪಯೋಗಿಸಿದರೆ ಸಾಕಾಗುತ್ತದೆ.

| | | | |
|---|---|---|---|
| ತಕಧಿಮಿ | ತಕಿಟ್ಟ | ತಕತಕಿಟ್ಟ | ತಕಧಿಮಿ |
| (ಚತುರಶ್ರಂ) | (ತ್ರಿಶಂ) | (ಖಂಡಂ) | (ಮಿಶ್ರಂ) |

- ಪ್ರತಿಯೊಂದು ಗುಂಪು ಅವರಿಗೆ ದೊರೆತ ಹೆಜ್ಜೆಗಳಲ್ಲಿರುವ ಹಾಡುಗಳನ್ನು ಕಂಡುಹಿಡಿಯುವುದು. ಇನ್ನಿತರ ಗುಂಪುಗಳು ಅದಕ್ಕೆ ತಾಳವನ್ನು ಹಾಕುವುದು. ನಂತರ ಒಂದು ಗುಂಪು ತಾಳವನ್ನು ಹಾಕುವಾಗ ಅದಕ್ಕೆ ಅನುಗುಣವಾದ ಹಾಡುಗಳನ್ನು ಕಂಡು ಹಿಡಿದು ಹಾಡುವುದು. ಇದು ಎಲ್ಲಾ ಹೆಜ್ಜೆಗಳಲ್ಲೂ ಆವರ್ತಿಸಲ್ಪಡುವ ಗುಂಪುಗಳಿಗೆ ಪೋಯಿಂಟ್‌ಗಳನ್ನು ನೀಡಿ ಗೆಲುವು ಪಡೆದವರನ್ನು ಕಂಡುಹಿಡಿಯುವುದು.
- ಹಲವು ರೀತಿಯ ತಂತ್ರಗಳು

  ಶಾಸ್ತ್ರೀಯ ನೃತ್ಯದ ವ್ಯತ್ಯಾಸ, ತಂತ್ರಗಳು ಸಿ.ಡಿ. ಉಪಯೋಗಿಸಿ ಪ್ರದರ್ಶಿಸುವುದು.
- ಇದು ನಿರೀಕ್ಷಿಸಿ ಅವುಗಳಲ್ಲಿ ಉಪಯೋಗಿಸಿ ಹೆಜ್ಜೆಗಳನ್ನು ಕಂಡುಹಿಡಿಯುವುದು. (ಗುಂಪು)
- ವ್ಯಕ್ತಿಗತವಾಗಿ ಮಂಡಿಸಬಹುದಾಗಿದೆ.
- ಸಂಕೀರ್ಣ ಸಂಕೀರ್ಣ

  ತಕಧಿಮಿ ತಕ ತಕಿಟ್ಟ ಕ್ರಮದಲ್ಲಿ ಕೈತಟ್ಟುವುದು ಮಕ್ಕಳನ್ನು ಕೇಳಿಸುವುದು. ವ್ಯತ್ಯಸ್ಥ ತಿಳಿಯಲು ಅಗತ್ಯಪಡುವುದು. 5 ಹೆಜ್ಜೆಗಳಲ್ಲೂ ಉಪಯೋಗಿಸಿರುವ ಹೆಜ್ಜೆಗಳು ಒಳಗೊಂಡ ಸಿ.ಡಿ. ಪ್ರದರ್ಶಿಸುವುದು. ಸಂಕೀರ್ಣ ಕಂಡುಹಿಡಿಯಲು ಪ್ರಯತ್ನಿಸುವುದು. ಸಂಕೀರ್ಣ ಅಧ್ಯಾಪಿಕೆಯ ಕೈತಟ್ಟುವುದಕ್ಕೆ ಅನುಸರಿಸಿ ಮಕ್ಕಳು ಹೆಜ್ಜೆ ಹಾಕುವುದು.

## ಮೌಲ್ಯಮಾಪನ

- ಮಂಡನೆಯಲ್ಲಿ ನಿಖರತೆ
- ಕಿರುಪ್ರಶ್ನೆಗಳು

# ಯೂನಿಟ್ – 3 : ಬೆರಳಿನ ಭಾಷೆ

## ಮುನ್ನುಡಿ

ಮನುಷ್ಯ ವರ್ಗ ಪ್ರಾರಂಭವಾದ ಅಂದಿನಿಂದ ಅಭ್ಯಾಸಗಳಲ್ಲಿ ಕೆಲವು ಇಂದು ನಮ್ಮಲ್ಲಿ ಪ್ರಚಲಿತದಲ್ಲಿರುವುದಕ್ಕೆ ಉದಾಹರಣೆಯಾಗಿದೆ. ಬೆರಳಿನ ಭಾಷೆ ಅಥವಾ ಮುದ್ರೆಗಳು. ತೀವ್ರವಾದ ವಿಚಾರ – ವಿಕಾರಗಳು ಅದೇ ರೀತಿಯಾಗಿ ಪ್ರಕಟಿಸಲು ಭಾಷೆ ಅಪರ್ಯಾಪ್ತವಾಗುವಾಗ ಮುದ್ರೆಗಳು, ಸನ್ನೆಗಳು ಸಹಾಯಕವಾಗುವುದು. ಬಾಯಿಯಲ್ಲೂ, ಬರೆದು ಹೇಳುವುದರಲ್ಲಾಗಿ ಭಾಷೆ ಬೆಳೆಯದ ಕಾಲದಲ್ಲಿ ಮನುಷ್ಯರು ಸನ್ನೆಗಳಿಂದ, ಭಾಷಾ ಪ್ರಕಟನೆಯಿಂದಲೂ ಆಶಯ ವಿನಿಮಯ ನಡೆಸಿರಬಹುದೆಂದಾಗಿದೆ ಸಂಶೋಧಕರ ನಿಗಮನ. ಆದಿ ಮನುಷ್ಯರು ಉಪಯೋಗಿಸಿದ್ದ ಹಸ್ತರೂಪಗಳಾಗಿವೆ ನಂತರ ಮುದ್ರೆಗಳಾಗಿ ರೂಪೀಕರಣಗೊಂಡು ಶಾಸ್ತ್ರೀಯ ನೃತ್ಯಗಳಲ್ಲಿ ಉಪಯೋಗಿಸಿದ್ದು. ಬೆರಳಿನ ಭಾಷೆಯ ಕುರಿತು ಇರುವ ಪಾಠ ನಮಗೆ ಈ ಯೂನಿಟ್ಟಿನ ಮೂಲಕ ಆರಂಭಿಸುವುದು.

## ಕಲಿಕಾ ಸಾಧನೆಗಳು

- ಕೈಬೆರಳನ್ನು ಉಪಯೋಗಿಸಿ ಸುತ್ತಲಿರುವ ವಸ್ತುಗಳನ್ನು ಅನುಕರಿಸುವುದು.

## ಆಶಯ, ತಿಳುವಳಿಕೆ

- ನಿತ್ಯ ಜೀವನದಲ್ಲಿ ಕೈಮುದ್ರೆಗಳನ್ನು ಉಪಯೋಗಿಸಿ ಆಶಯಗಳನ್ನು ಪ್ರಕಟಿಸುವುದು. ಕೈ ಬೆರಳುಗಳನ್ನು ಉಪಯೋಗಿಸಿ ಈ ಮುದ್ರೆಗಳನ್ನು ಮಂಡಿಸುವುದು. ಪ್ರಕೃತಿಯಲ್ಲಿನ ವಸ್ತುಗಳನ್ನೂ ಜೀವಿಗಳನ್ನೂ ಹೀಗೆ ಆವಿಷ್ಕರಿಸಲು ಸಾಧ್ಯವಾಗುವುದು.

## ಕಲಿಕಾ ಚಟುವಟಿಕೆಗಳು

- **ಬೆರಳಿನ ನೃತ್ಯ**

  *ಒನ್ನಾಂ ಪೆರುವಿರಲ್ ಒನ್ನಡಿಪದಿಯೆ – ಒನ್ನ್*
  *ರಂಡಾಂ ಚುಂಡುವಿರಲ್ ರಂಡಡಿ ಪದಿಯೆ – ಒನ್ನ್ ರಂಡ್*
  *ಮೂನಾಂ ನಡುವಿರಲ್ ಮೂನಡಿ ಪದಿಯೆ – ಒನ್ನ್ ರಂಡ್ ಮೂನ್*
  *ನಾಲಾಂ ಅಣಿವಿರಲ್ ನಾಲಡಿ ಪದಿಯೆ – ಒನ್ನ್ ರಂಡ್ ಮೂನ್ ನಾಲ್*
  *ಅಂಜಾಂ ಕುಂಞುವಿರಲ್ ಅಂಜಡಿ ಪತಿಯೆ – ಒನ್ನ್ ರಂಡ್ ಮೂನ್ ನಾಲ್ ಅಂಜ್*

- ಈ ಹಾಡು ಬಲಗೈಯಲ್ಲಿ ಪ್ರತಿಯೊಂದು ಬೆರಳಿನಿಂದ ಎಡಕೈಯಲ್ಲಿ ತಾಳವನ್ನು ಹಿಡಿದು ಹಾಡುವುದು. ನಂತರ ಪದಿಯೆ ಎಂಬ ಮಾತಿನ ಬದಲು ಲಯದಲ್ಲಿ ಎಂದು ಸೇರಿಸಿ ವೇಷದಲ್ಲಿ ಹಾಡುವುದೂ ಬೆರಳುಗಳನ್ನು ಉಪಯೋಗಿಸಿ ತಾಳವನ್ನು ಹಾಕುವುದು.

- ವಸ್ತುಗಳ ಹಾಗೂ ಜೀವಿಗಳ ಹೆಸರುಗಳನ್ನು ಬರೆದ ಟಿಪ್ಪಣಿಗಳನ್ನು ಮಕ್ಕಳಿಗೆ ನೀಡುವುದು. ಸಿಕ್ಕಿದ ಟಿಪ್ಪಣಿಯಲ್ಲಿ ದಾಖಲಿಸಿದುದ್ದನ್ನು ಉಪಯೋಗಿಸಿ ಆವಿಷ್ಕರಿಸಿ ತೋರಿಸುವುದು. ಇನ್ನಿತರ ಮಕ್ಕಳಿಗೆ ಹೆಸರುಗಳನ್ನುಹೇಳುವುದು. ಪ್ರತಿಭೆ ಇರುವ ಮಕ್ಕಳನ್ನು ಪ್ರೋತ್ಸಾಹವನ್ನು ನೀಡುವುದು. ಮಕ್ಕಳು ಇನ್ನಿತರ ಮಕ್ಕಳು ಹೆಸರನ್ನು ಹೇಳುವುದು. ಉತ್ತಮ ಮಕ್ಕಳನ್ನು ಕಂಡುಹಿಡಿಯುವುದು. ಮಕ್ಕಳು ಇನ್ನಿತರ ಜೀವಿಗಳನ್ನೋ ವಸ್ತುಗಳನ್ನೋ ಕೈಬೆರಳನ್ನು ಉಪಯೋಗಿಸಿ ಆವಿಷ್ಕರಿಸುವುದು. ಯಾವುದನ್ನು ಆವಿಷ್ಕರಿಸಿರುವುದು ಎಂಬುದನ್ನು ಮಕ್ಕಳು ದಾಖಲಿಸುವುದು.

## ಮುಂದುವರಿದ ಚಟುವಟಿಕೆ

ವಿವಿಧ ಮುದ್ರೆಗಳನ್ನು ವೀಕ್ಷಿಸುವುದು.

# ಯೂನಿಟ್ – 4 : ನೃತ್ಯ ಆನಂದನೃತ್ಯ

## ಮುನ್ನುಡಿ

ನಮ್ಮ ಊರಿನಲ್ಲಿ ಧಾರಾಳ ನೃತ್ಯ ರೂಪಗಳು ಪ್ರಚಾರದಲ್ಲಿವೆ. ಎಲ್ಲಾ ನೃತ್ಯಗಳೂ ಸಂತೋಷ ದಾಯಕಗಳಾಗಿವೆ. ಪ್ರತಿಯೊಂದು ವಿಶೇಷ ಸಂದರ್ಭಗಳಲ್ಲೂ ಮಂಡಿಸಬಹುದಾಗಿದೆ. ಅವು ಮಂಡಿಸಲ್ಪಡುವುದಾಗಿದೆ ಮತ್ತು ವಿಶೇಷ ಸಂದರ್ಭಗಳನ್ನು ಸಂತೋಷದಾಯಕವಾಗಿಸಲು ಹಿಂದಿನಕಾಲದಿಂದಲೇ ಮನುಷ್ಯರು ನೃತ್ಯ ಮಾಡಿರುತ್ತಾರೆ. ಸ್ತ್ರೀಗಳು ಭಕ್ತಿಯೊಂದಿಗೆ ದೇವರನ್ನು ಸ್ತುತಿಸಿ ಹಾಡಿ ಕುಣಿದ ಜಾನಪದ ನೃತ್ಯ ರೂಪವಾಗಿದೆ ತಿರುವಾದಿರ ಕಳಿ. ವಿವಾಹಗಳಿಗಾಗಿ ಮಧುಮಗಳನ್ನು ಶೃಂಗಾರಗೊಳಿಸಿ ಸಖಿಗಳು ಅವಳ ನಾಚಿಕೆಯನ್ನು ಇಲ್ಲದಾಗಿಸಲು ನರ್ಮೋಕ್ತಿಗಳಾದ ಹಾಡುಗಳನ್ನು ಹಾಡಿಯೂ ತಾಳಾತ್ಮಕವಾದ ಹೆಜ್ಜೆಗಳನ್ನು ಹಾಕಿಯೂ ಕೈಗಳನ್ನು ತಟ್ಟಿ ಶಬ್ದವನ್ನು ಉಂಟುಮಾಡಿಯೂ ನೃತ್ಯವನ್ನು ಮಾಡುವ ಸಂಪ್ರದಾಯವಾಗಿದೆ ಒಪ್ಪನ. ಈ ಸಂದರ್ಭದಲ್ಲಿ ಮಧುಮಗಳ ಶೃಂಗಾರಕ್ಕೂ ನಾಚಿಕೆಗೂ ದೃಷ್ಟಿಯಿಡುವುದು. ಆದರೆ ಸ್ವತಂತ್ರ್ಯ ದಿನಕ್ಕೆ ಸಂಬಂಧಿಸಿದಂತೆ ಸಹೋದರರು ಮಾಡುವ ನೃತ್ಯಕ್ಕೆ ರಾಷ್ಟ್ರೀಯೋದ್ಘಥನ ಸಂದೇಶ ಕರೆಯನ್ನು ನೀಡಲು ಸಾಧ್ಯವಾಗಬೇಕು. ಅದೇ ರೀತಿ, ಹೊಸವರ್ಷದ ದಿನಕ್ಕಾಗಿ ಮಾಡುವ ಹೊಸವರ್ಷದ ದಿನದೊಂದಿಗಿರುವ ನೃತ್ಯವು ಬರಲಿರುವ ಒಳ್ಳೆಯ ವರ್ಷಕ್ಕೆ ಶುಭಕೋರುವ ರೀತಿಯಲ್ಲಾಗಿರಬೇಕು.

## ಕಲಿಕಾ ಸಾಧನೆ

- ವಿದ್ಯಾಲಯಗಳಲ್ಲಿರುವ ವಿಶೇಷ ಸಂದರ್ಭಗಳಲ್ಲಿ ಉತ್ತಮವಾದ ನೃತ್ಯಗಳನ್ನೂ ಪ್ರದರ್ಶಿಸಲು ಸಾಧ್ಯವಾಗುತ್ತದೆ.

## ಆಶಯ, ತಿಳುವಳಿಕೆ

- ಉಪಕರಣ ಸಂಗೀತಕ್ಕೆ ಅನುಸಾರವಾಗಿ ಅಂಗ ಚಲನೆಗಳ ಮೂಲಕ ಪ್ರಕೃತಿಯಲ್ಲಿನ ಜೀವಜಾಲಗಳನ್ನು ಆವಿಷ್ಕರಿಸುವುದು ಮತ್ತು ಪ್ರದರ್ಶಿಸುವುದು.

## ಒಳಪುಟಗಳಲ್ಲಿ

ವಿದ್ಯಾಲಯಗಳು ವಿಶೇಷ ದಿನಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಿಂದ ಸಂಪನ್ನವಾಗಿದೆ. ವಿಶೇಷ ಸಂದರ್ಭಗಳಲ್ಲಿನ ಉತ್ಸವಗಳು ವಿವಿಧ ಆಶಯಗಳನ್ನು ಮಕ್ಕಳಿಗೆ ನೀಡುವುದು. ಉದಾ : ಸ್ವಾತಂತ್ರ್ಯ ದಿನ ಉತ್ಸವ, ರಿಪಬ್ಲಿಕ್ ಡೇ, ಯುವಜನೋತ್ಸವಗಳು, ಪ್ರವಾಸ ವೇಳೆಗಳಲ್ಲಿ ಒಗ್ಗಟ್ಟು, ಸಂಘಟನ ಸಾಮರ್ಥ್ಯದಿಂದ ಮಂಡಿಸುವ ವಿವಿಧ ರೀತಿಯ ನೃತ್ಯರೂಪಗಳನ್ನು ಬೆಳೆಸುವುದು. ವಿವಿಧ ನೃತ್ಯ ರೂಪಗಳನ್ನು ಕಾಣುವುದು, ಆಸ್ವಾದಿಸುವುದೂ ಅದಕ್ಕಾಗಿ ಅದರಲ್ಲಿ ಭಾಗವಹಿಸಲು ಸಾಧ್ಯವಾಗುವುದು.

## ಕಲಿಕಾ ಚಟುವಟಿಕೆಗಳು

- <u>ಸ್ನೇಹಿತರ ಬಳಗ</u>

ಪ್ರವೇಶೋತ್ಸವದ ದಿನ ಶಾಲೆಗೆ ಮೊದಲನೇ ಬಾರಿಗೆ ಬರುವಾಗ ಸಹಪಾಠಿಗಳನ್ನು ಬರ ಮಾಡಿಕೊಳ್ಳಲು ಪ್ರವೇಶೋತ್ಸವ/ಸ್ವಾಗತದ ಹಾಡುಗಳಿಗೆ ತಾಳಾತ್ಮಕವಾಗಿ ಹೆಜ್ಜೆ ಹಾಕಿ ಪ್ರದರ್ಶಿಸುವುದು.

● ಆಗಸ್ಟ್ 15, ಅಕ್ಟೋಬರ್ 2, ಜನವರಿ 26 ಎಂಬ ದಿನಗಳಲ್ಲಿ ದೇಶಭಕ್ತಿ ಹಾಡುಗಳಿಗೆ ಅನುಗುಣವಾಗಿ ಲಘು ನೃತ್ಯ ರೂಪಗಳನ್ನು ಮಾಡುವುದು.

● ಪರಿಸರ ದಿನ, ಹಿರೋಶಿಮಾ – ನಾಗಸಾಕಿ ದಿನ, ಲಹರಿ ವಿಮುಕ್ತ ದಿನ ಎಂಬಿವುಗಳ ಪ್ರಾಧಾನ್ಯವನ್ನು ತಿಳಿಸುವ ಹಾಡುಗಳಿಗೆ ನೃತ್ಯ ರೂಪವನ್ನು ನೀಡುವುದು.

● ವಾರ್ಷಿಕೋತ್ಸವಗಳಲ್ಲಿ ನೃತ್ಯಗಳ ಸಿ.ಡಿ.ಗಳಿಂದ ಕಲಿತ ನೃತ್ಯಗಳನ್ನು ಮಂಡಿಸುವುದು. ಇದಕ್ಕಾಗಿ ಶಾಲಾ ಕಲೋತ್ಸವದ ಸಿ. ಡಿ.ಗಳನ್ನು ಉಪಯೋಗಿಸಬಹುದು. ನೃತ್ಯದಲ್ಲಿ ಆಸಕ್ತಿಯೂ ತಜ್ಞರಿಂದ ತರಬೇತಿಯೂ ದೊರೆತ ವಿದ್ಯಾರ್ಥಿಗಳ ಪ್ರತಿಭೆ ಇದಕ್ಕಾಗಿ ಉಪಯೋಗಿಸುವುದು.

### ಮೌಲ್ಯಮಾಪನ

- ಮಂಡನೆಯಲ್ಲಿನ ಹಿರಿಮೆ

## ಯೂನಿಟ್ – 5 : ನೃತ್ಯ ಶಿಲ್ಪಗಳು

### ಮುನ್ನುಡಿ

ನೃತ್ಯವು ಆನಂದದಾಯಕವಾಗಿದೆ ಎಂಬುದಕ್ಕಿಂತ ಹೆಚ್ಚಾಗಿ ಆಶಯ ವಿನಿಮಯ ದಾರಿಯಾಗಿದೆ, ವಿಜ್ಞಾನಪ್ರದವಾಗಿದೆ ಎಂಬುದು ನಾವು ತಿಳಿಯಬೇಕಾಗಿದೆ. ಭರತಮುನಿಯ ನಾಟ್ಯಶಾಸ್ತ್ರವೇ ಅದಕ್ಕೆ ಉತ್ತಮವಾದ ಉದಾಹರಣೆಯಾಗಿದೆ, ಇದು ಹೆಚ್ಚು ಜನಪ್ರಿಯವೂ ಸಾಧಾರಣ ಜನರಿಗೆ ತಿಳಿದ್ದದ್ದೂ ಆಗಿದೆ. ಹೀಗೆ ಸಾಹಿತ್ಯದಲ್ಲಿನ ಸಂಕೀರ್ಣತೆಗಳನ್ನು ದಾಟಲು ಆಶಯವನ್ನು ಜನರಿಗೆ ತಿಳಿಸಲು ನೃತ್ಯಾವಿಷ್ಕಾರಗಳಿಗೆ ಸಾಧ್ಯವಾಗುತ್ತದೆ. ಪಾಠಭಾಗದಲ್ಲಿನ ಕವಿತೆಯೋ ಕಥೆಯೋ ರಂಗಾವಿಷ್ಕಾರವನ್ನು ನಡೆಸುವುದರಿಂದ ಇದೇ ರೀತಿಯಲ್ಲಿರುವ ಚಟುವಟಿಕೆಗಳಾಗಿವೆ (ಪ್ರೇಕ್ಷಕರಿಗೆ) ಸುಲಭದಲ್ಲಿ ಗ್ರಹಿಸಲು ಸಾಧ್ಯವಾಗುವುದು.

### ಕಲಿಕಾ ಸಾಧನೆಗಳು

- ಪಾಠಭಾಗಗಳಲ್ಲಿನ ಆಶಯಗಳಿಗೆ ಅನುಸಾರವಾಗಿ ನೃತ್ಯ ಶಿಲ್ಪಗಳನ್ನು ಮಂಡಿಸಲು ಸಾಧ್ಯವಾಗುತ್ತದೆ.

### ಆಶಯ, ತಿಳುವಳಿಕೆ

- ಕವಿತೆಗಳು, ಕಥೆಗಳು ಮೊದಲಾದವುಗಳನ್ನು ನೃತ್ಯ ರೂಪದಲ್ಲಿ ಮಂಡಿಸಬಹುದು.

### ಪ್ರಕ್ರಿಯೆ

- ಆಶಯಗಳನ್ನು ಕಂಡುಹಿಡಿಯುವುದು
- ನೃತ್ಯಕ್ಕೊಂದು ಹಾಡು (ಗಾನ)
- ನೃತ್ಯ ಶಿಲ್ಪದತ್ತ
- ಶಿಲ್ಪಾವತರಣ
- ನೃತ್ಯ ಶಿಲ್ಪ ಹೇಗೆ?

## ಒಳಪುಟಗಳಲ್ಲಿ

ಪಾಠಭಾಗದಲ್ಲಿನ ಆಶಯಗಳನ್ನು ಚರ್ಚೆಗಳ ಮೂಲಕ ಕಂಡುಹಿಡಿಯುವುದು. ಕಂಡುಹಿಡಿದ ಆಶಯಗಳನ್ನು ನೃತ್ಯ ಶಿಲ್ಪಕ್ಕೆ ಅನುಗುಣವಾಗಿ ವ್ಯವಹಾರ ರೂಪಗಳಿಗೆ ಬದಲಾಯಿಸುವುದು. ನೃತ್ಯ ಶಿಲ್ಪಕ್ಕೆ ಅಗತ್ಯವಾದ ರಂಗ ಸಜ್ಜೀಕರಣ, ವೇಷವಿಧಾನಗಳು, ಶೃಂಗಾರ ಎಂಬಿವುಗಳ ತಯಾರಿಕೆಯನ್ನು ಮಾಡುವುದು, ಗುಂಪು ತರಬೇತಿಯನ್ನು ಮಾಡುವುದು. ಮಂಡನೆಯಲ್ಲಿನ ಹಿರಿಮೆಗಳು, ತೊಂದರೆಗಳು ಎಂಬಿವುಗಳನ್ನು ಚರ್ಚೆಗಳ ಮೂಲಕ ಕಂಡುಹಿಡಿದು ಮಂಡಿಸುವುದು. ಹೊಸ ನೃತ್ಯ ಶಿಲ್ಪಗಳನ್ನು ತಯಾರಿಸಲಿರುವ ಸಾಮರ್ಥ್ಯ ಆರ್ಜಿಸುವುದು.

## ಕಲಿಕಾ ಚಟುವಟಿಕೆಗಳು

● ಕ್ಲಾಸಿನ ಮಕ್ಕಳನ್ನು ವಿವಿಧ ಗುಂಪುಗಳಾಗಿ ಮಾಡಿ ಪಾಠಭಾಗಗಳನ್ನು ಚರ್ಚೆಗಾಗಿ ನೀಡುವುದು. ಅವುಗಳಲ್ಲಿನ ಆಶಯವನ್ನು ಕಂಡುಹಿಡಿಯಲು ಹೇಳುವುದು. ಸಾಮಾನ್ಯ ವಿಷಯವಾಗಿ ಹೇಳಲಾಗುವ ಸಂದೇಶಗಳನ್ನು ಕಂಡುಹಿಡಿಯುವುದು.

● ಪಠ್ಯ ಪದ್ಧತಿಯ ಪ್ರಧಾನ ಆಶಯವೋ ಸಾಮಾಜಿಕ ಒಳಿತನ್ನು ಗುರಿಯಾಗಿಸಿದ ಆಶಯಗಳೋ ಆಗಬಹುದು.

***ಉದಾ : ಪರಿಸರ ಸಂರಕ್ಷಣೆ, ಜಲ ದುರ್ಬಳಕೆ, ಕುಟುಂಬ ಪ್ರೀತಿ, ಹಿರಿಯರಲ್ಲಿರುವ ಗೌರವ, ದೇಶಪ್ರೀತಿ ಎಂಬಿವುಗಳು.***

● ಕಂಡುಹಿಡಿದ ಆಶಯಗಳ ಪ್ರಸಕ್ತಿ, ಚರ್ಚೆ, ಕ್ರೋಡೀಕರಣ.
● ನೃತ್ಯ ಶಿಲ್ಪಗಳಿಗೆ ಅಗತ್ಯವಾದ ಪಾಠಭಾಗ/ಆಶಯವನ್ನು ಕಂಡುಹಿಡಿಯುವುದು.
● ಪಾಠಭಾಗದಲ್ಲಿನ ಕವಿತೆಯ ಪೂರ್ಣಭಾಗವೋ ಆಗಿರಬಹುದು.
● ಕಂಡುಹಿಡಿದ ಆಶಯಗಳನ್ನು ನೃತ್ಯ ಶಿಲ್ಪಕ್ಕೆ ಅನುಗುಣವಾದ ವಿಧದಲ್ಲಿ ಗಾನರೂಪದಲ್ಲಿ ಆವಿಷ್ಕರಿಸುವುದು. ಅಗತ್ಯವಾದ ವಿವರಣೆಗಳನ್ನು ಸೇರಿಸಿ ನೃತ್ಯ ಶಿಲ್ಪ ರಚನೆ ಪೂರ್ತಿಗೊಳಿಸುವುದು. ಗುಂಪುಗಳು ತಯಾರಿ ಮಾಡಿದವುಗಳನ್ನು ಉತ್ತಮಗೊಳಿಸಬೇಕಾದುದು. (ಭಾಷಾಧ್ಯಪಕರ ಸಹಾಯವನ್ನು ಪಡೆಯಬಹುದಾಗಿದೆ)
● **ನೃತ್ಯ ಶಿಲ್ಪ ತರಬೇತಿ**

ಅಧ್ಯಾಪಕರದ್ದೋ, ತರಗತಿಯಲ್ಲಿ ನೃತ್ಯದಲ್ಲಿ ತರಬೇತಿ ಪಡೆದ ವಿದ್ಯಾರ್ಥಿಗಳ ಅಥವಾ ಹಿರಿಯ ವಿದ್ಯಾರ್ಥಿಗಳ ಸಹಾಯದೊಂದಿಗೆ ಹಾಡುಗಳಿಗೆ ನೃತ್ಯ ಸಂಯೋಜನೆ ಮಾಡುವುದು.
● ನಂತರ ತರಗತಿ ಸಮಯದ ನಂತರ ಅಧಿಕಸಮಯನ್ನು ಕಂಡುಹಿಡಿದು ಅಭ್ಯಾಸ ಮಾಡುವುದು. (ಅಗತ್ಯವಾದ ವೇಷಗಳು, ಅಲಂಕಾರಗಳು, ರಂಗಸಜ್ಜೀಕರಣಗಳು ಮೊದಲಾದವುಗಳಿಗೆ ಪಿ.ಟಿ.ಎ. ಸಹಾಯ ನೀಡಬೇಕು)
● ಆಯ್ಕೆ ಮಾಡಿದ ಸಮಯದಲ್ಲಿ ಆಮಂತ್ರಿಸಲಾದ ಪ್ರಧಾನ ವ್ಯಕ್ತಿಗಳ ಸಮ್ಮುಖದ ಪ್ರದರ್ಶನ. (ಪ್ರಧಾನ ಅಧ್ಯಾಪಕರು, ಇತರ ಅಧ್ಯಾಪಕರು, ಪಿ.ಟಿ.ಎ., ಸದಸ್ಯರು, ಜನಪ್ರತಿನಿಧಿಗಳು, ಶಾಲೆಯ ಪ್ರಧಾನ ವಿದ್ಯಾರ್ಥಿಗಳು ಎಂಬಿವರನ್ನು ಮಕ್ಕಳೇ ಆಮಂತ್ರಣ ಪತ್ರಿಕೆಯನ್ನು ತಯಾರಿಸಿ ಆಮಂತ್ರಿಸಬೇಕಾಗಿದೆ.)
● ಆಮಂತ್ರಣದ ನಂತರ ಆಹ್ವಾನಿಸಲಾದ ವ್ಯಕ್ತಿಗಳನ್ನು ಒಳಗೊಳ್ಳಿಸಿ ಚರ್ಚೆಗಳನ್ನು ನಡೆಸುವುದು. ಅವುಗಳಲ್ಲಿನ ನಿರ್ದೇಶಗಳನ್ನು ಕೂಡ ಪರಿಗಣಿಸಿ ಹೊಸ ನೃತ್ಯ ಶಿಲ್ಪಗಳನ್ನು ತಯಾರಿಸಿ ಪ್ರದರ್ಶಿಸುವುದು.

# ಆರನೇ ತರಗತಿ

## ಯೂನಿಟ್ – 1

### ಮುನ್ನುಡಿ

ನಮ್ಮ ದೇಶದ ಪರಿಚ್ಛೇದಗಳಾಗಿವೆ ನೃತ್ಯ ರೂಪಗಳು. ಪ್ರತಿಯೊಂದು ನೃತ್ಯಗಳಿಗೂ ಅದರದ್ದೇ ಆದ ಒಂದೊಂದು ಸವಿಶೇಷತೆಗಳ ನೆಲೆನಿಲ್ಲುತ್ತವೆ ಎಂದು ತಿಳಿಯುವುದರೊಂದಿಗೆ ಇವುಗಳೆಡೆಯಲ್ಲಿ ಧಾರಾಳ ಸಾಮ್ಯತೆಗಳನ್ನು ಕಾಣಲಾಗುತ್ತಿವೆ ಎಂಬುದು ನಾವು ತಿಳಿಯಬೇಕು. ಸೂಕ್ಷ್ಮವಾದ ನಿರೀಕ್ಷಣೆಯ ಮೂಲಕ ಮಾತ್ರವೇ ನಮಗಿದು ತಿಳಿಯಲು ಸಾಧ್ಯವಾಗುತ್ತದೆ. ಕ್ರಮದೊಂದಿಗಿರುವ ಅಭ್ಯಾಸವು ಇಲ್ಲಿ ಅನಿವಾರ್ಯವಾಗಿದೆ. ಶಾಸ್ತ್ರೀಯವಾದ ಕಲಾಕಲಿಕೆಗೆ ಮಕ್ಕಳನ್ನು ಸೇರಿಸಲೇಬೇಕು. ನಮ್ಮ ಸುತ್ತಲಿರುವ ಜೀವಿಗಳನ್ನು ಅನುಕರಿಸುವುದಕ್ಕಿರುವ ಪರಿಪಾಠವಾಗಿದೆ ನೃತ್ಯ ರೂಪಗಳ ಸೃಷ್ಟಿಗೆ ದಾರಿತೋರಿದ ಒಂದು ಘಟಕ. ನಮ್ಮ ಮಕ್ಕಳಲ್ಲಿ ಈ ಆಸಕ್ತಿ ಬೇಕಾದಷ್ಟು ಇವೆ. ಅದನ್ನು ಒಳ್ಳೆಯ ದಾರಿಗೆ ಬಿಡುವುದು ಮಾತ್ರವೇ ಶಾಸ್ತ್ರೀಯ ಸಮೀಪನ ಎಂಬುವುದರ ಮೂಲಕ ಅರ್ಥವಾಗುವುದು. ಅದರಿಂದಲೇ ಮುದ್ರೆಗಳಿಂದಲೂ, ಸಂಕೇತಗಳಿಂದಲೂ ಅಭಿನಯದ ಶಾಸ್ತ್ರೀಯ ಮಟ್ಟಗಳಿಗೆ ಮಕ್ಕಳನ್ನು ಬಿಡುವ ಈ ಘಟಕ ಆಸ್ವಾದಕರವಾಗುವ ರೀತಿಯಲ್ಲಿ ಮಂಡಿಸುವುದಕ್ಕೆ ಸಾಕಷ್ಟು ಗಮನವನ್ನು ನೀಡಬೇಕು.

### ಕಲಿಕಾ ಸಾಧನೆಗಳು

- ಜಾನಪದ ನೃತ್ಯರೂಪಗಳನ್ನು ಮಂಡಿಸುವುದು.

### ಆಶಯ, ತಿಳುವಳಿಕೆ

- ಜಾನಪದ ನೃತ್ಯ ರೂಪಗಳಲ್ಲಿ ಪ್ರತಿಯೊಂದರ ವೇಷಗಳಲ್ಲಿ ವ್ಯತ್ಯಾಸವಿದೆ.
- ವಿವಿಧ ನೃತ್ಯ ರೂಪಗಳನ್ನು ಕಂಡು ಚಲನೆಗಳನ್ನು ತಿಳಿದು ಮಂಡಿಸುವುದಕ್ಕಿರುವ ನೈಪುಣ್ಯಗಳನ್ನು ಪಡೆಯುವುದು.

### ಒಳ ಹೂರಣ

ನೃತ್ಯ ಸಂಸ್ಕಾರದ ಆಧಾರದಲ್ಲಿ ಸಂಪನ್ನವಾಗಿವೆ ನಮ್ಮ ಜಾನಪದ ನೃತ್ಯರೂಪಗಳು. ಇವುಗಳ ಪೋಷಣೆಯೊಂದಿಗೆ ಇಲ್ಲಿನ ಶಾಸ್ತ್ರೀಯ ನೃತ್ಯ ಶಿಲ್ಪಗಳು ಬೆಳೆದು ಬಂದಿವೆ. ಆದ್ದರಿಂದಲೇ ಇಂತಹ ನೃತ್ಯ ಶಿಲ್ಪಗಳ ಕಲಿಕೆಯೂ ಮಂಡನೆಯೂ ಈ ಕಲಿಕಾ ಪದ್ಧತಿಯ ಒಂದು ಭಾಗವಾಗಿದೆ. ಪ್ರತಿಯೊಂದು ಪ್ರದೇಶದ ನೃತ್ಯದ ಹೆಜ್ಜೆಗಳ ವೇಗತೆ, ನಿಖರತೆ, ಚಲನೆಗಳಲ್ಲಿನ ಪ್ರತ್ಯೇಕತೆ ಎಂಬಿವುಗಳೆಲ್ಲಾ ಮಕ್ಕಳಿಗೆ ತಿಳಿಯುವ ರೀತಿಯಲ್ಲಾಗಿರಬೇಕು. ಅದನ್ನು ಒಳ್ಳೆಯ ದಾರಿಗೆ ಬಿಡುವುದು ಮಾತ್ರವೇ ಶಾಸ್ತ್ರೀಯ ಸಮೀಪನ ಎಂಬುವುದರ ಮೂಲಕ ಅರ್ಥವಾಗುವುದು. ಅದರಿಂದಲೇ ಮುದ್ರೆಗಳಿಂದಲೂ,

ಅಡವುಗಳಿಂದಲೂ ಅಭಿನಯದ ಶಾಸ್ತ್ರೀಯ ಮಟ್ಟಗಳಿಗೆ ಮಕ್ಕಳನ್ನು ಬಿಡುವ ಈ ಘಟಕ ಆಸ್ವಾದಕರವಾಗುವ ರೀತಿಯಲ್ಲಿ ಮಂಡಿಸುವುದಕ್ಕೆ ಬೇಕಾದಷ್ಟು ಗಮನವನ್ನು ನೀಡಬೇಕು.

## ಕಲಿಕಾ ಚಟುವಟಿಕೆಗಳು

- ಪ್ರಾದೇಶಿಕವಾಗಿ ಪ್ರಚಾರದಲ್ಲಿರುವ ಯಾವುದಾದರೂ ನೃತ್ಯ ಪ್ರದರ್ಶಿಸುವ ರೀತಿಯ ಕುರಿತು ಗುಂಪುಗಳಲ್ಲಿ ಚರ್ಚೆ ಮಾಡುವುದು. ಅದರ ನಂತರ ಅದರ ಹೆಜ್ಜೆಗಳನ್ನು ಕಲಿಯಲು ಪ್ರಾರಂಭಿಸುವುದು. ಇದಕ್ಕಾಗಿ ಈ ನೃತ್ಯವನ್ನು ಕಲಿತು ಮಕ್ಕಳನ್ನೋ ಇನ್ನಿತರ ಅಧ್ಯಾಪಕರನ್ನೋ ಪ್ರಾದೇಶಿಕ ಮೂಲಗಳನ್ನೋ ಉಪಯೋಗಿಸಬಹುದು. ತರಬೇತಿ ಪಡೆದ ಜಾನಪದ ನೃತ್ಯಗಳ ಕುರಿತು ಇರುವ ಒಂದು ಟಿಪ್ಪಣಿಯನ್ನು ಎಲ್ಲಾ ಮಕ್ಕಳು ತಯಾರಿಸಬೇಕು.

- ಟೀಚರ್ ಸಿ.ಡಿ.ಯನ್ನು ಪ್ರದರ್ಶಿಸುವುದು. ಮಕ್ಕಳು ಅದರ ಸವಿಶೇಷತೆಗಳನ್ನು ಒಂದೊಂದಾಗಿ ಹೇಳುವುದು. ಬಿಟ್ಟು ಹೋದ ಅಂಶಗಳನ್ನು ಅಧ್ಯಾಪಕರು ಸೇರಿಸಿ ಉತ್ತಮಪಡಿಸುವುದು.
- ಇನ್ನಿತರ ಜಾನಪದ ನೃತ್ಯ ರೂಪದ ಸಿ.ಡಿ. ಪ್ರದರ್ಶನವನ್ನು ನಡೆಸುವುದು. ಗುಂಪಾಗಿ ತರಬೇತಿ ಪಡೆಯುವುದು. ಅಧ್ಯಾಪಕರ ಸಹಾಯವನ್ನು ಪಡೆಯಬಹುದು. ಇದಕ್ಕೆ ಸಂಬಂಧಿಸಿದ ವಿವರಗಳನ್ನು ಕೇಳುವುದು. ಇದು ಎಲ್ಲಾ ಮಕ್ಕಳಿಗೂ ಮಾಡಬಹುದಾಗಿದೆ. ಅಗತ್ಯವಾದ ವಿವರಗಳನ್ನು ಅಧ್ಯಾಪಕನು ನೀಡಬೇಕಾಗಿದೆ.

- **ತಿರುವಾದಿರಕಳಿ**

  ಎಂಟೋ ಅಥವಾ ಅದಕ್ಕಿಂತ ಹೆಚ್ಚೋ ಹೆಣ್ಣು ಮಕ್ಕಳಿಗೆ ಮಾಡಬಹುದಾದ ಒಂದು ನೃತ್ಯರೂಪವಾಗಿದೆ ಇದು. ಸ್ವತಃ ಕೇರಳೀಯವಾದ ರೀತಿಯಲ್ಲಿರುವ ವೇಷ ವಿಧಾನಗಳಾಗಿವೆ ಇದಕ್ಕೆ ಉಪಯೋಗಿಸುವುದು. ತಲೆಯಲ್ಲಿ ಕೊಂಡೆ ಕಟ್ಟಿ, ಮಲ್ಲಿಗೆ ಹೂ, ದಶಪುಷ್ಪ ಎಂಬಿವುಗಳನ್ನು ಮುಡಿದು ಚಂದನ ಬೊಟ್ಟನ್ನು ಇಟ್ಟು ಸರಳವಾದ ಕೇರಳೀಯ ಆಭರಣಗಳನ್ನು ತೊಟ್ಟು ಕಸವಿನ ಪಂಚೆ ನುಣುಪಾದ ಬ್ಲೌಸನ್ನು ಧರಿಸಿ ರಂಗಕ್ಕೆ ಪ್ರವೇಶಿಸುವುದು. ಗಣಪತಿ ಭಗವಾನನ್ನು ಸ್ತುತಿಸಿ ಕೊಂಡು ನೃತ್ಯ ಪ್ರಾರಂಭವಾಗುವುದು. ನಂತರ ಸ್ವರಸ್ವತಿ ದೇವಿಯನ್ನು ಸ್ತುತಿಸಿದ ನಂತರ ಹೆಜ್ಜೆ ಹಾಡಿನತ್ತಕ್ಕೆ ಹೋಗುವುದು. ಇಷ್ಟು ಹೊತ್ತು ದೇವರನ್ನು ಸ್ತುತಿಸುವ ರೀತಿಯಲ್ಲಿ ಕೈತಟ್ಟುವುದು. ಎಡೆಎಡೆಯಲ್ಲಿ ತಾಳದ ಕ್ರಮಕ್ಕನುಸರಿಸಿ ಬದಲಾಯಿಸಿ ಹೆಜ್ಜೆ ಹಾಕುವುದು. ಕೈಗಳ ಚಲನೆ ಬಹಳ ಸರಳ ರೀತಿಯಲ್ಲಾಗಬೇಕು. ಇನ್ನಿತರ ನೃತ್ಯಗಳೊಂದಿಗೆ ಬೆರೆಯದಿರಲು ಪ್ರತ್ಯೇಕವಾಗಿ ಗಮನಿಸಬೇಕು. ಪದವನ್ನು ಹಾಡಿದ ನಂತರ ಕುರತ್ತಿ, ಮುಮ್ಮಿ, ಪಂಜಿ, ನಾಡನ್ ಎಂಬೀ ಹಾಡುಗಳನ್ನು ಹಾಡಿ ಆವೇಶದೊಂದಿಗೆ ಹಾಡಬೇಕು. ಈ ಮೂರನೇ ಭಾಗದಲ್ಲಿ ಅಂತಿಮವಾಗಿ ಮಂಗಳ ಸ್ತುತಿಯನ್ನು ಹಾಡಿ ಒಂದೋ ಎರಡೋ ರೀತಿಯ ಹೆಜ್ಜೆಗಳನ್ನು ಹಾಕಿ ಮಂಡಿಸುವುದು.
- ಮಕ್ಕಳು ಅವರ ಪ್ರದೇಶದಲ್ಲಿ ಪ್ರಚಾರದಲ್ಲಿರುವ ಯಾವುದಾದರೂ ಒಂದು ಜಾನಪದ ನೃತ್ಯ ರೂಪದ ಮಂಡನಾ ರೀತಿಯ ವಿವರಣೆಯನ್ನು ತಯಾರಿಸುವುದು. ಅದರೊಂದಿಗೆ ಸಂಬಂಧಪಟ್ಟ ಚರಿತ್ರೆಯನ್ನು ಸಂಗ್ರಹಿಸುವುದು. ಮಂಡನೆ, ಸಂಗ್ರಹಣೆ ಎಂಬಿವುಗಳ ಮೌಲ್ಯನಿರ್ಣಯವನ್ನು ನಡೆಸುವುದು.

## ಮೌಲ್ಯಮಾಪನ

*ಸೂಚಕಗಳು*

- ಮಂಡನೆಯಲ್ಲಿನ ತಾಳಜ್ಞಾನ
- ಚಲನೆಗಳ ಹಿರಿಮೆ
- ಆಶಯ ವಿನಿಮಯ
- ವಿವರ ಸಂಗ್ರಹದ ಸಮಗ್ರತೆ
- ಭಾಷೆ
- ಸೂಕ್ಷ್ಮ ನಿರೀಕ್ಷಣಾ ಪಠನ

# ಯೂನಿಟ್ – 2 : ಅಡವುಗಳನ್ನು ಕಲಿಯೋಣ

## ಮುನ್ನುಡಿ

ಯಾವುದೇ ನೃತ್ಯದ ಚೌಕಟ್ಟು ಎಂದು ಹೇಳುವುದು ಅದರ ಶುದ್ಧ ನೃತ್ಯಾಂಶವಾಗಿದೆ. ಶುದ್ಧ ನೃತ್ಯವೆಂಬುದು ಅಡವುಗಳ ಇಂದು ಸಮನ್ವಯವಾಗಿದೆ. ಅದನ್ನು ಕಂಡುಕೊಂಡೇ ಅಡವುಗಳನ್ನು ಸಾಧಿಸುವುದು ಎಂಬುದು ಆ ನೃತ್ಯ ರೂಪವನ್ನು ತಿಳಿಯುವುದರ ಮೂಲಾಧಾರವಾಗಿರುವ ವಿಷಯವನ್ನು ಪ್ರಾಧಾನ್ಯದೊಂದಿಗೆ ತಿಳಿದುಕೊಳ್ಳಬೇಕು. ಹಲವಾರು ಶಾಸ್ತ್ರೀಯ ನೃತ್ಯಗಳಲ್ಲೂ ಅಭಿನಯ ತಂತ್ರಗಳೂ ಒಂದೇ ರೀತಿಯಲ್ಲಿರುವುದು. ಆದರೆ ಅಡವುಗಳು ವಿಭಿನ್ನಗಳಾಗಿರುತ್ತವೆ. ಅಂದರೆ ಒಂದು ನೃತ್ಯದ ಪರಿಪೂರ್ಣತೆಯಾಗಿರುತ್ತದೆ. ಮಂಡನೆಗೆ ಅದರ ಅಡವುಗಳು ಹೆಚ್ಚು ಶುದ್ಧವಾದ ರೀತಿಯಲ್ಲಿ ಪರಿಶೋಧಿಸಲೇ ಬೇಕು.

## ಕಲಿಕಾ ಸಾಧನೆಗಳು

- ಕ್ರಮವಾಗಿರುವ ಅಡವುಗಳನ್ನು ಕಂಡು ತರಬೇತಿ ನೀಡುವುದು.

## ಆಶಯ, ತಿಳುವಳಿಕೆ

- ಶಾಸ್ತ್ರೀಯ ನೃತ್ಯ ರೂಪಗಳಲ್ಲಿ ಹಲವು ರೀತಿಯ ಮೂಲಾಧಾರ ಅಡವುಗಳಿವೆ.
- ಅಡವುಗಳು ವಿವಿಧ ತಾಳಗಳಲ್ಲಾಗಿವೆ ಕ್ರಮಾನುಗತಗೊಳಿಸಿರುವುದು.
- ಅಡವುಗಳಿಗೆ ತನ್ನದಾದ ರೀತಿಯಲ್ಲಿ ತಾಳಾತ್ಮಕವಾಗಿ ಮಂಡಿಸಲಿರುವ ನೈಪುಣ್ಯ.

## ಕಲಿಕಾ ಚಟುವಟಿಕೆಗಳು

- ನಮ್ಮ ನಾಡಿನಲ್ಲಿ ಪ್ರಚಾರದಲ್ಲಿರುವ ಧಾರಾಳ ಶಾಸ್ತ್ರೀಯ ನೃತ್ಯರೂಪಗಳಿದ್ದರೂ ಹೆಚ್ಚು ಪ್ರಚಾರ ಲಭಿಸಿರುವುದು ಗಂಡುಮಕ್ಕಳಿಗೂ ಹೆಣ್ಣು ಮಕ್ಕಳಿಗೂ ಒಂದೇ ರೀತಿ ಕಲಿಯಲು ಸಾಧ್ಯವಾಗುವ ಭರತನಾಟ್ಯದಲ್ಲಿನ ಅಡವುಗಳಾಗಿವೆ. ನಾವು ತರಗತಿಯಲ್ಲಿ ಪರಿಶೀಲನೆ ನಡೆಸುವುದು. ಭರತನಾಟ್ಯದಲ್ಲಿನ ಅಡವುಗಳಾದ ತಟ್ಟಡವುಗಳು, ನಾಟ್ಟಡವುಗಳು, ಪರವಲ್ ಅಡವುಗಳು (ಪಾರ್ಶ್ವಲ್ ಅಡವುಗಳು) ಎಂಬಿವುಗಳನ್ನು ಪರಿಶೀಲಿಸುವುದು.
- ಇವುಗಳನ್ನು ಪರಿಶೀಲಿಸುವುದರೊಂದಿಗೆ ರೂಪಕತಾಳಂ, ಆದಿ ತಾಳಂ ಎಂಬಿವುಗಳನ್ನು ಪರಿಚಯಪಡಿಸಬೇಕು. ಅದರೊಂದಿಗೆ ಅವುಗಳ ಕಾಲ (ಒಂದು, ಎರಡು, ಮೂರು ಕಾಲಗಳು) ಎಂಬಿವುಗಳನ್ನು ಪರಿಚಯಪಡಿಸಬೇಕು.

- 1. ತಟ್ಟಡವುಗಳು – ಎಂಟೂ ಪರಿಶೀಲಿಸಬೇಕು. ಮೂರೂ ಅಷ್ಟ ರೂಪಕತಾಳದಲ್ಲೂ 1, 2, 4, 5, 6, 7 ಎಂಬಿವು ಆದಿತಾಳದಲ್ಲಾಗಿರುತ್ತದೆ ಪ್ರಯೋಗಿಸುವುದು.
- **ತಟ್ಟಡವುಗಳು–**

ತೈ ತೈ
R L *(ಬಲಗಾಲು, ಎಡಗಾಲು)* (place R and L)
R ತೈಯಾ ತೈ , L ತೈಯಾ ತೈ - 2
R ತೈಯಾ ತೈಯಾ ತೈಯಾ ತೈ, L ತೈಯಾ ತೈಯಾ ತೈಯಾ ತೈ- 3
R ತೈಯಾ ತೈಯಾ ತೈ ತೈ ತಾಂ, L ತೈಯಾ ತೈಯಾ ತೈ ತೈ ತಾಂ-4
R ತೈ ತೈ ತಾಂ.. ತೈ ತೈ ತಾಂ, L ತೈ ತೈ ತಾಂ.. ತೈ ತೈ ತಾಂ- 5
R ತೈ ತೈ ತಾಂ... ತೈ ತೈ ತಾಂ L ತೈ ತೈ ತಾಂ... ತೈ ತೈ ತಾಂ- 6

R ತೈ ತೈ ತೈ L ತ R ತೈ ತೈ ತಾಂ... L ತೈ ತೈ ತೈ R ತ L ತೈ ತೈ ತಾಂ-7
R ತೈ L ತೈ R ತೈ L ತೈ (R ಧಿ L ತ್ತಿ R ತೈ ) } II[nd] speed
L ತೈ R ತೈ L ತೈ R ತೈ (L ಧಿ R ತ್ತಿ L ತೈ )

- ನಾಟ್ಟಡವುಗಳು

ಈ ವಿಭಾಗದಲ್ಲಿರುವ ಎಂಟು ಅಡವುಗಳಿಗೆ ಒಂದೇ ಹೆಸರನ್ನು ಉಪಯೋಗಿಸುವುದು.

ತೈ ತತ್ತ ತೈಯುಂ ತಾಹ
ತೈಯುಂ ತತ್ತ ತೈಯುಂ ತಾಹ
ಪರವಲ್ ಅಡವುಗಳು

- ಈ ವಿಭಾಗದಲ್ಲಿ ನಾಲ್ಕು ಅಡವುಗಳಾಗಿರುತ್ತದೆ.

ತಾ ತೈ ತೈ ತಾ
ಧಿ ತೈ ತೈ ತಾ
ಎಂದಿರುವ ಹೆಸರುಗಳಾಗಿವೆ ಎಲ್ಲಾ ಅಡವುಗಳಿಗೂ ಉಪಯೋಗಿಸುವುದು. ಈ ಅಡವುಗಳನ್ನು ಪರಿಶೀಲಿಸುವುದಕ್ಕೆ ತಜ್ಞರ ಸಹಾಯವನ್ನು ಪಡೆಯಬಹುದಾಗಿದೆ.

## ಮೌಲ್ಯಮಾಪನ

***ಸೂಚಕಗಳು***

- ಅಡವುಗಳ ನಿಖರತೆ
- ಭಾಗವಹಿಸುವಿಕೆ
- ತಾಳದ ವ್ಯತ್ಯಸ್ತ ಕಾಲಗಳು

## ಯೂನಿಟ್ – 3 : ಮುದ್ರಾ ಭಾಷೆ

### ಮುನ್ನುಡಿ

ಒಬ್ಬ ಮನುಷ್ಯನ ವಿಕಾಸ ಹಂತಗಳಲ್ಲಿ ಭಾಷೆ ಒಂದು ಪ್ರಧಾನ ಪಾತ್ರ ವಹಿಸಿದೆ. ಬಾಯಿಯಲ್ಲಿ ಹೇಳುವುದಕ್ಕೂ ಬರಹದಲ್ಲಿ ಹೇಳುವುದಕ್ಕೂ ಮೊದಲೇ ಕೈಭಾಷೆಯ ಮೂಲಕವೂ ಅವನು ಆಶಯ ವಿನಿಮಯ ನಡೆಸಲು ಪ್ರಾರಂಭವಾಗಿದ್ದವು. ಆಂಗಿಕ ಭಾಷೆಯ ಪರಿಷ್ಕೃತವಾದ ರೂಪವಾಗಿ ಹಸ್ತಮುದ್ರೆಗಳನ್ನು ಕಾಣಬಹುದು.

ಹಸ್ತಮುದ್ರೆಗಳ ಮೂಲಕ ಆಶಯ ವಿನಿಮಯ ನಡೆಸಲಿರುವ ಪ್ರತಿಭೆ ಶಾಸ್ತ್ರೀಯ ನೃತ್ಯದ ಒಂದು ಪ್ರತ್ಯೇಕತೆಯಾಗಿರುತ್ತದೆ. ಆದ್ದರಿಂದ ಈ ಆಶಯ ವಿನಿಮಯ ರೀತಿ ಮಕ್ಕಳಲ್ಲಿ ಬಲಪಡಿಸುವ ರೀತಿಯಲ್ಲಿರುವ ಚಟುವಟಿಕೆಗಳನ್ನು ಸಂಘಟಿಸಬೇಕಾಗುತ್ತದೆ.

**ಕಲಿಕಾ ಸಾಧನೆಗಳು**

- ಸುತ್ತಲಿರುವ ವಸ್ತುಗಳನ್ನು ಕೈಮುದ್ರೆಗಳ ಮೂಲಕ ಮಂಡಿಸುವುದು.

**ಆಶಯ, ತಿಳುವಳಿಕೆ**

- ನಿತ್ಯ ಜೀವನದಲ್ಲಿ ಕೈ ಮುದ್ರೆಗಳಿಗೆ ಪ್ರಾಧಾನ್ಯವಿದೆ. ನೃತ್ಯದಲ್ಲಿ ಅವುಗಳನ್ನು ಶಾಸ್ತ್ರೀಯವಾಗಿ ಕ್ರಮಾನುಗತಗೊಳಿಸಲಾಗಿದೆ.

**ಕಲಿಕಾ ಚಟುವಟಿಕೆಗಳು**

- ಹೂವು, ಹಣ್ಣು, ಮಳೆ, ಗಾಳಿ, ಜಿಂಕೆ ಮೊದಲಾದ ಹೆಸರುಗಳನ್ನು ಹೇಗೆ ಮುದ್ರೆಯ ರೂಪದಲ್ಲಿ ಹೇಳಬಹುದು?
- ಎರಡು ಗುಂಪಾಗಿ ಬೇರ್ಪಟ್ಟು ಮುದ್ರೆಗಳನ್ನು ತೋರಿಸಿ, ಅರ್ಥವನ್ನು ಹೇಳಿ, ಆಟ ಮುಂದುವರಿಸುವುದು.
- ಸಣ್ಣ ಬರಹಗಳನ್ನು ಇದೇ ರೀತಿ ಮಾಡಬಹುದಾಗಿದೆ. ಟೀಚರ್ ಒಂದು ಗುಂಪಿಗೆ ನೀಡಿದ ಸ್ಲಿಪ್ಪಿನಲ್ಲಿ ಬರೆದ ಲಘು ಬರಹಗಳು ಮುದ್ರೆಯ ರೂಪದಲ್ಲಿ ತೋರಿಸುವುದು. ಇನ್ನಿತರ ಗುಂಪುಗಳು ಅದರ ಅರ್ಥವನ್ನು ಹೇಳುವುದು. ಇದೇ ರೀತಿ ಎರಡನೆಯ ಗುಂಪಿನಲ್ಲಿ ಸ್ಲಿಪ್ಪ್‌ನ್ನು ನೀಡಿ ಆಟ ಮುಂದುವರಿಸುವುದು. ಸ್ಲಿಪ್ಪಿನಲ್ಲಿ ಬರೆಯಬಹುದಾದ ಲಘು ವಾಕ್ಯಗಳು

  *ಎಲ್ಲಿ ಹೋಗುತ್ತಿ?*
  *ಕೈಯಲ್ಲಿ ಹಣವಿದೆಯೋ?*

## ಯೂನಿಟ್ – 4

**ಮುನ್ನುಡಿ**

ಶಾಸ್ತ್ರೀಯ ನೃತ್ಯಗಳಲ್ಲಿ ಮುದ್ರೆಗಳನ್ನು ಪ್ರತಿಪಾದಿಸುವ ಬಗ್ಗೆ ತುಂಬಾ ಪುಸ್ತಕಗಳಿವೆ. ಅದರಲ್ಲಿ ಪ್ರಧಾನವಾಗಿದೆ ನಾಟ್ಯಶಾಸ್ತ್ರ, ಅಭಿನಯದರ್ಪಣ, ಹಸ್ತ ಲಕ್ಷಣ ದೀಪಿಕ, ಬಾಲರಾಮಭರತಂ ಮೊದಲಾದವುಗಳು. ಈ ಗ್ರಂಥಗಳಲ್ಲಿರುವ ಮುದ್ರೆಯ ರೀತಿ ಮಕ್ಕಳಿಗೆ ಹೇಳಿ ಕೊಡಬೇಕಾಗಿದೆ. ಇದಕ್ಕಾಗಿ ಐ.ಟಿ. ಸಾಂಕೇತಿಕ ವಿದ್ಯೆಯನ್ನೂ ಉಪಯೋಗಿಸಬಹುದಾಗಿದೆ.

**ಕಲಿಕಾ ಸಾಧನೆಗಳು**

- ಮೂಲಾಧಾರ ಮುದ್ರೆಗಳು (ಅಸಂಯುಕ್ತ) ಕಾಣವುದು. ಪರಿಶೀಲಿಸುವುದು. ಇವುಗಳನ್ನು ಉಪಯೋಗಿಸಿ ಆಶಯ ವಿನಿಮಯ ನಡೆಸುವುದು.

**ಆಶಯ, ತಿಳುವಳಿಕೆ**

- ಶಾಸ್ತ್ರೀಯ ನೃತ್ಯರೂಪಗಳಿಗೆ ವಿವಿಧ ವಿಧದಲ್ಲಿರುವ ಮೂಲಾಧಾರ ಮುದ್ರೆಗಳಿವೆ.
- ಪ್ರತಿಯೊಂದು ಮುದ್ರೆಗಳಿಗೂ ನಿಖರವಾಗಿ ಅರ್ಥವೂ ಪ್ರಯೋಗಗಳೂ ಇವೆ.

### ಕಲಿಕಾ ಚಟುವಟಿಕೆಗಳು

- ಟೀಚರ್ ಭರತನಾಟ್ಯಕ್ಕೆ ಉಪಯೋಗಿಸುವ ಅಸಂಯುಕ್ತ ಮುದ್ರೆಗಳನ್ನು ತೋರಿಸುವುದು.
- ಮಕ್ಕಳು ಒಬ್ಬೊಬ್ಬರಾಗಿ ಪರಿಶೀಲಿಸುವುದು.
- ಪ್ರಯೋಗಗಳನ್ನು ಪರಿಚಯಪಡಿಸುವುದು.(ಸಿ.ಡಿ. ಉಪಯೋಗಿಸುವ)

*ಅಸಂಯುಕ್ತಮುದ್ರಾಶ್ಲೋಕಂ (ಅಭಿನಯದರ್ಪಣಂ)*
*ಪದಕತ್ರಿಪತಾಕೋ*
*ಅರ್ಧಪತಾಕ ಕರ್ತರೀಮುಖಃ*
*ಮಯೂರಾಖ್ಯೋ ಅರ್ಧಚಂದ್ರಶ್ಚ*
*ಅರಾಳ ಶುಕತುಂಧಕ*
*ಮುಷ್ಟಿಶ್ಚ ಶಿಖರಾವಿಶ್ಚ*
*ಕಪಿತ್ಥ ಕಟಕಮುಖ*
*ಸುಚಿಚಂದ್ರಕಲಾಪದ್ಮ ಕೋಶಃ*
*ಸರ್ಪಗಿರಸ್ತತಃ*
*ಮೃಗಶೀರ್ಷೋ ಸಿಂಹಮುಖಃ*
*ಕಾಂಗುಲಶ್ಚ ಅಲಪತ್ಮಕಃ*
*ಪದುರೋ ಭ್ರಮರಶ್ಚೈವ*
*ಹಂಸಸ್ಯೋ ಹಂಸಪಕ್ಷಕಃ*
*ಸಂದಂಷೋ ಮುಕುಳಶ್ಚೈವ*
*ತಾಮ್ರಚೂಡ ತ್ರಿಶೂಲಕಃ*
*ಇತ್ಯಸಂಯುಕ್ತ ಹಸ್ತಾನಾಂ*
*ಅಷ್ಟವಿಂಶತಿ ರೀತಿತಃ*

- 1. ಪತಾಕೆ – ಧ್ವಜ
  2. ತ್ರಿಪತಾಕೆ – ಮೂರು ಧ್ವಜ
  3. ಅರ್ಧ ಪತಾಕೆ – ಅರ್ಧ ಧ್ವಜ
  4. ಕರ್ತರಿಮುಖಂ – ಕತ್ತರಿಯ ಮುಖ
  5. ಮಯೂರಂ – ನವಿಲು
  6. ಅರ್ಧಚಂದ್ರನ್ – ಅರ್ಧಚಂದ್ರ
  7. ಅರಾಳಂ – ಮೊಳಕೆ ಬೀಜ
  8. ಶುಕತುಂಡಂ – ಗಿಳಿಯ ತುಟಿ
  9. ಮುಷ್ಠಿ – ಮಡಚಿದ ಕೈ
  10. ಶಿಖರಂ– ತುದಿ
  11. ಕಪಿತ್ಥ – ಒಂದು ರೀತಿಯ ಹಣ್ಣು (ವಿಳಂಬಯಂ)
  12. ಕಡಕಮುಖಂ – ಬಳೆ
  13. ಸೂಜಿ – ಸೂಜಿ
  14. ಚಂದ್ರಕಲ – ಚಂದ್ರಕಲ
  15. ಪದ್ಮಕೋಶಂ – ತಾವರೆಯ ಒಳಭಾಗ
  16. ಸರ್ಪಶಿರಸ್ಸ್ – ಹಾವಿನ ತಲೆ
  17. ಮೃಗಶೀರ್ಷಂ – ಜಿಂಕೆಯ ತಲೆ
  18. ಸಿಂಹಮುಖಂ – ಸಿಂಹದ ಮುಖ

19. ಕಾಂಗುಲಂ – ಚಿಕ್ಕದು ( ನಾಲ್ಕರಲ್ಲಿ ಒಂದು ಭಾಗ) – ಬಾಲ
20. ಅಳಪದ್ಮಂ – ಅರಳಿದ ತಾವರೆ
21. ಚದುರಂ – ಆಯತ
22. ಭ್ರಮರಂ – ಜೀರುಂಡೆ
23. ಹಂಸಾಸ್ಯಂ – ಹಂಸದ ಕೊಕ್ಕು
24. ಹಂಸಪಕ್ಷಂ – ಹಂಸದ ರೆಕ್ಕೆ
25. ಸಂದಂಶಂ – ಕಚ್ಚುವುದು
26. ಮುಗುಳಂ – ಹೂವಿನ ಮೊಗ್ಗು
27. ತಾಮ್ರಚೂಡಂ –ಕೋಳಿ
28. ತ್ರಿಶೂಲಂ – ಮೂರು ಮೊನೆಯಿರುವ ಶೂಲ




**ಮುಂದುವರಿದ ಚಟುವಟಿಕೆ**

ಮುದ್ರೆಗಳ ಪ್ರಯೋಗಗಳನ್ನು ಕಂಡುಹಿಡಿದು ಪರಿಶೀಲಿಸುವುದು.

ರೆಫರೆನ್ಸ್ : ಸಿ.ಡಿ.ಗಳು

# ಯೂನಿಟ್ – 5 : ಕಥಕ್ಕಳಿ ಶೃಂಗಾರಗಳು

## ಮುನ್ನುಡಿ

ಕಥಾಪಾತ್ರಗಳ ಸ್ವಭಾವ ಪ್ರೇಕ್ಷಕರಿಗೆ ತಿಳಿಸಿಕೊಡುವ ಮೊದಲ ಘಟಕಗಳಾಗಿವೆ ಆಹಾರ್ಯ ಅಥವಾ ವೇಷಭೂಷಣಗಳು. ನರ್ತಕರು ಧರಿಸುವ ವಸ್ತ್ರ, ಆಭರಣಗಳು ಎಂಬಿವುಗಳು ಅವರು ಉಪಯೋಗಿಸುವ ಖಡ್ಗ, ಚೆಂಗೋಲು, ಕಿರೀಟ ಮೊದಲಾದವು ವೇಷಭೂಷಣದಲ್ಲಿ ಬರುವುದು. ರಂಗಸಜ್ಜೀಕರಣಗಳೂ ವೇಷಭೂಷಣದ ಭಾಗವೇ ಆಗಿದೆ. ಭಾರತದಲ್ಲೇ ವಿವಿಧ ನೃತ್ಯ ಸಂಪ್ರದಾಯಗಳು ವಿಭಿನ್ನವಾದ ವೇಷಗಳನ್ನು ಧರಿಸುವುದು. ಕಥಾಪಾತ್ರಗಳಿಗೆ ಉತ್ತಮವಾದ ವೇಷಗಳನ್ನು ನಾಟ್ಯದಲ್ಲಿ ಉಪಯೋಗಿಸಲಾಗುವುದು. ಒಂದೇ ಕಥಾಪಾತ್ರದ ವೇಷ, ವಿವಿಧ ನೃತ್ಯ ರೂಪಗಳಲ್ಲಿ ವೈವಿಧ್ಯವಾದ ರೀತಿಗಳಲ್ಲಿವೆ. ಜನಪದ ನೃತ್ಯರೂಪಗಳಲ್ಲಾದರೆ ಅಂದಾಜು ಪ್ರಾದೇಶಿಕ ವೇಷಗಳನ್ನು ಉಪಯೋಗಿಸುವುದು. ಹೆಜ್ಜೆಗಳಲ್ಲೂ ಚಲನೆಗಳಲ್ಲೂ ವೈವಿಧ್ಯ. ಆಹಾರ್ಯ ವ್ಯತ್ಯಾಸಕ್ಕೆ ಕಾರಣವಾಗುತ್ತದೆ.

## ಕಲಿಕಾ ಸಾಧನೆ

- ಕಥಕಳಿ ಶೃಂಗಾರಗಳು, ಅಭಿನಯ ಎಂಬಿವುಗಳ ಕುರಿತಾದ ವಿವರಗಳನ್ನು ಸಂಗ್ರಹಿಸುವುದು.

## ಆಶಯ, ತಿಳುವಳಿಕೆ

- ಕಥಕಳಿಯಲ್ಲಿ ಶೃಂಗಾರಗಳಿಗೆ ಹೆಚ್ಚು ಪ್ರಾಧಾನ್ಯವಿದೆ.
- ಕಥಕಳಿಯಲ್ಲಿನ ಆಹಾರ್ಯಾಭಿನಯವು ವಿಶೇಷವಾಗಿದೆ.

## ಚಟುವಟಿಕೆಗಳು

- ನೃತ್ಯೋತ್ಸವದ ಭಾಗವಾಗಿ ಶಾಲೆಯಲ್ಲಿ ಕಥಕಳಿ ಏರ್ಪಡಿಸುವುದು. ಕಥಕಳಿ ವೇದಿಕೆಗೆ ಬರುವುದಕ್ಕಿಂತ ಮೊದಲು ಇರುವ ಮೂರು ನಾಲ್ಕು ಗಂಟೆಗಳು ಅಂತಃಪುರ ಶೃಂಗಾರಗಳನ್ನು ಕಾಣಲೂ ಟಿಪ್ಪಣಿ ಮಾಡುವುದಕ್ಕೂ ಹೇಳುವುದು.
- ಕಥಕಳಿ ಶೃಂಗಾರಗಳ ಒಂದು ಪ್ರದರ್ಶನ ಶಾಲೆಯಲ್ಲಿ ನಡೆಸುವುದು.
- ಒಂದು ಪ್ರಾದೇಶಿಕ ತಜ್ಞನ ಸಹಾಯದಿಂದ ಒಂದೊಂದು ವಿಧದ ವೇಷವಿಧಾನಗಳ ಕುರಿತು ದಾಖಲಿಸುವುದು.
- ಕಥಾಪಾತ್ರದ ಸ್ವಭಾವಕ್ಕೆ ಹೊಂದಿಕೊಂಡು ಕಥಕಳಿಯಲ್ಲಿನ ವೇಷಗಳನ್ನು ಇಟ್ಟು ಕತ್ತಿ, ಕರಿ, ತಾಡಿ, ಮಿನುಕು ಎಂದು ಹೀಗೆ ವಿಭಾಗಗಳಾಗಿಸುವಾಗ ಪ್ರತಿಯೊಂದರಲ್ಲೂ ಇರುವ ಆಹಾರ್ಯದ ವೃತ್ತಿಯಾನದ ಕುರಿತು ಟಿಪ್ಪಣಿಯನ್ನು ಬರೆಯಿರಿ.
- ಚಿತ್ರ ಸಂಗ್ರಹನ್ನು ತಯಾರಿಸಿರಿ.
- ಪ್ರತಿಯೊಂದು ಆಡಯಾಭರಣಗಳಿಗೆ ಕಥೆಗಳಲ್ಲಿರುವ ಪ್ರತ್ಯೇಕ ಹೆಸರುಗಳು ತಿಳಿಯಬೇಕು. ಉದಾ – ಕೃಷ್ಣಮುಡಿ, ಕುಟ್ಟಿ ಚಾಮರಂ, ಕಿರೀಟ, ಮನಯೋಲ, ನೀಲಿ, ಕಳುತ್ತರಂ, ನೆಟ್ಟಿನಾಡ, ಚುಟ್ಟಿಪ್ಪ್, ಚುಟ್ಟಿ, ಶೆಲ್, ಪಡಿಯುರಞ್ಞಾಣಂ, ಒಂದು ನಾಲಗೆ , ಉಡುತ್ತಿಕೊಟ್ಟ್, ತೋಳ್‌ಪುಟ್ಟ್, ಹಸ್ತಘಟಕಂ, ಪರುತ್ತಿಕಾಮಣಿ, ಚುಂಡಪ್ಪು, ಕಚ್ಚಮಣಿ, ಎಂಬಿವು.

## ಮೌಲ್ಯಮಾಪನ

- ಕಥಕಳಿ ಸೋದಾಹರಣ ಪ್ರಭಾಷಣಗಳನ್ನು ನಡೆಸಿ, ಅದರ ಕುರಿತಾದ ಟಿಪ್ಪಣಿಗಳನ್ನು ತಯಾರಿಸಬೇಕಾಗಿದೆ. ನಿರೀಕ್ಷಣಾ ಟಿಪ್ಪಣಿಗಳು, ಸಂಗ್ರಹಣೆ ಎಂಬಿವುಗಳನ್ನು ಮೌಲ್ಯಮಾಪನ ಮಾಡಬೇಕಾಗಿದೆ.

***ಸೂಚಕಗಳು***

- ಸಮಗ್ರತೆ
- ಕ್ರಮ
- ಭಾಷೆ
- ರೀತಿ

## ಯೂನಿಟ್ – 6 : ಬಾಯಿತಾಳಗಳಿಗೆ ತಕ್ಕಂತೆ ಹೆಜ್ಜೆ ಇಡುವುದು

## ಮುನ್ನುಡಿ

ಶಾಸ್ತ್ರೀಯ ನೃತ್ಯವಾದರೂ ಜಾನಪದ ನೃತ್ಯವಾದರೂ ಬಾಯಿತಾಳಗಳು ಅವುಗಳ ಬೆನ್ನೆಲುಬಾಗಿದೆ. ಪ್ರಯೋಗದಲ್ಲಿರುವ ವ್ಯತ್ಯಾಸಗಳು ಮಾತ್ರವೇ ಈ ಎರಡು ವಿಭಾಗಗಳಲ್ಲೂ ಕಾಣುವುದು. ಶಾಸ್ತ್ರೀಯ ನೃತ್ಯಗಳಲ್ಲಿ ಶುದ್ಧ ನೃತ್ಯ ರೀತಿಗಳಲ್ಲಿ ಬಾಯಿತಾಳಗಳು ಪ್ರಧಾನವಾಗಿವೆ. ಉದಾ : ಜತಿ, ಜತಿಸ್ವರ, ಅಲಾರಿಪ್ಪ್, ತಿಲ್ಲಾನ ಮೊದಲಾದವುಗಳು.

ಪಂಚಹೆಜ್ಜೆಗಳೂ ಅಡವುಗಳೂ ಕಲಿತ ಮಕ್ಕಳು ಅವುಗಳನ್ನು ಉಪಯೋಗಿಸಿಕೊಂಡು ಬಾಯಿತಾಳಗಳು ನಿಯಮಿತವಾಗಿ ತಾಳಬದ್ಧವಾಗಿ ಕ್ರಮಾನುಗತಗೊಳಿಸುವುದೂ ಅವು ಅದಕ್ಕನುಗುಣವಾಗಿ ಅಡವುಗಳಲ್ಲಿ ಕ್ರಮವಾಗಿಸಿ ಮಂಡಿಸಬೇಕು ಎಂಬುದು ಕೋರಿಯೋಗ್ರಾಫಿಯ ಒಂದು ಪ್ರಧಾನ ಹಂತವಾಗಿದೆ. ಆ ಪ್ರಕ್ರಿಯೆಯಾಗಿದೆ ಈ ಯೂನಿಟಿನಲ್ಲಿ ನಾವು ಕಲಿಯುವುದು.

## ಕಲಿಕಾ ಸಾಧನೆ

- ಸ್ವಯಂ ತಯಾರಿಸಿದ ಬಾಯಿತಾಳಗಳಿಗೆ ಅನುಸರಿಸಿ ಹೆಜ್ಜೆಯನ್ನು ಹಾಕುವುದು.

## ಆಶಯ, ತಿಳುವಳಿಕೆ

- ಶಾಸ್ತ್ರೀಯ ನೃತ್ಯ ರೂಪಗಳಲ್ಲಿ ಬಾಯಿತಾಳಗಳಿಗೆ ಪ್ರಾಧಾನ್ಯವಿದೆ.
- ಬಾಯಿತಾಳಗಳು ತಾಳದಿಷ್ಠಿತವಾಗಿರುತ್ತದೆ.

## ಕಲಿಕಾ ಚಟುವಟಿಕೆಗಳು

- ಹಿಂದಿನ ತರಗತಿಯಲ್ಲಿ ಪರಿಶೀಲಿಸಿದ ಬಾಯಿತಾಳಗಳೊಂದಿಗೆ ಸಂಬಂಧಿಸಿದ ಪ್ರಕ್ರಿಯೆಯನ್ನು ಆವರ್ತಿಸುವುದು.
- ಹೊಸ ಸರಳವಾದ ಬಾಯಿತಾಳಗಳನ್ನು ತಯಾರಿಸಲು ಹೇಳುವುದು. (ಗುಂಪು ಚಟುವಟಿಕೆಗಳು ಆಗಬಹುದು)

- ಈ ಬಾಯಿತಾಳಗಳಿಗೆ ಒಂದು ಸಾಮಾನ್ಯ ಸ್ವಭಾವವನ್ನು ಬರಿಸುವುದಕ್ಕಾಗಿ ಇದರಲ್ಲಿ ಉಪಯೋಗಿಸಬಹುದಾದ ಹೇಳಿಕೆಗಳನ್ನು ಟೀಚರ್ ನೀಡಬೇಕು.
  ಉದಾ : ತ, ಥಿ, ತೋಂ, ಕಿಟ, , ತಾಂ ಎಂಬಿವುಗಳು.
- ಸಾಮಾನ್ಯವಾಗಿ ಆದಿತಾಳದಲ್ಲಿ ಕ್ರಮಗೊಳಿಸಿದರೆ ಸಾಕಾಗುತ್ತದೆ.
- ಪ್ರತಿಯೊಂದು ಗುಂಪಿನಲ್ಲೂ ಕ್ರಮಾನುಗತಗೊಳಿಸಿದ ಬಾಯಿತಾಳಗಳನ್ನು ಟೀಚರ್ ಸರಿಯೆಂದು ದೃಢಪಡಿಸಬೇಕು.
- ಅದರ ನಂತರ ಈ ಬಾಯಿತಾಳಗಳಿಂದ ಅಡವುಗಳನ್ನು ಕ್ರಮಾನುಗತಗೊಳಿಸಿ ನೃತ್ಯ ರೂಪದಲ್ಲಾಗುವುದು. ಮಂಡಿಸುವುದು.

## ಮೌಲ್ಯಮಾಪನ

- ಪ್ರತಿಯೊಂದು ಗುಂಪಿನಲ್ಲಿ, ಮಂಡನೆಯಲ್ಲಿ ಪರಸ್ಪರ ಮೌಲ್ಯಮಾಪನ ಮಾಡುವುದು. ಅಧ್ಯಾಪಕರ ಮೌಲ್ಯಮಾಪನ, ಹೇಳಿಕೆಗಳ ವೈವಿಧ್ಯತೆ, ತಾಳಕ್ರಮ ಉಪಯೋಗಿಸಿದ ಅಡವುಗಳ ವೈವಿಧ್ಯತೆ ಎಂಬಿವುಗಳು ಸೂಚಕಗಳಾಗಿವೆ.

# ಏಳನೇ ತರಗತಿ

## ಯೂನಿಟ್ – 1

### ಮುನ್ನುಡಿ

ಕಲೆಗಳ ಬೀಡು ಭಾರತ. ಇದರಲ್ಲಿ ನೃತ್ಯರೂಪಗಳು ಹಲವು. ಪ್ರತ್ಯೇಕವಾಗಿ ಹೇಳಬೇಕಾದರೆ ದಕ್ಷಿಣ ಭಾರತದಲ್ಲಿ ಹೆಚ್ಚು. ಶಾಸ್ತ್ರೀಯವು ಅಲ್ಲದೇ ಧಾರಾಳ ನೃತ್ಯರೂಪಗಳನ್ನು ಕಾಣಲು ಸಾಧ್ಯವಾಗುತ್ತದೆ. ಇವುಗಳು ಯಾವ ಯಾವ ವಿಚಾರಗಳಿಂದ ಭಿನ್ನವಾಗಿದೆ ಮತ್ತು ಯಾವೆಲ್ಲ ವಿಚಾರಗಳಲ್ಲಿ ಸಾಮ್ಯತೆಯಿದೆ ಎಂದೆಲ್ಲ ನಮಗೆ ಸೂಕ್ಷ್ಮ ವಿಶ್ಲೇಷಣೆಯಿಂದ ತಿಳಿಯಲು ಸಾಧ್ಯವಾಗಬೇಕು. ಹಾಗಾದರೆ ಮಾತ್ರ ನಮಗೆ ಅವುಗಳ ಆತ್ಮವನ್ನು ತಿಳಿಯಲು ಸಾಧ್ಯವಾಗುತ್ತದೆ. ಇವುಗಳ ಮೂಲಾಧಾರದ ಬಗ್ಗೆ ಮಕ್ಕಳಿಗೆ ಅಂದಾಜು ಜ್ಞಾನವಿರಬೇಕು. ಅಲ್ಲಿ ನಿಂತುಕೊಂಡು ಶಾಸ್ತ್ರೀಯತೆಗೆ ಅರಿವುಗಳನ್ನು ಬೆಳೆಸುವ ಚಟುವಟಿಕೆಗಳನ್ನು ನಡೆಸಬೇಕಾಗಿದೆ. ಮಕ್ಕಳಿಗೆ ಪರಿಚಿತವಾದ ಕಾರ್ಯಗಳನ್ನು ಹೆಚ್ಚಾಗಿ ತಿಳಿಸಿಕೊಂಡು ನೃತ್ಯದಲ್ಲಿ ಸಂಕೀರ್ಣವಾದ ಹಂತಗಳಿಗೆ ಅವನನ್ನು ಕರೆದುಕೊಂಡು ಹೋಗಬೇಕು.

### ಕಲಿಕಾ ಸಾಧನೆ

- ಕೇರಳದಲ್ಲಿ ನೃತ್ಯರೂಪಗಳನ್ನು ಶಾಸ್ತ್ರೀಯ, ಜಾನಪದ ಎಂಬೀ ರೀತಿಗಳಲ್ಲಿ ವಿಭಾಗಿಸಬಹುದು.

### ಆಶಯ, ತಿಳುವಳಿಕೆ

- ಕೇರಳದಲ್ಲಿ ಪ್ರಚಾರದಲ್ಲಿರುವ ನೃತ್ಯರೂಪಗಳನ್ನು ಶಾಸ್ತ್ರೀಯ ನೃತ್ಯವೆಂದೂ ಜಾನಪದ ನೃತ್ಯವೆಂದೂ ಎರಡಾಗಿ ಬೇರ್ಪಡಿಸಲಾಗಿದೆ.

### ಒಳಪುಟಗಳಲ್ಲಿ

ನೃತ್ಯದ ವೇಷ, ನೃತ್ಯಕ್ಕೆ ಉಪಯೋಗಿಸುವ ಹೆಜ್ಜೆಗಳ ರೀತಿ, ಮುದ್ರೆಗಳು, ತಾಳಗಳ ವೈವಿಧ್ಯ ಎಂಬಿವುಗಳಿಗೆ ಹೊಂದಿಕೊಂಡು ಅವುಗಳನ್ನು ಬೇರ್ಪಡಿಸುವುದು. ಜಾನಪದ ನೃತ್ಯಕ್ಕೆ ಪ್ರಾದೇಶಿಕವಾಗಿ ಬದಲಾವಣೆ ಬರುವುದು. ಶಾಸ್ತ್ರೀಯ ನೃತ್ಯಕ್ಕೆ ಪ್ರಾದೇಶಿಕವಾದ ಬದಲಾವಣೆಗಳಿಗಿಂತ ಸಮಾನತೆಗಳಿವೆ. ಪ್ರತಿಯೊಂದು ನೃತ್ಯ ರೂಪದ ಸವಿಶೇಷತೆಗಳ ಕುರಿತು ತಿಳುವಳಿಕೆಯನ್ನು ಉಂಟುಮಾಡುವುದು.

### ಕಲಿಕಾ ಚಟುವಟಿಕೆಗಳು

- ಅಧ್ಯಾಪಕನು ಒಂದು ಸರಳವಾದ ಬಾಯಿತಾಳಗಳಿಗೆ ಅನುಸರಿಸಿ ವಿವಿಧ ರೀತಿಯಲ್ಲಿ

ಹೆಜ್ಜೆಗಳನ್ನು ಓದಲು ಬೇರೆ ಬೇರೆ ಗುಂಪುಗಳಿಗೆ ನಿರ್ದೇಶವನ್ನು ನೀಡುವುದು. ಹಿಂದಿನ ತರಗತಿಗಳಿಂದ ಪಡೆದ ತಿಳುವಳಿಕೆಗಳಿಗೆ ಅನುಸರಿಸಿ ತಾವು ಹೆಜ್ಜೆ ಹಾಕುವುದನ್ನು ಶಾಸ್ತ್ರೀಯ ನೃತ್ಯಗಳಿಗೂ ಜಾನಪದ ನೃತ್ಯಕ್ಕೆ ಉಪಯೋಗಿಸುವವುಗಳೆಂದು ಕಂಡುಹಿಡಿಯುವುದು. ಶಾಸ್ತ್ರೀಯ ನೃತ್ಯಕ್ಕೂ ಜಾನಪದ ನೃತ್ಯಕ್ಕೂ ಚಲನ ವ್ಯತ್ಯಾಸಗಳನ್ನು ತಿಳಿಯುವ ರೀತಿಯಲ್ಲಿ ಈ ಚಟುವಟಿಕೆಯನ್ನು ಕ್ರಮಾನುಗತಗೊಳಿಸುವುದು.

- ಸಿ.ಡಿ.ಯ ಸಹಾಯದಿಂದ ಕೇರಳದಲ್ಲಿನ ವಿವಿಧ ನೃತ್ಯರೂಪಗಳನ್ನು ಪರಿಚಯಿಸುವುದು. ಇವುಗಳನ್ನು ವರ್ಗೀಕರಿಸುವುದಕ್ಕೆ ಅಗತ್ಯಪಡುವುದು.

## ಯೂನಿಟ್ – 2

### ಮುನ್ನುಡಿ

ಹಾಡುಗಳಿಗೂ ತಾಳಾತ್ಮಕವಾದ ಹೇಳಿಕೆಗಳಿಗೆ ಅನುಗುಣವಾಗಿ ಹೆಜ್ಜೆ ಹಾಕುವುದಕ್ಕೂ ನೃತ್ಯ ಮಾಡುವುದಕ್ಕಿರುವ ಪ್ರತಿಭೆ ಎಲ್ಲಾ ಮಕ್ಕಳಲ್ಲೂ ಅಂತರ್ಲೀನವಾಗಿದೆ. ಮನಸ್ಸಿಗೆ ಇಷ್ಟವಾದ ಹಾಡುಗಳು, ರಾಗಗಳನ್ನು ಆವರ್ತಿಸಿ ಕೇಳುವುದಕ್ಕೆ ಹಿರಿಯರಿಗೂ ಕೂಡ ಆಸಕ್ತಿಯಿದೆ. ಈ ಆಸಕ್ತಿ ಮಕ್ಕಳಲ್ಲಿ ಹೆಚ್ಚಾಗಿದೆ. ಹೀಗೆ ಇರುವ ಆಸಕ್ತಿ ಮನಸ್ಸನ್ನು, ಶರೀರವನ್ನು ಸ್ವಾಧೀನಪಡಿಸುವ ಅವಸ್ಥೆಯಲ್ಲಿಯಾಗಿದೆ ನೃತ್ಯ ಮಾಡುವುದು. ಪರಿಚಿತವಾದ ಹಾಡುಗಳಿಗೆ ಅನುಸರಿಸಿ ನೃತ್ಯ ಮಾಡುವುದಕ್ಕಿರುವ ಈ ಮಾನಸಿಕ ಅವಸ್ಥೆ ಪರಮಾವಧಿ ಪ್ರಯೋಜನಪಡಿಸಿಯಾಗಿದೆ ಈ ಯೂನಿಟಿಗೆ ಇರುವ ಚಟುವಟಿಕೆಯನ್ನು ಕ್ರಮೀಕರಿಸಬೇಕಾದುದು.

### ಕಲಿಕಾ ಸಾಧನೆ

- ನಿಶ್ಚಿತ ಹಾಡುಗಳಿಗೆ ಅನುಸರಿಸಿ ಒಟ್ಟಾಗಿ ನೃತ್ಯ ಮಾಡುವುದು.

### ಆಶಯ, ತಿಳುವಳಿಕೆ

- ಉಚಿತವಾದ ಕೋರಿಯೋಗ್ರಾಫಿ ಆಯ್ಕೆ ಮಾಡಿ ಉಪಯೋಗಿಸುವುದು.
- ಕಂಡು ಪರಿಚಿತವಾದ ಅಡವುಗಳು, ಕೋರಿಯೋಗ್ರಾಫಿಯನ್ನು ಪ್ರಯೋಜನಪಡಿಸುವುದು.

### ಒಳಪುಟಗಳಲ್ಲಿ

ಗುಂಪಾಗಿ ನೃತ್ಯ ಮಾಡಲಿರುವ ಸಾಮರ್ಥ್ಯ ಎಂಬುವುದು ಗುಂಪು ನೃತ್ಯದಲ್ಲಿ ಗುಂಪು ಸದಸ್ಯರಲ್ಲಿ ಇರುವ ಐಕ್ಯತೆಯಾಗಿದೆ ಪ್ರಧಾನವೆಂದು ತಿಳಿಯುವುದು. ನೃತ್ಯ ಮಾಡಲು ಮೂಲಾಧಾರವಾಗಿ ತೆಗೆದ ಹಾಡುಗಳನ್ನು ಕುರಿತು ಇರುವ ದೃಢವಾದ ಧಾರಣೆ. ಹಾಡುಗಳಿಗೆ ಉಪಯೋಗಿಸಿದ ತಾಳಗಳಿಗೆ ಅನುಗುಣವಾಗಿರುವ ಅಡವುಗಳನ್ನು ಪ್ರಯೋಗಿಸುವುದು.

### ಕಲಿಕಾ ಚಟುವಟಿಕೆಗಳು

- ಸಿ.ಡಿ.ಯ ಸಹಾಯದೊಂದಿಗೆ ಅಧ್ಯಾಪಕನು ಒಂದು ಪರಿಚಿತ ಹಾಡುಗಳ ಗುಂಪು ನೃತ್ಯಾವಿಷ್ಕಾರ ಮಕ್ಕಳಿಗೆ ಪರಿಚಯಪಡಿಸುವುದು. ನಂತರ ಇದೇ ರೀತಿಯಲ್ಲಿ ಬೇರೊಂದು

ಹಾಡುಗಳಿಗೆ ಅನುಸರಿಸಿ ಗುಂಪಾಗಿ ನೃತ್ಯ ಮಾಡುವುದಕ್ಕೆ ಮಕ್ಕಳನ್ನು ಪ್ರೋತ್ಸಾಹಿಸುವುದು. ಗುಂಪು ಚರ್ಚೆಗೆ ನಂತರ ಮಕ್ಕಳು ಅವರಿಗೆ ಪರಿಚಯವಿರುವ ಒಂದು ಹಾಡನ್ನು ಆಯ್ಕೆ ಮಾಡುವುದು. ಪ್ರಸ್ತುತ ಹಾಡಿಗೆ ಯೋಗ್ಯವಾದ ತಮಗೆ ಅರಿವಿರುವ ಅಡವುಗಳೂ ಹೆಜ್ಜೆಗಳೂ ಮುದ್ರೆಗಳನ್ನೂ ಉಪಯೋಗಿಸಿಕೊಂಡು ನೃತ್ಯಾವಿಷ್ಕಾರವನ್ನು ನಡೆಸುವುದು. ನಂತರ ಅಧ್ಯಾಪಕನ ನಿರ್ದೇಶಗಳನ್ನು ಸ್ವೀಕರಿಸಿ ಪ್ರಸ್ತುತ ಹಾಡಿನ ಇನ್ನಿತರ ನೃತ್ಯಾವಿಷ್ಕಾರಗಳ ಸದಸ್ಯರನ್ನು ಒಳಗೊಳ್ಳಿಸಿ ಬೇಕಾದ ಬದಲಾವಣೆಗಳನ್ನು ಮಾಡಿ ನೃತ್ಯಾವಿಷ್ಕಾರವನ್ನು ಮಂಡಿಸುವುದು. ಅಧ್ಯಾಪಕನ ಸಂದರ್ಭೋಚಿತವಾದ ಮಧ್ಯಸ್ಥಿಕೆ ಈ ಚಟುವಟಿಕೆಯಲ್ಲಿ ಪ್ರಧಾನವಾಗಿದೆ. ಸಂಗೀತದಲ್ಲಿ ಪ್ರಾವೀಣ್ಯವಿರುವ ಮಕ್ಕಳನ್ನು ಗುಂಪು ನೃತ್ಯಕ್ಕೆ ಸಹಾಯಕರಾಗಿ ಉಪಯೋಗಿಸಬಹುದಾಗಿದೆ.

## ಯೂನಿಟ್ – 3

### ಮುನ್ನುಡಿ

ನೃತ್ಯಕ್ಕೆ ಪ್ರಾದೇಶಿಕವಾದ ವ್ಯತ್ಯಾಸಗಳಿವೆ. ಇದಕ್ಕನುಗುಣವಾಗಿ ಭರತನಾಟ್ಯ, ಮೋಹಿನಿಯಾಟಂ, ಕುಚ್ಚಿಪುಡಿ ಎಂಬೀ ನೃತ್ಯರೂಪಗಳಲ್ಲಿ ಆಶಯ ವಿನಿಮಯ ರೀತಿಯಲ್ಲಿಯೂ ವ್ಯತ್ಯಾಸವಿದೆ. ರಂಗಾವಿಷ್ಕಾರ ಸಮಯದಲ್ಲಿ ಒಂದು ಆಶಯ ವಿನಿಮಯ ಮಾಡಲು ಇವುಗಳಲ್ಲಿ ಹೆಚ್ಚು ಯೋಗ್ಯವಾದ ಆಯ್ಕೆ ಉಪಯೋಗಿಸುವುದಕ್ಕಿರುವ ಪ್ರತಿಭೆಯನ್ನು ಪಡೆಯುವುದು ಎಂಬುದಾಗಿದೆ ಈ ಯೂನಿಟಿನಲ್ಲಿ ತಿಳಿಸುವುದು.

### ಕಲಿಕಾ ಸಾಧನೆ

- ವಿವಿಧ ನೃತ್ಯ ರೀತಿಗಳಲ್ಲಿ ಉಪಯೋಗಿಸಿದ ಆಶಯಗಳನ್ನು ಪರಸ್ಪರ ಬದಲಾಯಿಸುವ ರೀತಿಯಲ್ಲಿರುವ ರಂಗಾವಿಷ್ಕಾರವನ್ನು ಪಡೆಯುವುದು.

### ಆಶಯ, ತಿಳುವಳಿಕೆ

- ನೃತ್ಯ ಸಂಕೇತಗಳ ಕುರಿತಾದ ತಿಳುವಳಿಕೆ.
- ಇವುಗಳನ್ನು ಉಪಯೋಗಿಸಿ ಆಶಯಗಳನ್ನು ಪಡೆಯಲಿರುವ ನೈಪುಣ್ಯ.

### ಒಳಪುಟಗಳಲ್ಲಿ

ನೃತ್ಯದಲ್ಲಿ ಮುಖ್ಯವಾಗಿ ಆಶಯ ವಿನಿಮಯ ಆಸ್ವಾದಕರವಾಗಿ ನಡೆಸಲಿರುವ ಆನಂದಪ್ರದವಾದ ಪ್ರಯೋಗಗಳಿವೆ. ಪ್ರತಿಯೊಂದು ನೃತ್ಯ ರೂಪಕ್ಕು ಅದರದ್ದೇ ಆದ ಶೈಲಿಯಲ್ಲಿರುವ ಆಶಯ ವಿನಿಮಯ ರೀತಿಗಳಿವೆ. ಸಂದರ್ಭಕ್ಕೆ ಅನುಗುಣವಾಗಿ ಪ್ರತಿಯೊಂದು ನೃತ್ಯ ರೂಪದಲ್ಲಿರುವ ಮಗು ಹೇಳಿದ ಆಶಯ ವಿನಿಮಯ ರೀತಿ ರಂಗಾವಿಷ್ಕಾರಕ್ಕೆ ಉಪಯೋಗಿಸಬಹುದಾಗಿದೆ. ಪ್ರತಿಯೊಂದು ಆಶಯ ಬದಲಾವಣೆಗೆ ವಿವಿಧ ನೃತ್ಯ ರೂಪಗಳಲ್ಲೂ ಉಪಯೋಗಿಸಬಹುದಾದ ಶೈಲಿಯನ್ನು ತಿಳಿಯುವುದು. ಯೋಗ್ಯವಾದ ಸಾಮರ್ಥ್ಯವನ್ನು ಆಯ್ಕೆ ಮಾಡುವುದಕ್ಕಿರುವ ಪ್ರತಿಭೆಯನ್ನು ಪಡೆಯುವುದು.

### ಕಲಿಕಾ ಚಟುವಟಿಕೆ

- ಒಂದು ಪ್ರತ್ಯೇಕ ಆಶಯ ಎರಡೋ ಅದಕ್ಕಿಂತ ಹೆಚ್ಚೋ ನೃತ್ಯರೂಪಗಳಲ್ಲಿ ಆಶಯಾವಿಷ್ಕಾರ

ನಡೆಸುವ ರೀತಿಯಲ್ಲಿರುವ ಸಜಾತಿ, ವಿಜಾತಿಗಳನ್ನು ಮಗುವು ತಿಳಿಯುವುದು. ಯಾವುದೆಲ್ಲಾ ವಲಯಗಳಲ್ಲಾಗಿದೆ ವ್ಯತ್ಯಾಸವನ್ನು ಮಾಡಿದ್ದು-

- ಚಾರ್ಟು ಮಾಡುವುದು.

ಅಭಿನಯ
ಮುದ್ರೆ
ಹೆಜ್ಜೆಗಳು
ವೇಷವಿಧಾನಗಳು
.
........

- ಇದೇ ರೀತಿ, ಇನ್ನಿತರ ಆಶಯವನ್ನು ಅಧ್ಯಾಪಕರು ನೀಡುವುದು. ಮಕ್ಕಳಿಗೆ ಪರಿಚಯವಿರುವ ಆಶಯಗಳನ್ನು ಮಕ್ಕಳು ವಿವಿಧ ಗುಂಪುಗಳಾಗಿ ಬೇರ್ಪಡಿಸಿ ವಿವಿಧ ರೀತಿಯಲ್ಲಿ ನೃತ್ಯಾವಿಷ್ಕಾರವನ್ನು ನಡೆಸುವುದು. ಅಧ್ಯಾಪನು ಈ ಪ್ರಕ್ರಿಯೆಯಲ್ಲಿ ಯಥೋಚಿತವಾಗಿ ಭಾಗವಹಿಸಬೇಕು.

## ಮೌಲ್ಯಮಾಪನ

ಮಂಡನೆಯಲ್ಲಿನ ಹಿರಿಮೆ, ವಿನಿಮಯದಲ್ಲಿನ ಪೂರ್ಣತೆ ಎಂಬಿವುಗಳನ್ನು ಮಾನದಂಡಗಳಾಗಿಸಿ ಮೌಲ್ಯನಿರ್ಣಯ ನಡೆಸಬಹುದಾಗಿದೆ.

# ಯೂನಿಟ್– 4

## ಮುನ್ನುಡಿ

ಕೈಬೆರಳುಗಳನ್ನು ವಿವಿಧ ರೂಪದಲ್ಲಿ ಸೇರಿಸಿ, ಬೇರ್ಪಡಿಸಿ ಮುದ್ರೆಗಳನ್ನು ಉಂಟು ಮಾಡುವುದು. ಇದರಲ್ಲಿ ಒಂದು ಕೈಯಿಂದ ತೋರಿಸಲು ಅಸಂಯುಕ್ತ ಹಸ್ತಗಳನ್ನು ಕುರಿತು ನಾವು ಹಿಂದಿನ ತರಗತಿಯಲ್ಲಿ ತಿಳಿಸಲಾಗಿದೆ. ಇದೇ ರೀತಿಯಲ್ಲಿ ಎರಡು ಕೈಗಳನ್ನು ಉಪಯೋಗಿಸಿಕೊಂಡು ಮುದ್ರೆಗಳನ್ನು ತೋರಿಸಬಹುದಾಗಿದೆ. ಇವುಗಳನ್ನು ಅಸಂಯುಕ್ತ ಮುದ್ರೆಗಳು ಎಂದು ಹೇಳಬಹುದು. ನಮ್ಮ ಭಾಷೆ ಬಾಯಿಯಿಂದ ಬರವಣಿಗೆಯಾಗಿ ಬೆಳೆಯಿತು. ಲಿಪಿಯನ್ನು ಉಂಟು ಮಾಡಿದರು. ನಾಟ್ಯಕಲೆ ಪ್ರಚಾರವಾದಾಗ ಮುದ್ರೆಗಳಿಗೆ ಅವುಗಳ ರೂಪಗಳಿಗೆ ಅನುಗುಣ ವಾಗಿ ಹೆಸರುಗಳನ್ನು ನೀಡಿ ಕರೆದರು. ಮೊದಲನೆಯದಾಗಿ ನಾಟ್ಯಶಾಸ್ತ್ರದಲ್ಲಾಗಿದೆ ಮುದ್ರೆಗಳನ್ನು ವ್ಯವಸ್ಥೆಯನ್ನು ಮಾಡಿ ಪ್ರಯೋಗವನ್ನು ನಿಶ್ಚಯಿಸುವುದು. ಆದರೆ ಇದಲ್ಲದೇ ಮುದ್ರೆಗಳನ್ನು, ಪ್ರಯೋಗಗಳನ್ನು ಪ್ರತಿಪಾದಿಸುವ ಇನ್ನಿತರ ಗ್ರಂಥಗಳು ಹಿಂದಿನ ಕಾಲದಲ್ಲಿ ಉಂಟಾಗಿದ್ದವು.

ಅಭಿನಯ ದರ್ಪಣ, ಹಸ್ತಲಕ್ಷಣ ದೀಪಿಕ, ಮಹಾಭಾರತ ಚೂಡಾಮಣಿ ಎಂಬಿವುಗಳು ಅವುಗಳಲ್ಲಿ ಕೆಲವು. ಈ ಯೂನಿಟಿನಲ್ಲಿ ಸಂಯುಕ್ತ ಮುದ್ರೆಗಳ ವಿಧಾನದ (ನಿರ್ವಹಣೆ) ಕುರಿತು ಹೆಚ್ಚಾಗಿ ತಿಳಿಯಬಹುದು.

## ಕಲಿಕಾ ಸಾಧನೆಗಳು

- ಮೂಲಾಧಾರ ಮುದ್ರೆಗಳನ್ನು ಕುರಿತು ತಿಳಿಯುವುದು.

## ಆಶಯ, ತಿಳುವಳಿಕೆ

- ಸಂಯುಕ್ತ ಮುದ್ರೆಗಳು ಹಲವು ರೀತಿಯಲ್ಲಿವೆ.

## ಕಲಿಕಾ ಚಟುವಟಿಕೆಗಳು

- ಎರಡು ಕೈಗಳನ್ನು ಸೇರಿಸಿಕೊಂಡು ತೋರಿಸಬಹುದಾದ ರೂಪಗಳನ್ನು ಮಕ್ಕಳು ಕಂಡುಹಿಡಿಯುವುದು. ಕೆಲವೊಂದು ಕೈಯಿಂದ ತೋರಿಸಬಹುದಾದರೂ ಎರಡು ಕೈಗಳನ್ನು ಸೇರಿಸಿ ಉಪಯೋಗಿಸುವಾಗ ಹೆಚ್ಚು ಅರ್ಥವತ್ತಾಗುತ್ತದೆ.


  ಉದಾ – ಹೂವು, ನದಿ ಮುಂತಾದವು.
- ಹೆಚ್ಚು ವಿಷಯಗಳನ್ನು ಎರಡು ಕೈಗಳನ್ನು ಸೇರಿಸಿ ಮಾಡಲು ಅಗತ್ಯಪಡುವುದು. ಗಿಳಿ, ಹಾರುವುದು, ಹಾವು, ನಮಸ್ಕಾರ, ಬಳ್ಳಿ.
- ಇದೇ ರೀತಿಯಾದ ಶಾಸ್ತ್ರೀಯವಾದ ನೃತ್ಯಗಳಲ್ಲಿ 24 ಸಂಯುಕ್ತ ಹಸ್ತಗಳಾಗಿವೆ ಉಪಯೋಗಿಸಬಹುದಾದ್ದು (ಅಭಿನಯದರ್ಪಣಂ). ಈ 24 ಸಂಯುಕ್ತ ಹಸ್ತಗಳಲ್ಲಿ ಶ್ಲೋಕರೂಪೇಣ ಚುವಡನ್ನು ಕೊಟ್ಟಿರುವುದು.

  *"ಅಂಜಲಿಶ್ಚ ಕಪೊತಶ್ಚ*
  *ಕರ್ಕಟ ಸ್ವಸ್ತಿಕಸ್ಥಾ*
  *ಡೋಲೋ ಹಸ್ತಃ ಪುಷ್ಪ ಪುಡ*
  *ಉತ್ಸಂಗಃ ಶಿವಲಿಂಗಕಃ*
  *ಕಡಕಾವರ್ಧನ ಶ್ಚೇವ*
  *ಕರ್ತರಿ ಸ್ವಸ್ತಿಕಸ್ಥಾ*
  *ಶಕಟಂ ಶಂಖುಚಕ್ರೌ ಚ*
  *ಸಂಪುಟಪಾಶ ಕಿಲಕೌ*
  *ಮತ್ಸ್ಯಃಕೂರ್ಮ ವರಾಹಶ್ಚ*
  *ಗರುಜೋ ನಾಗಬಂಧಕಃ*
  *ಶಟ್ವಾ ಭೇರುಂಡಕಾಖ್ಯಾಶ್ಚ*
  *ಅವಹಿತ್ತ ಸ್ತತೈವಚಾ*
  *ಚದುರ್ವಿಂಶವತಿ ಸಂಖ್ಯಾಕಾ*
  *ಸಂಯುತ ಕಥೈತ ಕರ"*

- 1. ಅಂಜಲಿ 2. ಕಪೋತಂ 3. ಕರ್ಕಾಟಂ 4. ಸ್ವಸ್ತಿಕಂ
  5. ಡೋಲೋ 6. ಪುಷ್ಪಪುಟಂ 7. ಉತ್ಸಗಂ 8. ಶಿವಲಿಂಗಂ
  9. ಕಟಕಾವರ್ಧನಂ 10. ಕರ್ತರೀಸ್ವಸ್ತಿಕಂ 11. ಶಕಟಂ
  12. ಗರುಡನ್ 13. ಚಕ್ರಂ 14. ಸಂಪುಟಂ 15. ಪಾಶಂ
  16. ಕಿಲಕಂ 17. ಮತ್ಸ್ಯಂ 1 8. ಕೂರ್ಮಂ 19. ವರಾಹಂ
  20. ಗರುಡನ್ 21. ನಾಗಬಂಧ 22. ಗಟ್ವಂ 23. ಭೇರುಂಡಂ
  24. ಅವಹಿತ್ತಂ
- ಕ್ಲಾಸಿನಲ್ಲಿ ಅಸಂಯುಕ್ತ, ಸಂಯುಕ್ತ ಹಸ್ತಗಳ ಚಾರ್ಟನ್ನು ನೋಡಬೇಕು. ನಂತರ ಶ್ಲೋಕದೊಂದಿಗೆ ಪ್ರತಿಯೊಂದು ಹೇಳಿ ಕೈಮುದ್ರೆಗಳನ್ನು ತೋರಿಸಿ ಕಲಿಯಬೇಕಿದೆ.

## ಮೌಲ್ಯಮಾಪನ

- ಟೀಚರ್ ಮುದ್ರೆಗಳ ಹೆಸರು ಹೇಳುವಾಗ ಮುದ್ರೆಗಳನ್ನು ತೋರಿಸುವ ರೀತಿಯಲ್ಲೂ ಮುದ್ರೆಗಳನ್ನು ತೋರಿಸುವಾಗ ಹೆಸರು ಹೇಳುವ ರೀತಿಯಲ್ಲೂ ಪ್ರಶ್ನೆಗಳನ್ನು ಕೇಳಿ ಮೌಲ್ಯನಿರ್ಣಯವನ್ನು ಮಾಡಬಹುದಾಗಿದೆ.




## ಯೂನಿಟ್ – 5

ನೃತ್ಯದಲ್ಲಿ ವೈವಿಧ್ಯವಾದ ತಾಳಕ್ರಮಗಳನ್ನು ಉಪಯೋಗಿಸಬೇಕಾಗಿದೆ. ವಿವಿಧ ತಾಳಗಳ ಕುರಿತು ತಿಳಿಯುವುದು, ವಿವಿಧ ಸಂದರ್ಭದಲ್ಲಿ ಪ್ರಯೋಗಿಸಬೇಕಾದ ತಾಳ ಕ್ರಮಗಳ ಕುರಿತು ತಿಳಿಯುವುದು. ನೃತ್ಯ ತಾಳಾತ್ಮಕ ಚಲನವಾಗಿದೆ. ತಾಳಗಳಲ್ಲಿರುವ ವೈವಿಧ್ಯವಾದ ನೃತ್ಯವು ಆಸ್ವಾದಕರವಾಗುವುದು. ಒಂದು ಸಂದರ್ಭದ ರಂಗಾವಿಷ್ಕಾರವನ್ನು ನಡೆಸುವಾಗ ಯೋಗ್ಯವಾದ ತಾಳಕ್ರಮವನ್ನು ಆಯ್ಕೆ ಮಾಡುವುದು ಎಂಬುದು ನರ್ತಕನ ನೈಪುಣ್ಯವಾಗಿದೆ. ತಾಳದ ಕುರಿತು ಮೂಲಾಧಾರವಾದ ಅರಿವು ನರ್ತಕನ ಹಾಗೂ ನರ್ತಕಿಯ ಜೀವಾತ್ಮವಾಗಿದೆ.

### ಕಲಿಕಾ ಸಾಧನೆ

- ವಿವಿಧ ತಾಳಗಳಲ್ಲಿ ಹೆಜ್ಜೆಯನ್ನು ಹಾಕುವುದಕ್ಕಿರುವ ಸಾಮರ್ಥ್ಯವನ್ನು ಪಡೆಯುವುದು.

### ಆಶಯ, ತಿಳುವಳಿಕೆ

- ನೃತ್ಯದಲ್ಲಿ ವಿವಿಧ ರೂಪದ ತಾಳಗಳನ್ನು ಉಪಯೋಗಿಸುವುದು.
- ವಿವಿಧ ತಾಳಗಳನ್ನು ಕುರಿತಾದ ತಿಳುವಳಿಕೆ
- ತಾಳಗಳಿಗೆ ಹೊಂದಿಕೊಂಡು ಹೆಜ್ಜೆಯನ್ನು ಹಾಕುವುದಕ್ಕಿರುವ ನೈಪುಣ್ಯ.

## ಕಲಿಕಾ ಚಟುವಟಿಕೆಗಳು

- ನರ್ತಕರಿಗೆ ತಾಳದಲ್ಲಿ ಹೆಚ್ಚಿನ ಜ್ಞಾನ ಅನಿವಾರ್ಯವಾಗಿದೆ. ಆದ್ದರಿಂದಲೇ ತಾಳಗಳನ್ನು ಕುರಿತಾದ ಅರಿವು ಮಕ್ಕಳಲ್ಲಿ ಬೆಳೆಸಬೇಕಾಗಿದೆ. ಈ ಸಂದರ್ಭದಲ್ಲಿ ಹೆಚ್ಚು ಪರಿಚಿತವಾದದ್ದೂ ಸರಳವಾದದ್ದೂ ಆದ ತಾಳಗಳನ್ನು ಇಲ್ಲಿ ಮಕ್ಕಳಿಗೆ ಪರಿಚಯಪಡಿಸಬೇಕು.
  *ಆದಿತಾಳ ಎಂಬ ಪರಕ್ಕೆ ತಿಳಿಯಲ್ಪಡುವ ಚತುರಶ್ರ ಜಾತಿ ತ್ರಿಪುಟತಾಳಂ.*
  *ರೂಪಕತಾಳಂ ಎಂದು ಅರಿಯಲ್ಪಡುವ ಚತುರಶ್ರ ಜಾತಿ ರೂಪಕತಾಳಂ.*
- ಈ ಎರಡು ತಾಳಗಳಲ್ಲಿರುವ ಹೇಳಿಕೆಗಳು ರೂಪೀಕರಿಸಿ ಮಕ್ಕಳಿಂದ ಹೇಳಿ ದೃಢಪಡಿಸಬೇಕಾದುದು. ನಂತರ ಅದಕ್ಕೆ ಅನುಗುಣವಾಗಿರುವ ಚುವಡುವಾಯಿಪುಗಳೂ ಅಂಗ ಚಲನೆಗಳೂ ಪರಿಶೀಲಿಸಿ ದೃಢಪಡಿಸಬೇಕಾಗಿದೆ.

## ಮೌಲ್ಯನಿರ್ಣಯ

ತಾಳಗಳನ್ನು ಪ್ರಯೋಗಿಸುವುದಕ್ಕಿರುವ ಪ್ರತಿಭೆ, ಪೂರ್ಣತೆ ಎಂಬಿವುಗಳನ್ನು ಮೂಲಾಧಾರವಾಗಿಸಿ ಮೌಲ್ಯನಿರ್ಣಯ ನಡೆಸಬಹುದಾಗಿದೆ.



# ನಾಟಕ



# ನಾಟಕ

## ಮುನ್ನುಡಿ

ಸಂಗೀತ, ನೃತ್ಯ, ಅಭಿನಯ, ಚಿತ್ರಕಲೆ, ಸಾಹಿತ್ಯ ಮೊದಲಾದ ಎಲ್ಲಾ ಕಲಾ ರೂಪಗಳು ನಾಟಕ ಕಲೆಯಲ್ಲಿ ಸಮ್ಮೇಳಿಸಿವೆ. ಅದಕ್ಕಾಗಿಯೇ ಕಲಿಕಾ ಪ್ರಕ್ರಿಯೆಯಲ್ಲಿ ನಾಟಕ ಕಲೆಯನ್ನು ಉಪಯೋಗಿಸುವುದು ಅನಿವಾರ್ಯವಾಗಿದೆ. ಸೌಂದರ್ಯ ಅನುಭವಿಸಲಿರುವ ಸಂದರ್ಭಗಳು, ನಾಟಕ ಆಸ್ವಾದನಾ ಸಾಮರ್ಥ್ಯ ಪಡೆಯಲಿರುವ ತರಬೇತಿಯನ್ನು ಒಳಗೊಂಡಿರುವ ನಾಟಕದ ಪಾಠ್ಯಪದ್ಧತಿಯ ಅಗತ್ಯವಿದೆ.

ಪ್ರಧಾನವಾಗಿ ಮೂರು ಹಂತಗಳಲ್ಲಾಗಿ ನಾಟಕ ಸನ್ನಿವೇಶಗಳು ಇಂದು ನಮ್ಮ ಚಟುವಟಿಕೆಗಳಲ್ಲಿ ಹಾಸುಹೊಕ್ಕಿವೆ. ತರಗತಿಗಳಲ್ಲಿ ಅಧ್ಯಾಪಿಕೆ ಅಭಿನೇತ್ರಿಯಾಗಿಯೂ ತರಗತಿ ಕೋಣೆ ವೇದಿಕೆಯಾಗಿಯೂ ಸ್ವಾಭಾವಿಕವಾಗಿ ಪರಿವರ್ತನೆಯಾಗುತ್ತದೆ ಎಂಬುದು ಮೊದಲ ಹಂತ. ನಾಟಕ ಸನ್ನಿವೇಶಗಳ ಕೆಲವು ಅಂಶಗಳನ್ನು ಕಲಿಕಾಚಟುವಟಿಕೆಗಳ ಪ್ರತಿಯೊಂದು ಹಂತಗಳಲ್ಲೂ ಅಗತ್ಯಕ್ಕನುಸರಿಸಿ ಉಪಯೋಗಿಸುವುದು ಎರಡನೇ ಹಂತ. ನಾಟಕ ರೂಪದಲ್ಲಿರುವ ಪಾಠಭಾಗಗಳಿಗಾಗಿ ಕಲಿಕಾಪ್ರಕ್ರಿಯೆಗಳನ್ನು ರೂಪಿಸುವಾಗ ಪ್ರದರ್ಶನ ಮತ್ತು ಅಭಿನಯ ಕಲೆಯನ್ನು ಉಪಯೋಗಿಸಬೇಕಾಗಿ ಬರುವುದು ಮೂರನೇ ಹಂತವಾಗಿದೆ.

ಓದುವಿಕೆಯ ಮೂಲಕ ಭಾವನಾದೃಶ್ಯಗಳನ್ನು ಸೃಷ್ಟಿಸುತ್ತೇವೆ. ನಾಟಕ ಹಾಗೂ ಇತರ ದೃಶ್ಯಕಲೆಗಳು ಈ ಭಾವನಾ ದೃಶ್ಯಗಳ ಆವಿಷ್ಕಾರವಾಗಿದೆ. ಕೃತಿಗಳನ್ನು ದೃಶ್ಯಗಳಾಗಿ ಬದಲಾಯಿಸುವಾಗ ಆಳವಾದ ವಿಶ್ಲೇಷಣೆಗೂ ಆಶಯ ರೂಪೀಕರಣಕ್ಕೂ ಸಾಧ್ಯವಾಗುವುದು. ಭಾಷೆಯ ವಿಭಿನ್ನ ಸೌಂದರ್ಯ ಮತ್ತು ಶೈಲಿಗಳನ್ನು ಅರ್ಥೈಸಿಕೊಂಡು ಸ್ವಂತ ಸಂಸ್ಕೃತಿಯ ಕುರಿತು ಹೆಚ್ಚಿನ ತಿಳುವಳಿಕೆ ಗಳಿಸಲು ಸಹಾಯವಾಗುವುದು. ನಾಟಕ ಆವಿಷ್ಕಾರದಲ್ಲೂ ಇತರ ಇಂತಹ ಕಲಾರೂಪಗಳಲ್ಲಿ ಪಾಲ್ಗೊಳ್ಳುವುದರ ಮೂಲಕವೂ ಭಿನ್ನಮಟ್ಟದ ಮಕ್ಕಳಿಗೂ ಭಾಗವಹಿಸಲು ಅವಕಾಶವುಂಟಾಗಿ ಅಧಿಕ ಆತ್ಮವಿಶ್ವಾಸ ಬೆಳೆಯುವುದು.

ಮಕ್ಕಳ ನಾಟಕಗಳು ಹಿರಿಯರ ನಾಟಕಗಳಿಂದ ವ್ಯತ್ಯಸ್ತವಾಗಿದೆ. ಶಾರೀರಿಕವಾಗಿಯೂ ಮಾನಸಿಕವಾಗಿಯೂ ಮಕ್ಕಳಿಗೆ ಹಲವು ವಿಶೇಷತೆಗಳಿವೆ. ಅವರ ಭಾವನಾತ್ಮಕ ವ್ಯವಸ್ಥೆಯಲ್ಲೂ ವಿಚಾರ ಪ್ರಕ್ರಿಯೆಗಳಲ್ಲೂ ವ್ಯತ್ಯಾಸಗಳಿವೆ. ಹಾಗಾಗಿಯೇ ಮಕ್ಕಳ ನಾಟಕಗಳಲ್ಲಿಯೂ ಆ ವಿಶೇಷತೆಗಳನ್ನು ಕಾಣಲು ಸಾಧ್ಯವಿದೆ. ಅವುಗಳೆಂದರೆ ಅನಿಶ್ಚಿತತೆ, ಪ್ರತಿಭಾನ್ವಿತ ಮಾನಸಿಕ ಆಕರ್ಷಕತೆ, ಘಟಕಗಳ ತನ್ಮಯತೆ, ಮಕ್ಕಳ ಮಟ್ಟಕ್ಕೆ ಯೋಗ್ಯಲಾಗಿ ಮಾಡಲಿರುವ ಸಾಮರ್ಥ್ಯ, ಸಂಭಾಷಣೆಗಿಂತ ಆಂಗಿಕ ಚಲನೆಯ ಪ್ರಾಧಾನ್ಯ, ನಾಟಕೀಯ ಸಂದರ್ಭ ಹಾಗೂ ಸಂಭಾಷಣೆಗಳ ಮಿಡಿತಗಳಾಗಿವೆ. ಇವುಗಳನ್ನು ಅರ್ಥೈಸಿಕೊಂಡು ಮಕ್ಕಳಿಗೆ ನಾಟಕಕಲಿಕೆಗೆ ಅವಕಾಶ ನೀಡಬೇಕು. ಪಾಠ ವಿಷಯಗಳನ್ನು ರಸವತ್ತಾಗಿಸಲು ಸೃಜನಾತ್ಮಕ ನಾಟಕವೇದಿಕೆಗಳಾಗಿ ನಮ್ಮ ತರಗತಿಕೋಣೆಗಳು ಬದಲಾಗಬೇಕು.

# ಕಲಿಕಾ ಸಾಧನೆಗಳು

## ಐದನೇ ತರಗತಿ

- ಪ್ರಕೃತಿಯಲ್ಲಿನ ಜೀವಜಾಲಗಳನ್ನೂ ಮನುಷ್ಯರನ್ನೂ ವೀಕ್ಷಿಸಿ ಅವರ ಚಲನಗಳನ್ನು ಸ್ವಾಯತ್ತ ಮಾಡಿ ಅಗತ್ಯವಾದ ಸಂದರ್ಶನಗಳಲ್ಲಿ ಪ್ರದರ್ಶಿಸುವುದು.
- ಸಂದರ್ಭಕ್ಕನುಗುಣವಾಗಿ ತಾಳ ಚಲನೆಗಳನ್ನು ಉಪಯೋಗಪಡಿಸುವುದು.
- ಆಶಯಗಳು, ಸಂದರ್ಭಗಳು ಎಂಬಿವುಗಳೊಂದಿಗೆ ಶಬ್ದ, ಚಲನೆ ಎಂಬಿವುಗಳನ್ನು ಅನುಕರಿಸುವುದು.
- ಆಶಯಗಳು/ಸಂದರ್ಭಗಳು ಎಂಬಿವುಗಳನ್ನು ಆವಿಷ್ಕರಿಸುವಾಗ ಸದಸ್ಯರೊಂದಿಗೆ ಪರಸ್ಪರ ಚರ್ಚಿಸಿ ತಿಳಿವಳಿಕೆಗಳೊಂದಿಗೆ ಸ್ವಂತ ಕಥಾಪಾತ್ರವನ್ನು ಮಂಡಿಸುವುದು.
- ನಾಟಕೀಯ ಅಭಿನಯದಲ್ಲಿ ಮೈಮರೆತು ಶರೀರ, ಶಬ್ದ, ಭಾವ ಎಂಬಿವುಗಳನ್ನು ಉಚಿತವಾದ ರೀತಿಯಲ್ಲಿ ಆವಿಷ್ಕರಿಸುವುದು.
- ಸರಳ ಸಂದರ್ಶನಗಳು, ನೈಜವಾದ ಆಶಯಗಳು ಎಂಬಿವುಗಳು ಸ್ವಾಭಾವಿಕವಾಗಿ ತರಗತಿಯಲ್ಲಿ ಮಂಡಿಸುವುದು.
- ಸಂದರ್ಭಾನುಸಾರವಾಗಿ ಮೌಖಿಕವಾಗಿಯೂ ಲಿಖಿತವಾಗಿಯೂ ಸ್ವಾಭಾವಿಕ ಸಂಭಾಷಣೆಗಳನ್ನು ತಯಾರಿಸುವುದು.
- ವೈಚಾರಿಕವಾಗಿ ಶಬ್ದ ಅಭಿನಯವನ್ನು ನಡೆಸುವುದು.
- ಸಿನೆಮಾ, ನಾಟಕ ಎಂಬಿವುಗಳನ್ನು ಕಂಡು ಆಸ್ವಾದಿಸುವುದು.

## ಆರನೇ ತರಗತಿ

- ಮನುಷ್ಯರ ವಿವಿಧ ಚಲನೆಗಳನ್ನು ಕಂಡು ತಿಳಿದು ವಿಶೇಷತೆಗಳನ್ನು ಕರಗತಗೊಳಿಸಿ ಅಗತ್ಯವಾದ ಸಂದರ್ಭಗಳಲ್ಲಿ ಉಪಯೋಗಿಸುವುದು.
- ತಾಳಾತ್ಮಕವಾದ ಚಲನೆಗಳ ಮೂಲಕ ಆಶಯ ವಿನಿಮಯವನ್ನು ನಡೆಸುವುದು.
- ಸಾಹಿತ್ಯ ರೂಪಗಳಿಗೆ ಪಾರದರ್ಶಕತೆಯನ್ನು ನೀಡುವುದಕ್ಕೆ ಶಬ್ದ, ಚಲನೆ, ಅಭಿನಯ ಮೊದಲಾದವುಗಳು ಅರ್ಥಜ್ಞಾನದೊಂದಿಗೆ ಪ್ರಕಟಿಸುವುದು.
- ಜೀವಜಾಲಗಳು ವಿವಿಧ ಸಂದರ್ಭಗಳಲ್ಲಿ ಸ್ವೀಕರಿಸುವ ಸ್ವಭಾವ ವಿಶೇಷತೆಗಳನ್ನು ಅನುಕರಿಸಿ ಆವಿಷ್ಕರಿಸುವುದು.
- ಸಂದರ್ಭದ ಹಿನ್ನಲೆಯಲ್ಲಿ ಕೈಗೊಂಬೆಗಳಿಗೆ ಸಂಭಾಷಣೆಗಳನ್ನು ರಚಿಸಿ ಮಂಡಿಸುವುದು.
- ರಂಗವತ್ಕರಣಗಳಲ್ಲಿ ವೈಚಾರಿಕತೆಯನ್ನು ನೆಲೆನಿಲ್ಲಿಸುವುದಕ್ಕೆ ಅಗತ್ಯವನ್ನು ತಿಳಿಸುವುದು.
- ಸರಳ ಸಂದರ್ಭಗಳು, ಆಶಯಗಳು ಎಂಬಿವುಗಳನ್ನು ಮಂಡಿಸುವಾಗ ವಿನಿಮಯ ಕ್ಷಮತೆ ಹೆಚ್ಚುವುದಕ್ಕೆ ಅಂಗ ಚಲನೆಗಳು, ಭಾವಗಳು ಎಂಬಿವುಗಳನ್ನು ಉಪಯೋಗಿಸುವುದು. ಸಂದರ್ಭಾನುಸಾರವಾಗಿ ವೈಚಾರಿಕ ಸನ್ನಿವೇಶದೊಂದಿಗೆ ಸಂಭಾಷಣೆಗಳನ್ನು ಉಂಟು ಮಾಡಿ ಮಂಡಿಸುವುದು. .
- ಯಥಾತಥಾ ಮಂಡಲವನ್ನು ತಿಳಿದು ಸೂಚನೆಗಳಲ್ಲಿಯೂ ಬಿಂಬಗಳಲ್ಲಿಯೂ ಆಶಯಗಳನ್ನು ಆವಿಷ್ಕಾರಗಳಾಗಿಸುವುದು.
- ಸಿನೆಮಾ, ನಾಟಕ ಎಂಬಿವುಗಳನ್ನು ನೋಡುವಾಗ ಬಿಂಬಗಳನ್ನೂ ಸೂಚನೆಗಳನ್ನೂ ತಿಳಿದು ಆಸ್ವಾದಿಸುವುದು.

## ಏಳನೇ ತರಗತಿ

- ಕಥಾಪಾತ್ರಗಳನ್ನು ಆವಿಷ್ಕರಿಸುವಾಗ ನಿರೀಕ್ಷಣೆಯ ಮೂಲಕ ಸ್ವಾಂಶೀಕರಿಸಿದ ಮನುಷ್ಯರ ಹಾಗೂ ಇನ್ನಿತರ ಜೀವಜಾಲಗಳ ಚಲನೆಗಳಲ್ಲಿರುವ ಸವಿಶೇಷ ಘಟಕಗಳನ್ನು ಪ್ರಯೋಜನಪಡಿಸುವುದು.
- ರಂಗಚಲನೆಗಳನ್ನು ರೂಪಕಲ್ಪನೆ ಮಾಡುವಾಗ ತಾಳಾತ್ಮಕ ಚಲನೆಗಳನ್ನು ನಿರ್ಮಿಸಿ ಕ್ರಮಾನುಗತವಾಗಿಸಿ ಉಪಯೋಗಿಸುವುದು.
- ಸಾಹಿತ್ಯ ರೂಪಗಳಿಗೆ ದೃಶ್ಯಾವಿಷ್ಕಾರವನ್ನು ತಯಾರಿಸುವಾಗ ಶಬ್ದ, ಚಲನೆ, ಅಭಿನಯ ಎಂಬಿವುಗಳನ್ನು ಸೃಜನಾತ್ಮಕವಾಗಿ ಉಪಯೋಗಿಸುವುದು.
- ಕಥಾಪಾತ್ರಕ್ಕೆ ಸವಿಶೇಷ ಚಲನೆಗಳನ್ನೂ ಸ್ವಭಾವ ವಿಶೇಷಗಳನ್ನೂ ನೀಡಿ ವ್ಯಕ್ತಿತ್ವ ಉಂಟು ಮಾಡುವುದು.
- ಆಶಯಗಳಿಗೆ ಸಂದರ್ಭಗಳು ಎಂಬಿವುಗಳನ್ನು ತರಗತಿಯಲ್ಲಿ ಮಂಡಿಸುವಾಗ ಪರಸ್ಪರ ಸಹಾಯ, ಹೊಂದಿಕೊಳ್ಳುವಿಕೆ, ಬಿಟ್ಟುಕೊಡುವುದು ಎಂಬಿವುಗಳಲ್ಲಿ ಗುಂಪಾಗಿ ಏರ್ಪಡುವುದು.
- ಅಂಗ ಚಲನೆಗಳು, ಶಬ್ದ, ಮುಖಭಾವಗಳು, ವೇಷಭೂಷಣಗಳು ಎಂಬಿವುಗಳು ಅರ್ಥಪೂರ್ಣವಾಗಿ ಉಪಯೋಗಿಸಿ ರಂಗಪ್ರದರ್ಶನ ನಡೆಸುವುದು.
- ಅರ್ಥ – ವೈಚಾರಿಕ ಜ್ಞಾನದೊಂದಿಗೆ ಸಂಭಾಷಣೆಗಳನ್ನು ಹೇಳುವುದು.
- ಸಂಭಾಷಣೆ, ಸಂಗೀತ ಎಂಬಿವುಗಳನ್ನು ಸೇರಿಸಿ ಗೊಂಬೆನಾಟಕ ಮಂಡಿಸುವುದು.
- ಆಶಯ ಮಂಡನೆಗೆ ಉಪಯೋಗಿಸಿದ ಬಿಂಬಗಳು, ಸೂಚನೆಗಳು ಎಂಬಿವುಗಳನ್ನು ತಿಳಿದು ಚರ್ಚಾಟಿಪ್ಪಣಿಗಳನ್ನು ತಯಾರಿಸುವುದು.

# ಐದನೇ ತರಗತಿ

## ಯೂನಿಟ್ – 1 : ಕ್ರಮಾನುಗತಗೊಳಿಸಿದ ಚಲನೆಗಳು

### ಮುನ್ನುಡಿ

ಆಂಗಿಕ, ವಾಚಿಕ, ಆಹಾರ್ಯ, ಸಾತ್ವಿಕ ಎಂಬಿವುಗಳಾಗಿವೆ ನಾಟ್ಯಶಾಸ್ತ್ರಗಾರನು ಅಭಿನಯವನ್ನು ವಿಭಾಗಿಸುವುದು. ಅಂಗ ಚಲನೆಗಳನ್ನು ಕ್ರಮವಾಗಿಸಿ ಅರ್ಥಪೂರ್ಣವಾಗಿಸುವಾಗಲೇ ಅದು ಆಂಗಿಕಾಭಿನಯವಾಗುವುದು. ಚಲನೆಗಳನ್ನು ಕ್ರಮೀಕರಿಸುವುದಾದರೆ ಸ್ವಂತ ಶರೀರದ ಪರಿಮಿತಿಗಳನ್ನೂ ಸಾಧ್ಯತೆಗಳನ್ನೂ ತಿಳಿಯಬೇಕಾಗಿದೆ. ಆಟಗಳ ಮೂಲಕವೂ ಕ್ರೀಡಾ ಪರಿಶೀಲನೆಯ ಮೂಲಕವೂ ಹಾದುಹೋಗುವಾಗ ಮಗುವು ಇದನ್ನು ತಿಳಿಯುವುದು. ವಾಚಿಕವೆಂದರೆ ಸಂಭಾಷಣೆಯಾಗಿದೆ. ಅಗತ್ಯವಾದ ಪ್ರಾಧಾನ್ಯವೂ ವಿಕಾರ ಸನ್ನಿವೇಶವೂ ನಡೆಯುವಾಗ ಮಾತ್ರವಾಗಿದೆ ಸಂಭಾಷಣೆ ಅರ್ಥವಿನಿಮಯ ಕ್ಷಮವಾಗುವುದು. ಕಥಾಪಾತ್ರಗಳ ಅಂತರ್ಭಾವ ಪ್ರಕಟಪಡಿಸುವುದಕ್ಕಾಗಿ ಉಪಯೋಗಿಸುವ ಅಭಿನಯದ ಮತ್ತೊಂದು ಭಾವವಾಗಿದೆ ಆಹಾರ್ಯ. ಮೇಕಪ್, ವೇಷಭೂಷಣಾದಿಗಳು ಎಂಬಿವುಗಳು ಇದರಲ್ಲಿ ಒಳಗೊಂಡಿವೆ. ಸಾತ್ವಿಕ ಭಾವಗಳನ್ನು ಪ್ರಕಟಿಸುವ ರಸಾಭಿನಯವು ಸಾತ್ವಿಕವಾಗಿದೆ.

### ಕಲಿಕಾ ಸಾಧನೆಗಳು

- ಪ್ರಕೃತಿಯಲ್ಲಿನ ಜೀವಜಾಲಗಳನ್ನು, ಮನುಷ್ಯರನ್ನು ನಿರೀಕ್ಷಿಸಿ ಅವರ ಚಲನೆಗಳನ್ನು ಸ್ವಾಯತ್ತಮಾಡಿ ಅಗತ್ಯ ಸಂದರ್ಭಗಳಲ್ಲಿ ಪ್ರದರ್ಶಿಸುವುದು.
- ಸಂದರ್ಭಾನುಸಾರವಾಗಿ ತಾಳ ಚಲನೆಗಳನ್ನು ಉಪಯೋಗಿಸುವುದು.

### ಆಶಯ, ತಿಳುವಳಿಕೆ

- ಜೀವಜಾಲಗಳ ಹಾಗೂ ಮನುಷ್ಯರ ಚಲನೆಗಳು ವ್ಯತ್ಯಸ್ಥವಾಗಿದೆ. ಅವುಗಳನ್ನು ನಿರೀಕ್ಷಿಸಿ ಪ್ರದರ್ಶಿಸುವುದರ ಮೂಲಕ ಆ ಜೀವಿಯನ್ನೋ ಮನುಷ್ಯನನ್ನೋ ಜ್ಞಾಪಿಸಲು ಸಾಧ್ಯವಾಗುತ್ತದೆ.
- ತಾಳಾತ್ಮಕ ಚಲನೆಗಳಿಗೆ ಅಂದವಿದೆ.
- ಸಂದರ್ಭಾನುಸಾರವಾಗಿ ತಾಳ ಚಲನೆಗಳನ್ನು ಉಪಯೋಗಿಸುವುದಕ್ಕಿರುವ ಸಾಮರ್ಥ್ಯ.

## ಕಲಿಕಾ ಚಟುವಟಿಕೆ

*ಹಂತ – 1*

- ಅಧ್ಯಾಪಿಕೆ ಕ್ಲಾಸಿನಲ್ಲಿ ಚಲನೆಯ ಕುರಿತಾಗಿರುವ ಚರ್ಚೆ ಮಾಡುವುದು. – ನಾವೆಲ್ಲರೂ ಚಲಿಸುತ್ತಿದ್ದೇವೆ. ಕುಳಿತುಕೊಳ್ಳುವಾಗ , ನಡೆಯುವಾಗ, ಮಾತನಾಡುವಾಗಲೆಲ್ಲ..... ನಮ್ಮ ಚಲನೆಗಳೆಲ್ಲ ಕ್ರಮವಾಗಿಯಲ್ಲದೆ ನಿಖರವಾಗಿ ಅಭ್ಯಾಸ ಮಾಡಿದ ಚಲನೆಗಳೊಂದಿಗೆ ಜನರು ಒಟ್ಟಾಗಿ ಸೇರಿ ಹೋಗುವುದು ನೀವು ಕಂಡಿರುವಿರಾ?

- ನಾವು ಬೆಳಿಗ್ಗೆ ತರಗತಿಗೆ ಬರುವುದೂ ಅಸೆಂಬ್ಲಿಗೆ ಹೋಗುವುದು ಒಂದೇ ರೀತಿಯೇ? ಅವುಗಳಲ್ಲಿ ಪರಸ್ಪರ ವ್ಯತ್ಯಾಸ? ತರಗತಿಗೆ ಮಕ್ಕಳು ಕೆಲವೊಮ್ಮೆ ಒಬ್ಬೊಬ್ಬರಾಗಿ ಅಥವಾ ಗುಂಪಾಗಿ ಆಗಿರುತ್ತದೆ ಬರುವುದು ಆದರೆ ಅಸೆಂಬ್ಲಿಗೆ ಹೋಗುವುದೂ ಬರುವುದೂ ಸಾಲಾಗಿಯಾಗಿರುತ್ತದೆ. ಸ್ವಲ್ಪ ಕೂಡ ಕ್ರಮಾನುಗತಗೊಳಿಸಿದ ಚಲನೆಗಳಾಗಿವೆ ಅಲ್ಲಿರುವುದು. – ಹೀಗೆ ಕ್ರಮಗೊಳಿಸಿದ ಚಲನೆಗಳನ್ನು ನೀವು ಬೇರೆ ಎಲ್ಲಾದರೂ ಕಂಡಿದ್ದೀರಾ?

- ರಿಪಬ್ಲಿಕ್ ದಿನ ಪರೇಡುಗಳು, ವ್ಯೋಮಾಭ್ಯಾಸ ಪ್ರಕಟನೆಗಳು, ಕುದುರೆ ಸೇನೆಯ ಸಂಚಾರ, ದೇಶಾಟನೆ ಗಿಳಿಗಳ ಹಾರಾಟ, ಪೋಲೀಸ್ ಮಾರ್ಚ್ ಇವುಗಳಲ್ಲಿ ಹಲವು ನೇರವಾಗಿಯೋ ಟೆಲಿವಿಶನಿಂದಲೋ ಮಕ್ಕಳು ಕಂಡಿರಬಹುದು.

- ಅಂತಹ ಕ್ರಮಗೊಳಿಸಿದ ಒಂದು ಸಂಘ ಚಲನೆಯನ್ನು ಮಕ್ಕಳು ಅಭಿನಯಿಸಿ ಮಂಡಿಸಲಿ. ಅಧ್ಯಾಪಿಕೆ ಅದಕ್ಕಿರುವ ಸಂದರ್ಭ ಸೃಷ್ಟಿಸಲು ಗಮನಿಸಬೇಕು. ಉದಾಹರಣೆಗೆ ಟೀಚರ್ ಹೇಳುವುದು. ನಾನು ಬೆಳಿಗ್ಗೆ ಶಾಲೆಗೆ ಬರುವಾಗ ಎರಡು ಸಾಲಾಗಿ ಒಂದು ಮೆರವಣಿಗೆ ಹೋಗುವುದನ್ನು ಕಂಡೆ. ಈ ಜಾಥವನ್ನು ಮಕ್ಕಳು ಅಭಿನಯಿಸಿ ಮಂಡಿಸುವುದು. ಟೀಚರ್ ಮುಂದುವರಿಸುವುದು. ಸ್ವಲ್ಪ ಕಳೆದಾಗ ಒಂದು ಪೋಲೀಸ್ ಸಂಘ ಮಾರ್ಚ್ ಮಾಡುತ್ತಾ ಬರುವುದನ್ನು ಕಂಡನು. ಮಕ್ಕಳು ಕ್ಷಣಾರ್ಧದಲ್ಲೇ ಪೋಲೀಸ್ ಮಾರ್ಚನ್ನು ಅಭಿನಯಿಸಿ ತೋರಿಸುವುದು. ಹೆಜ್ಜೆಗಳು, ಕೈಬೆರಳುಗಳು, ಶರೀರ ಚಲನೆಗಳು ಎಲ್ಲಾ ಸೇರಿ ಎಲ್ಲಾ ಮಕ್ಕಳೂ ಒಂದಾಗುವ ಅವಸ್ಥೆಯನ್ನು ಸೃಷ್ಟಿಸುವುದು. ಚದುರಿದ ಗುಂಪಾಗಿದ್ದ, ಕ್ರಮರಹಿತವಾದ ಚಲನೆಗಳುಂಟಾಗಿದ್ದ ಕ್ಲಾಸ್ ಈಗ ಕ್ರಮವಾದ ಚಲನೆಗೆ ತಾಳಕ್ಕೆ ಬದಲಾಗಿದೆ. ಸವಿಶೇಷವಾದ ವಿನ್ಯಾಸದೊಂದಿಗೆ ಹಾರಾಡುವ ದೇಶಾಟನೆಯ ಪಕ್ಷಿಗಳನ್ನು ಕಂಡಿರಬಹುದು. ಅದೇರೀತಿ ಕುದುರೆಗಳ ಗುಂಪು, ಎನ್‌ಸಿಸಿ, ವಿಮಾನಗಳ ವ್ಯೋಮಾಭ್ಯಾಸ ಮೊದಲಾದವುಗಳನ್ನು ಅಭಿನಯಿಸಿ ಮಂಡಿಸಲು ಮಕ್ಕಳೊಂದಿಗೆ ಹೇಳುವುದು. ಸ್ವಂತ ಚಲನೆಯನ್ನು ಅಪರಾಧದ ಚಲನೆಗಳೊಂದಿಗೆ ಸೇರಿಸಲು ಇದರ ಮೂಲಕ ಮಕ್ಕಳಿಗೆ ಸಾಧ್ಯವಾಗುವುದು.

*ಹಂತ – 2*

- **ಕಥೆಯನ್ನು ನಾಟಕವಾಗಿ ಪರಿವರ್ತಿಸುವುದು**

  ಪ್ರಕೃತಿಯೂ ಮೃಗಗಳೂ ಮನುಷ್ಯರೂ ಒಂದು ಕಥಾ ಶೈಲಿಯಲ್ಲಿ ಅಧ್ಯಾಪಕನು ತರಗತಿಯಲ್ಲಿ ಮಂಡಿಸುವುದು. ಉದಾಹರಣೆಗೆ ಕೆಳಗೆ ಕೊಡಲಾದ ಕಥೆಯನ್ನು ಪ್ರಯೋಜನಪಡಿಸುವುದು.

  *ಸುಂದರವಾದ ಒಂದು ಕಾಡಿನಲ್ಲಿ ಕಾಡುಮೃಗಗಳು, ಪಕ್ಷಿಗಳೆಲ್ಲಾ ಅನ್ಯೋನ್ಯದಿಂದ ಜೀವಿಸುತ್ತಿದ್ದುವು. ಅಲ್ಲಿಯ ರಾಜ ಒಂದು ಸಲ ಸಿಂಹ ನಿದ್ರಿಸುವಾಗ ಕಲಪಿಲ*

*ಮಾಡುತ್ತಾ ಇಲಿಗಳು ಸಿಂಹದ ದೇಹದ ಮೇಲೆ ಬಿದ್ದವು. ನಿದ್ರೆಯಿಂದ ಎದ್ದ ಸಿಂಹ ಇಲಿಯನ್ನು ಹಿಡಿಯಿತು. ಕಾಲುಹಿಡಿದು ವಿನಂತಿಸಿದ ಇಲಿಯನ್ನು ಸಿಂಹ ಸುಮ್ಮನೆ ಬಿಟ್ಟಿತು. ಕೃತಜ್ಞತೆಯೊಂದಿಗೆ ಎಂದಾದರೂ ಪ್ರತ್ಯುಪಕಾರವನ್ನು ಮಾಡುವೆನು ಎಂದ ಇಲಿಯನ್ನು ಸಿಂಹ ಹೀಯಾಳಿಸಿತು.*

*ಕಾಡಿನಲ್ಲಿ ಬೇಟೆಗಾಗಿ ಬಂದ ಬೇಟೆಗಾರರು ಹಾಕಿದ ಬಲೆಯಲ್ಲಿ ಸಿಂಹವು ಸಿಕ್ಕಿಬಿದ್ದಿತು. ತಪ್ಪಿಸಿಕೊಳ್ಳಲು ಇರುವ ಯಾವುದೇ ಪ್ರಯತ್ನವು ಫಲಗೊಳ್ಳಲಿಲ್ಲ. ವ್ಯರ್ಥ ಪ್ರಯತ್ನದ ಆಯಾಸದಿಂದ ಮರಣವನ್ನು ನೋಡುತ್ತಾ ಕುಳಿತಿದ್ದಾಗ ಆ ದಾರಿಗೆ ಇಲಿ ಬಂದಿತು. ಪ್ರತ್ಯುಪಕಾರವನ್ನು ಮಾಡಲು ಇದೇ ಒಳ್ಳೆಯ ಸಮಯವೆಂದು ಇಲಿ ಓಡಿಹೋಗಿ ಸ್ನೇಹಿತರನ್ನೆಲ್ಲ ಕರೆಯಿತು. ಎಲ್ಲಾರೂ ಸೇರಿ ಬಲೆಯನ್ನು ಕತ್ತರಿಸಿ ಸಿಂಹವನ್ನು ರಕ್ಷಿಸಿದವು. ಬೇಟೆಗಾರನು ಬಂದಾಗ ಸಿಂಹವೂ ಇಲಿಗಳೂ ತಪ್ಪಿಸಿಕೊಂಡಿದ್ದವು. ಸಿಂಹವು ಇಲಿಗಳಿಗೆ ಧನ್ಯವಾದವನ್ನು ತಿಳಿಸಿತು.*

- ಈ ಕಥೆಯನ್ನು 5 ಭಾಗಗಳಾಗಿಸಿ ವಿಂಗಡಿಸೋಣ. ಪ್ರತಿಯೊಂದು ಭಾಗವೂ ಪ್ರತಿಯೊಂದು ಗುಂಪು ರಂಗಪಾಠವನ್ನು ಮಾಡಿ ಮಂಡಿಸಲಿ.
    1) ಮನೋಹರವಾದ ಕಾಡು. ಮೃಗಗಳೂ ಕಾಡುಗಳೂ ಸಿಂಹವೂ ಎಲ್ಲಾ.
    2) ಸಿಂಹವೂ ಇಲಿಯೂ
    3) ಬೇಟೆಗಾರರು ಬಂದು ಬಲೆ ಹಾಕುವುದು
    4) ಬಲೆಯಲ್ಲಿ ಸಿಕ್ಕಿಬಿದ್ದ ಸಿಂಹ – ಸಹಾಯ ಮಾಡಲು ಬರುವ ಇಲಿಗಳಲ್ಲದೇ ಇರುವ ಮೃಗಗಳು
    5) ಇಲಿ ಸಿಂಹದ ಸ್ಥಿತಿಯನ್ನು ನೋಡುವುದು. ತಪ್ಪಿಸಿಕೊಳ್ಳುವುದು
- ಎಲ್ಲರೂ ಸೇರಿ ಮೃಗಗಳ ಆಹ್ಲಾದವೂ ಬೇಟೆಗಾರರ ನಿರಾಶೆಯೂ ಮಂಡಿಸುವುದು.
- ನಿಖರವಾದ ಚರ್ಚೆಯ ನಂತರ ಈ ಭಾಗಗಳನ್ನೆಲ್ಲಾ ಸೇರಿಸಿ ನಾಟಕವನ್ನು ಮಂಡಿಸುವುದು.

## ಯೂನಿಟ್ – 2 : ಸಂಭಾಷಣೆಯನ್ನು ಕ್ರಮೀಕರಿಸಿರಿ

### ಮುನ್ನುಡಿ

ಸಾಧಾರಣ ಜೀವನದಲ್ಲಿ ನಡೆಸುವ ಸಂಭಾಷಣೆಗಳಿಗೆ ಸ್ವಾಭಾವಿಕವಾದ ವೈಚಾರಿಕ ಬೆಂಬಲವಿದೆ. ವೈಚಾರಿಕವಾದ ಮಹತ್ವವೂ ಇಣಕಗಳು ಸ್ವತಃ ಬರುತ್ತವೆ ಆದರೆ ಒಂದು ಸಂದರ್ಭದಲ್ಲಿ ಅಭಿನಯಿಸಲು ಬರುವಾಗ ಎಲ್ಲಾ ಸಂದರ್ಭಗಳೂ ಕಲ್ಪಿಸುವುದಾಗಿದೆ. ಹೀಗೆ ಕ್ರಮವಾದ ಸಂಭಾಷಣೆಗಳನ್ನು ಮಾಡಲು ಬರುವಾಗ ನಿರೀಕ್ಷಣೆಗಳಿಂದಲೂ ನಿರಂತರ ಪರಿಶೀಲನೆಗಳಿಂದಲೂ ವಿಕಾಸ ಹೊಂದಿದ ಭಾವಸ್ವರೂಪ ಶಬ್ಧವಿನ್ಯಾಸದಲ್ಲಿ ಉಪಯೋಗಿಸಬೇಕಾಗಿದೆ. ಅದಕ್ಕೆ ಕ್ರಮವಾದದ್ದೂ ವೈಚಾರಿಕತೆ ಬದಲಾಣೆಯದದ್ದು ಆಗ ಸಂಭಾಷಣೆಗಳನ್ನು ಹೇಳಿ ಕಲಿಯಬೇಕಾಗಿದೆ.

### ಕಲಿಕಾ ಸಾಧನೆಗಳು

- ಆಶಯಗಳು, ಸಂದರ್ಭಗಳು ಎಂಬಿವುಗಳೊಂದಿಗೆ ಶಬ್ದ, ಚಲನೆ, ಅಭಿನಯ ಎಂಬಿವುಗಳನ್ನು ಏರ್ಪಡಿಸುವುದು.

## ಆಶಯ, ತಿಳುವಳಿಕೆ

- ಶಬ್ದ, ಚಲನೆ, ಅಭಿನಯ ಎಂಬಿವುಗಳನ್ನು ಸನ್ನಿವೇಶಿಸುವಾಗ ಆಶಯಗಳಿಗೂ ಸಂದರ್ಭಗಳಿಗೂ ಹಿರಿಮೆ ಹೆಚ್ಚುತ್ತದೆ.

## ಕಲಿಕಾ ಚಟುವಟಿಕೆ

- ಸಂಭಾಷಣೆ ಜೀವನದ ಪ್ರಧಾನವಾದ ಭಾಗವಲ್ಲವೇ. ಮನೆಗಳಲ್ಲೂ, ಊರಿನಲ್ಲೂ, ತರಗತಿಗಳಲ್ಲೆಲ್ಲಾ ಇಟ್ಟು ನಾವು ಮಾತನಾಡುವುದುಂಟು. ಉದಾಹರಣೆಗೆ ಒಂದು ಮಗುವು ಸಾಮಾನುಗಳನ್ನು ತರಲು ಒಂದು ಅಂಗಡಿಗೆ ಹೋಗುವುದು. ದಾರಿಯಲ್ಲಿ ಪರಿಚಯದವರೊಂದಿಗೆ ಮಾತನಾಡುವುದು. ಅಂಗಡಿಯವನ ಜೊತೆಯಲ್ಲಿ ಮಾತನಾಡುವುದು. ಮಗುವು ಏನಾಗಿರಬಹುದು ಅಂಗಡಿಯವನ ಜೊತೆಯಲ್ಲಿ ಮಾತನಾಡುವುದು? ಮಕ್ಕಳು ಸ್ವಾಭಾವಿಕವಾದ ಸಂಭಾಷಣೆಗಳನ್ನು ಸೃಷ್ಟಿಸಲಿ. ಅದರೊಂದಿಗೆ ಕೆಲ ಮಕ್ಕಳೊಂದಿಗೆ ಬಹಳ ಬೇಗನೆ ಅಂಗಡಿಯವನು ಹಾಗೂ ಮಗು ಆಗಿ ಬದಲಾಗಿ ಸಂಭಾಷಣೆಯನ್ನು ವಿಕಸಿಸಲು ಹೇಳೋಣ. ಹಲವು ಮಕ್ಕಳಿಗೂ ಅನಾಯಾಸ ಸಂಭಾಷಣೆಗಳು ಸ್ವಾಭಾವಿಕವಾಗಿ ಸೃಷ್ಟಿಸಲು ಸಾಧ್ಯವಾಗುವುದು.
- ಇದರ ನಂತರ ಒಂದು ಆಟಗಳಿಗೂ ಹೋಗಬಹುದು. ಐದೋ ಆರೋ ಮಕ್ಕಳು ಒಳಪಡುವ ವಿಧದಲ್ಲಿ ಗುಂಪುಗಳನ್ನು ಮಾಡಿರಿ. ಅಧ್ಯಾಪಿಕೆ ವಿವಿಧ ಸ್ಥಳಗಳ ಹೆಸರು ಬರೆದ ಸ್ಲಿಪ್ (***ಉದಾಹರಣೆಗೆ ಬಾರ್ ಶೋಪ್, ಕೊಳ, ಆಸ್ಪತ್ರೆಯ ವಿಚಾರಣಾ ಕೌಂಟರ್, ಬಸ್‌ಸ್ಟೋಪ್, ಟೀ ಅಂಗಡಿ, ಹೆಣ್ಣು ನೋಡುವ ಸಮಾರಂಭ***) ಕೈಯಲ್ಲಿ ಇಡಬೇಕು.
- ಗುಂಪಿನಲ್ಲಿ ಒಂದು ಮಗುವಿಗೆ ಸ್ಲಿಪ್ಪನ್ನು ನೀಡುವುದು. ಸ್ಲಿಪ್ಪಿನಲ್ಲಿ ಬರೆದ ಸ್ಥಳಕ್ಕೆ ಸಂಬಂಧಪಟ್ಟಂತೆ ಒಂದು ವಿಷಯವನ್ನು ಮಗು ಅಭಿನಯಿಸುವುದು. ನಂತರ ಸ್ಲಿಪ್ಪನ್ನು ಇನ್ನೊಂದು ಮಗುವಿಗೆ ನೀಡುವುದು. ಉದಾಹರಣೆಗೆ ಕೊಳ ಎಂದು ಸೂಚನೆ ಲಭಿಸಿದ ಮುಗುವಿಗೆ ಇನ್ನೊಂದು ಮಗುವಿಗೆ ಕಾಗದವನ್ನು ನೀಡಿ ಸ್ನಾನಮಾಡುವುದಾಗಿ ಅಭಿನಯಿಸುವುದು. ಸ್ಲಿಲ್ ಸಿಕ್ಕಿದ ಮಗು ಮತ್ತೊಂದು ಮಗುವಿನೊಂದಿಗೆ ಇದೇನು ರಾಧೆ ಇಂದು ನನ್ನನ್ನು ಕರೆಯದೆ ಬಂದೆ ಎಂದೋ ಇನ್ನಿತರ ಸಂಭಾಷಣೆಗಳನ್ನು ಮಾಡುವುದು. ಬರುವ ಪ್ರತಿಯೊಬ್ಬರು ಸ್ವಾಭಾವಿಕವಾಗಿ ಸ್ನಾನಕೊಳದಲ್ಲಿ ನಡೆಯುವ ಸಂಭಾಷಣೆಗಳನ್ನು ಸೃಷ್ಟಿಸಿಕೊಂಡು ಅಭಿನಯವನ್ನು ಆರಂಭಿಸುವುದು.
- ಹೀಗೆ ಎಲ್ಲಾ ಗುಂಪುಗಳೂ ಮಂಡಿಸಿದ ನಂತರ ಸಂಭಾಷಣೆಗಳ ಸವಿಶೇಷತೆಗಳನ್ನು ಟೀಚರ್ ಕ್ಲಾಸಿನಲ್ಲಿ ಚರ್ಚೆ ಮಾಡಬೇಕು. ಕೆಲವೊಂದು ಬಹಳ ಸ್ವಾಭಾವಿಕವಾಗಿ ಅನ್ನಿಸಬೇಕು. ಆದರೆ ಇನ್ನು ಕೆಲವು ಸಂಭಾಷಣೆಗಳಿಗೆ ಸಂಬಂಧವಿಲ್ಲದವುಗಳು ಅಥವಾ ಕೃತಕತೆಯಿರುವವುಗಳಾಗಿಯೂ ಅನುಭವವಾಗಬಹುದು. ಇವುಗಳನ್ನೆಲ್ಲಾ ಮಕ್ಕಳಿಂದ ಸ್ವತಃ ರೂಪಿಸಲು ಅಧ್ಯಾಪಿಕೆ ಗಮನಿಸಬೇಕು.

## ಯೂನಿಟ್ – 3 : ಕವಿತೆಯಿಂದ ಗಾದೆಮಾತುಗಳಿಂದ ನಾಟಕವನ್ನು ವಿಕಾಸಗೊಳಿಸುವುದು

## ಮುನ್ನುಡಿ

ಘನೀಕರಿಸಿದ ಕವಿತೆಗಳಾಗಿವೆ ಗಾದೆಮಾತುಗಳು. ಒಂದು ಆಶಯವನ್ನು ಅತೀ ಕಡಿಮೆ ವಾಕ್ಯಗಳಿಂದ ಸ್ಫುಟವಾಗಿ ಮಾಡಿ ತೆಗೆದವುಗಳಾಗಿವೆ ಇವು. ನಿಖರವಾದ ವಿಶ್ಲೇಷಣೆಯಿಂದ ಪ್ರತಿಯೊಂದು ಗಾದೆಮಾತುಗಳಿಂದ ದೊಡ್ಡದೊಂದು ಆಶಯ ಪ್ರಪಂಚದ ತಿರುಳು

ದೊರೆಯುವುದು. ವಿವಿಧ ಪ್ರಾಯದಲ್ಲಿರುವ ಮಕ್ಕಳ ಲೋಕ ಪರಿಚಯಕ್ಕೂ ಭಾವನಾ ಸಾಮರ್ಥ್ಯಕ್ಕೂ ಅನುಸರಿಸಿ ಗಾದೆಮಾತುಗಳಲ್ಲಿನ ಆಶಯ ಲೋಕವನ್ನು ನಾಟಕವಾಗಿಸಿ ಮಂಡಿಸೋಣ.

**ಕಲಿಕಾ ಸಾಧನೆ**

- ಸರಳ ಸಂದರ್ಭಗಳು, ನೈಜವಾದ ಆಶಯಗಳು ಎಂಬಿವುಗಳು ಸ್ವಾಭಾವಿಕವಾಗಿ ಕ್ಲಾಸಿನಲ್ಲಿ ಮಂಡಿಸುವುದು.
- ಸಂದರ್ಭಾನುಸಾರವಾಗಿ ವಾಚಿಕವಾಗಿಯೂ ಲಿಖಿತವಾಗಿಯೂ ಸ್ವಾಭಾವಿಕ ಸಂಭಾಷಣೆಗಳನ್ನು ತಯಾರಿಸಬಹುದು.
- ವೈಚಾರಿಕತೆಯೊಂದಿಗೆ ಶಬ್ದಾಭಿನಯವೂ ನಡೆಸುವುದು.

**ಆಶಯ, ತಿಳುವಳಿಕೆ**

- ರಂಗಜ್ಞಾನದೊಂದಿಗೂ ಔಚಿತ್ಯಜ್ಞಾನದೊಂದಿಗೂ ಇರುವ ಭಾಗವಹಿಸುವಿಕೆ ಆಶಯಗಳಿಗೆ ಸ್ವಾಭಾವಿಕವಾಗಿ ಪಡೆದುಕೊಳ್ಳುವುದು.
- ಆಶಯಾವಿಷ್ಕಾರಣ ಸಾಮರ್ಥ್ಯ
- ಸಂದರ್ಭಗಳಿಗೆ ವ್ಯಕ್ತತೆಯನ್ನು ಪಡೆದುಕೊಳ್ಳಲು ಸಂಭಾಷಣೆಗಳು ಅಗತ್ಯವಿದೆ.
- ವಾಚಿಕವೂ ಲಿಖಿತವಾಗಿಯೂ ಭಾಷಣಗಳನ್ನು ತಯಾರಿಸಲಿರುವ ಸಾಮರ್ಥ್ಯ.
- ಭಾಷಣದಲ್ಲಿ ವೈಚಾರಿಕತೆ ಒಳಗೊಳ್ಳುವಾಗ ಶಬ್ದಾಭಿನಯ ಬದಲಾಗುವುದು.
- ಶಬ್ದಾಭಿನಯದ ಮೂಲಕ ಆಶಯ ವಿನಿಮಯ ಅರ್ಥಪೂರ್ಣವಾಗುವುದು.

**ಕಲಿಕಾ ಚಟುವಟಿಕೆ**

- ***ಒಗ್ಗಟ್ಟಿನಲ್ಲಿ ಬಲವಿದೆ, ಅತಿ ಆಸೆ ಗತಿಗೇಡು 'ಈ ವಳ್ಳಿಯಿಲ್ ನಿನ್ನುಂ ಚೆಮ್ಮೇ ಪೂಕಳ್ ಪಾರುನ್ನಿದೋ ಪರನ್ನಮೋ....'***

  ಈ ಸಾಲುಗಳನ್ನು ಗಮನಿಸಿರಿ. ದೃಶ್ಯಾತ್ಮಕತೆ ಇಂತಹ ಸಾಲುಗಳ ಸವಿಶೇಷತೆಯಾಗಿದೆ. ಇಂತಹ ಸಾಲುಗಳು ಪಾಠಭಾಗದಿಂದಲೂ ಹೊರಗಿನಿಂದ ಕಂಡುಹಿಡಿಯಲು ಸಾಧ್ಯವಾಗುವುದು.
- ಮಕ್ಕಳನ್ನು ಹಲವು ಗುಂಪುಗಳಾಗಿಸಿ ವಿಂಗಡಿಸುವುದು. ಇಂತಹ ಸಾಲುಗಳು ಪ್ರತಿಯೊಂದು ಗುಂಪಿಗೂ ನೀಡುವುದು. ಅವುಗಳನ್ನು ಕಥಾಸಂದರ್ಭಗಳಾಗಿಸಿ ಮಕ್ಕಳು ಅವುಗಳನ್ನು ವಿಕಾಸಗೊಳಿಸಲಿ. ಲಭಿಸಿದ್ದು ಒಂದೇ ಸಾಲುಗಳಾಗಿದ್ದರೂ ರೂಪಿಸುವುದು ವ್ಯತ್ಯಸ್ಥ ಕಥೆಗಳ ಮೂಲಕವಾಗಿವೆ. ಈ ವಿಷಯವನ್ನು ಅಧ್ಯಾಪಿಕೆ ತರಗತಿಯಲ್ಲಿ ಚರ್ಚೆ ಮಾಡಬೇಕು.
- ಇನ್ನು ಮಕ್ಕಳು ಕಂಡುಹಿಡಿದದ್ದೋ ಅಧ್ಯಾಪಿಕೆ ನಿರ್ದೇಶಿಸಿದ್ದೋ ಆದ ಕಾವ್ಯಭಾಗಗಳೋ ಸಣ್ಣ ಕವಿತೆಗಳೋ (ದುಂಡಿರಾಜ್‌ರವರ ಹನಿಗವನ) ಉಪಯೋಗಿಸಿ ವಿಕಾಸಗೊಳಿಸಿ ಅಭಿನಯಿಸಿ ಮಂಡಿಸಲಿ.
- ಮಂಡನೆಯಲ್ಲಿನ ಗುಣದೋಷಗಳ ಕುರಿತು ತರಗತಿಯಲ್ಲಿ ಚರ್ಚೆ ಮಾಡಬೇಕು.
- ಇದೇ ರೀತಿಯಲ್ಲಿಯೇ ಮಂಡನೆಯ ಸಾಧ್ಯತೆಯುಳ್ಳದಾಗಿದೆ ಗಾದೆಮಾತುಗಳು.

  ಇವುಗಳನ್ನು ವಿಕಾಸಗೊಳಿಸಿ ದೃಶ್ಯರೂಪಗಳಾಗಿಸಿ ಮಂಡಿಸಲು ಮಕ್ಕಳಿಗೆ ಸಾಧ್ಯವಾಗಬೇಕು. (ಉದಾಹರಣೆಗೆ ಹೊಳೆಯುವುದೆಲ್ಲಾ ಚಿನ್ನವಲ್ಲ ಎಂಬ ಗಾದೆಮಾತನ್ನು ತೆಗೆಯುವುದು. ಹೊರಗಿನ ಬಣ್ಣವನ್ನು ನೋಡಿ ಮೋಸಹೋಗುವ ಪರಿಸ್ಥಿತಿಯನ್ನು ಒಂದು ಸಂದರ್ಭವಾಗಿಸಿ, ಕಥೆಯಾಗಿ ಪರಿವರ್ತಿಸಲು ಅಧ್ಯಾಪಿಕೆಯ ಸಹಾಯದೊಂದಿಗೆ ಮಕ್ಕಳಿಗೆ ಸಾಧ್ಯವಾಗುತ್ತದೆ.

- ಹಾಗೆ ರಚಿಸಿದ ಕಥೆಗಳಿಂದ ಉತ್ತಮ ಸಂಭಾಷಣೆಯನ್ನುಂಟುಮಾಡಿ ಅಭಿನಯಿಸಿ ಮಂಡಿಸಬೇಕು.
- ಮಕ್ಕಳನ್ನು ನಿಶ್ಚಿತ ಗುಂಪುಗಳಾಗಿಸಿ ವಿಂಗಡಿಸಿರಿ.
- ಮಕ್ಕಳ ಸಂಖ್ಯೆಗೆ ಅನುಸಾರವಾಗಿ ಗಾದೆಮಾತುಗಳನ್ನು ಬರೆದ ಕಾಗದಗಳನ್ನು ಅಧ್ಯಾಪಿಕೆ ಮಾಡಬೇಕು. ಅಧ್ಯಾಪಿಕೆ ನಿಶ್ಚಯಿಸುವ ರೀತಿಯಲ್ಲಿ ಗುಂಪುಗಳಾಗಿ ವಿಭಜಿಸುವುದಕ್ಕೆ ಅಷ್ಟು ಸಂಖ್ಯೆಗಳ ಗಾದೆಮಾತುಗಳ ವಿತರಣೆ ಸ್ವಭಾವದಲ್ಲಿ ಕಾಗದದ ತುಂಡುಗಳಲ್ಲಿ ಬರೆದು ಹಾಕಬೇಕು. ತರಗತಿಯಲ್ಲಿ 35 ಮಕ್ಕಳಿದ್ದಲ್ಲಿ  ಏಳು ಮಕ್ಕಳಂತೆ ಐದು ಗುಂಪುಗಳಾಗಿಸಿ ಮಾಡಬಹುದಲ್ಲವೇ.
- ಪ್ರತಿಯೊಂದು ಗಾದೆಮಾತುಗಳು ಲಭಿಸಿದ ಏಳು ಮಕ್ಕಳು ಒಂದು ಗುಂಪಾಗಿ ವಿಭಾಗಿಸಬೇಕು. ಆ ಗಾದೆಮಾತಿನ ಆಶಯ ಪ್ರತಿಫಲಿಸುವ ರೀತಿಯಲ್ಲಿ ಸಣ್ಣಕಥೆಗಳು ಅವರು ವಿಕಾಸಗೊಲಿಸಲಿ. ಹಾಗೆಯೇ ರೂಪಿಸಲ್ಪಟ್ಟ ಕಥೆಗಳು ಪ್ರತಿಯೊಂದು ಗುಂಪಗಳೂ ಅಭಿನಯಿಸಿ ಮಂಡಿಸಲಿ.

## ಯೂನಿಟ್ – 4 : ಋತುಭೇದಗಳೊಂದಿಗೆ

### ಮುನ್ನುಡಿ

ವಿವಿಧ ಭೂಪ್ರಕೃತಿಗಳು, ಋತುಭೇದಗಳು ಎಂಬಿವುಗಳನ್ನು ರಂಗದಲ್ಲಿ ಮಂಡಿಸುವಾಗ ಅಭಿನಯಿಸುವವರ ಶರೀರ ಚೇಷ್ಟೆಗಳು, ಮುಖಭಾವಗಳು ಪ್ರಧಾನವಾಗಿವೆ. ಮಳೆ ಬೀಳುವಾಗಲೂ ಮರುಭೂಮಿಯಲ್ಲಿ ನಡೆಯುವಾಗಲೂ  ಮನುಷ್ಯನ ಭಾವವೂ ಚೇಷ್ಟೆಗಳು ವ್ಯತ್ಯಸ್ಥವಾಗಿದೆ. ವಿವಿಧ ಸಂದರ್ಭಗಳಲ್ಲಿ ಶರೀರ, ಶಬ್ದ, ಭಾವ ಎಂಬಿವುಗಳು ಉಚಿತವಾದ ರೀತಿಯಲ್ಲಿ ಆವಿಷ್ಕರಿಸುವುದಕ್ಕಿರುವ ಚಟುವಟಿಕೆಯಾಗಿದೆ.

### ಕಲಿಕಾ ಸಾಧನೆ

- ನಾಟಕೀಯ ಆಟಗಳಲ್ಲಿ ಕೈ–ಮೈ ಮರೆತು ಏರ್ಪಟ್ಟು ಶರೀರ, ಶಬ್ಧ, ಬಾವ ಎಂಬಿವುಗಳನ್ನು ಉಚಿತವಾದ ರೀತಿಯಲ್ಲಿ ಆವಿಷ್ಕರಿಸುವುದು.

### ಆಶಯ, ತಿಳುವಳಿಕೆ

- ಶರೀರ, ಶಬ್ದ, ಭಾವ ಎಂಬಿವುಗಳಿಗೆ ಯೋಗ್ಯವಾದ ರೀತಿಯಲ್ಲಿ ಸಂಯೋಜಿಸುವ ಸಾಮರ್ಥ್ಯ.
- ಆಟಗಳಲ್ಲಿ ಸ್ವಯಂ ಮರೆತು ಭಾಗವಹಿಸುವ ಮೂಲಕ ಶರೀರ, ಶಬ್ದ, ಭಾವ ಎಂಬಿವುಗಳಲ್ಲಿ ಆಸಕ್ತಿ ಉಂಟಾಗುವುದು.

### ಕಲಿಕಾ ಚಟುವಟಿಕೆಗಳು

- ತರಗತಿಯಲ್ಲಿರುವ ಎಲ್ಲಾ ಮಕ್ಕಳೂ ಕ್ರಮರಹಿತವಾಗಿ ನಡೆಯಲಿ. ಅವರನ್ನು ವ್ಯತ್ಯಸ್ಥ ಭೂಪ್ರದೇಶಗಳ ಮೂಲಕ ವ್ಯತ್ಯಸ್ಥ ಹವಾಮಾನದ ಮೂಲಕ ಕೊಂಡು ಹೋಗಬೇಕು. ಅದಕ್ಕೆ ಅಧ್ಯಾಪಿಕೆ ಅಗತ್ಯವಾದ ಸಂದರ್ಭ ಮಾತುಗಳ ಮೂಲಕ ಸೃಷ್ಟಿಸಬೇಕು.

  *ಉದಾಹರಣೆಯಾಗಿ ನಾವೀಗ ರಾಜಸ್ಥಾನದಲ್ಲಿದ್ದೇವೆ. ಥಾರ್ ಮರುಭೂಮಿಯಲ್ಲಿ. ಬಿಸಿಲಿನ ಬೇಗೆಯಲ್ಲಿನ ಮರುಭೂಮಿಯ ಮೂಲಕ ಪ್ರಯಾಣ. ಮೇಲೆ ಹೊಳೆಯುವ ಸೂರ್ಯ. ಸುತ್ತಲೂ ವಿಶಾಲವಾದ ಮರಳಿನ ಕಣಗಳು. ಗಂಟಲು*

*ಬರಡಾಗುತ್ತಿದೆ. ಕಾಲುಗಳು ಮರಳಿನಲ್ಲಿ ಹೂತು ಹೋಗುತ್ತಿವೆ. ಸುತ್ತಲು ಸುಡುವ ಮರಳು.... ದೂರ ದೂರದಲ್ಲಿ ಯಾವುದೋ ಒಂದು ಮುಖ.... ಏನದು? ಕತ್ತೆತ್ತಿ ನೋಡುತ್ತಿದೆ......*

- ಅಧ್ಯಾಪಿಕೆ ಭಾವಾತ್ಮಕವಾಗಿ ಸೃಷ್ಟಿಸುವ ಈ ಅಂತರೀಕ್ಷದಲ್ಲಿ ಮಕ್ಕಳು ಸಂಚರಿಸುವುದು. ತಕ್ಷಣವೇ ಆ ವರ್ಣನೆ ಮಳೆಗಾಲಕ್ಕೆ ಬದಲಾಗುವುದು.... ನಂತರ ಮಂಜು ಪ್ರದೇಶಗಳಿಗೆ..... ಅವುಗಳಿಗೆ ಯೋಗ್ಯವಾದ ವರ್ಣನೆಗಳನ್ನು ಅಧ್ಯಾಪಿಕೆ ತರಗತಿಯಲ್ಲಿ ನೀಡಬೇಕು.
- ಮಕ್ಕಳು ಈ ವಿಭಿನ್ನ ಸ್ಥಳ ಕಾಲಗಳ ಮೂಲಕ ಅಭಿನಯಿಸಿಕೊಂಡು ನಡೆಯಲಿ. ಎಲ್ಲಾ ಮಕ್ಕಳನ್ನು ಇದರಲ್ಲಿ ಭಾಗವಾಗಿಸಲು ಗಮನಿಸಬೇಕು. ದೇಶಕ್ಕೂ ಹವಾಮಾನಕ್ಕೂ ಬರುವ ಸೂಕ್ಷ್ಮವಾದ ಪ್ರತ್ಯೇಕತೆಗಳನ್ನು ತಿಳಿದು ಅಭಿನಯಿಸಿ ಮಂಡಿಸಲು ಮಕ್ಕಳಿಗೆ ಸಹಾಯ ಮಾಡಬೇಕು.

## ಯೂನಿಟ್ – 5 : ಸಿನಿಮಾ ಪ್ರದರ್ಶನ/ಆಸ್ವಾದನಾ ಟಿಪ್ಪಣಿ ತಯಾರಿಸುವುದು

### ಮುನ್ನುಡಿ

ಸಮಾನತೆಗಳಿದ್ದರೂ ನಾಟಕಗಳಿಗೂ ಸಿನಿಮಾಗಳಿಗೂ ಅಭಿನಯ ರೀತಿಗಳು ವ್ಯತ್ಯಸ್ಥವಾಗಿವೆ. ಮಕ್ಕಳು ಸ್ವತಃ ವಿವಿಧ ಚಟುವಟಿಕೆಗಳ ಮೂಲಕ ಮಂಡಿಸಿದ ನಾಟಕಗಳಿಂದ ನಾಟಕದ ಸ್ವಭಾವ ತಿಳಿಯಬೇಕು. ಇದೇ ರೀತಿಯಲ್ಲಿ ಸಿನಿಮಾದಲ್ಲಿನ ಅಭಿನಯವು ವಿಶೇಷವಾಗಿ ತಿಳಿಯಬೇಕಾಗಿದೆ. ನಾಟಕದಲ್ಲೂ ಸಿನಿಮಾದಲ್ಲೂ ಇರುವ ಅಭಿನಯ ರೀತಿಗಳನ್ನು ತಾರತಮ್ಯ ಮಾಡಿ ತಿಳಿಯಲು ಸಾಧ್ಯವಾದ ಚಟುವಟಿಕೆಯಾಗಿದೆ ಇದು.

### ಕಲಿಕಾ ಸಾಧನೆಗಳು

- ಸಿನಿಮಾ, ನಾಟಕ ಎಂಬಿವುಗಳಿಂದ ಆಸ್ವಾದಿಸುವುದು.

### ಆಶಯ, ಧಾರಣೆ

- ಆಸ್ವಾದನಾ ಸಾಮರ್ಥ್ಯ
- ಸಿನಿಮಾ ಮುಂದುವರೆದ ದೃಶ್ಯಗಳು ವಿನ್ಯಾಸಗೊಳಿಸಿದ ಕಲಾರೂಪವಾಗಿದೆ. ಆಶಯ ವಿನಿಮಯಗಳಿಗಿರುವ ತ್ರಿಮಾನ ಸ್ವಭಾವದಲ್ಲಿರುವ ದೃಶ್ಯಶ್ರಾವ್ಯ ಕಲೆಯಾಗಿದೆ ನಾಟಕ.

### ಕಲಿಕಾ ಚಟುವಟಿಕೆ

- ನಾವು ಹಲವು ಸಂದರ್ಭಗಳು/ಪರಿಸ್ಥಿತಿಗಳನ್ನು ಅಭಿನಯಿಸಿ ಮಂಡಿಸಿದ್ದೇವೆ. ಅಭಿನಯದ ಉತ್ತಮ ರೂಪವಾಗಿದೆಯಲ್ಲವೇ ನಾಟಕ. ಅಭಿನಯ ಪ್ರಧಾನವಾದ ಮತ್ತೊಂದು ಕಲಾರೂಪದ ಕುರಿತು ಮಕ್ಕಳಲ್ಲಿ ಕೇಳಬಹುದು. ನಿಜವಾಗಿಯೂ ಸಿನಿಮದ ಕುರಿತು ಮಕ್ಕಳು ಹೇಳದಿರುವುದಿಲ್ಲ. ಸಿನಿಮಾದಲ್ಲಿಯೂ ನಾಟಕದಲ್ಲಿಯೂ ಅಭಿನಯಗಳು ಪರಸ್ಪರ ವ್ಯತ್ಯಸ್ಥವಾಗಿವೆಯಲ್ಲವೇ?
- ನಾಟಕ ನೋಡುವವರಿಗೆ ಮುಂದೆ ನಿಶ್ಚಿತ ಸ್ಥಳಕಾಲದಲ್ಲಿ ಮಂಡಿಸುವುದು. ಸಿನಿಮಾದಲ್ಲಿ ಅಭಿನಯವನ್ನು ಚಿತ್ರೀಕರಿಸಿ ನಂತರ ನೋಡುವುದು. ನಾಟಕದಲ್ಲಿನ ಹಾಗೆ ಸಿನಿಮಾದಲ್ಲಿನ

ಅಭಿನಯಗಳಿಗೆ ಪ್ರೇಕ್ಷಕರೊಂದಿಗೆ ನೇರವಾಗಿಯೂ ಸಂಬಂಧವಿಲ್ಲ. ಸಿನಿಮಾದಲ್ಲಿ ಅಭಿನಯದಲ್ಲಿನ ತಪ್ಪುಗಳನ್ನು ಪುನಃ ಚಿತ್ರೀಕರಿಸಿ ಉತ್ತಮಗೊಳಿಸಲಿರುವ ಸೌಲಭ್ಯವಿದೆ. ನಾಟಕದಲ್ಲಿನ ಹಾಗೆ ಅಭಿನಯದಲ್ಲಿನ ಮುಂದುವರಿಕೆ ಸಿನಿಮಾಗಳಿಗೆ ಅಗತ್ಯವಿಲ್ಲ.

- ಈ ಚರ್ಚೆಗಳ ಆಧಾರದಲ್ಲಿ ಅಭಿನಯವನ್ನು ಸೂಚನೆಗಳನ್ನೆಲ್ಲಾ ಆಸ್ವಾದಿಸಲಾಗುವ ರೀತಿಯಲ್ಲಿ ಸಣ್ಣ ಸಿನಿಮಾಗಳನ್ನು ಮಕ್ಕಳಿಗೆ ತೋರಿಸಿ ಕೊಡುವುದು. ಅವುಗಳ ಕುರಿತು ಆಸ್ವಾದನಾ ಟಿಪ್ಪಣಿಗಳನ್ನು ತಯಾರಿಸಿರಿ. ಸಿನಿಮಾದ ಒಂದು ಸಂಕ್ಷಿಪ್ತ. ಸಿನಿಮಾ ಇಷ್ಟವಾದರೆ ಏನಾಗಿರಬಹುದು ಕಾರಣ? ಅಭಿನಯ, ದೃಶ್ಯಾವಿಷ್ಕಾರ, ಸಂಗೀತ, ಸಂವಿಧಾನದ ಸೌಂದರ್ಯ ಇವುಗಳಲ್ಲಿ ಯಾವ ಯಾವ ವಲಯಗಳಾಗಿವೆ ಉತ್ತಮ ಎಂಬುದು? ಇಂತಹ ವಿಷಯಗಳನ್ನು ಕೂಡ ಪರಿಗಣಿಸಿಯಾಗಿರಬೇಕು ಆಸ್ವಾದನಾ ಟಿಪ್ಪಣಿಯನ್ನು ತಯಾರಿಸಬೇಕಾಗಿರುವುದು.
- ನಾಟಕಗಳ ವೀಡಿಯೋ ಚಿತ್ರಗಳನ್ನು ಪ್ರದರ್ಶಿಸುವುದು. ಆಸ್ವಾದನಾ ಟಿಪ್ಪಣಿ ತಯಾರಿಸಲು ಹೇಳುವುದು.

# ಆರನೇ ತರಗತಿ

## ಯೂನಿಟ್ – 1

### ಬಾಯಿತಾಳ

ಕೇವಲವಾದ ಅನುಕರಣೆಗಳಿಂದ ವಿಭಿನ್ನವಾಗಿ ಅಭಿನಯದ ಸೂಕ್ಷ್ಮಭಾಗಗಳನ್ನೂ ಹಿಂದಿನ ತರಗತಿಗಳಲ್ಲಿ ಮಕ್ಕಳು ತಿಳಿದಿದ್ದೀರಲ್ಲವೇ. ಶಬ್ದ, ಚಲನೆ ಎಂಬಿವುಗಳನ್ನು ನಿರೀಕ್ಷಣೆಗಳ ಮೂಲಕ ತಿಳಿಯುವುದು ಮತ್ತು ಸವಿಶೇಷ ಮುಹೂರ್ತಗಳಲ್ಲಿ ಆಶಯ ವ್ಯಕ್ತತೆಯೊಂದಿಗೆ ವೇದಿಕೆಗಳಲ್ಲಿ ಮಂಡಿಸುವುದಕ್ಕೂ ವಿವಿಧ ಚಟುವಟಿಕೆಗಳ ಮೂಲಕ ಮಕ್ಕಳು ತಿಳಿಯಬೇಕಾಗಿದೆ. ಆಂಗಿಕ, ವಾಚಿಕ, ಆಹಾರ್ಯ, ಸಾತ್ವಿಕ ಎಂಬಿವುಗಳ ಚದುರ್ವಿತಾಭಿನಯಗಳ ಮೂಲಕ ಸೂಕ್ಷ್ಮತೆ ಪರಿಶೀಲಿಸುವುದರೊಂದಿಗೆ ನಾಟಕ ರಚನೆಯ ವಿವಿಧ ಭಾಗಗಳು ಮಕ್ಕಳು ಪರಿಚಯಪಡಿಸಬೇಕಾಗಿದೆ. ಒಂದು ಆಶಯವನ್ನು ನಾಟಕದ ರೂಪದಲ್ಲಾಗಿಸುವ ಚಟುವಟಿಕೆಗಳಾಗಿವೆ ಆರನೇ ತರಗತಿಯಲ್ಲಿ ಪ್ರಾಧಾನ್ಯ ನೀಡಿರುವುದು. ಇದರೊಂದಿಗೆ ಸಿನಿಮಾದ ಸಾಧ್ಯತೆಗಳನ್ನು ಕುರಿತು ಕೂಡಾ ಉನ್ನತ ಮಂಡಲಗಳಲ್ಲಿ ಮಕ್ಕಳು ಪರಿಚಯ ಮಾಡಿಕೊಳ್ಳಬೇಕಾಗಿದೆ.

#### ಕಲಿಕಾ ಸಾಧನೆಗಳು

- ಮನುಷ್ಯರ ವಿವಿಧ ಚಲನೆಗಳನ್ನು ಕಂಡು ಅರ್ಥಮಾಡಿಕೊಂಡು ಸವಿಶೇಷತೆಗಳನ್ನು ಸ್ವಾಯತ್ತ ಮಾಡಿ ಅಗತ್ಯವಾದ ಸಂದರ್ಭಗಳಲ್ಲಿ ಉಪಯೋಗಿಸುವುದು.
- ತಾಳಾತ್ಮಕವಾದ ಚಲನೆಗಳ ಮೂಲಕ ಆಶಯ ವಿನಿಮಯವನ್ನು ನಡೆಸುವುದು.
- ಸಾಹಿತ್ಯ ರೂಪಗಳಿಗೆ ದೃಶ್ಯಾವತರಣೆ ನೀಡುವುದರಲ್ಲಿ ಶಬ್ದ, ಚಲನೆ, ಮಂಡನೆ ಎಂಬಿವುಗಳನ್ನು ಅರ್ಥಜ್ಞಾನದೊಂದಿಗೆ ಸನ್ನಿವೇಶಿಸುವುದು.

#### ಆಶಯ, ತಿಳುವಳಿಕೆ

- ಪ್ರತಿಯೊಂದು ಮನುಷ್ಯನಲ್ಲೂ ಸವಿಶೇಷತೆಗಳನ್ನು ಹೊಂದಿದ ಚಲನಾ ರೀತಿಗಳಿವೆ. ನಿರೀಕ್ಷಣೆಯ ಮೂಲಕ ಸ್ವಾಂಶಿಕರಿಸಿ ಚಲನಾ ವಿಶೇಷತೆಗಳು ಉಪಯೋಗಿಸುವುದರ ಮೂಲಕ ಸುಲಭದಲ್ಲಿ ಪಾತ್ರ ವ್ಯಕ್ತತೆಯನ್ನು ಪಡೆಯಬಹುದು.
- ಚಲನೆಗಳು ತಾಳಾತ್ಮಕವಾಗುವಾಗ ಆಶಯ ವಿನಿಮಯಕ್ಕಿರುವ ಸೌಂದರ್ಯವೂ ವ್ಯಕ್ತತೆಯೂ ಹೆಚ್ಚುವುದು.
- ಸಾಹಿತ್ಯ ರೂಪಗಳಿಗೆ ದೃಶ್ಯಾವತರಣೆಯನ್ನು ನೀಡಲು ಸಾಧ್ಯವಾಗುವುದು.
- ಶಬ್ಧ, ಚಲನೆ, ಅಭಿನಯ ಎಂಬಿವುಗಳನ್ನು ಉತ್ತಮವಾದ ಅರ್ಥಜ್ಞಾನದೊಂದಿಗೆ ದೃಶ್ಯ ರೂಪಗಳಲ್ಲಿ ಹೊಂದಿಸುವುದರೊಂದಿಗೆ ಆಶಯ ವಿನಿಮಯದ ವ್ಯಕ್ತತೆಯು ಸ್ಪಷ್ಟವಾಗುವುದು.

**ಕಲಿಕಾ ಚಟುವಟಿಕೆಗಳು**

- ಟೀಚರ್ ಕ್ಲಾಸಿನಲ್ಲಿ ನೀರಾಟದ ಬಾಯಿತಾಳ ಮಂಡಿಸುವುದು.
  (*ತಿತ್ತಿತ್ತಾರೋ ತಿತ್ತಿಥೈ.... ತಿಥೈ.... ತಿಥೈ... ತಕಥೈತೋಂ*)
- ಮಕ್ಕಳೂ ಟೀಚರ್ ಒಟ್ಟಾಗಿ ನೀರಾಟದ ಬಾಯಿತಾಳವನ್ನು ಹಾಡಿಕೊಂಡು ಚಲನೆಯನ್ನು ಸೃಷ್ಟಿಸುವುದು. ವಿವಿಧ ಉದ್ಯೋಗಗಳೊಂದಿಗೆ ಸಂಬಂಧಪಟ್ಟಿದ್ದು, ಅಲ್ಲದ್ದು ಹಲವು ತಾಳಗಳೂ ಬಾಯಿತಾಳಗಳೂ ಪ್ರಚಾರದಲ್ಲಿವೆ. ತಾಳಗಳನ್ನು ವ್ಯತ್ಯಾಸ ಮಾಡುವುದಕ್ಕನುಸರಿಸಿ ಅದನ್ನು ಮೂಲಾಧಾರವಾಗಿಸಿ ರೂಪೀಕರಿಸುವ ಪರಿಶೀಲನೆಗಳು ಬದಲಾಗುವುದು.
- ಇದೇ ರೀತಿಯಲ್ಲಿರುವ ಬಾಯಿತಾಳಗಳನ್ನು ಕಂಡುಹಿಡಿದು ದೃಶ್ಯಾವಿಷ್ಕಾರ ನಡೆಸುವುದು. ಬೇರೆ ಬೇರೆ ಉದ್ಯೋಗಗಳನ್ನು ಆಧಾರವಾಗಿಸಿಕೊಂಡಿರುವ ಪ್ರದರ್ಶನಗಳಿಗೆ ಪ್ರಾಧಾನ್ಯವನ್ನು ನೀಡುವುದು. ಮೆಲ್ಲ ಮೆಲ್ಲಗೆ ಬಾಯಿತಾಳಗಳಿಂದ ಸಂಗೀತ ಉಪಕರಣಗಳಿಗೆ ಮಕ್ಕಳನ್ನು ಗಮನಿಸಲು ಹೇಳುವುದು. (ಆಡಿಯೋ ವಿಶ್ವಲ್ ಸೌಲಭ್ಯಗಳನ್ನು ಪ್ರಯೋಜನಪಡಿಸುವುದು) ಉಪಕರಣ ಸಂಗೀತಕ್ಕೆ ಅನುಗುಣವಾಗಿ ಮಕ್ಕಳು ಹೆಜ್ಜೆ ಹಾಕುವುದು.
- ಈ ಚಟುವಟಿಕೆಯ ಮುಂದುವರಿಕೆಯಾಗಿ ದೋಣಿಹಾಡಿನ ನಾಲ್ಕು ಸಾಲುಗಳನ್ನು ನೀಡಿ ಅದರಲ್ಲಿನ ಆಶಯವನ್ನು ಅಭಿನಯಿಸಿ ತೋರಿಸಲು ಹೇಳುವುದು.
- ಅದರ ನಂತರ ಮಕ್ಕಳನ್ನು ನಾಲ್ಕು ಗುಂಪುಗಳಾಗಿಸಿ 4 ಉದ್ಯೋಗಕ್ಕೆ ಸಂಬಂಧಪಟ್ಟ ಹಾಡು ಗಳಲ್ಲಿ ಅಭಿನಯಿಸಲು ನಿರ್ದೇಶಿಸುವುದು. ವಿವಿಧ ಮನುಷ್ಯರ ವ್ಯತ್ಯಸ್ಥ ವೃತ್ತಿಗಳಿಗೆ ತಕ್ಕದ್ದಾಗಿರಬೇಕು ಹಾಡುಗಳು.
- ಮಕ್ಕಳ ಭಾಗವಹಿಸುವಿಕೆಯೂ ಆಶಯಾವಿಷ್ಕರಣ ಸಾಮರ್ಥ್ಯವೂ ಅಧ್ಯಾಪಿಕೆ ಮೌಲ್ಯಮಾಪನ ಮಾಡಬೇಕಾಗಿರುವುದು.
- ವಿವಿಧ ರೀತಿಯ ಹಾಡುಗಳು
  ಉದಾ: ಕೃಷಿ ಹಾಡುಗಳು, ನೀರಾಟ, ಮೀನು ಹಿಡಿಯುವವರ ಪರಂಪರಾಗತವಾದ ಹಾಡುಗಳು, ನೇಜಿ ನೆಡುವ ಹಾಡುಗಳು (ಪಾಡ್ದನಗಳು), ಕೊಯ್ಲು ಹಾಡುಗಳು, ಭಾರ ಎತ್ತುವಾಗ ಇರುವ ತಾಳಾತ್ಮಕವಾದ ಹಾಡುಗಳು)

## ಯೂನಿಟ್ – 2 : ಹೇಳಿದ್ದು ಹೇಳಿದ್ದು

**ಕಲಿಕಾ ಸಾಧನೆ**

- ಗೊಂಬೆಗಳನ್ನು ತಯಾರಿಸಲು, ಆಟವಾಡಿಸಲು ಪರಿಶೀಲಿಸುವುದು. ಉಚಿತವಾದ ಸಂಭಾಷಣೆಯನ್ನು ಮಾಡುವುದಕ್ಕೂ ಪ್ರತಿಭೆಯನ್ನು ಪಡೆಯಬೇಕು.
- ರಂಗಾವತರಣಗಳಲ್ಲಿ ವೈಚಾರಿಕತೆ ನೆಲೆನಿಲ್ಲಿಸುವುದು.
- ಸಂದರ್ಭಕ್ಕನುಗುಣವಾಗಿ ವೈಚಾರಿಕ ಸನ್ನಿವೇಶದೊಂದಿಗೆ ವಾಚಿಕಾಭಿನಯ ನಡೆಸುವುದು.

**ಆಶಯ, ತಿಳುವಳಿಕೆ**

- ವಿವಿಧ ಸಂದರ್ಭಗಳಲ್ಲಿ ಜೀವಜಾಲಗಳು ವಿಭಿನ್ನ ರೀತಿಯಲ್ಲಿ ವರ್ತನೆ ಮಾಡುವುದು.

- ಅನುಕರಿಸುವಾಗ ಸಂದರ್ಭಗಳು ಭಾವಾತ್ಮಕವಾಗಿ ಮಂಡಿಸುವುದಕ್ಕೆ ಜೀವಜಾಲಗಳಿಗೆ ವರ್ತನೆಯ ವಿಶೇಷಗಳು ಸಹಾಯ ಮಾಡುವುದು.
- ಸಮಾನವಾದ ವೈಚಾರಿಕ ನಿಲುವು ಅಭಿನಯಗಳನ್ನು ಉತ್ತಮಗೊಳಿಸುತ್ತದೆ.
- ಸಂಭಾಷಣೆಯೊಂದಿಗೆ ಶಬ್ದಗಳೂ ಸೇರುವಾಗ ಆಶಯ ವಿನಿಮಯ ಸುಖಕರವಾಗುವುದೆಂದು ತಿಳಿಯುವುದು.

**ಕಲಿಕಾ ಚಟುವಟಿಕೆ**

- ಮಕ್ಕಳನ್ನು ಎರಡು ಜನರಿರುವ ಗುಂಪುಗಳಾಗಿಸಬೇಕು. ಎಲ್ಲಾ ಮಕ್ಕಳೂ ಒಂದೇ ಸಮಯದಲ್ಲಿ ಮುಖಾಮುಖಿ ನೋಡಿ ಸ್ವಂತ ವಿಷಯಗಳಿಂದ ಹಿಡಿದು ಆಕ್ರೋಶದವರೆಗೆ ಸಂಭಾಷಣೆಯ ರೂಪದಲ್ಲಿ ಮಂಡಿಸುವುದು. (ಸ್ನೇಹ, ಕರುಣೆ, ಕೋಪ, ಬೇಡುವುದು ಮೊದಲಾದ ಎಲ್ಲಾ ರೀತಿಯ ವಿಕಾರಗಳು ನಿಶ್ಚಿತ ಸಮಯದಲ್ಲಿ ಅಧ್ಯಾಪಕರ ನಿರ್ದೇಶಕ್ಕನುಸರಿಸಿ ಮಂಡನೆಯಲ್ಲಿ ಒಳಗೊಳ್ಳಿಸಬಹುದು) ಒಂದೇ ಸಂಭಾಷಣೆ ಶಾಖೆಗಳಾಗಿವೆ ವ್ಯತ್ಯಸ್ಥ ವಿಕಾರದಲ್ಲಿ ಪ್ರಕಟಿಸುವುದು. ಇದರ ನಂತರ ಒಂದೋ ಎರಡೋ ಗುಂಪನ್ನು ಮಧ್ಯದಲ್ಲಿ ಕುಳ್ಳಿರಿಸಿ ಮಂಡಿಸುವುದು. (ಹಸ್ತಗೊಂಬೆಗಳನ್ನು ಉಪಯೋಗಿಸಿ ಆಟ ಆಡಿಸಬೇಕು)
- ಆಟದ ನಂತರ ಮಕ್ಕಳೊಂದಿಗೆ ನೆಲದಲ್ಲಿ ಮಗುಚಿ ಮಲಗಲು ಟೀಚರ್ ಹೇಳುವುದು. ಮಕ್ಕಳೊಂದಿಗೆ ಕಣ್ಣನ್ನು  ಮುಚ್ಚಿ ಶಬ್ದಗಳನ್ನು ಕೇಳಲು ನಿರ್ದೇಶಿಸುವುದು. ಮೊದಲು ಹತ್ತಿರವಿರುವುದು ನಂತರ ದೂರದಲ್ಲಿರುವವುಗಳು. ಬಹಳ ಸಣ್ಣ ಶಬ್ಧಗಳವರೆಗೆ ಕೇಳಿದ ನಂತರ ಅದರ ಕುರಿತು ಮಕ್ಕಳು ಮಾತನಾಡಲಿ. ಕೆಲವು ಮಕ್ಕಳು ಬಹಳ ಸಣ್ಣ ಶಬ್ದಗಳು ಕೂಡ ಕೇಳಿರಬಹುದು.
- ಮಕ್ಕಳ ಭಾಗವಹಿಸುವಿಕೆ, ಆಸಕ್ತಿ, ಶಬ್ದಗಳನ್ನು ಉಪಯೋಗಿಸುವುದರ ಆಸಕ್ತಿ ಎಂಬಿವುಗಳನ್ನು ನಿರೀಕ್ಷಿಸಿ ದಾಖಲಿಸುವುದಾಗಿದೆ.

***ಹಂತ – 2***

ಎಲ್ಲಾ ಮಕ್ಕಳನ್ನು ವೃತ್ತಾಕೃತಿಯಲ್ಲಿ ಕುಳಿತುಕೊಳ್ಳಿಸುವುದು. ಮೊದಲೇ ಆಡಿದ ಆಟಗಳಲ್ಲಿನ ಯಾವುದಾದರೂ ಒಂದು ಜೋಡಿಯನ್ನು ಗುಂಪಿನ ಮಧ್ಯದಲ್ಲಿ ಮುಖಾಮುಖಿಯಾಗಿ ಕುಳ್ಳಿರಿಸಿ ಚಟುವಟಿಕೆಯನ್ನು ನಡೆಸುವುದು. ಪ್ರೇಕ್ಷಕರು ಎರಡು ಪಕ್ಷದಲ್ಲಿರುವವರೊಂದಿಗೆ ಸೇರಿ ಪ್ರೋತ್ಸಾಹಿಸುವುದು.

- ಪಾಠಪುಸ್ತಕಗಳಲ್ಲಿರುವುದೋ ಅಲ್ಲದ್ದೋ ಆದ ಒಂದು ಸಂದರ್ಭವನ್ನು ಮಕ್ಕಳು ರೇಡಿಯೋ ನಾಟಕ ರೂಪದಲ್ಲಿ ಮಂಡಿಸಲಿ.
- ರೇಡಿಯೋ ನಾಟಕ ರೂಪದಲ್ಲಿ ಮಂಡಿಸಿದ ಆಶಯಗಳು ದೃಶ್ಯಭಾಷೆಯಾಗಿ ಹಸ್ತಗೊಂಬೆಗಳ ಆಟವಾಗಿ ಮಂಡಿಸುವುದು.
- ನಾಟಕ ವಾಚನ – ಪ್ರಸಿದ್ಧ ನಾಟಕಗಳಲ್ಲಿ ಆರಿಸಲ್ಪಟ್ಟ ಭಾಗಗಳನ್ನು ಮಕ್ಕಳಿಂದ ನಾಟಕ ಮಂಡನೆಯನ್ನು ಸಂಕಲ್ಪಿಸಿಕೊಂಡು ವಾಚನ ಮಾಡಬಹುದು. ಉದಾಹರಣೆ : ಮೊಡಣ್ಣನ ತಮ್ಮ, ನನ್ನ ಗೋಪಾಲ, ಕಿಂದರಿ ಜೋಗಿ (ಕುವೆಂಪು)

**ರೇಡಿಯೋ ನಾಟಕ**

ಒಂದು ಶ್ರಾವ್ಯ ನಾಟಕ ಮಂಡನೆಯಾಗಿದೆ ರೇಡಿಯೋ ನಾಟಕ. ದೃಶ್ಯ ಶ್ರಾವ್ಯವಾಗಿ ವೇದಿಕೆಯಲ್ಲಿ ಕಾಣುವ ನಾಟಕದಿಂದ ಲಭಿಸುವ ಅನುಭವ ಪರಮಾವಧಿ ಶಬ್ಧದ ಸಾಧ್ಯತೆಗಳು ಪ್ರಯೋಜನಪಡಿಸಿ ಅನುಭವಿಸುವು ದರಲ್ಲಿರುವ ಶ್ರಮ ರೇಡಿಯೋ ನಾಟಕದಲ್ಲಿ ಕಾಣಬಹುದು. ಅಗತ್ಯವಾದ ಯಥಾರ್ಥ ಶಬ್ಧಗಳನ್ನು ರೆಕಾರ್ಡ್ ಮಾಡಿ ಓರ್ಕಾಸ್ಟ್ರ ಉಪಯೋಗಿಸಿ ಶಬ್ಧದ ಎಲ್ಲಾ ಸಾಧ್ಯತೆಗಳನ್ನು ಪ್ರಯೋಜನಪಡಿಸಬೇಕು. ಕಾಣುವುದಿಲ್ಲ, ಕೇಳಿಸುವುದು ಮಾತ್ರವಾಗಿದೆ ಮಾಡುವುದು ಎಂಬ ಜ್ಞಾನ ರಚನೆಗಾರರಿಗೂ ನಿರ್ದೇಶಕರಿಗೂ ಅಭಿನಯಿಸುವವರಿಗೂ ಇರಬೇಕು. ಸಣ್ಣ ಚಲನೆಗಳೂ ನಿಶಬ್ಧಗಳೂ ಕೂಡಾ ಅರ್ಥವತ್ತಾಗಿ ಶ್ರೋತೃಗಳನ್ನು ಆಕರ್ಷಿಸುವುದಕ್ಕಾಗಿ ಈ ನಾಟಕ ತನ್ನದಾದ ಪ್ರಾಮಾಣಿಕತೆಯನ್ನು ತೋರಿಸುವ ವಿಭಾಗವಾಗಿ ನೆಲೆನಿಲ್ಲುವುದು.

## ಯೂನಿಟ್– 3 : ಸೃಜನಾತ್ಮಕ ನಾಟಕ_Creative Drama)

### ಮುನ್ನುಡಿ

ಇದೊಂದು ಗುಂಪು ಚಟುವಟಿಕೆಯಾಗಿದೆ. ಸ್ವತಂತ್ರವಾಗಿ ಆವಿಷ್ಕಾರ ನಡೆಸಲು ಸ್ವಾತಂತ್ರ್ಯ ನೀಡುವ ಮನೋಧರ್ಮ ಪ್ರೇರಿತವಾಗಿ ನಾಟಕಾಭಿನಯವನ್ನು ಸರ್ಗಾತ್ಮಕ ನಾಟಕ, ನಾಟಕೀಕರಣ (ಕಥೆಯೋ ಆಶಯವೋ ಯಾವುದಾದರೂ) ದೃತನಾಟಕ ನಿರ್ಮಿತಿ ಏನೆಲ್ಲಾ ಕರೆಯಬೇಕು. ಇಂದು ನೇತಾರನ ಅಥವಾ ಸಹಾಯಿಯ ಮಾರ್ಗ ನಿರ್ದೇಶನದಲ್ಲಿ ತತ್ಸಮಯ ವಿಕಾಸಗೊಳಿಸುವ ಒಂದು ನಾಟಕ ನಿರ್ಮಿತ ರೀತಿಯಾಗಿದೆ. ಮಕ್ಕಳ ಸ್ವಾಭಾವಿಕ ಆಟಗಳಿಂದಾಗಿವೆ ಸರ್ಗಾತ್ಮಕ ನಾಟಕಗಳುಂಟಾಗುವುದು. ಮನೋಧರ್ಮ ಪ್ರೇರಿತವಾದ ನಾಟಕಾಭಿನಯವಾಗಿದೆ ಇಲ್ಲಿ ನಡೆಯುವುದು. ಅದರಲ್ಲಿ ದೃತನಾಟಕ ಸೃಷ್ಟಿಗೆ ಸಾಮರ್ಥ್ಯವುಂಟಾಗುವುದರೊಂದಿಗೆ ಸೃಷ್ಟಿಯ ಆನಂದ ಅನುಭವಿಸಿ ತಿಳಿಯುವ ಅವಕಾಶ ಲಭಿಸುವುದು. ಮಗುವಿಗೆ ಇದೊಂದು ಸ್ವಯಂ ವಿಶ್ವಾಸ ನೀಡುವುದಾಗಿದೆ. ಅಥವಾ ಅನುಭವದ ಆವಿಷ್ಕಾರ. ಈ ಚಟುವಟಿಕೆಗೆ ವೇದಿಕೆಯ ಅಗತ್ಯವಿಲ್ಲ. ಲಭ್ಯವಾದ ಸ್ಥಳ ಸ್ವತಂತ್ರ್ಯವಾಗಿ ಉಪಯೋಗಿಸುವುದಾಗಿದೆ ಮಾಡುವುದು. ಆಶಯಗಳು ಹೊರಗೆ ತರುವುದಕ್ಕೆ ಅವುಗಳನ್ನು ಉಚಿತ ಪರಿಶೀಲನೆಯ ಮೂಲಕ ನಾಟಕ ರೂಪಕ್ಕೆ ಮಾಡುವುದಕ್ಕೂ ಒಂದು ನೇತಾರ ಅವರೊಂದಿಗೆ ನಿಂತು ಮಾರ್ಗ ನಿರ್ದೇಶನವನ್ನು ನೀಡಿದರೆ ಮಾತ್ರ ಸಾಕು.

***ಗುರಿ***

ಅಂತಿಮ ಮಂಡನೆಗಿಂತ ಭಾಗವಹಿಸುವುದಕ್ಕೆ ಪ್ರಾಧಾನ್ಯ
ಗುರಿಗಿಂತ ಮಾರ್ಗ
ಅನುಭವದ ಉಪಾದಿ

ಮೊದಲೇ ತಯಾರಿಸಿದ ಸ್ಕ್ರಿಪ್ಟೋ ಸಾಂಕೇತಿಕತ್ವವೋ ಇಲ್ಲ. ಮಕ್ಕಳ ಸೃಜನಾತ್ಮಕತೆ ಯ ಆಧಾರದಲ್ಲಿ ಭಾವನೆಗೆ ಅನುಸರಿಸಿದ ಮನೋಧರ್ಮದ ಮೂಲಕ ಬರುವುದಾಗಿದೆ ಸ್ಕ್ರಿಪ್ಟ್. ರಂಗಾಲಂಕಾರವೋ ಶೃಂಗಾರ ಸಂಪ್ರಾದಾಯವೋ ವೇಷವಿಧಾನಗಳೋ

ಏನೂ ಅಗತ್ಯವಿಲ್ಲ. ಲಭ್ಯವಾದ ವಸ್ತುಗಳನ್ನು ಶೃಂಗಾರಕ್ಕೋ ಪ್ರೋಪರ್ಟಿಗಳಿಗೋ ಉಪಯೋಗಿಸುವುದಕ್ಕೂ ತಪ್ಪಿಲ್ಲ. ಸಂವಿಧಾನಕರಿಗಿಂತ ದಾರಿತೋರುವ ವರಾಗಿದ್ದಾರೆ ಈ ಚಟುವಟಿಕೆಗೆ ಬೇಕಾಗಿರುವುದು. ಹೊರಗಿನ ವೀಕ್ಷಕರು ಸೃಜನಶೀಲತೆಯನ್ನು ಅಪಜಯಗೊಳಿಸಿಯಾರು ಎಂಬ ಕಾರಣಕ್ಕಾಗಿ ವೀಕ್ಷಕರಾಗಿ ಗುಂಪಿನ ಸದಸ್ಯರು ಮಾತ್ರ ಸಾಕಾಗುವುದು.

***ನಾಟಕ ರಚನೆಯ ವಿಕಾಸದ ಹಂತ***

1- ಸೃಷ್ಟಿ : ಒಂದು ಭಾವತಲವನ್ನು ಸೃಷ್ಟಿಸುವುದು. ಮಕ್ಕಳ ಪ್ರತಿಕ್ರಿಯೆ ಹೊರಗಿಗೂ ಪ್ರಚಾರ ಮಾಡುವುದಕ್ಕಾಗಿ ದಾರಿಯಾಗುವುದು.

2- ಸಂಘಟನೆ : ಅನ್ವೇಷಣೆಯ ಹಾಗೂ ಕಂಡುಹಿಡಿಯುವುದರ ಪ್ರಯೋಗವಾಗಿದೆ ಇಲ್ಲಿ ನಡೆಯುತ್ತಿರುವುದು.

ಘಟನೆಗಳಿಂದ ನಾಟಕದ ಅಂತರೀಕ್ಷಕ್ಕೆ ಅದರ ಮೂಲಕ ಪುನಃ ಘಟನೆಗೆ ಇರುವ ಒಂದು ಯಾತ್ರೆ. ಅದಕ್ಕಾಗಿ ಮಕ್ಕಳ ಇಂದ್ರೀಯಜ್ಞಾನ ಸ್ಪರ್ಶಿಸಲು ಅವಕಾಶ ನೀಡಬೇಕು. ಜೀವನದ ಅನುಭವಗಳು ಪುನಃ ಸೃಷ್ಟಿಸುವುದಕ್ಕೂ ಸಂಘಟನೆ (Conflict) ಮಂಡಿಸುವುದಕ್ಕೂ ಸವಾಲುಗಳನ್ನು ತೆಗೆದುಕೊಳ್ಳುವುದಕ್ಕೂ ಆಸಕ್ತಿಗಳನ್ನು ಹಂಚಿಕೊಳ್ಳುವುದಕ್ಕೂ ಸಂದರ್ಭವುಂಟಾಗಬೇಕು. ಸರಳವಾದ ಇತಿವೃತ್ತಗಳಾಗಿವೆ ಸ್ವೀಕರಿಸಬೇಕಾದುದು. ಅವು ಕಲ್ಪನೆಯೋ ಜೀವನಾನುಭವಗಳಿಂದ ಸ್ವೀಕರಿಸುವುದೋ ಆಗಬೇಕು.

-ತಾಳವನ್ನು ಆಧಾರವಾಗಿಟ್ಟಕೊಂಡಿರುವ ಆಟಗಳು

-ಕ್ರಿಯಾ ಪ್ರಧಾನವಾದ ಕಥಾಪಾತ್ರ ಚಿತ್ರೀಕರಣ

-ನಾಟಕ ಮಂಡನೆಗೆ ಸಹಾಯ ಮಾಡುವ ಆಶಯಗಳ ಮಂಡನೆ

-ಸರಳ ಇತಿವೃತ್ತ ವಿಕಾಸ

-ಬಾಯಿಪಾಠ ಮಾಡಿದ ಸಂಭಾಷಣೆಗಳು

-ಜೀವನ ಅನುಭವಗಳಿಂದ ಸಂದರ್ಭಗಳಿಗೆ ಆಯ್ಕೆ ಮಾಡುವುದು

ಸೃಜನಾತ್ಮಕವಾದ ಸಾಮರ್ಥ್ಯವನ್ನು ಉಪಯೋಗಿಸಿ ಮಕ್ಕಳಲ್ಲಿ ಅಂತರ್ಲೀನವಾಗಿರುವ ನಾಟಕ ಚೇತನವನ್ನು ವಿಕಾಸಗೊಳಿಸಲು ಸೃಜನಾತ್ಮಕ ನಾಟಕ ಚಟುವಟಿಕೆಗಳಿಗೆ ಸಾಧ್ಯವಾಗುವುದು.

## ಕಲಿಕಾ ಸಾಧನೆ

- ಸರಳ ಸಂದರ್ಭಗಳು, ಆಶಯಗಳು ಎಂಬಿವುಗಳನ್ನು ಮಂಡಿಸುವಾಗ ವಿನಿಮಯಕ್ಷಮತೆ ಹೆಚ್ಚುವುದಕ್ಕೆ ಅಂಗ ಚಲನೆಗಳು, ಭಾವಗಳು ಎಂಬಿವುಗಳನ್ನು ಉಪಯೋಗಿಸುವುದು.
- ವಾಸ್ತವ ವಿಚಾರಗಳನ್ನು ತಿಳಿದು ಸೂಚನೆಗಳ ಮೂಲಕ ಹಾಗೂ ಬಿಂಬಗಳ ಮೂಲಕ ಆಶಯಗಳನ್ನು ಆವಿಷ್ಕಾರಗೊಳಿಸುವುದು.

## ಆಶಯ, ಧಾರಣೆ

- ಸಂದರ್ಭಗಳು, ಆಶಯಗಳು ಎಂಬಿವುಗಳಿಗೆ ಮೌಖಿಕವೂ ದೃಶ್ಯಪರವೂ ಆದ ಹಂತಗಳಿವೆ.
- ಯೋಗ್ಯವಾದ ಭಾವಗಳನ್ನು ಸ್ವೀಕರಿಸಿದರೆ ಮೌಖಿಕವೂ ದೃಶ್ಯಪರವಾದ ಮಂಡನೆಗಳು ಫಲಪ್ರದವಾಗುವುದು.
- ಅಂಗಚಲನೆ, ವಾಚ್ಯಾಭಿನಯ, ಭಾವಗಳು ಎಂಬಿವು ಫಲಪ್ರದವಾಗಿ ಸಂಯೋಜಿಸಿ ರಂಗಾವತರಣ ನಿರ್ವಹಿಸಲು ಸಾಧ್ಯವಾಗುವುದು.
- ಆಶಯಗಳಿಗೆ ಯಥಾತಥಾ ಜೀವನ ಸಂಬಂಧಿಯಾದ ಹಂತವಿದೆ.
- ಬಿಂಬಗಳು, ಸೂಚನೆಗಳು ಎಂಬಿವುಗಳನ್ನು ಉಪಯೋಗಿಸಿ ಆಶಯಗಳನ್ನು ಮಂಡಿಸಲು ಸಾಧ್ಯವಾಗುವುದು.

- ಬಿಂಬಗಳು, ಸೂಚನೆಗಳು ಎಂಬಿವುಗಳನ್ನು ಫಲಪ್ರದವಾಗಿ ಉಪಯೋಗಿಸಿದರೆ ಆಶಯದ ಅನಾವರಣವಾಗುವುದು.

**ಕಲಿಕಾ ಚಟುವಟಿಕೆ**

- ಕಥೆಗಳನ್ನು ಇಷ್ಟಪಡದವರು ಯಾರೂ ಇರುವುದಿಲ್ಲ. ಅನೇಕ ಕಥೆಗಳನ್ನು ನಾವು ಓದುತ್ತೇವೆ, ಕೇಳುತ್ತೇವೆ. ಯಾವುದೆಲ್ಲಾ ಕಥೆಗಳು ಮಕ್ಕಳಿಗೆ ಗೊತ್ತಿವೆ? ಅಧ್ಯಾಪಿಕೆ ಕ್ಲಾಸಿನಲ್ಲಿ ಪ್ರಶ್ನಿಸುತ್ತಾರೆ. ಮಕ್ಕಳು ಹಲವು ಕಥೆಗಳನ್ನು ಹೇಳುತ್ತಾರೆ. ಮನುಷ್ಯರೂ ಮೃಗಗಳೆಲ್ಲಾ ಕಥಾಪಾತ್ರಗಳಾಗಿ ಬರುವ ಅನೇಕ ಕಥೆಗಳು ಅವರಿಗೆ ಗೊತ್ತಿದೆ. ಪಾಠಪುಸ್ತಕಗಳಲ್ಲೂ ಕಥೆಗಳು ಬೇಕಾದಷ್ಟಿವೆ. ಕೆಲವು ಕಥೆಗಳಿಗೆ ಅಭಿನಯ ಸಾಧ್ಯತೆ ಹೆಚ್ಚಿರುತ್ತದೆ. ಮಾನಸಿಕ ವಿಕಾಸಗಳು, ಚಿಂತೆಗಳನ್ನು ಮಂಡಿಸುವ ಕಥೆಗಳಿಗೆ ಅಭಿನಯ ಸಾಧ್ಯತೆ ಕಡಿಮೆಯಾಗುತ್ತದೆ.
- ಮಕ್ಕಳು ಕಳೆದು ಹೋಗುವ ಕಥೆಗಳಲ್ಲಿ ಹೆಚ್ಚು ಅಭಿನಯ ಸಾಧ್ಯತೆಗಳಿರುವ ಒಂದು ಕಥೆಯನ್ನು ಆರಿಸಲಿ. ಗುಂಪಿನಲ್ಲಾಗಬೇಕು ಈ ಆಯ್ಕೆ ನಡೆಯಬೇಕಾದುದು. ಆರಿಸಿದ ಕಥೆಯನ್ನು ಯಾವುದೆಲ್ಲಾ ರಂಗಗಳ ಮೂಲಕ ಮಂಡಿಸಬಹುದು ಎಂದು ಅನ್ವೇಷಿಸುವುದು. ಕಥಾಪಾತ್ರಗಳ2ುರಿತು ಕ್ಲಾಸಿನಲ್ಲಿ ಚರ್ಚೆ ಮಾಡುವುದು.
- ಹೇಗೆ ಇತ್ತು ಮಂಡನೆ?
- ತಪ್ಪೇನಾದರೂ ಸಂಭವಿಸಿತೇ?
- ಸ್ಥಳಕಾಲಗಳ ಮೂಲಕ ಸಂಭಾಷಣೆಗಳ ಆಯ್ಕೆಯಲ್ಲಿಯೂ ಅಪಘಾತ ಎನಿಸಿತೇ?
- ಇಂತಹ ಪ್ರಶ್ನೆಗಳೂ ಚರ್ಚೆಗಳೊಂದಿಗೆ ಒಂದು ಕಥೆ ನಾಟಕವಾಗುವಾಗ ಗಮನಿಸಬೇಕಾದ ಕಾರ್ಯಗಳಿಗೆ ಸಂಬಂಧಿಸಿದಂತೆ ಮಕ್ಕಳಿಗೆ ತಿಳುವಳಿಕೆಯನ್ನುಂಟುಮಾಡಬೇಕು. ಹೇಳುವ ಕಥೆಯನ್ನು ದೃಷ್ಟಿಕೋನಕ್ಕೆ ಬದಲಾಯಿಸುವಾಗ ಒಂದು ನಿಶ್ಚಿತ ಸ್ಥಳಕ್ಕೆ ನಿಶ್ಚಿತ ಸಮಯಕ್ಕೆ ಕಥೆಯನ್ನು ತರುವಂತೆ ಮಾಡುವುದು. ವಿವರಗಳಿಗೆ ಅನುಸಾರವಾಗಿ ಸಂಭಾಷಣೆಗಳೂ ಕ್ರಿಯೆಯೂ ಆಗಿದೆ ಅಲ್ಲಿ ನಡೆಯಬೇಕಾದುದು. ಉದಾಹರಣೆಯಾಗಿ ಆಮೆಯೂ ಮೊಲವೂ ಕಥೆಯಲ್ಲಿ ಮೊದಲು ದೊಡ್ಡ ಅಹಂಕಾರಿಯಾಗಿತ್ತು ಎಂದೂ ಕಥೆಯಲ್ಲಿ ಹೇಳುವ ಆಶಯವು ನಾಟಕದಲ್ಲಿ ಹೇಗೆ ಮಂಡಿಸಬಹುದು? ಅದಕ್ಕೆ ಒಂದು ಸ್ಥಳ ಬೇಕು. ಜೊತೆಗಿರುವ ಕಥಾಪಾತ್ರಗಳು ಯಾರೆಲ್ಲಾ ಎಂದು ತೀರ್ಮಾನಿಸಬೇಕು. ಮೊಲದ ಅಹಂಕಾರವನ್ನು ಯಾವೆಲ್ಲಾ ಉತ್ತಮ ಸಂಭಾಷಣೆಯ ಮೂಲಕ ಮಂಡಿಸಲು ಸಾಧ್ಯ ಎಂದು ಕಂಡುಹಿಡಿಯಬೇಕು. ಉದಾಹರಣೆಗೆ ಕಾಡಿನ ಒಂದು ಟೀ ಅಂಗಡಿಯಾಗಿರಬಹುದು. ಅಲ್ಲಿ ಮೊಲವೂ ಆನೆಯೂ ಕರಡಿ ಎಲ್ಲಾ ಪ್ರಾಣಿಗಳು ಇರುತ್ತವೆ. ತನ್ನ ವೇಗತೆಯ ಕುರಿತು ಮೊಲ ಅಹಂಕಾರದೊಂದಿಗೆ ಮಾತನಾಡುವುದು. ಆಗ ಆಮೆ ಬರುತ್ತದೆ. ಆಮೆಯ ಮೆಲ್ಲ ನಡಿಗೆಯ ಕುರಿತು ಮೊಲ ಎಲ್ಲರ ಮುಂದೆ ಇಟ್ಟು ಹಾಸ್ಯ ಮಾಡುವುದು.
- ಈ ರೀತಿಯಲ್ಲಿ ಆಶಯಗಳನ್ನು ಕ್ರಿಯೆಗಳಿಗೋ ಸಂಭಾಷಣೆಗಳಿಗೋ ಬದಲಾಯಿಸುವುದೇ ನಾಟದಲ್ಲಿ. ಕಥೆಯಲ್ಲಿನ ಎಲ್ಲಾ ಘಟನೆಗಳೂ ಸ್ಥಳಗಳೂ ನಾಟಕದಲ್ಲಿ ಉಪಯೋಗಿಸ ಬೇಕಾಗಿರುವುದಿಲ್ಲ. ನಿಖರವಾಗಿ ಅಗತ್ಯವಿರುವ ಸ್ಥಳಗಳನ್ನೂ ಕಥಾಪಾತ್ರಗಳನ್ನೂ

ಸಂಭಾಷಣೆಗಳನ್ನೂ ಸೇರಿಸಿಯಾಗಿದೆ ನಾಟಕವನ್ನು ರೂಪೀಕರಿಸುವುದು. (ಈ ಚರ್ಚೆಯ ಬೆಳಕಿನಲ್ಲಿ ಮೊದಲು ಮಂಡಿಸಿದ ನಾಟಕದಲ್ಲಿನ ಕೊರತೆಗಳನ್ನು ಪರಿಹರಿಸಿ ಉತ್ತಮಗೊಳಿಸಿ ಪುನಃ ಮಂಡಿಸಲು ಶ್ರಮಿಸುವಿರಲ್ಲವೇ. ಮಂಡಿಸಿದ ನಾಟಕದ ಲಿಖಿತಪಾಠ (ಸ್ಕ್ರಿಪ್ಟ್) ತಯಾರಿಸುವುದು.

- ***ಆಶಯಗಳನ್ನು ಸೂಚನೆಗಳ ಮೂಲಕ ಮಂಡಿಸುವ ರೀತಿ ನಾಟಕದಲ್ಲಿದೆಯೇ? ಇದಕ್ಕೆ ಏನಾದರೂ ಉದಾಹರಣೆಗಳು ನಿಮಗೆ ನಾಟಕ ಮಂಡನೆಯಿಂದ ಕಂಡುಹಿಡಿಯಲು ಸಾಧ್ಯವಾಯಿತೇ?***
- ಮಕ್ಕಳು ಕೆಲವು ಸೂಚನೆಗಳನ್ನು ಕಂಡುಹಿಡಿಯುವುದು. ಮೊಲದ ಹಾಗೂ ಆಮೆಯ ಓಟದ ಸ್ಪರ್ಧೆಯನ್ನು ನೇರವಾಗಿ ಮಾಡಬೇಕಾಗಿಲ್ಲ. ವೀಕ್ಷಕರ ಸಂತೋಷ ಮಾತ್ರ ಸಾಕಾಗಬಹುದು. ಒಂದು ಹುಂಜ, ಕೋಳಿಯ ಕೂಗುವಿಕೆ ಸುಪ್ರಭಾತದ ಕುರಿತು ಇರುವ ಸೂಚನೆಯನ್ನು ನೀಡುವುದು. ಒಂದು ಸೌಟು ಅಡುಗೆಮನೆಯ ಕುರಿತು ಇರುವ ಸೂಚನೆಯನ್ನು ನೀಡುವುದು. ಈ ರೀತಿಯಲ್ಲಿ ಚಿಹ್ನೆಗಳ ಮೂಲಕ, ಬಿಂಬಗಳ ಮೂಲಕ (ಇಮೇಜ್) ವಾಗಿದೆ ಆಶಯಗಳು ನಾಟಕದಲ್ಲಿ ಆವಿಷ್ಕರಿಸಲ್ಪಡುವುದು.

## ಯೂನಿಟ್ – 4 : ಸಿನಿಮಾ ಸಿನಿಮಾ

ವರ್ತಮಾನಕಾಲದಲ್ಲಿ ಸಿನೆಮಾವು ಪ್ರಧಾನವಾದ ಮಾಧ್ಯಮವೂ ಕಲಾರೂಪವೂ ಆಗಿದೆ. ರಂಗವೇದಿಕೆಯೊಂದಿಗೆ ಸಿನಿಮಾವನ್ನು ಪ್ರಾಧಾನ್ಯತೆಯಿಂದ ಕಾಣಬೇಕಾಗಿದೆ. ಸಿನಿಮಾಸ್ವಾದನೆಗೆ ಪ್ರಾಧಾನ್ಯ ನೀಡುವ ಚಟುವಟಿಕೆಯಾಗಿದೆ ಇದು.

### ಕಲಿಕಾ ಸಾಧನೆ

- ಸಿನಿಮಾ, ನಾಟಕ ಎಂಬಿವುಗಳನ್ನು ಕಾಣುವಾಗ ಬಿಂಬಗಳೂ ಸೂಚನೆಗಳಲ್ಲಿ ತಿಳಿದು ಆಸ್ವಾದಿಸುವುದು.

### ಆಶಯ, ತಿಳುವಳಿಕೆ

- ಬಿಂಬಗಳೂ ಸೂಚನೆಗಳೂ ಸಾರ್ಥಕವಾಗಿ ವಿನ್ಯಾಸಗೊಳಿಸಿ ಸಿನಿಮಾಗಳೂ ನಾಟಕಗಳೂ ಆಶಯ ವಿನಿಮಯವನ್ನು ನಡೆಸುವುದು.
- ಬಿಂಬಗಳ ಹಾಗೂ ಸೂಚನೆಗಳ ಅರ್ಥವನ್ನು ತಿಳಿದುಕೊಂಡಾಗಿದೆ ಸಿನಿಮಾ, ನಾಟಕ ಎಂಬಿವುಗಳನ್ನು ಆಸ್ವಾದಿಸುವುದು.

### ಕಲಿಕಾ ಚಟುವಟಿಕೆ

- ಮಕ್ಕಳ ಪ್ರಾಯಕ್ಕೂ ಭಾವನೆಗಳಿಗೂ ಹೊಂದುವ ಆಯ್ಕೆಮಾಡಿದ ಸಿನಿಮಾಗಳನ್ನು ತರಗತಿಯಲ್ಲಿ ಪ್ರದರ್ಶಿಸಬಹುದು. ಸಿನಿಮಾದಲ್ಲಿ ಬಿಂಬ ಪ್ರಾಧಾನ್ಯವಿರುವ ರಂಗಗಳನ್ನು ಪುನಃ ಪ್ರದರ್ಶಿಸುವುದು. ನಾಟಕದಲ್ಲಿನ ಸೂಚನೆಗಳು ಸಿನಿಮಾದಲ್ಲಿ ಹೇಗೆ ಪ್ರವರ್ತಿಸುವುದು

ಎಂಬ ರೀತಿಯಲ್ಲಿ ಚರ್ಚೆಯನ್ನು ಮಾಡಬಹುದಾಗಿದೆ. ಮಂಡನೆಯಲ್ಲಿಯೂ ಚರ್ಚೆಗಳಲ್ಲಿಯೂ ಮಕ್ಕಳ ಭಾಗವಹಿಸುವಿಕೆ, ಮೇಲ್ಮೆ ಎಂಬಿವುಗಳನ್ನು ಅಧ್ಯಾಪಕರು ಮೌಲ್ಯಮಾಪನಮಾಡಬೇಕಾಗಿದೆ.

- ಸಿನಿಮಾಗಳೊಂದಿಗೆ ಉತ್ತಮ ನಾಟಕಗಳ ವೀಡಿಯೋ ದೃಶ್ಯಗಳೂ ಪ್ರದರ್ಶಿಸಬಹುದು.
- ಆಸ್ವಾದನಾ ಟಿಪ್ಪಣಿಯಲ್ಲಿ ಏನೆಲ್ಲಾ ಇರಬೇಕು?
  - ಕಥಾಸಾರ
  - ಸಿನಿಮಾವನ್ನು ಆಸ್ವಾದಿಸುವಂತೆ ಮಾಡುವ ಘಟಕಗಳು
  - ಹಿನ್ನಲೆ ಸಂಗೀತದ ಸ್ವಾಧೀನ
  - ಉತ್ತಮ ದೃಶ್ಯಗಳು
- ಇದೇ ರೀತಿಯಲ್ಲಿ ನಾಟಕಗಳ ಆಸ್ವಾದನಾ ಟಿಪ್ಪಣಿಯನ್ನು ತಯಾರಿಸುವುದು.

# ಏಳನೇ ತರಗತಿ

## ಮುನ್ನುಡಿ

ನಾಟಕ ರಚನೆಯ ವಿವಿಧ ಹಂತಗಳನ್ನು ಪರಿಚಯಿಸಿಕೊಂಡು, ತರಬೇತಿಯನ್ನು ಪಡೆದೂ ಮಕ್ಕಳು 7ನೇ ತರಗತಿಗೆ ಬರುವುದು. ಭಾವಾವಿಷ್ಕಾರದ ಸೂಕ್ಷ್ಮತೆಯನ್ನು ಧೃಡಪಡಿಸುವ ಚಟುವಟಿಕೆಗಳಾಗಿವೆ ಈ ತರಗತಿಯಲ್ಲಿ ಒಳಗೊಳ್ಳಿಸಿರುವುದು. ವಿವಿಧ ಪಾಠಭಾಗಗಳ ನಾಟಕ ರೂಪಾಂತರವೂ ಮಂಡನೆಯೂ ನಾಟಕದ ಮಂಡನೆಯ ಸೂಕ್ಷ್ಮ ಹಂತಗಳನ್ನು ಅಭ್ಯಾಸ ಮಾಡುವುದಕ್ಕಿರುವ ಉಪಾದಿಯಾಗುವುದರೊಂದಿಗೆ ಕಲಿಕಾ ಚಟುವಟಿಕೆಗಳು ಹೆಚ್ಚು ಫಲಪ್ರದವಾಗುತ್ತದೆ. ಭಾಷಾ ಪಾಠಗಳೊಂದಿಗೆ ಶಾಸ್ತ್ರವೂ, ಗಣಿತಶಾಸ್ತ್ರವೂ, ನಾಟಕದ ಮೂಲಕ ಪ್ರದರ್ಶಿಸಲು ಸಾಧ್ಯವಾಗುವುದು. ಗೊಂಬೆ ನಿರ್ಮಾಣ, ಬೊಂಬೆಯಾಟ ಎಂಬಿವುಗಳು ಕಲಿಕಾ ಚಟುವಟಿಕೆಗಳ ಮೂಲಕ ಭಾಗವಾಗಿದೆ. ಸಿನಿಮಾಸ್ವಾದನೆಯನ್ನು ಇನ್ನು ಸ್ವಲ್ಪ ಗೌರವದೊಂದಿಗೆ ಈ ಹಂತಗಳ ಮೂಲಕ ಮುಂದುವರಿಸುವುದು.

## ಯೂನಿಟ್ – 1 : ನಾಯಕನನ್ನು ಅನುಕರಿಸಿ

ರಂಗಾವತರಣದಲ್ಲಿ ತಾಳವು ಹಾಗೂ ಚಲನೆಯ ನಡುವೆ ಇರುವ ಹೊಂದಿಕೆ ಪ್ರಧಾನವಾಗಿದೆ. ಸಂದರ್ಭಗಳ ಮೂಲಕ ಹಾಗೂ ಆಶಯಕ್ಕನುಸರಿಸಿರುವ ತಾಳಕ್ಕೆ ತಕ್ಕಂತಿರುವ ಚಲನೆಯು ರಂಗಾವರಣದ ಮಿಗತೆಯನ್ನು ಹೆಚ್ಚು ಮಾಡುತ್ತವೆ. ಇದೇ ರೀತಿಯಲ್ಲಿ ನಾವು ಒಳಗೊಳ್ಳಿಸುವುದ ಮೂಲಕ ಪರಿಶೀಲನೆಯ ಚಟವಚಿಕೆಗಳು.

### ಕಲಿಕಾ ಸಾಧನೆಗಳು

- ರಂಗ ಚಲನೆಗಳು, ರೂಪಕಲ್ಪನೆಗಳನ್ನು ಮಾಡುವಾಗ ತಾಳಾತ್ಮಕ ಚಲನೆಗಳನ್ನು ನಿರ್ಮಿಸಿ ಕ್ರಮವಾಗಿಸಿ ಉಪಯೋಗಿಸಬಹುದು.

### ಆಶಯ, ತಿಳುವಳಿಕೆ

- ತಾಳಕ್ಕೆ ಅನುಸರಿಸಿ ರಂಗ ಚಲನೆಗಳನ್ನು ರೂಪೀಕರಿಸುವುದು.
- ಸಂದರ್ಭಕ್ಕೂ ಆಶಯಕ್ಕೂ ಅನುಯೋಜ್ಯವಾದ ತಾಳಾತ್ಮಕ ಚಲನೆಗಳ ಮಿಗತೆಯನ್ನು ಹೆಚ್ಚಿಸುವುದು.
- ಚಲನೆಗಳನ್ನು ತಾಳಾತ್ಮಕವಾಗಿ ಕ್ರಮಗೊಳಿಸುವುದಕ್ಕಿರುವ ನೈಪುಣ್ಯ.

### ಚಟುವಟಿಕೆ

ನಾಲ್ಕೋ ಐದೋ ಗುಂಪುಗಳಾಗಿ ಮಕ್ಕಳನ್ನು ವಿಂಗಡಿಸುವುದು. ಪ್ರತಿಯೊಂದು ಗುಂಪಿಗೂ ಒಂದೊಂದು ಹಾಡನ್ನು ನೀಡುವುದು. ಒಂದನೆಯ ಹಾಡಿಗೆ ಅನುಗುಣವಾಗಿ ದೇಹ ಚಲನೆಗಳನ್ನು

ಕ್ರಮಗೊಳಿಸುವುದು. ಗುಂಪುಗಳು ಅನುಸರಿಸುವುದು. ನಂತರ ಎರಡನೇ ಮಗು ಹಾಡನ್ನು ಬದಲಾಯಿಸದೆ ದೇಹ ಚಲನೆಗಳನ್ನು ಹೊಸದಾಗಿ ಬದಲಾಯಿಸುವುದು. ಇನ್ನಿತರರು ಅನುಸರಿಸುವುದು. ಗುಂಪಿನನಲ್ಲಿರುವ ಎಲ್ಲಾ ಮಕ್ಕಳಿಗೂ ಅವಕಾಶವನ್ನು ಪಡೆಯುವವರೆಗೂ ಚಟುವಟಿಕೆಯನ್ನು ಮುಂದುವರಿಸಬೇಕು. ಇನ್ನಿತರ ಗುಂಪುಗಳು ಅವರಿಗೆ ಸಿಕ್ಕ ಹಾಡನ್ನು ಇದೇ ರೀತಿಯಲ್ಲಿ ದೇಹ ಚಲನೆಗಳೊಂದಿಗೆ ಮಂಡಿಸುವುದು.

ಪ್ರತಿಯೊಂದು ಮಗುವಿನ ಶರೀರ ಚಲನಾ ವಿನ್ಯಾಸವೂ ನೇತೃತ್ವವನ್ನು ನೀಡಲಿರುವ ಸಾಮರ್ಥ್ಯವನ್ನು ಮೌಲ್ಯಮಾಪನ ಮಾಡಬೇಕಾಗಿದೆ.

## ಯೂನಿಟ್ – 2 : ಪ್ರತಿಯೊಂದು ಸ್ಥಳಕಾಲಗಳಲ್ಲಿ

ಮನುಷ್ಯರಿಗೂ ಜೀವಜಾಲಗಳಿಗೂ ವಿವಿಧ ರೀತಿಯ ಚಲನೆಯ ಸಾಮರ್ಥ್ಯಗಳೂ ವ್ಯಕ್ತಿತ್ವವೂ ಇದೆ. ನಿರೀಕ್ಷಣೆ, ಸ್ವಾಯತ್ತತೆ, ಅನುಕರಣೆ ಎಂಬೀ ಹಂತಗಳ ಮೂಲಕ ಹಾದುಹೋಗುವ ಮಗು ಅಭಿನಯದ ಪ್ರಾಥಮಿಕ ಪಾಠಗಳಾಗಿರುತ್ತವೆ ಅಭ್ಯಸಿಸುವುದು. ಕಥಾಪಾತ್ರಗಳನ್ನು ಆವಿಷ್ಕರಿಸುವಾಗ ವೈವಿಧ್ಯತೆ ಬರಲು ಸಹಾಯ ಮಾಡುವುದಾಗಿದೆ ಈ ಚಟುವಟಿಕೆ.

### ಕಲಿಕಾ ಸಾಧನೆಗಳು

- ಕಥಾಪಾತ್ರಗಳಿಗೆ ವಿಶೇಷ ಚಲನೆಗಳು ಹಾಗೂ ಸ್ವಭಾವ ವಿಶೇಷತೆಗಳೂ ನೀಡಿ ವ್ಯಕ್ತಿತ್ವವನ್ನುಂಟುಮಾಡುವುದು.
- ಆಶಯಗಳು, ಸಂದರ್ಭಗಳು ಎಂಬಿವುಗಳನ್ನು ಕ್ಲಾಸಿನಲ್ಲಿ ಮಂಡಿಸುವಾಗ ಪರಸ್ಪರ ಸಹಾಯ, ಅವಲಂಬನೆ, ತ್ಯಾಗ ಎಂಬಿವುಗಳೊಂದಿಗೆ ಗುಂಪಿನಲ್ಲಿ ಭಾಗವಹಿಸುವುದು.
- ಕಥಾಪಾತ್ರಗಳನ್ನು ಆವಿಷ್ಕರಿಸುವಾಗ ನಿರೀಕ್ಷಣೆಯ ಮೂಲಕ ಆರ್ಜಿಸಿ ಮನುಷ್ಯರ ಹಾಗೂ ಇತರ ಜೀವಿಗಳ ಚಲನೆಗಳಲ್ಲಿರುವ ಸವಿಶೇಷ ಹಂತಗಳನ್ನು ಪ್ರಯೋಜನ ಪಡಿಸುವುದು.

### ಆಶಯ, ತಿಳುವಳಿಕೆ

- ವಿವಿಧ ಮನುಷ್ಯರಿಗೂ ಜೀವಜಾಲಗಳಿಗೂ ಭಿನ್ನವಾದ ಚಲನಾ ವಿಶೇಷಗಳಿಗೂ ವ್ಯಕ್ತಿತ್ವವಿರುವುದು.
- ಕಥಾಪಾತ್ರಗಳಿಗೆ ವಿಶೇಷ ವ್ಯಕ್ತಿತ್ವ ನೀಡುವುದಕ್ಕೆ ಕ್ರಮಗೊಳಿಸಿದ ಚಲನೆಗಳೂ ಸ್ವಭಾವ ವಿಶೇಷತೆಗಳೂ ಅಗತ್ಯವಿದೆ.
- ಕಥಾಪಾತ್ರದ ಸೃಷ್ಟಿಯ ಮೂಲಕ ಸೃಜನಾತ್ಮಕತೆಯನ್ನು ಹೆಚ್ಚಿಸಬಹುದಾಗಿದೆ.
- ಗುಂಪು ಚಟುವಟಿಕೆಯ ವಿಜಯಕ್ಕೆ ಪರಸ್ಪರ ಸಹಾಯ, ಪರಸ್ಪರ ಅವಲಂಬನೆ, ತ್ಯಾಗ ಎಂಬಿವು ಅಗತ್ಯವಾಗಿದೆ.
- ರಂಗ ಮಂಡನೆಯ ಜವಾಬ್ದಾರಿಯಿರುವ ಒಂದು ಗುಂಪು ಚಟುವಟಿಕೆಯಾಗಿದೆ.
- ರಂಗ ಮಂಡನೆಯ ಮೂಲಕ ಸ್ವಂತ ದೃಷ್ಟಿಕೋನಗಳೂ ಕ್ರಿಯಾಸಾಮರ್ಥ್ಯವೂ ಹೆಚ್ಚುವುದು.
- ಮನುಷ್ಯರಿಗೂ ಇನ್ನಿತರ ಜೀವಜಾಲಗಳಿಗೂ ಚಲನೆಗಳಲ್ಲಿ ಅವರೇ ಬೇರ್ಪಡಿಸಲು ಸಹಾಯ ಮಾಡುವ ವಿಶೇಷ ಕೈಚಳಕವಿದೆ.
- ಭಿನ್ನವ್ಯಕ್ತಿಗಳಲ್ಲೂ ಜೀವಿಗಳಲ್ಲೂ ಇರುವ ವಿಶೇಷ ಸಾಮರ್ಥ್ಯವನ್ನು ಸೇರಿಸಿ ಕಥಾಪಾತ್ರಗಳ ಮೂಲಕ ಸಾಮರ್ಥ್ಯಗಳು ವಿನ್ಯಾಸಗೊಳ್ಳುವುದಾಗಿದೆ.

- ಕಥಾಪಾತ್ರ ಆವಿಷ್ಕಾರದಲ್ಲಿ ಭಿನ್ನತೆ ಉಂಟು ಮಾಡಲು ಹೀಗೆ ನಿರ್ಮಿಸುವ ಸಾಮರ್ಥ್ಯ ವಿನ್ಯಾಸಗಳು ಸಹಾಯ ಮಾಡುತ್ತವೆ.

**ಚಟುವಟಿಕೆ**

1) ಒಂದು ಕಾಡಿನ ದೃಶ್ಯ. ಬೇರೆ ಬೇರೆ ಮೃಗಗಳೂ ಭಿನ್ನ ಸ್ವಭಾವಿಗಳಾದ ಮನುಷ್ಯರೂ ಅಲ್ಲಿದ್ದಾರೆ. ಅವರ ಸ್ವಭಾವಗಳೂ ಚಲನಾ ಸಾಮರ್ಥ್ಯಗಳೂ ಮಂಡಿಸುವುದು.
2) ಸಂತೆ, ಕರೆದಡ, ಆಸ್ಪತ್ರೆ ಎಂಬಿವುಗಳಲ್ಲಿನ ಘಟನೆಗಳನ್ನು ಪ್ರದರ್ಶಿಸುವುದು.

## ಯೂನಿಟ್ – 3 : ಪಾಠಭಾಗಗಳ ನಾಟಕಾವಿಷ್ಕಾರ

ಮಂಡನೆಯ ಕಲೆ ಎಂಬುದನ್ನು ಪಾಠಭಾಗಗಳನ್ನು ಮಕ್ಕಳ ಆಟಗಳಿಗೆ ತಲುಪಿಸುವುದಕ್ಕಿರುವ ಬೋಧನಾ ಮಾಧ್ಯಮವಾಗಿದೆ ನಾಟಕ. ಪಾಠಪುಸ್ತಕಗಳಲ್ಲಿರುವ ಕವಿತೆಗಳು ದೃಶ್ಯರೂಪದಲ್ಲಿ ರಂಗವನ್ನು ಮಂಡಿಸುವಾಗ ಆಶಯಗಳನ್ನು ನಾಟಕದ ರೂಪದಲ್ಲಿ ಮಾಡಲು, ಪಾಠಭಾಗಗಳು ನಾಟಕ ಎಂಬ ಮಾಧ್ಯಮದ ಮೂಲಕ ತಿಳಿಯಲು ಮಕ್ಕಳಿಗೆ ಅವಕಾಶವನ್ನುಂಟು ಮಾಡುವುದು.

**ಕಲಿಕಾ ಸಾಧನೆ**

- ಸಾಹಿತ್ಯ ರೂಪಗಳಿಗೆ ದೃಶ್ಯಾವಿಷ್ಕಾರ ತಯಾರಿಸುವಾಗ ಶಬ್ಧ, ಚಲನೆ, ಅಭಿನಯ ಎಂಬಿವುಗಳನ್ನು ಸರ್ಗಾತ್ಮಕವಾಗಿ ಉಪಯೋಗಿಸುವುದು.
- ವಾಚಿಕಾಭಿನಯ, ಸಂಗೀತ ಎಂಬಿವುಗಳನ್ನು ಉಪಯೋಗಿಸಿ ಬೊಂಬೆನಾಟಕ ಮಂಡಿಸುವುದು.

**ಆಶಯ, ತಿಳುವಳಿಕೆ**

- ಗುಂಪು ಚಟುವಟಿಕೆಯ ವಿಜಯಕ್ಕೆ ಪರಸ್ಪರ ಸಹಾಯ, ಪರಸ್ಪರ ಆಶ್ರಿತತ್ವ, ಬಿಟ್ಟುಕೊಡುವುದು ಎಂಬಿವುಗಳ ಅಗತ್ಯವಾಗಿದೆ.
- ರಂಗ ಮಂಡನೆಯ ಜವಾಬ್ದಾರಿಯಿರುವ ಒಂದು ಗುಂಪು ಚಟುವಟಿಕೆಯಾಗಿದೆ.
- ರಂಗ ಮಂಡನೆಯ ಮೂಲಕ ಸ್ವಂತ ದೃಷ್ಟಿಕೋನ, ಸೃಜನಾತ್ಮಕ ಸಾಮರ್ಥ್ಯವೂ ಹೆಚ್ಚುವುದು.
- ಮಂಡನೆಗಳು ಕಾಲ – ದೇಶಗಳಿಗೆ ಅನುಗುಣವಾಗಿರಬೇಕು.
- ಸ್ಥಳ–ಕಾಲ ಪ್ರಸ್ತುತ ಇರುವ ರಂಗ ಮಂಡನೆಗಳಿಗೆ ಸ್ವಾಗತ ಲಭಿಸುವುದು.

**ಚಟುವಟಿಕೆ**

ಮಲಯಾಳ, ಇಂಗ್ಲೀಷ್, ಹಿಂದಿ ಪಾಠಪುಸ್ತಕಗಳಿಂದ ಕವಿತೆಗಳು ಮಂಡನೆಗಾಗಿ ಆಯ್ಕೆ ಮಾಡುವುದು. ಗುಂಪುಗಳು ಕವಿತೆಯನ್ನು ವಿವರವಾಗಿ ಚರ್ಚೆ ಮಾಡುವುದು. ಇದು ವೃತ್ತರೂಪವನ್ನು ಸೃಷ್ಟಿಸುವುದು.

- ಯಾವ ಯಾವ ಸ್ಥಳಗಳಲ್ಲಿ,
- ಯಾವ ಯಾವ ಸ್ವಭಾವಗಳು,
- ಯಾರೆಲ್ಲಾ ಭಾಗವಹಿಸುವರು,
- ಅವರು ಏನು ಹೇಳುತ್ತಿರುವರು, ಮಾಡುವುದು

ಎಂದು ಹೀಗೆ ಈ ಆಶಯವನ್ನು ವಿಪುಲೀಕರಿಸುವುದು. ಕ್ರಮಾನುಗತವಾಗಿ ಸಂಭಾಷಣೆಗಳನ್ನು ಬರೆದು ತಯಾರಿಸುವುದು. ಅಗತ್ಯವಾದ ತಯಾರಿಗಳನ್ನು ನಡೆಸಿ ಶೃಂಗಾರದೊಂದಿಗೆ ನಾಟಕಗಳನ್ನು ಮಂಡಿಸುವುದು.

## ಯೂನಿಟ್ – 4 : ಬೊಂಬೆಗಳನ್ನು ನಿರ್ಮಿಸುವುದು.

ವೈವಿಧ್ಯವಾದ ಆಶಯಗಳನ್ನು ವೇದಿಕೆಯಲ್ಲಿ ಮಂಡಿಸುವುದು ದೊಡ್ಡ ಸವಾಲಾಗಿದೆ. ಸೂಚನೆಗಳ ಮೂಲಕ ನೈಜತೆಗಳು ಗ್ರಹಿಸುವುದಕ್ಕಿರುವ ಪ್ರೇಕ್ಷಕ ಗುಣವಾಗಿದೆ ಇಂತಹ ಹಂತಗಳಲ್ಲಿ ಪ್ರಯೋಜನಪಡಿಸುವುದು. ನಿಜವಾದ ಮನುಷ್ಯರ ಅವಸರದಿಂದ ಬೊಂಬೆಗಳನ್ನು ಉಪಯೋಗಿಸಿರುವ ಬೊಂಬೆ ನಾಟಕಗಳು ಸೂಚನೆಗಳ ಮೂಲಕವಿರುವ ಆಶಯಾವಿಷ್ಕಾರಕ್ಕೆ ಉತ್ತಮ ಉದಾಹರಣೆಯಾಗಿದೆ.

### ಕಲಿಕಾ ಸಾಧನೆಗಳು

- ಆಶಯ ಮಂಡನೆಗೆ ಸೂಚನೆಗಳು, ಉಪಯೋಗಿಸಿದ ಬಿಂಬಗಳು ಎಂಬಿವುಗಳನ್ನು ತಿಳಿದು ಚರ್ಚೆಗಳ ಟಿಪ್ಪಣಿಗಳನ್ನು ತಯಾರಿಸುವುದು.

### ಆಶಯ, ತಿಳುವಳಿಕೆ

- ಸೂಚನೆಗಳು, ಬಿಂಬಗಳು ಎಂಬಿವುಗಳನ್ನು ಉಪಯೋಗಿಸಿಯಾಗಿವೆ ಆಶಯಗಳಿಗೆ ದೃಶ್ಯ ಪಾಠಗಳನ್ನು ತಯಾರಿಸುವುದು.
- ಸೂಚನೆಗಳ ಹಾಗೂ ಬಿಂಬಗಳ ಅನುಯೋಜ್ಯತೆಯು ಅರ್ಥಸಾಮರ್ಥ್ಯವು ರಂಗ ಮಂಡನೆಗೆ ಸೊಬಗನ್ನು ನೀಡುವುದು.
- ವ್ಯಾಖ್ಯಾನ ಕ್ಷಮತೆಯನ್ನು ಹೆಚ್ಚಿಸುವುದು.
- ಬೊಂಬೆ ನಾಟಕಗಳು ಉತ್ತಮವಾದ ಆಶಯ ವಿನಿಮ ಮಾಧ್ಯಮವಾಗಿದೆ.

### ಚಟುವಟಿಕೆ

- ಪಾಠಭಾಗದಲ್ಲಿಯ ಕಥಾಪಾತ್ರಗಳಿಗೆ ಅನುಗುಣವಾಗಿ ಬೊಂಬೆಗಳನ್ನು ಮಕ್ಕಳು ಕಾಗದ, ಬಾಟಲಿಗಳು, ಬಟ್ಟೆಯ ತುಂಡುಗಳು, ಬಣ್ಣಗಳು, ಅಂಟು ಎಂಬಿವುಗಳನ್ನು ಉಪಯೋಗಿಸಿ ನಿರ್ಮಿಸುವುದು. ಈ ರೀತಿಯ ಚಟುವಟಿಕೆಗಳಲ್ಲಿ ಅಧ್ಯಾಪಕನ ನಿಖರವಾದ ಮೇಲ್ನೋಟವೂ ನಿರ್ದೇಶನಗಳೂ ದೃಢಪಡಿಸಬೇಕು.
- ಬೊಂಬೆನಾಟಕಕ್ಕೆ ಅಗತ್ಯವಾದ ಸಂಗೀತ ಕಂಡುಹಿಡಿಯುವುದು. ಶಾಲೆಯಲ್ಲಿನ ಆಡಿಯೋ ವಿಶ್ವಲ್ (ದೃಶ್ಯ) ಸಂವಿಧಾನಗಳ ಸಹಾಯದೊಂದಿಗೆ ಇದನ್ನು ಕಂಡುಹಿಡಿಯಬಹುದಾಗಿದೆ.

- ಮಕ್ಕಳು ತಯಾರಿಸಿದ ಮಾತುಗಳೂ ಕಥೆಗಳೂ ಸಂಗೀತವೂ ಸೇರಿಸಿ ಸಾಕಾಗುವ ರಿಹರ್ಸಲ್ ಮಾಡುವುದು. ರಿಹರ್ಸಲ್ ಹಂತಗಳಲ್ಲೂ ಅಗತ್ಯವಾದ ಬದಲಾವಣೆಗಳಾಗಬಹುದು. ಇದರ ನಂತರ ಗುಂಪುಗಳಾಗಿ ಮಂಡಿಸಬೇಕು. ಎಲ್ಲಾ ಗುಂಪುಗಳ ಮಂಡನೆಗೆ ನಂತರ ಹೊಸದಾದ ಮೌಲ್ಯಮಾಪನವನ್ನು ಉತ್ತಮಗೊಳಿಸಬೇಕಾಗಿರುವ ನಿರ್ದೇಶಗಳೂ ಇರಬೇಕು. ಚರ್ಚೆಗಳನ್ನು ಅಧ್ಯಾಪಕನು ಕ್ರೋಢೀಕರಿಸಬೇಕು. ನಾಟಕದ ಕ್ರಮಾನುಗತ, ಆಶಯದ ಪೂರ್ವಬಂಧ, ಸಂಭಾಷಣೆಗಳ ವ್ಯಕ್ತತೆ, ಭಾವ, ಬೊಂಬೆಯನ್ನು ನಿಯಂತ್ರಿಸುವುದಕ್ಕಿರುವ ಗಮನ ಎಂಬಿವುಗಳ ಚರ್ಚೆಯ ಭಾಗವಾಗಲು ಗಮನಿಸುವಿರಲ್ಲವೇ?
- ಚರ್ಚೆಯಲ್ಲಿನ ನಿರ್ದೇಶಗಳಿಗನುಸಾರವಾಗಿ ನಾಟಕ ರೂಪ ಪರಿಷ್ಕರಿಸಿ. ಬೊಂಬೆಗಳ ಪ್ರಕಾರ ಮಕ್ಕಳೇ ಕಥಾಪಾತ್ರಗಳಾಗಿ ವೇಷ ಧರಿಸಿ ನಾಟಕ ವೇದಿಕೆಯಲ್ಲಿ ಮಂಡಿಸುವುದು. ಮೊದಲೇ ತಿಳಿಸಿದ ಮಂಡನೆಯಾದುದರಿಂದ ವೇಷ, ರಂಗಸಜ್ಜೀಕರಣ, ಸಂಗೀತ ಎಂಬಿವುಗಳ ಕಾರ್ಯದಲ್ಲಿ ತಪ್ಪಿಲ್ಲದ ರೀತಿಯಲ್ಲಿ ಮಾಡುವುದು.
- ವೇಷ, ರಂಗಸಜ್ಜೀಕರಣ, ಸಂಗೀತ, ಬಿಂಬಗಳು, ಸೂಚನೆಗಳು ಎಂಬಿವುಗಳಿಗೆ ಅನುಯೋಜ್ಯತೆ, ಮಕ್ಕಳ ಭಾಗವಹಿಸುವಿಕೆ ಎಂಬಿವುಗಳನ್ನು ಅಧ್ಯಾಪಕರು ಮೌಲ್ಯಮಾಪನ ಮಾಡುವುದು.

## ಯೂನಿಟ್ – 5 : ಸಿನಿಮಾಸ್ವಾದನೆ

ಸಿನಿಮಾ ಎಂಬ ಕಲಾರೂಪವನ್ನು ವ್ಯಾಖ್ಯಾನ ವಿಶೇಷಗಳನ್ನು ತಿಳಿಯುವುದು ಕೇವಲ ಆಸ್ವಾದನೆಗಿಂತ ಹೊರಗೆ ಸೂಕ್ಷ್ಮವಾದ ನಿರೀಕ್ಷಣೆಯ ಮೂಲಕವಾಗಿದೆ. ಬಿಂಬಗಳನ್ನೂ ಸೂಚನೆಗಳನ್ನೂ ಉಪಯೋಗಿಸಿ ಸಿನಿಮಾ ಹೇಗೆ ಆಖ್ಯಾನವನ್ನು ನಿರ್ವಹಿಸುವುದು ಎಂದು ತಿಳಿಯುವುದಕ್ಕೆ ಸಹಾಯ ಮಾಡುವುದಕ್ಕೆ ಇರುವ ಚಟುವಟಿಕೆಯಾಗಿದೆ. ದೃಶ್ಯ ಸೂಚನೆಗಳಿಂದ ಪ್ರೇಕ್ಷಕ ಒಂದು ಆಶಯವನ್ನು ರೂಪೀಕರಿಸುವುದು ಹೇಗೆಂದು ತಿಳಿಯಲು ಅಧ್ಯಾಪಕನ ಸಹಾಯ ಅಗತ್ಯವಾಗಿದೆ.

### ಕಲಿಕಾ ಸಾಧನೆ

- ಸಿನಿಮಾ, ನಾಟಕ ಎಂಬಿವುಗಳನ್ನು ಕಾಣುವಾಗ ಬಿಂಬಗಳೂ ಸೂಚನೆಗಳೂ ತಿಳಿದು ಆಶಯ ವಿನಿಮಯವನ್ನು ನಡೆಸುವುದು.

### ಆಶಯ, ತಿಳುವಳಿಕೆ

- ಬಿಂಬಗಳೂ ಸೂಚನೆಗಳೂ ಸಾರ್ಥಕವಾಗಿ ವಿನ್ಯಾಸಗೊಳಿಸಿ ಸಿನಿಮಾಗಳು, ನಾಟಕಗಳು ಆಶಯ ವಿನಿಮಯವನ್ನು ನಡೆಸುವುದು.
- ಬಿಂಬಗಳ ಹಾಗೂ ಸೂಚನೆಗಳ ಅರ್ಥವನ್ನು ತಿಳಿದು ಸಿನಿಮಾ, ನಾಟಕ ಎಂಬಿವುಗಳನ್ನು ಆಸ್ವಾದಿಸುವುದು.

### ಚಟುವಟಿಕೆ

***ಚಲನಚಿತ್ರಮೇಳ***

- ಮಕ್ಕಳ ಕ್ಲಾಸಿಕ್ ಸಿನಿಮಾಗಳ ಒಂದು ಚಲನಚಿತ್ರ ಮೇಳ ಸಂಘಟಿಸುವುದು. ಕಥಾಸಂಗ್ರಹ

(ಸಿನೋಪ್ಸಿಸ್), ಬ್ಲೋಷರ್ ಎಂಬಿವುಗಳನ್ನು ಮೊದಲೇ ಮಕ್ಕಳಿಂದ ತಯಾರಿಸಿ ವಿತರಣೆ ಮಾಡಬೇಕು. 3 ಸಿನಿಮಾಗಳವರೆಗೆ ಮೇಳದಲ್ಲಿ ಒಳಗೊಳ್ಳಿಸಲಾಗುವುದು. ಮಧ್ಯದಲ್ಲಿ ಸಿನಿಮೆಯ ಸಂಬಂಧಿಸುವ ಒಂದು ಚರ್ಚೆ ಸಂಘಟಿಸಲು ಮರೆಯಬೇಡಿ. ಚಿಲ್ಡ್ರನ್ ಆಫ್ ಹೆವನ್, ಕಲರ್ ಆಫ್ ಪ್ಯಾರಡೈಸ್ ಮೊದಲಾದ ಮಕ್ಕಳ ಕಾಲ್ಸಿಕ್ಕ್‌ಗಳನ್ನು ಈ ಸಂದರ್ಭದಲ್ಲಿ ಪ್ರದರ್ಶಿಸುವುದು.

**ಆಸ್ವಾದನಾಟಿಪ್ಪಣಿ ತಯಾರಿಸುವುದು**

- ಚಲನಚಿತ್ರ ಮೇಳದ ನಂತರ, ಕಂಡ ಸಿನಿಮಾದ ಕುರಿತು ಆಸ್ವಾದನಾಟಿಪ್ಪಣಿ ತಯಾರಿಸುವುದಕ್ಕೆ ಮಕ್ಕಳಲ್ಲಿ ಹೇಳಬಹುದು. ಸಿನಿಮಾದ ವಿಷಯ, ಸಂವಿಧಾನ, ಅಭಿನಯ, ಸಂಭಾಷಣೆ, ಹಿನ್ನೆಲೆ ಸಂಗೀತ, ಛಾಯಾಗ್ರಹಣೆ ಎಂಬೀ ಘಟಕಗಳು ಆಸ್ವಾದನಾ ಟಿಪ್ಪಣಿಯಲ್ಲಿ ಪರಿಗಣಿಸಲು ಅಧ್ಯಾಪಕರಿಕೆ ಬೇಕಾದ ನಿರ್ದೇಶಗಳು ಮತ್ತು ಪ್ರಾಯೋಗಿಕ ತರಬೇತಿಯನ್ನು ನೀಡಬೇಕು.

# ಅನುಬಂಧ –1: ಚಟುವಟಿಕೆ ಕ್ಯಾಲೆಂಡರ್

## ಚಿತ್ರಕಲೆ – ಐದನೇ ತರಗತಿ

| ತಿಂಗಳು | ಯೂನಿಟ್ | ಕಲಿಕಾ ಸಾಧನೆಗಳು | ಪಿರೀಡ್ |
|---|---|---|---|
| ಜೂನ್ | 1 | ಪ್ರಕೃತಿಯನ್ನು ನಿರೀಕ್ಷಿಸಿಕೊಂಡು ಗೆರೆ ಮತ್ತು ಬಣ್ಣಗಳನ್ನುಪಯೋಗಿಸಿಕೊಂಡು ಚಿತ್ರರಚನೆ ಮಾಡುವುದು. | 2 |
| ಜುಲೈ | 1 | ಪ್ರಕೃತಿಯನ್ನು ನಿರೀಕ್ಷಿಸಿಕೊಂಡು ಗೆರೆ ಮತ್ತು ಬಣ್ಣಗಳನ್ನುಪಯೋಗಿಸಿಕೊಂಡು ಚಿತ್ರರಚನೆ ಮಾಡುವುದು. | 2 |
| ಆಗಸ್ಟ್ | 2 | ವಸ್ತುಗಳ ರೂಪದಲ್ಲಿರುವ ತಿಳುವಳಿಕೆ, ಅನುಪಾತ, ವರ್ಣವಿನ್ಯಾಸ ಎಂಬಿವುಗಳಲ್ಲಿ ಸಾಮರ್ಥ್ಯ ಪಡೆಯುವುದು. | 2 |
| ಸೆಪ್ಟಂಬರ್ | 2 | ವಸ್ತುಗಳ ರೂಪದಲ್ಲಿರುವ ತಿಳುವಳಿಕೆ, ಅನುಪಾತ, ವರ್ಣವಿನ್ಯಾಸ ಎಂಬಿವುಗಳಲ್ಲಿ ಸಾಮರ್ಥ್ಯ ಪಡೆಯುವುದು. | 2 |
| ಒಕ್ಟೋಬರ್ | 3 | ಪ್ರಾಥಮಿಕ ಬಣ್ಣಗಳನ್ನು ಉಪಯೋಗಿಸಿ ಚಿತ್ರರಚನೆ ಮಾಡುವುದು | 2 |
| ನವಂಬರ್ | 4 | ಸ್ವತಂತ್ರವೂ ನಿರ್ದೇಶಕ ರೀತಿಯಲ್ಲಿರುವ ಆಶಯಗಳ ಕುರಿತಾದ ಚಿತ್ರೀಕರಣ | 2 |
| ಡಿಸೆಂಬರ್ | 5 | ಜ್ಯಾಮಿತೀಕರಣಗಳಿಂದ ರೂಪಗಳನ್ನುಂಟುಮಾಡುವುದು | 2 |
| ಜನವರಿ | 6 | ತ್ರಿಮಾನ ಸ್ವಭಾವವಿರುವ ವಸ್ತುಗಳ ನಿರ್ಮಾಣದಲ್ಲಿ ಏರ್ಪಡುವುದು | 2 |
| ಫೆಬ್ರುವರಿ | 7 | ಕಂಪ್ಯೂಟರ್ ಗ್ರಾಫಿಕ್ಸ್‌ನ ಸಾಧ್ಯತೆಗಳನ್ನು ಪರಿಚಯಿಸಿಕೊಳ್ಳುವುದು. | 2 |
| ಮಾರ್ಚ್ | 7 | ಕಂಪ್ಯೂಟರ್ ಗ್ರಾಫಿಕ್ಸ್‌ನ ಸಾಧ್ಯತೆಗಳನ್ನು ಪರಿಚಯಿಸಿಕೊಳ್ಳುವುದು. | 2 |

# ಚಿತ್ರಕಲೆ – ಆರನೇ ತರಗತಿ

| ತಿಂಗಳು | ಯೂನಿಟ್ | ಕಲಿಕಾ ಸಾಧನೆಗಳು | ಪಿರೀಡ್ |
|---|---|---|---|
| ಜೂನ್ | 1 | ಪ್ರಕೃತಿಯನ್ನು ನಿರೀಕ್ಷಿಸಿಕೊಂಡು ಗೆರೆಗಳನ್ನು, ಬಣ್ಣಗಳನ್ನು ಉಪಯೋಗಿಸಿಕೊಂಡು ಚಿತ್ರರಚನೆ ನಡೆಸಲು ಸಾಧ್ಯವಾಗುತ್ತದೆ. | 2 |
| ಜುಲೈ | 2 | ವಸ್ತುಗಳ ರೂಪದಲ್ಲಿರುವ ಧಾರಣೆ, ಅನುಪಾತ, ವರ್ಣವಿನ್ಯಾಸ ಎಂಬಿವುಗಳಲ್ಲಿ ಬೋಧನೆ ಪಡೆಯುವುದು. | 2 |
| ಆಗಸ್ಟ್ | 3 | ಪ್ರಾಥಮಿಕ ಬಣ್ಣಗಳಿಂದ ದ್ವಿತೀಯ ಬಣ್ಣಗಳನ್ನುಂಟುಮಾಡಲಾಗುತ್ತದೆ | 2 |
| ಸೆಪ್ಟಂಬರ್ | 4 | ಜೀವಜಾಲಗಳ ಮಾದರಿ, ಅನುಪಾತ ಎಂಬಿವುಗಳನ್ನು ಒಳಗೊಂಡು ಚಿತ್ರರಚನೆ ನಡೆಸುವುದು | 2 |
| ಒಕ್ಟೋಬರ್ | 5 | ಮನುಷ್ಯಶರೀರದ ಭಂಗಿ ತಿಳಿದುಕೊಂಡು ಚಿತ್ರೀಕರಣ ಮಾಡಲಾಗುವುದು. | 2 |
| ನವಂಬರ್ | 6 | ಕೃತ್ಯತೆ, ರೂಪಭದ್ರತೆ, ಅಲಂಕಾರ ಎಂಬಿವುಗಳನ್ನು ಒಳಪಡಿಸಿ ಮಾದರಿಯನ್ನು ಚಿತ್ರೀಕರಿಸುವುದು. | 2 |
| ಡಿಸೆಂಬರ್ | 7 | ವಿವಿಧ ಮಾಧ್ಯಮಗಳಲ್ಲಿ ತ್ರಿಮಾನಶಿಲ್ಪಗಳನ್ನು ನಿರ್ಮಿಸುವುದು. | 2 |
| ಜನವರಿ | 7 | ವಿವಿಧ ಮಾಧ್ಯಮಗಳಲ್ಲಿ ತ್ರಿಮಾನಶಿಲ್ಪಗಳನ್ನು ನಿರ್ಮಿಸುವುದು. | 2 |
| ಫೆಬ್ರುವರಿ | 8 | ಸಮಕಾಲೀನ ಘಟನೆಗಳನ್ನು ಆಧಾರವಾಗಿಸಿಕೊಂಡು ಕಾರ್ಟೂನುಗಳನ್ನು ರಚಿಸುವುದು. | 2 |
| ಮಾರ್ಚ್ | 8 | ಸಮಕಾಲೀನ ಘಟನೆಗಳನ್ನು ಆಧಾರವಾಗಿಸಿಕೊಂಡು ಕಾರ್ಟೂನುಗಳನ್ನು ರಚಿಸುವುದು. | 2 |

# ಚಿತ್ರಕಲೆ – ಏಳನೇ ತರಗತಿ

| ತಿಂಗಳು | ಯೂನಿಟ್ | ಕಲಿಕಾ ಸಾಧನೆಗಳು | ಪಿರೀಡ್ |
|---|---|---|---|
| ಜೂನ್ | 1 | ಪ್ರಕೃತಿಯಲ್ಲಿರುವ ವಸ್ತುಗಳನ್ನು ನಿರೀಕ್ಷಿಸಿಕೊಂಡು ಅವುಗಳನ್ನು ಜ್ಯಾಮಿತಿಯ ಆಕೃತಿಯಲ್ಲಿ ತಿಳಿದುಕೊಂಡು ಚಿತ್ರರಚಿಸಿ ಬಣ್ಣ ಕೊಡುವುದು. | 2 |
| ಜುಲೈ | 2 | ತ್ರಿಮಾನರೂಪಗಳ ನೆರಳು ಮತ್ತು ಬೆಳಕನ್ನು ಸಂಬಂಧಿಸಿ ಅವುಗಳ ಪತನರೀತಿ ತಿಳಿದುಕೊಂಡು ಸ್ವಾಭಾವಿಕ ಚಿತ್ರೀಕರಣ ನಡೆಸುವುದು | 2 |
| ಆಗಸ್ಟ್ | 3 | ಅನುಪಾತದಲ್ಲಿರುವ ಮನುಷ್ಯರೂಪಗಳನ್ನು ಲಘುಚಟುವಟಿಕೆಗಳು ಮಾಡುವ ರೀತಿಯಲ್ಲಿ ಚಿತ್ರ ರಚಿಸುವುದು. | 2 |
| ಸೆಪ್ಟಂಬರ್ | 4 | ನಿರೀಕ್ಷಣಾರೀತಿಯ ಸವಿಶೇಷತೆಗಳನ್ನು ಒಳಗೊಂಡಿರುವ ಚಿತ್ರ ರಚಿಸುವುದು. | 2 |
| ಒಕ್ಟೋಬರ್ | 5 | ಅನುಪಾತದಲ್ಲಿರುವ ಮನುಷ್ಯರೂಪಗಳನ್ನು ಲಘುಚಟುವಟಿಕೆಗಳು ಮಾಡುವ ರೀತಿಯಲ್ಲಿ ಚಿತ್ರ ರಚಿಸುವುದು. | 2 |
| ನವಂಬರ್ | 6 | ನಿರೀಕ್ಷಣಾರೀತಿಯ ಸವಿಶೇಷತೆಗಳನ್ನು ಒಳಗೊಂಡಿರುವ ಚಿತ್ರ ರಚಿಸುವುದು. | 2 |
| ಡಿಸೆಂಬರ್ | 7 | ತ್ರಿಮಾನಶಿಲ್ಪಗಳನ್ನು ವಿವಿಧ ಮಾದರಿಯಲ್ಲಿ ನಿರ್ಮಿಸುವುದು. | 2 |
| ಜನವರಿ | 8 | ಆಶಯಗಳನ್ನು ಆಧಾರವಾಗಿಸಿಕೊಂಡು ಬಣ್ಣದ ಚಿತ್ರಗಳನ್ನು ರಚಿಸುವುದು. | 2 |
| ಫೆಬ್ರುವರಿ | 9 | ಆಶಯಗಳಿಗೆ ಸಂಬಂಧಿಸಿದ ಕಾರ್ಟೂನುಗಳನ್ನು ಬರೆಯುವುದು. | 2 |
| ಮಾರ್ಚ್ | 9 | ಕತೆ, ಕವಿತೆ ಇವುಗಳ ಪ್ರಧಾನ ಸಂದರ್ಭಗಳನ್ನು ಆಶಯಗಳಮೂಲಕ ಚಿತ್ರಿಸುವುದು. | 2 |

## ಸಂಗೀತ – ಐದನೇ ತರಗತಿ

| ತಿಂಗಳು | ಯೂನಿಟ್ | ಕಲಿಕಾಸಾಧನೆಗಳು | ಪಿರೀಡ್ |
|---|---|---|---|
| ಜೂನ್ | 1 | ವೈವಿಧ್ಯಮಯವಾದ ಬಾಯಿತಾಳಗಳನ್ನು ಕೇಳುವುದು ತಾಳ ಹಾಕುವುದು | 2 |
| ಜುಲೈ | 1 | ವೈವಿಧ್ಯಮಯವಾದ ಬಾಯಿತಾಳಗಳನ್ನು ಕೇಳುವುದು ತಾಳ ಹಾಕುವುದು | 2 |
| ಆಗಸ್ಟ್ | 2 | ಸಂಗೀತೋಪಕರಣಗಳು ಆಲಾಪನೆ ಎಂಬಿವುಗಳೊಂದಿಗೆ ವ್ಯತ್ಯಸ್ತ ಹಾಡುಗಳನ್ನು ಕೇಳುವುದು. ಕೇಳುವ ಹಾಡುಗಳನ್ನು ಗುಣುಗುಟ್ಟುತ್ತಾ ಅನುಕರಣೆಮಾಡುವುದು. | 2 |
| ಸೆಪ್ಟೆಂಬರ್ | 2 | ಸಂಗೀತೋಪಕರಣಗಳು ಆಲಾಪನೆ ಎಂಬಿವುಗಳೊಂದಿಗೆ ವ್ಯತ್ಯಸ್ತ ಹಾಡುಗಳನ್ನು ಕೇಳುವುದು. ಕೇಳುವ ಹಾಡುಗಳನ್ನು ಗುಣುಗುಟ್ಟುತ್ತಾ ಅನುಕರಣೆಮಾಡುವುದು. | 2 |
| ಒಕ್ಟೋಬರ್ | 3 | ಗುಂಪಾಗಿ ಹಾಡುವಾಗ ಆಲಾಪನೆಯ ವೇಗ, ಉಚ್ಚಾರಣೆ, ಭಾವಗಳೊಂದಿಗೆ ವ್ಯತ್ಯಸ್ತವಾಗಿ ಹಾಡಲು ಸಾಧ್ಯವಾಗುತ್ತದೆ. | 2 |
| ನವಂಬರ್ | 3 | ಗುಂಪಾಗಿ ಹಾಡುವಾಗ ಆಲಾಪನೆಯ ವೇಗ, ಉಚ್ಚಾರಣೆ, ಭಾವಗಳೊಂದಿಗೆ ವ್ಯತ್ಯಸ್ತವಾಗಿ ಹಾಡಲು ಸಾಧ್ಯವಾಗುತ್ತದೆ. | 2 |
| ಡಿಸೆಂಬರ್ | 4 | ಮಾತೃಭಾಷೆಯೊಂದಿಗೆ ಇತರ ಭಾಷೆಯ ಹಾಡುಗಳು, ದೇಶಭಕ್ತಿಗೀತೆಗಳು ಎಂಬಿವುಗಳನ್ನು ಆಶಯಕ್ಕನುಯೋಗ್ಯವಾಗಿ ರಾಗ, ಭಾವಗಳೊಂದಿಗೆ ಹಾಡುವುದು. | 2 |
| ಜನವರಿ | 4 | ರಾಷ್ಟ್ರಗೀತೆ, ದೇಶಭಕ್ತಿಗೀತೆ ಇವುಗಳನ್ನು ನಿರ್ದಿಷ್ಟವಾದ ಸಲಹೆಗಳನ್ನು ಪಾಲಿಸಿಕೊಂಡು ಸಮಯಬಂಧಿತವಾಗಿ ಹಾಡುವುದು. | 2 |
| ಫೆಬ್ರುವರಿ | 5 | ಕವಿತೆಯ ಆಶಯಕ್ಕನುಗುಣವಾಗಿ ರಾಗ ಕಂಡುಹಿಡಿಯುವುದು. ಭಾವಾತ್ಮಕವಾಗಿ ಹಾಡುವುದು. | 4 |

# ಸಂಗೀತ – ಆರನೇ ತರಗತಿ

| ತಿಂಗಳು | ಯೂನಿಟ್ | ಕಲಿಕಾಸಾಧನೆಗಳು | ಪಿರೀಡ್ |
|---|---|---|---|
| ಜೂನ್ | 1 | ಸಂಗೀತದ ಮೌಲ್ಯವನ್ನು ಒಳಪಡಿಸಿ ಹಾಡುವುದು | 2 |
| ಜುಲೈ | | ಒಂಟಿಯಾಗಿಯೂ ಗುಂಪಾಗಿಯೂ ಆಲಾಪಿಸಿದಾಗ ಬರುವ ಶ್ರುತಿಭಂಗ, ತಾಳಭಂಗ ಇವುಗಳನ್ನು ತಿಳಿಯಲು ಸಾಧ್ಯವಾಗುತ್ತದೆ. | 2 |
| ಜುಲೈ | | ರಾಷ್ಟ್ರಗೀತೆ ಸ್ಪಷ್ಟವಾಗಿ ಹಾಡಲು ಸಾಧ್ಯವಾಗುತ್ತದೆ | 2 |
| ಆಗಸ್ಟ್ | 2 | ಶ್ರುತಿ ಉಪಕರಣಗಳ ಸಹಾಯದಿಂದ ಹಾಡಲು ಸಾಧ್ಯವಾಗುತ್ತದೆ. | 2 |
| ಸೆಪ್ಟೆಂಬರ್ | | ಲಘುಸಂಗೀತ, ಲಘುವಾದ್ಯ ಉಪಕರಣಗಳ ಸಹಾಯದಿಂದ ಹಾಡಲು ಸಾಧ್ಯವಾಗುತ್ತದೆ. | 2 |
| ಒಕ್ಟೋಬರ್ | | ವ್ಯತ್ಯಸ್ಥವಾದ ಜನಪದಗೀತೆ, ಬಾಯಿತಾಳಗಳನ್ನು ಸುಂದರವಾಗಿ ಹಾಡುತ್ತಾರೆ. | 2 |
| ಒಕ್ಟೋಬರ್ | 3 | ಇತರ ಭಾಷೆಯಲ್ಲಿರುವ ದೇಶಭಕ್ತಿಗೀತೆಗಳನ್ನು ಹಾಡುತ್ತಾರೆ. | 2 |
| ನವಂಬರ್ | | ವಿವಿಧ ಕವಿತೆಗೆ ರಾಗ ಹಾಕಿ ಹಾಡುತ್ತಾರೆ. | 2 |
| ಡಿಸೆಂಬರ್ | | ವಿವಿಧ ಭಾಷೆಯಲ್ಲಿರುವ ದೇಶಭಕ್ತಿಗೀತೆಗಳನ್ನು ಒಟ್ಟುಸೇರಿಸಿ ಹಾಡುತ್ತಾರೆ. | 2 |
| ಜನವರಿ | 4 | ವಿವಿಧ ದಿನಾಚರಣೆಗೆ ಆಯ್ಕೆಮಾಡಿದ ಹಾಡುಗಳಿಗೆ ರಾಗ ನೀಡಿ ಹಾಡುತ್ತಾರೆ. | 2 |
| ಫೆಬ್ರುವರಿ | | ವಿವಿಧ ದಿನಾಚರಣೆಗೆ ಆಯ್ಕೆಮಾಡಿದ ಹಾಡುಗಳಿಗೆ ರಾಗ ನೀಡಿ ಹಾಡುತ್ತಾರೆ. | 2 |

## ಸಂಗೀತ – ಏಳನೇ ತರಗತಿ

| ತಿಂಗಳು | ಯೂನಿಟ್ | ಕಲಿಕಾಸಾಧನೆಗಳು | ಪಿರೀಡ್ |
|---|---|---|---|
| ಜೂನ್ | 1 | ವಿವಿಧ ರಾಗದಲ್ಲಿರುವ ಹಾಡುಗಳನ್ನು ಹಾಡುವುದು | 2 |
| ಜುಲೈ | 1 | ವಿವಿಧ ರಾಗದಲ್ಲಿರುವ ಹಾಡುಗಳನ್ನು ಹಾಡುವುದು | 2 |
| ಆಗಸ್ಟ್ | 2 | ಕರ್ನಾಟಕ ಸಂಗೀತಕ್ಕೆ ಸಂಬಂಧಪಟ್ಟ ಕತೆಗಳು, ಚರಿತ್ರೆ ಅನುಭವಗಳು ಎಂಬಿವುಗಳನ್ನು ವಿಶದೀಕರಿಸಲು ಸಾಧ್ಯವಾಗುತ್ತವೆ. | 2 |
| ಆಗಸ್ಟ್ | 2 | ಕರ್ನಾಟಕ ಸಂಗೀತಕ್ಕೆ ಸಂಬಂಧಪಟ್ಟ ಕತೆಗಳು, ಚರಿತ್ರೆ ಅನುಭವಗಳು ಎಂಬಿವುಗಳನ್ನು ವಿಶದೀಕರಿಸಲು ಸಾಧ್ಯವಾಗುತ್ತವೆ. | 2 |
| ಸೆಪ್ಟೆಂಬರ್ | 3 | ಹಾಡು ಕರೋಕೆ ನಿರ್ದೇಶನದೊಂದಿಗೂ, ವಾದ್ಯೋಪಕರದೊಂದಿಗೂ ಹಾಡುತ್ತಾರೆ | 2 |
| ಒಕ್ಟೋಬರ್ | 3 | ಹಾಡು ಕರೋಕೆ ನಿರ್ದೇಶನದೊಂದಿಗೂ, ವಾದ್ಯೋಪಕರದೊಂದಿಗೂ ಹಾಡುತ್ತಾರೆ | 2 |
| ಒಕ್ಟೋಬರ್ | 4 | ಸಂಗೀತದ ಮೂಲಗಳಾದ ಸಪ್ತಸ್ವರಗಳಿಂದ ಮೊದಲುಗೊಂಡು ಅಲಂಕಾರವರೆಗಿರುವುದರಲ್ಲಿ ಕೆಲವು ಆಲಾಪಿಸುತ್ತಾರೆ. | 2 |
| ನವೆಂಬರ್ | 4 | ಸಂಗೀತದ ಮೂಲಗಳಾದ ಸಪ್ತಸ್ವರಗಳಿಂದ ಮೊದಲುಗೊಂಡು ಅಲಂಕಾರವರೆಗಿರುವುದರಲ್ಲಿ ಕೆಲವು ಆಲಾಪಿಸುತ್ತಾರೆ. | 2 |
| ಡಿಸೆಂಬರ್ | 5 | ಪಾಠಪುಸ್ತಕದಲ್ಲಿರುವ ಕವಿತೆಗಳಿಗೊ ಇತರ ಕವಿತೆಗಳಿಗೊ ಆಶಯಗಳನ್ನು ಒಳಪಡಿಸಿ ರಾಗ ಕೊಟ್ಟು ಹಾಡಲು ಹೇಳುತ್ತಾರೆ. | 2 |
| ಜನವರಿ | 5 | ಪಾಠಪುಸ್ತಕದಲ್ಲಿರುವ ಕವಿತೆಗಳಿಗೊ ಇತರ ಕವಿತೆಗಳಿಗೊ ಆಶಯಗಳನ್ನು ಒಳಪಡಿಸಿ ರಾಗ ಕೊಟ್ಟು ಹಾಡಲು ಹೇಳುತ್ತಾರೆ. | 2 |
| ಫೆಬ್ರುವರಿ | 5 | ಪಾಠಪುಸ್ತಕದಲ್ಲಿರುವ ಕವಿತೆಗಳಿಗೊ ಇತರ ಕವಿತೆಗಳಿಗೊ ಆಶಯಗಳನ್ನು ಒಳಪಡಿಸಿ ರಾಗ ಕೊಟ್ಟು ಹಾಡಲು ಹೇಳುತ್ತಾರೆ. | 2 |

# ನೃತ್ಯ – ಐದನೇ ತರಗತಿ

| ತಿಂಗಳು | ಯೂನಿಟ್ | ಕಲಿಕಾ ಸಾಧನೆಗಳು | ಪಿರೀಡ್ |
|---|---|---|---|
| ಜೂನ್ | 1 | ಚಿರಪರಿಚಿತವಾದ ನೃತ್ಯರೂಪಗಳ ವಿಶೇಷತೆಗಳನ್ನು ಗುರುತಿಸುತ್ತೇವೆ. | 2 |
| ಜುಲೈ | 1 | ಚಿರಪರಿಚಿತವಾದ ನೃತ್ಯರೂಪಗಳ ವಿಶೇಷತೆಗಳನ್ನು ಗುರುತಿಸುತ್ತೇವೆ. | 2 |
| ಆಗಸ್ಟ್ | 2 | ಐದುನಡೆಗಳಿರುವ ಹೆಜ್ಜೆಗಳನ್ನು ಗುರುತಿಸುತ್ತೇವೆ. | 2 |
| ಸೆಪ್ಟೆಂಬರ್ | 2 | ಐದುನಡೆಗಳಿರುವ ಹೆಜ್ಜೆಗಳನ್ನು ಗುರುತಿಸುತ್ತೇವೆ. | 2 |
| ಒಕ್ಟೋಬರ್ | 3 | ಬೆರಳನ್ನು ಉಪಯೋಗಿಸಿ ಸುತ್ತಲಿರುವ ವಸ್ತುಗಳನ್ನು ಅನುಕರಿಸುತ್ತೇವೆ. | 2 |
| ನವೆಂಬರ್ | 3 | ಬೆರಳನ್ನು ಉಪಯೋಗಿಸಿ ಸುತ್ತಲಿರುವ ವಸ್ತುಗಳನ್ನು ಅನುಕರಿಸುತ್ತೇವೆ. | 2 |
| ಡಿಸೆಂಬರ್ | 4 | ವಿದ್ಯಾಲಯಗಳ ವಿಶೇಷ ದಿವಸಗಳಲ್ಲಿ ಯೋಗ್ಯವಾದ ನೃತ್ಯರೂಪಗಳನ್ನು ಮಾಡಲು ಸಾಧ್ಯವಾಗುತ್ತದೆ. | 2 |
| ಜನವರಿ | 4 | ವಿದ್ಯಾಲಯಗಳ ವಿಶೇಷ ದಿವಸಗಳಲ್ಲಿ ಯೋಗ್ಯವಾದ ನೃತ್ಯರೂಪಗಳನ್ನು ಮಾಡಲು ಸಾಧ್ಯವಾಗುತ್ತದೆ. | 2 |
| ಫೆಬ್ರುವರಿ | 5 | ಪಾಠಭಾಗಗಳಿಗೆ ಯೋಗ್ಯವಾದ ನೃತ್ಯಗಳನ್ನು ಮಾಡಲು ಸಾಧ್ಯವಾಗುತ್ತದೆ. | 2 |
| ಮಾರ್ಚ್ | 5 | ಪಾಠಭಾಗಗಳಿಗೆ ಯೋಗ್ಯವಾದ ನೃತ್ಯಗಳನ್ನು ಮಾಡಲು ಸಾಧ್ಯವಾಗುತ್ತದೆ. | 2 |

## ನೃತ್ಯ – ಆರನೇ ತರಗತಿ

| ತಿಂಗಳು | ಯೂನಿಟ್ | ಕಲಿಕಾ ಸಾಧನೆಗಳು | ಪಿರೀಡ್ |
|---|---|---|---|
| ಜೂನ್ | 1 | ಜಾನಪದ ನೃತ್ಯರೂಪಗಳನ್ನು ಮಂಡಿಸುವುದು | 2 |
| ಜುಲೈ | 1 | ಕ್ರಮಬದ್ಧವಾದ ಸೂತ್ರಗಳನ್ನು ಕಂಡು ಅನುಕರಣೆ ಮಾಡುವುದು. | 2 |
| ಆಗಸ್ಟ್ | 2 | ಸುತ್ತಲಿರುವ ವಸ್ತುಗಳನ್ನು ಕೈಮುದ್ರೆಯ ಮೂಲಕ ಮಂಡಿಸುವುದು. | 2 |
| ಸೆಪ್ಟೆಂಬರ್ | 3 | ಮೂಲಮುದ್ರೆಗಳು (ಅಸಂಯುಕ್ತ)ಕಾಣುವುದು ಅನುಕರಿಸುವುದು | 2 |
| ಒಕ್ಟೋಬರ್ | 3 | ಮೂಲಮುದ್ರೆಗಳು (ಅಸಂಯುಕ್ತ)ಕಾಣುವುದು ಅನುಕರಿಸುವುದು | 2 |
| ನವೆಂಬರ್ | 4 | ಅಸಂಯುಕ್ತ ಹಸ್ತಗಳನ್ನುಪಯೋಗಿಸಿ ಆಶಯವಿನಿಮಯ ನಡೆಸುವುದು | 2 |
| ಡಿಸೆಂಬರ್ | 4 | ಅಸಂಯುಕ್ತ ಹಸ್ತಗಳನ್ನುಪಯೋಗಿಸಿ ಆಶಯವಿನಿಮಯ ನಡೆಸುವುದು | 2 |
| ಜನವರಿ | 5 | ಕಥಕ್ಕಳಿಶೃಂಗಾರ ಆಹಾರ್ಯಾಭಿನಯ ಎಂಬಿವುಗಳ ಕುರಿತು ವಿವರ ಸಂಗ್ರಹ ನಡೆಸುವುದು. | 2 |
| ಫೆಬ್ರುವರಿ | 6 | ಸ್ವತಃ ತಯಾರಿಸಿದ ಬಾಯಿತಾಳಗಳಿಗೆ ನೃತ್ಯಹೆಜ್ಜೆಗಳನ್ನಿಡುವುದು (ಸೃಷ್ಟಿ) | 2 |
| ಮಾರ್ಚ್ | 6 | ಸ್ವತಃ ತಯಾರಿಸಿದ ಬಾಯಿತಾಳಗಳಿಗೆ ನೃತ್ಯಹೆಜ್ಜೆಗಳನ್ನಿಡುವುದು (ಸೃಷ್ಟಿ) | 2 |

# ನೃತ್ಯ – ಏಳನೇ ತರಗತಿ

| ತಿಂಗಳು | ಯೂನಿಟ್ | ಕಲಿಕಾ ಸಾಧನೆಗಳು | ಪಿರೀಡ್ |
|---|---|---|---|
| ಜೂನ್ | 1 | ಕೇರಳದ ನೃತ್ಯರೂಪಗಳು ಶಾಸ್ತ್ರೀಯ ಮತ್ತು ಜಾನಪದ ಎಂಬ ರೀತಿಯಲ್ಲಿ ವಿಭಾಗಿಸುತ್ತಾರೆ. | 2 |
| ಜುಲೈ | 1 | ಕೇರಳದ ನೃತ್ಯರೂಪಗಳು ಶಾಸ್ತ್ರೀಯ ಮತ್ತು ಜಾನಪದ ಎಂಬ ರೀತಿಯಲ್ಲಿ ವಿಭಾಗಿಸುತ್ತಾರೆ. | 2 |
| ಆಗಸ್ಟ್ | 2 | ನಿಶ್ಚಿತ ಹಾಡುಗಳಿಗೆ ಒಟ್ಟಾಗಿ ನೃತ್ಯ ಮಾಡುವುದು. | 2 |
| ಸೆಪ್ಟೆಂಬರ್ | 2 | ನಿಶ್ಚಿತ ಹಾಡುಗಳಿಗೆ ಒಟ್ಟಾಗಿ ನೃತ್ಯ ಮಾಡುವುದು. | 2 |
| ಒಕ್ಟೋಬರ್ | 3 | ನೃತ್ಯಸಂಕೇತಗಳನ್ನುಪಯೋಗಿಸಿ ಆಶಯಗಳನ್ನು ವಿನಿಮಯ ಮಾಡುವ ರೀತಿಯಲ್ಲಿರುರಂಗಪ್ರವೇಶ ಮಾಡುತ್ತಾರೆ. | 2 |
| ನವೆಂಬರ್ | 3 | ನೃತ್ಯಸಂಕೇತಗಳನ್ನುಪಯೋಗಿಸಿ ಆಶಯಗಳನ್ನು ವಿನಿಮಯ ಮಾಡುವ ರೀತಿಯಲ್ಲಿ ರಂಗಪ್ರವೇಶ ಮಾಡುತ್ತಾರೆ. | 2 |
| ಡಿಸೆಂಬರ್ | 4 | ಮೂಲಮುದ್ರೆಗಳು (ಸಂಯುಕ್ತ) ತಿಳಿಯುವುದು. | 2 |
| ಜನವರಿ | 4 | ಮೂಲಮುದ್ರೆಗಳು (ಸಂಯುಕ್ತ) ತಿಳಿಯುವುದು. | 2 |
| ಫೆಬ್ರುವರಿ | 5 | ವ್ಯತ್ಯಸ್ಥ ತಾಳಗಳಲ್ಲಿ ಹೆಜ್ಜೆಯಿಡಲು ಸಾಮರ್ಥ್ಯ ಪಡೆಯುತ್ತಾರೆ. | 2 |
| | | | |

# ನಾಟಕ– ಐದನೇ ತರಗತಿ

| ತಿಂಗಳು | ಯೂನಿಟ್ | ಕಲಿಕಾಸಾಧನೆಗಳು | ಪಿರೀಡ್ |
|---|---|---|---|
| ಜೂನ್ | ಕ್ರಮೀಕರಿಸಿದ ಚಲನೆಗಳು | • ಪ್ರಕೃತಿಯ ಜೀವಜಾಲಗಳನ್ನು ಮತ್ತು ಮನುಷ್ಯರನ್ನು ನಿರೀಕ್ಷಿಸಿಕೊಂಡು ಅವರ ಚಲನೆಗಳನ್ನು ಅಂಗೀಕರಿಸಿ ಸಂದರ್ಭ ಬರುವಾಗ ಪ್ರದರ್ಶಿಸುತ್ತಾರೆ.<br>• ಸಂದರ್ಭಕ್ಕನುಸಾರವಾಗಿ ತಾಳಕ್ಕನುಸಾರಾವಾಗಿ ಚಲನೆಯನ್ನು ಉಪಯೋಗಿಸುತ್ತಾರೆ. | 2 |
| ಜುಲೈ | ಕ್ರಮಬದ್ಧವಾದ ಸಂಭಾಷಣೆ | • ಆಶಯಗಳು, ಸಂದರ್ಭಗಳು ಎಂಬಿವುಗಳೊಂದಿಗೆ ಶಬ್ದ, ಚಲನೆ, ಅಭಿನಯ ಎಂಬಿವುಗಳನ್ನು ಸನ್ನಿತಗೊಳಿಸುತ್ತಾರೆ. | 2 |
| ಆಗಸ್ಟ್ | ಸಂಭಾಷಣೆಯನ್ನು ಕ್ರಮಬದ್ಧವಾಗಿಡಿ (ಮುಂದುವರಿಯು) ಕವಿತೆಯಿಂದ ಮತ್ತು ಗಾದೆಗಳಿಂದ ನಾಟಕವನ್ನು ರೂಪುಗೊಳಿಸುವುದು. | • ಲಘು ಸಂದರ್ಭಗಳು, ಮೂರ್ತವಾದ ಆಶಯಗಳು ಎಂಬಿವುಗಳನ್ನು ಸ್ವಾಭಾವಿಕವಾಗಿ ಕ್ಲಾಸಲ್ಲಿ ಮಂಡಿಸುತ್ತಾರೆ.<br>• ಸಂದರ್ಭಕ್ಕನುಸಾರವಾಗಿ ವಾಚಕ ಮತ್ತು ಲಿಖಿತ ಸಂಭಾಷಣೆಗಳನ್ನು ತಯಾರಿಸುತ್ತಾರೆ.<br>• ವಿಕಾರಪೂರ್ವಕ ಶಬ್ದಾಭಿನಯ ನಡೆಸುತ್ತಾರೆ. | 2 |
| ಸೆಪ್ಟೆಂಬರ್ | ಕವಿತೆಯಿಂದಲೂ ಗಾದೆಯಿಂದಲೂ ನಾಟಕವನ್ನು ರೂಪುಗೊಳಿಸಿ ಮುಂದುವರಿದು – | | 2 |
| ಒಕ್ಟೋಬರ್ | ಋತುಭೇದಗಳೊಂದಿಗೆ | • ನಾಟಕೀಯ ಆಟಗಳಲ್ಲಿ ಮೈಮರೆತು ಶರೀರ, ಶಬ್ದ, ಭಾವ ಎಂಬಿವುಗಳನ್ನು ಯೋಗ್ಯವಾದ ರೀತಿಯಲ್ಲಿ ಆವಿಷ್ಕಾರಿಸುತ್ತಾರೆ. | 2 |
| ನವೆಂಬರ್ | ಋತುಭೇದಗಳೊಂದಿಗೆ– | | 2 |
| ಡಿಸೆಂಬರ್ | | | 2 |
| ಜನವರಿ | ಸಿನಿಮಾ ಪ್ರದರ್ಶನ | • ಸಿನಿಮಾ ನಾಟಕ ಎಂಬಿವುಗಳನ್ನು ನೋಡಿ ಆಸ್ವಾದಿಸುತ್ತಾರೆ. | 2 |
| ಫೆಬ್ರುವರಿ | ಸಿನಿಮಾ ಪ್ರದರ್ಶನ– ಆಸ್ವಾದನೆ ಟಿಪ್ಪಣಿ ಮಂಡನೆ | | 2 |
| ಮಾರ್ಚ್ | | | 2 |

# ನಾಟಕ – ಆರನೇ ತರಗತಿ

| ತಿಂಗಳು | ಯೂನಿಟ್ | ಕಲಿಕಾಸಾಧನೆಗಳು | ಪಿರೀಡ್ |
|---|---|---|---|
| ಜೂನ್ | ಬಾಯಿತಾಳ | • ಮನುಷ್ಯನ ವ್ಯತ್ಯಸ್ತ ಚಲನೆಗಳನ್ನು ಕಂಡು ತಿಳಿದು ಸವಿಶೇಷತೆಗಳನ್ನು ಅಂಗೀಕರಿಸಿ ಸಂದರ್ಭಗಳಿಗನುಸಾರವಾಗಿ ಉಪಯೋಗಿಸುತ್ತಾರೆ.<br>• ತಾಳಬದ್ಧವಾದ ಚಲನೆಗಳಮೂಲಕ ಆಶಯವಿನಿಮಯ ನಡೆಸುತ್ತಾರೆ.<br>• ಸಾಹಿತ್ಯರೂಪಗಳಿಗೆ ದೃಶ್ಯಾವಿಕ್ಷಣೆ ನೀಡುವುದರಲ್ಲಿ ಶಬ್ದ, ಚಲನೆ, ಮಂಡನೆ ಎಂಬಿವುಗಳನ್ನು ಅರ್ಥಪೂರ್ವಕವಾಗಿ ಸನ್ನಿಹಿತಗೊಳಿಸುತ್ತಾರೆ. | 2 |
| ಜುಲೈ | ಬಾಯಿತಾಳ (ಮುಂದುವರಿಕೆ).<br>ಹೇಳಿ ಹೇಳಿ | | 2 |
| ಆಗಸ್ಟ್ | ಹೇಳಿ ಹೇಳಿ (ಮುಂದುವರಿಕೆ) | • ಸಂದರ್ಭದ ಹಿನ್ನೆಲೆಯಲ್ಲಿ ಬೆರಳುಗೊಂಬೆಗಳಿಗೆ ಸಂಭಾಷಣೆಯುಂಟುಮಾಡಿ ಮಂಡಿಸುತ್ತಾರೆ.<br>• ರಂಗಪ್ರವೇಶಗಳಲ್ಲಿ ವಿಕಾರತೆಯನ್ನು ನೆಲೆನಿಲ್ಲಿಸುತ್ತಾರೆ.<br>• ಸಂದರ್ಭಕ್ಕನುಗುಣವಾಗಿ ವಿಕಾರ ಆವೇಶದಿಂದ ವಾಚ್ಯಾಭಿನಯ ನಡೆಸುತ್ತಾರೆ. | 2 |
| ಸೆಪ್ಟೆಂಬರ್ | ಹೇಳಿ ಹೇಳಿ (ಮುಂದುವರಿಕೆ) | | 2 |
| ಒಕ್ಟೋಬರ್ | ನೈಸರ್ಗಿಕ ನಾಟಕ | • ಲಘು ಸಂದರ್ಭಗಳು, ಆಶಯಗಳು ಎಂಬಿವುಗಳನ್ನು ಪ್ರದರ್ಶಿಸುವಾಗ ವಿನಿಮಯ ಕ್ಷಮತೆ ವರ್ಧಿಸುವುದಕ್ಕೆ ಅಂಗಚಲನೆಗಳು, ಭಾವಗಳು ಎಂಬಿವುಗಳನ್ನು ಉಪಯೋಗಿಸುತ್ತಾರೆ.<br>• ಸರಿಯಾದ ಹಂತ ತಿಳಿದುಕೊಂಡು ಸೂಚಕಗಳಲ್ಲಿಯೂ ಬಿಂಬಗಳಲ್ಲಿಯೂ ಆಶಯಗಳನ್ನು ಆವಿಷ್ಕಾರಗಳಾಗುತ್ತದೆ. | 2 |
| ನವೆಂಬರ್ | ನೈಸರ್ಗಿಕ ನಾಟಕ | | 2 |
| ಡಿಸೆಂಬರ್ | ನೈಸರ್ಗಿಕ ನಾಟಕ | • ಸಿನಿಮಾ, ನಾಟಕ ಎಂಬಿವುಗಳನ್ನು ಕಾಣುವಾಗ ಬಿಂಬಗಳನ್ನು ಮತ್ತು ಸೂಚಕಗಳನ್ನು ಅರಿತುಕೊಂಡು ಆಸ್ವಾದಿಸುತ್ತೇವೆ. | 2 |
| ಜನವರಿ | ಸಿನಿಮಾ ಸಿನಿಮಾ | | 2 |
| ಫೆಬ್ರುವರಿ | ಸಿನಿಮಾ ಸಿನಿಮಾ | | 2 |
| ಮಾರ್ಚ್ | ಸಿನಿಮಾ ಸಿನಿಮಾ | | 2 |

# ನಾಟಕ– ಏಳನೇ ತರಗತಿ

| ತಿಂಗಳು | ಯೂನಿಟ್ | ಕಲಿಕಾಸಾಧನೆಗಳು | ಪಿರೀಡ್ |
|---|---|---|---|
| ಜೂನ್ | ನಾದಕ್ಕನುಸಾರವಾಗಿ | • ರಂಗಚಲನೆಗೆ ರೂಪುಕಲ್ಪನೆ ಮಾಡುವಾಗ ತಾಳಾತ್ಮಕ ಚಲನೆಗಳನ್ನು ನಿರ್ಮಿಸಿ ಕ್ರಮಬದ್ಧವಾಗಿ ಉಪಯೋಗಿಸುತ್ತಾರೆ. | 2 |
| ಜುಲೈ | ಒಂದೊಂದು ಸ್ಥಳಕಾಲದಲ್ಲಿ | • ಕಥಾಪಾತ್ರಕ್ಕೆ ಸವಿಶೇಷ ಚಲನೆಗಳು ಸ್ವಭಾವ ವಿಶೇಷಗಳು ಕೊಟ್ಟು ವ್ಯಕ್ತಿತ್ವವನ್ನುಂಟುಮಾಡುತ್ತಾರೆ.<br>• ಆಶಯಗಳು ಸಂದರ್ಭಗಳು ಎಂಬಿವುಗಳನ್ನು ತರಗತಿಯಲ್ಲಿ ಮಂಡಿಸುವಾಗ ಪರಸ್ಪರಸಹಾಯ ಆಶ್ರಯತ್ವ ಬಿಟ್ಟುಕೊಡುವಿಕೆ ಎಂಬಿವುಗಳ ಸಹಕರಣೆ ಗುಂಪಲ್ಲಿರಬೇಕು.<br>• ಕಥಾಪಾತ್ರಗಳನ್ನು ಆವಿಷ್ಕರಿಸುವಾಗ ನಿರೀಕ್ಷಣೆಯಮೂಲಕ ಅಂಗೀಕರಿಸಿದ ಮನುಷ್ಯರ ಮತ್ತು ಇತರ ಜೀವಿಗಳ ಚಲನೆಗಳಲ್ಲಿರುವ ಸವಿಶೇಷತೆಗಳನ್ನು ಪ್ರಯೋಜನಗೊಳಿಸುವುದು.<br>• ಸಾಹಿತ್ಯರೂಪಗಳಿಗೆ ದೃಶ್ಯವೀಕ್ಷಣೆ ತಯಾರಿಸುವಾಗ ಶಬ್ದ, ಚಲನೆ, ಅಭಿನಯ ಎಂಬಿವುಗಳನ್ನು ನೈಸರ್ಗಿಕವಾಗಿ ಉಪಯೋಗಿಸುವುದು.<br>• ವಾಚಾನಾಭಿನಯ, ಸಂಗೀತ ಎಂಬಿವುಗಳನ್ನುಪಯೋಗಿಸಿ ಗೊಂಬೆಯಾಟ ಪ್ರದರ್ಶಿಸುತ್ತಾರೆ. | 2 |
| ಆಗಸ್ಟ್ | ಒಂದೊಂದು ಸ್ಥಳಕಾಲದಲ್ಲಿ ಪಾಠಭಾಗಗಳ ನಾಟಕ ಪ್ರದರ್ಶನ | | 2 |
| ಸೆಪ್ಟೆಂಬರ್ | ಪಾಠಭಾಗಗಳ ನಾಟಕ ಪ್ರದರ್ಶನ – ಮುಂದುವರಿಕೆ | | 2 |
| ಒಕ್ಟೋಬರ್ | ಪಾಠಭಾಗಗಳ ನಾಟಕ ಪ್ರದರ್ಶನ – ಮುಂದುವರಿಕೆ | | 2 |
| ನವೆಂಬರ್ | ಗೊಂಬೆಗಳನ್ನು ನಿರ್ಮಿಸುವುದು | • ಆಶಯ ಪ್ರದರ್ಶನಕ್ಕೆ ಸೂಚನೆಗಳನ್ನು ಉಪಯೋಗಿಸಿದ ಬಿಂಬಗಳು ಎಂಬಿವುಗಳನ್ನು ಅರಿತು ಚರ್ಚಾ ಟಿಪ್ಪಣಿ ತಯಾರಿಸುವುದು. | 2 |
| ಡಿಸೆಂಬರ್ | ಗೊಂಬೆಗಳನ್ನು ನಿರ್ಮಿಸುವುದು – | | 2 |
| ಜನವರಿ | ಗೊಂಬೆಗಳನ್ನು ನಿರ್ಮಿಸುವುದು – ಮುಂದುವರಿಕೆ. ಸಿನಿಮಾಸ್ವಾದನೆ | • ಸಿನಿಮಾ, ನಾಟಕ ಎಂಬಿವುಗಳನ್ನು ಕಾಣುವಾಗ ಬಿಂಬಗಳು ಸೂಚಕಗಳು ತಿಳಿದುಕೊಂಡು ಆಸ್ವಾದಿಸುತ್ತಾರೆ. | 2 |
| ಫೆಬ್ರುವರಿ | ಸಿನಿಮಾ ಆಸ್ವಾದನೆ - | | 2 |
| ಮಾರ್ಚ್ | ಸಿನಿಮಾ ಆಸ್ವಾದನೆ - | | 2 |

# ಅನುಬಂಧ – 2 : ಪ್ರಶ್ನೆ ಪತ್ರಿಕೆಯ ಮಾದರಿ

## ಚಿತ್ರಕಲೆ

ಸಮಯ : 2 ಗಂಟೆಗಳು

ಕ್ಲಾಸ್ : ಐದು

ಸ್ಕೋರ್ :

**ಅಧ್ಯಾಪಕರಿಗಿರುವ ಸಾಮಾನ್ಯ ನಿರ್ದೇಶನಗಳು**

- ರಚನೆ ಮಾಡಲೂ ಬಣ್ಣ ಕೊಡಲೂ ಇರುವ ಉಪಕರಣಗಳನ್ನು ತರಲಿರುವ ನಿರ್ದೇಶನಗಳನ್ನು ಮಕ್ಕಳಿಗೆ ಮೊದಲೇ ಕೊಡಬೇಕು
- ಚಿತ್ರರಚಿಸಲು ಡಮ್ಮಿ ¼ ಅಳತೆಯಲ್ಲಿರುವ ಕಾರ್ಡ್ ಶೀಟ್ ನೀಡಬೇಕು.
- ಉತ್ತರಬರೆಯಲಿರುವ ಕಾಗದವನ್ನೂ ನೀಡಬೇಕು.

1. ಅಪ್ಪುವಿನ ಸಂಗ್ರಹಣೆ ಪೆಟ್ಟಿಗೆಯಲ್ಲಿ ಹಲವಾರು ಆಕೃತಿಗಳೂ (shapes), (ತ್ರಿಕೋನ, ವೃತ್ತ, ಚೌಕ, ಮೊದಲಾದವು) ಬಣ್ಣಗಳಿರುವ ಹಲವಾರು ವಸ್ತುಗಳೂ ಇವೆ. ಕೆಲವು ವಸ್ತುಗಳಲ್ಲಿ ಬಣ್ಣ ಕೊಡಲು ಅಪ್ಪುವಿಗೆ ನೀವು ಸಹಾಯಿಸಿ.

   (a) ನಿಮಗೆ ಗೊತ್ತಿರುವ ಯಾವುದಾದರೂ ಮೂರು ಆಕೃತಿಗಳನ್ನು ರಚಿಸಿರಿ.

   (b) ನೀವು ಆಕೃತಿಯೊಳಗೆ ಕ್ರಿಯೇಷನ್ಸ್/ಸ್ಕೆಚ್‌ಪೆನ್ ಉಪಯೋಗಿಸಿ 'ಪ್ರಾಥಮಿಕ' ಬಣ್ಣಗಳನ್ನು ಕೊಡಿರಿ.

   ಪ್ರಾಥಮಿಕ ಬಣ್ಣಗಳು ಯಾವುವುವೆಂದು ನಿಮಗೆ ಗೊತ್ತಿದೆಯಲ್ಲವೇ? ನಮ್ಮ ಸುತ್ತ ಕಾಣುವ ವಸ್ತುಗಳಲ್ಲಿ ಪ್ರಾಥಮಿಕ ಬಣ್ಣಗಳಿವೆ. ಇತರ ಬಣ್ಣಗಳನ್ನು ಸೇರಿಸಿ ಪ್ರಾಥಮಿಕ ಬಣ್ಣಗಳನ್ನುಂಟು ಮಾಡಲು ಸಾಧ್ಯವಿಲ್ಲ.

   (c) ನೀವು ಉಪಯೋಗಿಸಿದ ಪ್ರಾಥಮಿಕ ಬಣ್ಣಗಳ ಹೆಸರು ಅವುಗಳಡಿಯಲ್ಲಿ ಬರೆಯಿರಿ.

2. ನಮ್ಮ ಸುತು ಹಲವಾರು ವಸ್ತುಗಳಿವೆ ಅಲ್ಲವೇ, ಅವುಗಳಲ್ಲಿ ಕೆಲವು ಪ್ರಕೃತಿದತ್ತವೂ ಮತ್ತೆ ಕೆಲವು ಮನುಷ್ಯ ನಿರ್ಮಿತವೂ ಆಗಿದೆಯೆಂದು ತಿಳಿದಿದೆಯಲ್ಲವೇ

   (40 ನಿಮಿಷ)

   (a) ಪ್ರಕೃತಿ ನಿರ್ಮಿತವಾದ ಯಾವುದಾದರೂ ಎರಡು ವಸ್ತುಗಳನ್ನು ರಚಿಸಿರಿ.

   (b) ಮನುಷ್ಯ ನಿರ್ಮಿತವಾದ ಯಾವುದಾದರೂ ಎರಡನ್ನು ರಚಿಸಿರಿ.


   (c) ನೀವು ರಚಿಸಿದ ಚಿತ್ರಗಳಿಗೆ 'ದ್ವಿತೀಯ ವರ್ಣಗಳು' ಉಪಯೋಗಿಸಿ ಬಣ್ಣ ಕೊಡಿರಿ. ರಚಿಸಲು ಕ್ರಯೋನ್, ಸ್ಕೆಚ್‌ಪೆನ್ ಉಪಯೋಗಿಸಬಹುದು)

   (d) ಉಪಯೋಗಿಸಿದ ದ್ವಿತೀಯ ವರ್ಣಗಳು ಯಾವುದೆಂದೂ ಅವುಗಳನ್ನುಂಟುಮಾಡಲು ಯಾವುದೆಲ್ಲಾ ಪ್ರಾಥಮಿಕ ಬಣ್ಣಗಳು ಉಪಯೋಗಿಸಿದೆಂದು ಬರೆಯಿರಿ.

3. ಅಪ್ಪುವಿನ ಮನೆಯ ಮುಂದೆ ಒಂದು ಒಳ್ಳೆಯ ಹೂದೋಟವಿದೆ. ತೋಟ ತುಂಬಾ ಗಿಡಗಳು ಮರಗಳು ಹೂಗಳು ಪಕ್ಷಿಗಳು ಚಿಟ್ಟೆಗಳು ಇವೆ. ಆ ಹೂದೋಟವನ್ನು ನೀವು ಮನದಲ್ಲಿ ಕಂಡು ಹೂದೋಟದ ಚಿತ್ರ ರಚಿಸಿರಿ. ಆವಶ್ಯಕವಾದ ಹಿನ್ನೆಲೆ ಕೊಟ್ಟು ಇಷ್ಟವಿರುವ ಬಣ್ಣ ಕೊಟ್ಟು ಕೊಟ್ಟಿರುವ ಕಾಗದದಲ್ಲಿ ತುಂಬಿಸಿ ಬರೆಯಿರಿ. (50 ನಿಮಿಷ)

## ಉತ್ತರಸೂಚಿ

1. (a)



- ಆಕೃತಿಗಳು 3 ನ್ನು ಸರಿಯಾಗಿ ರಚಿಸಿದರೆ (perfect drawing) – 4
- ಆಕೃತಿಗಳು 3 ನ್ನು ರಚಿಸಿದರೆ – 3
- ಆಕೃತಿಗಳು 2 ನ್ನು ರಚಿಸಿದರೆ – 2
- ಆಕೃತಿಗಳು 1 ನ್ನು ಮಾತ್ರ ರಚಿಸಿದರೆ – 1

(b) ಪ್ರಾಥಮಿಕ ಬಣ್ಣಗಳು – ಹಳದಿ ನೀಲಿ ಕೆಂಪು

- ಆಕೃತಿಗಳು 3 ನ್ನು ಸರಿಯಾಗಿ ಬಣ್ಣಕೊಟ್ಟರೆ (perfect drawing) – 4
- ಆಕೃತಿಗಳು 3ನ್ನು ಸರಿಯಾಗಿ ಬಣ್ಣಕೊಟ್ಟರೆ – 3
- ಆಕೃತಿಗಳು 2 ನ್ನು ಸರಿಯಾಗಿ ಬಣ್ಣಕೊಟ್ಟರೆ – 2
- ಆಕೃತಿಗಳು 1 ನ್ನು ಸರಿಯಾಗಿ ಬಣ್ಣಕೊಟ್ಟರೆ – 1

(c) ಹಳದಿ, ನೀಲಿ, ಕೆಂಪು

- ಪ್ರಾಥಮಿಕ ಬಣ್ಣಗಳನ್ನು ಎಲ್ಲಾ ಸರಿಯಾಗಿ ಬರೆದರೆ – 4
- 2 ನ್ನು ಸರಿಯಾಗಿ ಬರೆದರೆ – 3
- 1 ನ್ನು ಮಾತ್ರ ಸರಿಯಾಗಿ ಬರೆದರೆ – 2

---

2. (a) ಪ್ರಕೃತಿದತ್ತವಾದದ್ದು (ಮರಗಳು, ಮಲೆಗಳು, ನದಿಗಳು, ಪಕ್ಷಿಮೃಗಾದಿಗಳು ಮೊದಲಾದವು) ಮನುಷ್ಯನಿರ್ಮಿತವಾದದ್ದು (ಮನೆಗಳು, ವಾಹನಗಳು, ಕೆಲಸಆಯುಧಗಳು, ಮನೆ ಉಪಕರಣಗಳು ಮೊದಲಾದವು)

- 4 ವಸ್ತುಗಳನ್ನು ಪೂರ್ಣವಾಗಿ ರಚಿಸಿದರೆ (perfect drawing) – 4
- 3 ವಸ್ತುಗಳನ್ನು ಕಂಡುಹಿಡಿಯುವಂತೆ ರಚಿಸಿದರೆ – 3
- 2 ವಸ್ತುಗಳನ್ನು ಕಂಡುಹಿಡಿಯಲು ಸಾಧ್ಯವಾಗುವಂತೆ ರಚಿಸಿದರೆ – 2
- ಒಂದು ವಸ್ತುವನ್ನು ಮಾತ್ರ ಕಂಡುಹಿಡಿಯುವಂತೆ ರಚಿಸಿದರೆ – 1

(b) ದ್ವಿತೀಯ ಬಣ್ಣಗಳು : ಹಸಿರು – ಓರೇಂಜ್ – ವಯಲೆಟ್

- 4 ವಸ್ತುಗಳಿಗೆ ದ್ವಿತೀಯ ಬಣ್ಣವನ್ನು ಸರಿಯಾಗಿ ಕೊಟ್ಟರೆ (perfect drawing) – 4
- 2 ಬಣ್ಣಗಳನ್ನು ಸರಿಯಾಗಿ ಕೊಟ್ಟರೆ – 3
- 1 ಬಣ್ಣಗಳನ್ನು ಸರಿಯಾಗಿ ಕೊಟ್ಟರೆ – 2
- ಇನ್ನಿತರ – 1

(c) ದ್ವಿತೀಯ ಬಣ್ಣಗಳು : ಹಸುರು - ಹಳದಿ + ನೀಲಿ
ಓರೆಂಜ್ - ಹಳದಿ + ಕೆಂಪು
ನೇರಳೆ - ನೀಲಿ + ಕೆಂಪು

- ಎಲ್ಲಾ ಬಣ್ಣಗಳನ್ನು ಸರಿಯಾಗಿ ಬರೆದರೆ - 4
- ಯಾವುದಾದರೂ 2 ನ್ನು ಸರಿಯಾಗಿ ಬರೆದರೆ - 3
- ಯಾವುದಾದರೂ 1ನ್ನು ಬರೆದರೆ - 2
- ಮೊದಲಾದವುಗಳು - 1

---

3.
- ಹೂಗಳು, ಚಿಟ್ಟೆಗಳು, ಮತ್ತು ಗಿಡಗಳನ್ನು ಹಿನ್ನೆಲೆ ಚಿತ್ರೀಕರಣದೊಂದಿಗೆ ಬಣ್ಣ ನೀಡಿ ಪೂರ್ತೀಕರಿಸಿದರೆ (perfect drawing) - 4
- ಚಿತ್ರ ರಚನೆ ಮಾಡಿದರೆ, ಹಿನ್ನೆಲೆ, ವಿಶದೀಕರಣಯಿಲ್ಲದೆ ಬಣ್ಣ ನೀಡಿ ಪೂರ್ತೀಕರಿಸಿದರೆ (perfect drawing) - 3
- ಭಾಗಿಕವಾಗಿ ಚಿತ್ರೀಕರಿಸಿ, ಬಣ್ಣ ನೀಡಿ ರಚಿಸಿದರೆ - 2
- ಪೂರ್ಣತೆಯಿಲ್ಲದೆ ಚಿತ್ರೀಕರಿಸಿದರೆ - 1

---

# ಸಂಗೀತ

ತರಗತಿ : ಐದು | ಸಮಯ : 2 ಗಂಟೆಗಳು

**ಅಧ್ಯಾಪಕರಿಗಿರುವ ಸಾಮಾನ್ಯ ನಿರ್ದೇಶಗಳು**

- ಪ್ರತಿಯೊಂದು ಪ್ರಶ್ನೆಗಳಿಗೂ ಅಗತ್ಯವಾದ ಮುಂಜಾಗ್ರತೆಗಳನ್ನು ಮಾಡಬೇಕು.
- ಎಲ್ಲಾ ಮಕ್ಕಳಿಗೂ ಅಗತ್ಯಕ್ಕೆ ತಕ್ಕಂತೆ ಸಮಾನವಾದ ಸಮಯ ಲಭಿಸಿದೆ ಎಂದು ದೃಢಪಡಿಸಬೇಕು.

---

1. ಮಕ್ಕಳು ಗುಂಪಾಗುವರು. (ಒಂದು ಗುಂಪಿನಲ್ಲಿ 5ರಿಂದ 8ರ ವರೆಗೆ ಮಕ್ಕಳು)
ಪ್ರತಿಯೊಂದು ಗುಂಪಿಗೆ ಹಾಡಿನ ಸಾಲುಗಳನ್ನು ನೀಡುವುದು.

*ಗುಂಪು – 1 : 'ಪುತ್ತೂರಂವೀಟ್ಟಿಲ್ ಜನಿಚ್ಚೋರೆಲ್ಲಾಂ ...' (8 ಸಾಲು)*
*ಗುಂಪು – 2 :'ಕುಟ್ಟನಾಡನ್ ಪುಂಜಯಿಲೆ ಕೊಟ್ಟುಪೆಣ್ಣೇ ಕುಯಿಲಾಳೆ....' (8 ಸಾಲು)*
*ಗುಂಪು – 3 : 'ಆದಿಯಿಲ್ಲಲ್ಲೋ ಅಂತಮಿಲ್ಲಲ್ಲೋ....' (8 ಸಾಲು)*
*ಗುಂಪು – 4 : 'ನೇರಂಪುಲರ್‌ನ್ನುಪೋಯೇ ತಾರಿಕಂದಾರೋ...' (8 ಸಾಲು)*
*ಗುಂಪು – 5 : 'ಎಳ್ಳುಳ್ಳೇರಿ, ಎಳ್ಳುಳ್ಳೇರಿ....' (8 ಸಾಲು)*

*ಪ್ರತಿಯೊಂದು ಗುಂಪಿಗೆ ಆರಂಭಿಸಲು 10 ನಿಮಿಷ, ಪ್ರಸ್ತುತಪಡಿಸಲು 10 ನಿಮಿಷ (ಒಂದು ಗುಂಪಿನ ಪ್ರಸ್ತುತಪಡಿಸುವುದನ್ನು ಇತರ ಗುಂಪುಗಳು ಕಾಣಬಾರದು. ಒಂದು ಗುಂಪು ಪ್ರಸ್ತುತಪಡಿಸುವಾಗ ಇನ್ನೊಂದು ಗುಂಪಿಗೆ ಮಾತ್ರ ಸಾಲು ನೀಡಿ ಆರಂಭಿಸಲು ಸಮಯ ನೀಡಿದರೆ ಸಾಕು.)*

2. ಕೆಳಗೆ ಕೊಟ್ಟಿರುವ ಹಾಡುಗಳು ಯಾವ ವಿಭಾಗದಲ್ಲಿ ಬರುತ್ತದೆ ಎಂದು ಬರೆಯಿರಿ. (ವಂಜಿಪಾಟ್, ವಡಕ್ಕನ್ ಪಾಟ್, ಓಣಪಾಟ್, ಕೃಷಿಹಾಡು, ತಿರುವಾದಿರ ಹಾಡು, ತೋಟಂ ಪಾಟ್, ಮಾಪ್ಪಿಳಪಾಟ್)
   - ಮಾವೇಲಿ ನಾಡು ವಾಣೀಡುಂ ಕಾಲಂ ........
   - ಸಂಸ್ಕೃತ ಪಮಗರಿತಂಗತುಂಗ ತಧಿಂಕಿಣ ......
   - ವೀರವಿರಾಜಿತ ........

---

3. (a) (ಇದೂ ಒಂದು ಗುಂಪು ಮೌಲ್ಯಮಾಪನ ಚಟುವಟಿಕೆಯಾಗಿದೆ. – ಒಂದು ಗುಂಪಲ್ಲಿ 5 ರಿಂದ 8 ರವರೆಗೆ ಮಕ್ಕಳು)
   ದೇಶೀಯಗೀತೆ ಸರಿಯಾದ ರಾಗದಲ್ಲೂ ಅಕ್ಷರಸ್ಪುಟತೆಯಿಂದಲೂ ಕೂಡಿ ಹಾಡಿರಿ. (ಒಂದೊಂದು ಗುಂಪಿಗೂ 5 ಮಿನಿಟು ಸಮಯ)

   (b) ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.
   1 ರಾಷ್ಟ್ರಗೀತೆ ರಚಿಸಿದವರಾರು?
   2 ಯಾವ ಭಾಷೆಯಲ್ಲಿ ರಾಷ್ಟ್ರಗೀತೆಯನ್ನು ರಚಿಸಲಾಗಿದೆ?
   3 ರಾಷ್ಟ್ರಗೀತೆ ಹಾಡುವ ಯಾವುದಾದರೂ ಎರಡು ಸಂದರ್ಭಗಳನ್ನು ಬರೆಯಿರಿ.
   4 ರಾಷ್ಟ್ರಗೀತೆಯನ್ನು ಹಾಡಲು ಎಷ್ಟು ಸಮಯ ಬೇಕು?

---

**ಉತ್ತರಸೂಚಿ**

1. ಜನಪದ ಗೀತೆ

| | |
|---|---|
| ■ ಶ್ರುತಿ | 4/3/2/1 |
| ■ ತಾಳ | 4/3/2/1 |
| ■ ಸೌಂದರ್ಯ | 4/3/2/1 |
| ■ ಮಂಡಿಸುವ ರೀತಿ | 4/3/2/1 |

| | |
|---|---|
| • ಎಲ್ಲಾ ಗಳಿಕೆಯು ಇರುವುದು | – 4 |
| • ಹೆಚ್ಚಿನ ಗಳಿಕೆಯು ಇರುವುದು | – 3 |
| • ಗಳಿಕೆಯು ಭಾಗಿಕವಾಗಿ ಇರುವುದು | – 2 |
| • ಗಳಿಕೆಯು ಹೆಚ್ಚಾಗಿ ಗಳಿಸುವುದು | – 1 |

---

2. *(a)* ರಾಷ್ಟ್ರ ಗೀತೆ

| | |
|---|---|
| ■ ರಾಗ | 4/3/2/1 |
| ■ ತಾಳ | 4/3/2/1 |
| ■ ಆಶಯ ವ್ಯಕ್ತತೆ | 4/3/2/1 |
| ■ ಉಚ್ಚಾರಣೆ ಶುದ್ಧಿ | 4/3/2/1 |
| ■ ಸಮಯ ಪಾಲನೆ | 4/3/2/1 |

| | |
|---|---|
| • ಎಲ್ಲಾ ಹಿರಿಮೆಯೂ ಇರುವುದು | – 4 |
| • ಹೆಚ್ಚಿನ ಹಿರಿಮೆ ಇರುವುದು | – 3 |

- ಹಿರಿಮೆಯು ಭಾಗಿಕವಾಗಿ ಇರುವುದು - 2
- ಹಿರಿಮೆ ಹೆಚ್ಚಾಗಿ ಗಳಿಸುವುದು - 1

(b-1) ರವೀಂದ್ರನಾಥ ಠಾಗೋರ್

(b-2) ಬಂಗಾಳಿ

(b-3) ಸ್ವಾತಂತ್ರ್ಯ ದಿನ, ರಿಪಬ್ಲಿಕ್ ದಿನ (ಯೋಗ್ಯವಾದ ಇನ್ನಿತರ ಉತ್ತರಗಳನ್ನು ಪರಿಗಣಿಸಲಾಗುವುದು)

(b-4) 50 ರಿಂದ 52 ಸೆಕೆಂಡ್

- ನಾಲ್ಕು ಸರಿಯಾದರೆ - 4
- ಮೂರು ಸರಿಯಾದರೆ - 3
- ಎರಡು ಸರಿಯಾದರೆ - 2
- ಒಂದು ಸರಿಯಾದರೆ - 1

# ನೃತ್ಯ

ಕ್ಲಾಸ್ : ಐದು

ಸಮಯ : 2 ಗಂಟೆಗಳು

**ಅಧ್ಯಾಪಕರಿಗಿರುವ ಸಾಮಾನ್ಯ ನಿರ್ದೇಶನಗಳು**

- ಒಂದೊಂದು ಪ್ರಶ್ನೆಗೂ ಆವಶ್ಯಕವಾದ ಮುಂಜಾಗ್ರತೆಗಳನ್ನು ನಡೆಸಬೇಕಾಗಿದೆ.
- ಎಲ್ಲಾ ಮಕ್ಕಳಿಗೂ ಬೇಕಾದಷ್ಟು ರೀತಿಯ ಸಮಯ ಲಭಿಸಿದೆ ಎಂದು ತೀರ್ಪು ತೆಗೆಯಬೇಕು

1. (a) **ತಾಳಹಾಕಿ ಕಾಣಿಸುವುದು**

   ಇದು ಒಂದು ಗುಂಪು ಚಟುವಟಿಕೆಯಾಗಿದೆ. ಐದು ಗುಂಪುಗಳು ಐದುನಡೆಗಳಿಗೆ ಸರಿಯಾಗಿ ಬಾಯಿತಾಳ ಹಾಕಿ ಕಾಣಿಸುವುದು.

   (b) **ಉತ್ತರ ಬರೆಯಿರಿ**

   ಐದುನಡೆಗಳ 'ತ್ರಿಶಂ', ಚದುರಶ್ರಂ', 'ಖಂಡಂ', 'ಸಂಕೀರ್ಣ' ಎಂಬಿವುಗಳ ಅಕ್ಷರಮಾಲೆ ಮತ್ತು ಬಾಯಿತಾಳಗಳನ್ನು ಬರೆಯಿರಿ.

2. ಬಾಯಿತಾಳ ಹೇಳಿಕೊಂಡು ಐದು ನಡೆಗಳಿಗನುಸಾರವಾಗಿ ಹೆಜ್ಜೆಗಳನ್ನು ಮಂಡಿಸಬೇಕು. (ಐದು ಜನ ಸೇರಿದ ಒಂದು ಗುಂಪಾಗಿ ಪ್ರದರ್ಶಿಸಬೇಕು)

3. **ನೃತ್ಯಾವಿಷ್ಕಾರ ನಡೆಸುವುದು**

   ಐದನೇ ವಿಧ ಕೇರಳಪಾಠವಳಿಯ 'ಭೂಮಿ ಸನಾತೆಯಾಗಿದೆ' ಎಂಬ ಕವಿತೆಗೆ ನೃತ್ಯಾವಿಷ್ಕಾರ ಕೊಡಿರಿ. (ಗುಂಪು ಚಟುವಟಿಕೆ ಮಾಡಿದರೆ ಸಾಕು ಹದಿನೈದು ಮಿನಿಟು ಸಮಯತೆಗೆಯಬಹುದು)

## ಉತ್ತರಸೂಚಿ

1. (a) ತಾಳಹಾಕಿ ಕಾಣಿಸಬೇಕು

- ಮಂಡನೆಯ ತಾಳಜ್ಞಾನ
- ಬಾಯಿತಾಳದ ವ್ಯಕ್ತತೆ
- ತಾಳ ಮತ್ತು ಬಾಯಿತಾಳಗಳಿಗಿರುವ ಅನ್ಯೋನ್ಯತೆ

  - ಎಲ್ಲಾ ಹಿರಿಮೆಗಳು ಇರುವುದು
  - ಹೆಚ್ಚಿನ ಹಿರಿಮೆ ಇರುವುದು – 3
  - ಹಿರಿಮೆಗಳು ಭಾಗಿಕವಾಗಿ ಮಾತ್ರ – 2
  - ಹಿರಿಮೆಗಳು ಅಧಿಕವಾಗಿ ಗಳಿಸುವುದು – 1

(b)

- ತಿಶ್ರಂ – ತಕಿಟ – 3 ಅಕ್ಷರ
- ಚದುರಶ್ರಂ – ತಕಧಿಮಿ – 4 ಅಕ್ಷರ
- ಖಂಡಂ – ತಕ ತಕಿಟ – 5 ಅಕ್ಷರ
- ಮಿಶ್ರಂ – ತಕಧಿಮಿ ತಕಿಟ – 7 ಅಕ್ಷರ
- ಸಂಕೀರ್ಣ – ತಕಧಿಮಿ ತಕ ತಕಿಟ – 9 ಅಕ್ಷರ

  - ಎಲ್ಲಾ ಸರಿಯಾದರೆ – 4
  - ನಾಲ್ಕು ಸರಿಯಾದರೆ – 3
  - ಮೂರು ಸರಿಯಾದರೆ – 2
  - ಒಂದೋ, ಎರಡೋ ಸರಿಯಾದರೆ – 1

---

2.
- ಪ್ರದರ್ಶನದ ತಾಳಜ್ಞಾನ
- ಬಾಯಿತಾಳದ ವ್ಯಕ್ತತೆ
- ತಾಳ ಮತ್ತು ಬಾಯಿತಾಳ ತಮ್ಮೊಳಗಿರುವ ಅನ್ಯೋನ್ಯತೆ

  - ಎಲ್ಲಾ ಹಿರಿಮೆಗಳು ಇರುವುದು – 4
  - ಹೆಚ್ಚಿನ ಹಿರಿಮೆಗಳು ಇರುವುದು – 3
  - ಹಿರಿಮೆಗಳು ಭಾಗಿಕವಾಗಿ ಇರುವುದು – 2
  - ಹಿರಿಮೆಗಳು ಅಧಿಕವಾಗಿ ಗಳಿಸುವುದು – 1

---

2.
- ಪ್ರದರ್ಶನದ ಹಿರಿಮೆ
- ಆಶಯ ವಿನಿಮಯದ ಪೂರ್ಣತೆ
- ಭಾಗವಹಿಸುವಿಕೆ

  - ಎಲ್ಲಾ ಹಿರಿಮೆಗಳು ಇರುವುದು – 4
  - ಹೆಚ್ಚಿನ ಹಿರಿಮೆಗಳು ಇರುವುದು – 3
  - ಹಿರಿಮೆಗಳು ಭಾಗಿಕವಾಗಿ ಇರುವುದು – 2
  - ಹಿರಿಮೆಗಳು ಅಧಿಕವಾಗಿ ಗಳಿಸುವುದು – 1

# ನಾಟಕ

ಕ್ಲಾಸ್ : ಐದು                                                                                    ಸಮಯ : 2 ಗಂಟೆಗಳು

**ಅಧ್ಯಾಪಕರಿಗಿರುವ ಸಾಮಾನ್ಯ ನಿರ್ದೇಶಗಳು**

- ಒಂದೊಂದು ಪ್ರಶ್ನೆಗೂ ಅಗತ್ಯವಾದ ಮುಂಜಾಗ್ರತೆಗಳನ್ನು ನಡೆಸಬೇಕು.
- ಎಲ್ಲಾ ಮಕ್ಕಳಿಗೂ ಆವಶ್ಯಕವಾದ ರೀತಿಯಲ್ಲಿ ಸಮಯ ಲಭಿಸಿದೆ ಎಂದು ತೀರ್ಪು ಗಳಿಸಬೇಕು.

## ಚಟುವಟಿಕೆ 1

### ಓದುವ ಅಭಿನಯಿಸುವ

1. ಮಕ್ಕಳು 5 ಜನರು ಗುಂಪಾಗಿರಬೇಕು. ಒಂದೊಂದು ಗುಂಪಿಗೂ ಕೆಳಗೆ ಹೇಳುವ ಚಟುವಟಿಕೆ ಟಿಪ್ಪಣಿ ನೀಡಬೇಕು. ಟಿಪ್ಪಣಿಯಲ್ಲಿ ಬರೆದ ಸಂಗತಿಯನ್ನು ಪ್ರದರ್ಶಿಸಲು ಹೇಳಬೇಕು.
(ಒಂದು ಗುಂಪು ಪ್ರದರ್ಶಿಸುವಾಗ ಹತ್ತಿರದ ಗುಂಪಿಗೆ ಟಿಪ್ಪಣಿ ಕೊಡಿ. ಅವರು ...... ಪ್ರದರ್ಶಿಸಲೂ ಎಲ್ಲಾ ಗುಂಪಿಗೂ ಸರಿಯಾದ ಸಮಯ ಕೊಡಿ.)

**ಟಿಪ್ಪಣಿಗಳು**

- ಬೆಕ್ಕಿನ ಆಹಾರಕ್ಕೆ ಬರುತ್ತದೆ.
- ಗಿಡುಗನನ್ನು ಕಾಣುವಾಗ ಕೋಳಿಗಳು ಹೆದರಿ ಅಡಗಿಕೊಳ್ಳುತ್ತದೆ
- ಕಾಗೆಗಳು ಒಂದು ಔತಣದ ಬಾಕಿ ಎಂಜಲನ್ನು ಹೆಕ್ಕುತ್ತದೆ
- ರಿಪಬ್ಲಿಕ್ ದಿನ ಪರೇಡ್
- ದೇಶಾಟನೆ ಗಿಳಿಗಳ ಹಾರುವಿಕೆ
- ಇರುವೆಯ ಮೆರವಣಿಗೆ

## ಚಟುವಟಿಕೆ II

### ಸಂಭಾಷಣೆ ತಯಾರಿಸಿ

2. ಐದನೇ ವಿಧ ಕೇರಳಪಾಠವಾಳಿಯ ಪಾತುಮ್ಮನ ಆಡು ಎಂಬ ಪಾಠ ಭಾಗದಿಂದ ಆಯ್ದ ಸಂದರ್ಭಗಳನ್ನು ಒಂದೊಂದು ಗುಂಪಿಗೂ ಕೊಡುವುದು. ಅದರ ಸಂಭಾಷಣೆ ರೂಪಿಸಲಿ. ನಿಶ್ಚಿತ ಸಮಯದ ನಂತರ ಸಂಭಾಷಣೆ ಹೇಳಿ ಪ್ರದರ್ಶಿಸಬೇಕು.
(ಒಂದು ಗುಂಪು ಪ್ರದರ್ಶಿಸುವಾಗ ಇತರ ಗುಂಪುಗಳು ಒಂದು ಗುಂಪಿಗೆ ಸಂದರ್ಭ ಕೊಟ್ಟು ಸಂಭಾಷಣೆ ಬರೆಯಲು ಅವಕಾಶ ಕೊಡಬೇಕು. ಸಂಭಾಷಣೆ ಬರೆಯಲು ಮತ್ತು ಪ್ರದರ್ಶಿಸಲು ಎಲ್ಲಾ ಗುಂಪಿಗೂ ಸಮವಾದ ಸಮಯ ಕೊಡಬೇಕು)

## ಚಟುವಟಿಕೆ 1II

**ಒಂದೊಂದು ಸ್ಥಳಕಾಲದಲ್ಲಿ**

3. ಐದು ಜನರು ಸೇರಿರುವ ಗುಂಪು ಕೆಳಗೆ ಹೇಳುವ ಸ್ಥಳಕಾಲಕ್ಕೆ ಸರಿಯಾಗಿ ನಡೆಯುವ ಕಾರ್ಯಗಳಿಗೆ ವ್ಯತ್ಯಸ್ಥ ಭಾವ ಮತ್ತು ಚಲನೆಗಳೊಂದಿಗೆ ಅಭಿನಯಿಸಬೇಕು.
ಒಂದೊಂದು ಗುಂಪು ಯಾವುದಾದರೂ ಮೂರು ಸಂದರ್ಭಗಳಲ್ಲಿ ನಿರಂತರವಾಗಿ ಮಾಡಿ ಅಭಿನಯಿಸಿ ತೋರಿಸಬೇಕು. ಮಕ್ಕಳು ಅಭಿನಯಿಸಿಕೊಂಡಿರುವಾಗ ಟೀಚರ್ ಪಕ್ಕನೆ ನಂತರದ ಸಂದರ್ಭವನ್ನು ಹೇಳಬೇಕು.
(ಒಂದು ಗುಂಪು ಪ್ರದರ್ಶಿಸುವುದನ್ನು ಮತ್ತೊಂದು ಗುಂಪಿನವರು ಅದನ್ನೇ ಪ್ರದರ್ಶಿಸುವುದಕ್ಕಾಗಿ ಪರಸ್ಪರ ಕಾಣದಿರಲು ಪ್ರದರ್ಶನವನ್ನು ಅವರಿಗೆ ಕಾಣದ ರೀತಿಯಲ್ಲಿರಬೇಕು.)
ಸಂದರ್ಭಗಳು:
   - ಶಕ್ತಿಯಾದ ಮಳೆ
   - ಸುಟ್ಟುಹೋಗುವಂತಹ ಟಾರಿಂಗ್ ರೋಡ್
   - ರಭಸವಾದ ಗಾಳಿ
   - ಮೊಣಕಾಲಿನವರೆಗೆ ನೀರಿರುವ ಸ್ಥಳ
   - ಜಾರುವ ಬಂಡೆಗಳು ತುಂಬಿರುವ ಸ್ಥಳ
   - ಕೆಸರು ತುಂಬಿಸಿದಂತಹ ಬಯಲುಗದ್ದೆ

---

**ಉತ್ತರಸೂಚಿ**

ಚಟುವಟಿಕೆ 1

ಓದುವ ಅಭಿನಯಿಸುವ

1.
- ಶರೀರಭಾಷೆಯನ್ನುಪಯೋಗಿಸಿ
- ಚಲನೆಗಳ ಹೊಂದಾಣಿಕೆ
- ಚಟುವಟಿಕೆಯಿಂದ ಕೂಡಿದ
- ಅಭಿನಯ ಸಾಮರ್ಥ್ಯ

  - ಎಲ್ಲಾ ಹಿರಿಮೆಗಳು ಇರುವ – 4
  - ಹೆಚ್ಚಿನ ಹಿರಿಮೆಗಳು ಇರುವ – 3
  - ಹಿರಿಮೆಗಳು ಭಾಗಿಕವಾಗಿ ಮಾತ್ರ ಇರುವುದು – 2
  - ಹಿರಿಮೆಗಳು ಅಧಿಕವಾಗಿ ಗಳಿಸುವುದು – 1

**ಚಟುವಟಿಕೆ II**

**ಸಂಭಾಷಣೆ ತಯಾರಿಸುವ**

2.
- ಆಶಯಗಳು ವ್ಯಕ್ತವಾದುದು
- ಸಂಭಾಷಣೆಗಳ ಔಚಿತ್ಯ ಮತ್ತು ಶ್ರವಣಕ್ಷಮತೆ
- ರಂಗವೇದಿಕೆಯ ಉಪಯೋಗ
- ಕಥಾಪಾತ್ರಗಳ ಚರ್ಚೆ

- ಎಲ್ಲಾ ಹಿರಿಮೆಗಳು ಇರುವ – 4
- ಹೆಚ್ಚಿನ ಹಿರಿಮೆಗಳು ಇರುವ – 3
- ಹಿರಿಮೆಗಳು ಭಾಗಿಕವಾಗಿ ಮಾತ್ರ ಇರುವುದು – 2
- ಹಿರಿಮೆಗಳು ಅಧಿಕವಾಗಿ ಗಳಿಸುವುದು – 1

**ಚಟುವಟಿಕೆ 1II**

**ಒಂದೊಂದು ಸ್ಥಳಕಾಲದಲ್ಲಿ**

3.
- ■ ಯೋಗ್ಯರೀತಿಯ ಶರೀರ ಚಲನೆ
- ■ ಸಂದರ್ಭಕ್ಕೆ ತಕ್ಕಂತೆ ಮುಖಭಾವ
- ■ ಸಮಯಕ್ಕನುಗುಣವಾಗಿ ಪ್ರವರ್ತಿಸಲಿರುವ ಸಾಮರ್ಥ್ಯ
- ■ ಸಂದರ್ಭಕ್ಕನುಗುಣವಾಗಿ ಭಾಗವಹಿಸುವ ಸಾಮರ್ಥ್ಯ

  - ಎಲ್ಲಾ ಹಿರಿಮೆಗಳು ಇರುವ – 4
  - ಹೆಚ್ಚಿನ ಹಿರಿಮೆಗಳು ಇರುವ – 3
  - ಹಿರಿಮೆಗಳು ಭಾಗಿಕವಾಗಿ ಮಾತ್ರ ಇರುವ – 2
  - ಹಿರಿಮೆಗಳು ಅಧಿಕವಾಗಿ ಗಳಿಸುವುದು – 1